ಗುರುವಾರ, ಫೆಬ್ರುವರಿ 5, 2026| ₹ 7.00
prajavani.net prajavani
www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಜಾಗೃತಿ**
ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ದಾವಣಗೆರೆಯಲ್ಲಿ ಬುಧವಾರ ನಡೆದ ಜಾಗೃತಿ ಜಾಥಾದಲ್ಲಿ ಪೋಸ್ಟರ್ ಪ್ರದರ್ಶಿಸಿದ ವಿದ್ಯಾರ್ಥಿನಿ

**ಯಕ್ಷಗಾನ**
ಬೆಂಗಳೂರಿನ ಬಿ.ಎಂ.ಎಸ್. ಮಹಿಳಾ ಕಾಲೇಜು ಬುಧವಾರ ಆಯೋಜಿಸಿದ್ದ ಜಾನಪದ ಜಾತ್ರೆಯಲ್ಲಿ ಗಮನಸೆಳೆದ ಯಕ್ಷಗಾನ ವೇಷಧಾರಿ

**SHOWROOMS:** **KARNATAKA:** **BENGALURU:** RENAULT **BANNERGHATTA ROAD** Ph: 9289220872, RENAULT **MYSORE ROAD** Ph: 8527240549, RENAULT **SILK BOARD** Ph: 8527240654, RENAULT **WHITEFIELD** Ph: 8527240685, RENAULT **JP NAGAR** Ph: 8527240626, RENAULT **KALYAN NAGAR** Ph: 8527236137 & 8722866664, RENAULT **SARJAPURA** Ph: 8448481374, 8746811000 & 8496915111, RENAULT **YELAHANKA** Ph: 8527234592, RENAULT **YESWANTHPUR** Ph: 9311832962. RENAULT **TUMKUR** Ph: 8527234251.

AU SMALL FINANCE BANK

# ಇನ್ನು AU ಜೊತೆ ಬ್ಯಾಂಕಿಂಗ್ ಮಾಡುತ್ತಿಲ್ಲವೇ ?

ವರೆಗೆ

## 6.50%*

ವಾರ್ಷಿಕ ಬಡ್ಡಿ ಮತ್ತು
ಮಾಸಿಕ ಬಡ್ಡಿ ಪಾವತಿ ಲಭ್ಯವಿದೆ

## AU ಉಳಿತಾಯ ಖಾತೆ

## AU ಚಾಲ್ತಿ ಖಾತೆ

ವ್ಯಾಪಾರ ಸಾಲಗಳು,
ಟ್ರೇಡ್ ಅಂಡ್ ಫೋರೆಕ್ಸ್ ಸೇವೆಗಳು,
ಮರ್ಚೆಂಟ್ ಸೊಲ್ಯೂಷನ್ಸ್,
ಡಿಜಿಟಲ್ ಬ್ಯಾಂಕಿಂಗ್ ಸೇವೆಗಳ ಮೇಲೆ

**ಆಲೋಚನೆ ಬದಲಿಸಿ,
ಮತ್ತು ಬ್ಯಾಂಕ್ ಅನ್ನೂ ಸಹಾ**



ಸ್ಕ್ಯಾನ್ ಮಾಡಿ

ಖಾತೆ ತೆರೆಯಲು

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ

ಸಾರ್ವತ್ರಿಕ ಬ್ಯಾಂಕ್ ಆಗಲು ಆರ್‌ಬಿಐ ನಿಂದ ತಾತ್ವಿಕ ಅನುಮೋದನೆ ಪಡೆದ ಭಾರತದ ಮೊದಲ ಸ್ಮಾಲ್ ಫೈನಾನ್ಸ್ ಬ್ಯಾಂಕ್.

| 2,726 | 21 ರಾಜ್ಯಗಳು ಮತ್ತು 4 UTs | 1.25 ಕೋಟಿ + | 59,800+ |
|---|---|---|---|
| ಟಚ್‌ಪಾಯಿಂಟ್‌ಗಳು | | ಕಸ್ಟಮರ್ಸ್ | ಎಂಪ್ಲಾಯೀಸ್ |

1800 1200 1200 | www.au.bank.in

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

**ಆರನ್ ಶತಕ ಸೊಬಗು**

ಹರಾರೆಯಲ್ಲಿ ನಡೆದ 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಅಫ್ಗಾನಿಸ್ತಾನ ಎದುರು ಆರನ್ ಜಾರ್ಜ್ ಗಳಿಸಿದ ಶತಕದ ಬಲದಿಂದ ಭಾರತ ಯುವಪಡೆ ಜಯಿಸಿತು

ಸೆನ್ಸೆಕ್ಸ್ 83,817 | ನಿಫ್ಟಿ 25,776 | $/₹ 91.47 | ಚಿನ್ನ (Std. 10g) ₹1,65,350 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹3,00,700 (ಬೆಂಗಳೂರು)

cottonking
Present REFRESH YOUR WARDROBE *Terms & Conditions apply
Get a Discount of Up to ₹ 300 on each garments!
& Last 4 Days on Exchange of old garments of any men's brand
Sale Ends On! @Sunday 8th Feb

Offer Available At : Jayanagar - 30th Cross, 4th Block, Ph.:9730508441 I Gandhi Bazaar- 37 BOSCO Court Complex, Ph.:9963890921 I Malleshwaram - Near 11th Cross Sampige Main Road, Ph.: 9730508441 I Commercial Street - Next to Police Station, Ph.:9730508441 Basaveshwar Nagar - Opp. to Chord Road Hospital, Ph.:9916061878 I Mysore - Next to Bhima & Brothers Jewellers, Devaraja Urs Road, Ph.:9341426363 I Mangaluru - Opp. Maruti Suzuki Arena, Mandovi Motors, Ph.:9480353000 I Udupi - Sriram Building, Karavali to City Bus Stand Road, Bananje, Ph.:08202525123 I Enquiry : 9730508441.

# ಲೋಕಸಭೆ: ಗದ್ದಲಕ್ಕಿಲ್ಲ ಕೊನೆ

## ಗಾಂಧಿ ಕುಟುಂಬದ ಬಗ್ಗೆ ಉಲ್ಲೇಖಿಸಲು ಮುಂದಾದ ಬಿಜೆಪಿಯ ಸಂಸದ

ಪ್ರಜಾವಾಣಿ ವಾರ್ತೆ/ ಪಿಟಿಐ

**ನವದೆಹಲಿ:** ಭಾರತದ ಸೇನೆಯ ಮಾಜಿ ಮುಖ್ಯಸ್ಥ ಎಂ.ಎಂ.ನರವಣೆ ಅವರ 'ಅಪ್ರಕಟಿತ ಆತ್ಮಚರಿತ್ರೆ' ಪುಸ್ತಕದಲ್ಲಿನ ವಿಚಾರವನ್ನು ಉಲ್ಲೇಖಿಸಲು ಅನುಮತಿ ನೀಡಬೇಕು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಬುಧವಾರವೂ ಲೋಕಸಭೆಯಲ್ಲಿ ಪಟ್ಟು ಹಿಡಿದರು.

ಇನ್ನೊಂದೆಡೆ, ನೆಹರೂ–ಗಾಂಧಿ ಕುಟುಂಬದ ಬಗೆಗಿನ ಮಾಹಿತಿಗಳನ್ನು ಬಹಿರಂಗಪಡಿಸಲು ಸರಣಿ ಪುಸ್ತಕಗಳನ್ನು ತಂದಿದ್ದು, ಅವುಗಳನ್ನು ಪ್ರಸ್ತಾಪಿಸಲು ಅವಕಾಶ ನೀಡಬೇಕು ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು ಒತ್ತಾಯಿಸಿದರು.

– ಇವುಗಳ ಪರಿಣಾಮ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿ ಬುಧವಾರವೂ ಮುಂದುವರಿದು, ಕಲಾಪ ಗದ್ದಲದ ಗೂಡಾಗಿ ಪರಿಣಮಿಸಿತು. ಪರಿಸ್ಥಿತಿಯನ್ನು ತಿಳಿಗೊಳಿಸಲು ಸ್ಪೀಕರ್ ಸದನವನ್ನು ಎರಡು–ಮೂರು ಬಾರಿ ಮುಂದೂಡಿದರು.

ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರಪತಿ ಅವರ ಭಾಷಣದ ಮೇಲಿನ ವಂದನಾ ನಿರ್ಣಯದ ಕುರಿತು ಸಂಜೆ 5 ಗಂಟೆಯ ಬಳಿಕ ಮಾತನಾಡಬೇಕಿತ್ತು. ಆದರೆ ಕಾಂಗ್ರೆಸ್ ಸದಸ್ಯರು ಸೇರಿದಂತೆ, ವಿವಿಧ ವಿರೋಧ ಪಕ್ಷಗಳ ಸದಸ್ಯರು ಬ್ಯಾನರ್‌ಗಳು, ಫಲಕಗಳನ್ನು ಪ್ರದರ್ಶಿಸುತ್ತಾ ಸ್ಪೀಕರ್ ಪೀಠದ ಮುಂಭಾಗ ಪ್ರತಿಭಟಿಸಿದರು. ವಿಪಕ್ಷಗಳ ಕೆಲ ಮಹಿಳಾ ಸದಸ್ಯರು ಪ್ರಧಾನಿ ಕುರ್ಚಿಯನ್ನು ಸುತ್ತುವರಿದು ಆಕ್ರೋಶ ವ್ಯಕ್ತಪಡಿಸಿದರು.



ಗಾಂಧಿ ಕುಟುಂಬದ ವಿರುದ್ಧದ ಪುಸ್ತಕಗಳನ್ನು ಪ್ರದರ್ಶಿಸಿದ ಬಿಜೆಪಿ ಸಂಸದ ನಿಶಿಕಾಂತ್ ದುಬೆ

ಸದನದಲ್ಲಿ ಪದೇ ಪದೇ ಗದ್ದಲ ಮುಂದುವರಿದಿದ್ದರಿಂದ ಸ್ಪೀಕರ್ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಿದರು.

**ಕಿಡಿ ಹೊತ್ತಿಸಿದ ದುಬೆ ಮಾತು:** 'ರಾಹುಲ್ ಅವರು ಅಪ್ರಕಟಿತ ಪುಸ್ತಕದ ಬಗ್ಗೆ ಮಾತನಾಡಲು ಬಯಸಿದರೆ, ನಾನು ಗಾಂಧಿ ಕುಟುಂಬದ ಬಗ್ಗೆ ಮಾತನಾಡಲು ಸರಣಿ ಪುಸ್ತಕಗಳೊಂದಿಗೆ ಬಂದಿದ್ದೇನೆ' ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ತಿಳಿಸಿದರು. ಇದು ಕಾಂಗ್ರೆಸ್ ಸದಸ್ಯರನ್ನು ಕೆರಳಿಸಿತು. ಅವರು ಆಕ್ರೋಶ ವ್ಯಕ್ತಪಡಿಸಿದರು.

ಗದ್ದಲದ ನಡುವೆಯೇ ದುಬೆ ಅವರು ತಾವು ತಂದಿದ್ದ ಪುಸ್ತಕಗಳು ಗಾಂಧಿ ಕುಟುಂಬದ ವಿವಿಧ ಸದಸ್ಯರ ಬಗ್ಗೆ ಏನು ಹೇಳುತ್ತವೆ ಎಂಬುದನ್ನು ಪಟ್ಟಿ ಮಾಡಲು ಆರಂಭಿಸಿದರು.

ಆಗ ಸ್ಪೀಕರ್ ಸ್ಥಾನದಲ್ಲಿದ್ದ ಕೃಷ್ಣ ಪ್ರಸಾದ್ ಟೆನೇಟಿ ಅವರು, 'ಸ್ಪೀಕರ್ ಓಂ ಬಿರ್ಲಾ ಅವರು ಅಂಥ ಉಲ್ಲೇಖಗಳನ್ನು ಮಾಡದಿರಲು ಸೂಚಿಸಿ, ಅನುಮತಿಯನ್ನು ಈಗಾಗಲೇ ನಿರಾಕರಿಸಿದ್ದಾರೆ. ನಿಯಮ 349ರ ಅಡಿ ಅಂತಹ ಹೇಳಿಕೆಗಳನ್ನು ನೀಡಬಾರದು' ಎಂದು ಹೇಳಿದರು.

▶11

### ನರವಣೆ ಪುಸ್ತಕ ಪ್ರದರ್ಶಿಸಿದ ರಾಹುಲ್



ರಾಹುಲ್ ಗಾಂಧಿ ಅವರು ನರವಣೆ ಅವರ 'ಅಪ್ರಕಟಿತ ಪುಸ್ತಕ'ದ ಪ್ರತಿಯನ್ನು ಪ್ರದರ್ಶಿಸಿ ಮಾತನಾಡಲು ಅವಕಾಶ ನೀಡುವಂತೆ ಒತ್ತಾಯಿಸಿದರು. ಆದರೆ ಅವರಿಗೆ ಅವಕಾಶ ನಿರಾಕರಿಸಲಾಯಿತು.

'ರಾಹುಲ್ ಅವರು ಪುಸ್ತಕದ ಪ್ರತಿಯನ್ನು ಕೈಯಲ್ಲಿ ಹಿಡಿದುಕೊಂಡು ಬಂದಿದ್ದರು. ಅದರಲ್ಲಿ ಒಂದನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೀಡುವುದಾಗಿ ಹೇಳಿದ್ದರು. ಆದರೆ ಭಯಭೀತರಾಗಿರುವ ಮೋದಿ ಅವರು ಸದನಕ್ಕೆ ಬರಲಿಲ್ಲ' ಎಂದು ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಸುದ್ದಿಗಾರರಿಗೆ ತಿಳಿಸಿದರು.

'ಅಮೆಜಾನ್ ಇ–ಕಾಮರ್ಸ್ ಮೂಲಕ ಖರೀದಿಸಲಾದ, ಸಾರ್ವಜನಿಕವಾಗಿ ಪ್ರಕಟವಾದ ಪುಸ್ತಕವನ್ನು ಉಲ್ಲೇಖಿಸಲು ವಿರೋಧ ಪಕ್ಷದ ನಾಯಕರಿಗೆ ಅನುಮತಿ ಕೊಡಿ ಎಂಬುದು ನಮ್ಮ ಕೋರಿಕೆ. ಆದರೆ ಅದನ್ನು ನಿಯಮಗಳಿಗೆ ವಿರುದ್ಧವಾಗಿದೆ ಎಂದು ನೀವು ಹೇಳುತ್ತೀರಿ. ಇನ್ನೊಂದೆಡೆ ದುಬೆ ಅವರು ಗಾಂಧಿ ಕುಟುಂಬದ ವಿರುದ್ಧ ಪುಸ್ತಕಗಳಲ್ಲಿನ ಉಲ್ಲೇಖಗಳನ್ನು ಪ್ರಸ್ತಾಪಿಸುತ್ತಾರೆ. ಆಶ್ಚರ್ಯ ಎಂದರೆ, ಅವರು ಮಾತನಾಡುವಾಗ ಮೈಕ್ರೋಫೋನ್ ಆನ್ ಆಗಿರುತ್ತದೆ' ಎಂದು ಪ್ರಿಯಾಂಕಾ ಆಕ್ರೋಶ ವ್ಯಕ್ತಪಡಿಸಿದರು.

'ಸಂಸತ್ತಿನಲ್ಲಿ ಸರ್ಕಾರದ ಆದೇಶ ಮಾತ್ರ ಚಾಲ್ತಿಯಲ್ಲಿದೆ ಎಂಬುದನ್ನು ಈ ಮೂಲಕ ತೋರಿಸಲಾಗಿದೆ. ಇದು ಸ್ಪೀಕರ್, ಸಂಸತ್ತು, ಪ್ರಜಾಪ್ರಭುತ್ವ ಮತ್ತು ದೇಶದ ಜನರಿಗೆ ಮಾಡಿದ ಅಪಮಾನ' ಎಂದು ಅವರು ಪ್ರತಿಕ್ರಿಯಿಸಿದರು.

### ರಾಹುಲ್– ರವನೀತ್ ಬಿಟ್ಟೂ ವಾಕ್ಸಮರ

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ರೈಲ್ವೆ ಖಾತೆಯ ರಾಜ್ಯ ಸಚಿವ ರವನೀತ್ ಸಿಂಗ್ ಬಿಟ್ಟೂ ಅವರ ನಡುವೆ ಸಂಸತ್ತಿನ ಆವರಣದಲ್ಲಿ ಬುಧವಾರ ಬಿರುಸಿನ ಮಾತಿನ ಚಕಮಕಿ ನಡೆಯಿತು. ಇಬ್ಬರೂ ನಾಯಕರು ಪರಸ್ಪರರತ್ತ ಕೈ ತೋರಿಸಿ, ಟೀಕಿಸಿದರು.

ಸಚಿವ ಬಿಟ್ಟೂ ಅವರನ್ನು ರಾಹುಲ್ 'ಮಿತ್ರದ್ರೋಹಿ' ಎಂದು ಟೀಕಿಸಿದರೆ, ಬಿಟ್ಟೂ ಅವರು ರಾಹುಲ್ ಅವರನ್ನು 'ದೇಶದ ಶತ್ರು' ಎಂದು ತರಾಟೆಗೆ ತೆಗೆದುಕೊಂಡರು. ಈ ಬೆಳವಣಿಗೆಯು ಸಿಖ್ಖರನ್ನು ಕೆರಳಿಸಿದೆ ಎಂದು ಆಡಳಿತಾರೂಢ ಬಿಜೆಪಿ ಟೀಕಿಸಿದೆ. ಬಿಟ್ಟೂ ಅವರು ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದಾಗ ರಾಹುಲ್ ಅವರ ನಿಕಟವರ್ತಿಯಾಗಿದ್ದರು.

ಸಂಸತ್ತಿನ ಮಕರ ದ್ವಾರದ ಮೆಟ್ಟಿಲುಗಳ ಬಳಿ ಬೆಳಿಗ್ಗೆ 11.30ಕ್ಕೆ ರಾಹುಲ್–ಬಿಟ್ಟೂ ನಡುವೆ ಮಾತಿನ ಚಕಮಕಿ ನಡೆಯಿತು. ಅದು ಹೊಸ ಸಂಸತ್ ಭವನಕ್ಕೆ ಸಂಸದರು ಪ್ರವೇಶಿಸುವ ದ್ವಾರ.

**ನಡೆದದ್ದೇನು?:** ಕಲಾಪದಿಂದ ಅಮಾನತುಗೊಂಡಿರುವ ಎಂಟು ಸಂಸದರ ಜತೆ ರಾಹುಲ್ ಗಾಂಧಿ ಮಕರ ದ್ವಾರದ ಬಳಿ ಮಾತುಕತೆಯಲ್ಲಿ ತೊಡಗಿದ್ದರು. ಆ ಗುಂಪಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಂಜಾಬಿನ ಸಂಸದರೇ ಇದ್ದರು. ಈ ವೇಳೆ ಸಚಿವ ಬಿಟ್ಟೂ ಅವರು ಅಲ್ಲಿಯೇ ಹಾದು ಹೋಗುವ ಸಂದರ್ಭದಲ್ಲಿ ಈ ವಾಕ್ಸಮರ ನಡೆಯಿತು.

ಲೋಕಸಭೆಯ ವಿರೋಧ ಪಕ್ಷದ ನಾಯಕ ಮತ್ತು ಅಮಾನತುಗೊಂಡ ಕಾಂಗ್ರೆಸ್ ಸಂಸದರನ್ನು ಕಂಡ ಸಚಿವರು, 'ಯುದ್ಧದಲ್ಲಿ ಗೆದ್ದವರಂತೆ ಇಲ್ಲಿ ಕುಳಿತಿದ್ದೀರಲ್ಲ' ಎಂದು ಮೊದಲಿಗೆ ಪ್ರಶ್ನಿಸಿದರು.

ಇದಕ್ಕೆ ಕೂಡಲೇ ಪ್ರತಿಕ್ರಿಯಿಸಿದ ರಾಹುಲ್, 'ವಿಷಯವೇನಂದರೆ... ಇಲ್ಲಿ ಒಬ್ಬ ಮಿತ್ರದ್ರೋಹಿ ನಡೆದುಕೊಂಡು ಬರುತ್ತಿದ್ದಾರೆ. ಅವರ ಮುಖವನ್ನು ನೋಡಿ, ಹೇಗೆ ಕಾಣುತ್ತಿದ್ದಾರೆ' ಎಂದರು.

▶11

# ಮೆಟ್ರೊ: ದರ ಶೇ 5 ಏರಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಒಂದು ವರ್ಷದ ಹಿಂದಷ್ಟೇ 'ನಮ್ಮ ಮೆಟ್ರೊ' ಪ್ರಯಾಣ ದರವನ್ನು ಶೇ 71.5ರಷ್ಟು ಹೆಚ್ಚಳ ಮಾಡಿ ನಾಗರಿಕರಿಗೆ ದುಬಾರಿ ಹೊರೆ ಹೊರಿಸಿದ್ದ ಬಿಎಂಆರ್‌ಸಿಎಲ್ ಮತ್ತೆ ಶೇ 5ರಷ್ಟು ಹೆಚ್ಚಳ ಮಾಡಲು ನಿರ್ಧರಿಸಿದೆ.

ಇದೇ 9ರ ಸೋಮವಾರದಿಂದಲೇ ಹೊಸ ದರ ಜಾರಿಗೆ ಬರಲಿದೆ. ದರವು ಕನಿಷ್ಠ ₹1 ಹಾಗೂ ಗರಿಷ್ಠ ₹5ರಷ್ಟು ಹೆಚ್ಚಳವಾಗಲಿದೆ. ಕನಿಷ್ಠ ₹10 ಇರುವ ದರ ₹11ಕ್ಕೆ, ಗರಿಷ್ಠ ₹90 ಇರುವ ದರ ₹95ಕ್ಕೆ ಏರಲಿದೆ.

ಬಿಎಂಆರ್‌ಸಿಎಲ್ ಪ್ರತಿ ವರ್ಷ ಶೇ 5ರಷ್ಟು ಪ್ರಯಾಣದರ ಹೆಚ್ಚಳ ಮಾಡಬಹುದು ಎಂದು ದರ ನಿಗದಿ ಸಮಿತಿ (ಎಫ್‌ಎಫ್‌ಸಿ) 2025ರಲ್ಲಿ ಶಿಫಾರಸು ಮಾಡಿತ್ತು. ಈ ಬಗ್ಗೆ ಎರಡು ದಿನಗಳ ಹಿಂದೆ ನಡೆದ ಬಿಎಂಆರ್‌ಸಿಎಲ್ ಮಂಡಳಿ ಸಭೆಯಲ್ಲಿ ಚರ್ಚೆ ನಡೆದಿತ್ತು. ಶೇ 5ರಷ್ಟು ಏರಿಸಲು ಅನುಮೋದನೆ ನೀಡುವಂತೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಸರ್ಕಾರವು ಸೋಮವಾರ ಅನುಮೋದನೆ ನೀಡಿದೆ.

**ಮಾಹಿತಿ ನೀಡದ ಅಧಿಕಾರಿಗಳು:** ದರ ಹೆಚ್ಚಳ ಬಗ್ಗೆ ಬಿಎಂಆರ್‌ಸಿಎಲ್ ಅಧಿಕಾರಿಗಳು ಖಚಿತ ಮಾಹಿತಿ ನೀಡದೇ ಜಾರಿಕೊಂಡಿದ್ದಾರೆ. ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಜೆ. ರವಿಶಂಕರ್ ಅವರು ಕರೆ ಸ್ವೀಕರಿಸಿಲ್ಲ. ಇನ್ನೂ ಯಾವುದೇ ನಿರ್ಧಾರವಾಗಿಲ್ಲ ಎಂದು ಬಿಎಂಆರ್‌ಸಿಎಲ್ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದರು. ರಾಜ್ಯ ಸರ್ಕಾರಕ್ಕೆ ಅನುಮೋದನೆ ಕಳುಹಿಸಿರುವುದು ಮತ್ತು ಅದಕ್ಕೆ ಅನುಮೋದನೆ ನೀಡಿರುವುದನ್ನು ಮುಖ್ಯಮಂತ್ರಿಯವರ ಸಚಿವಾಲಯದ ಅಧಿಕಾರಿಗಳು ಖಚಿತಪಡಿಸಿದ್ದಾರೆ.

**ದರ ಹೆಚ್ಚಳವೆಷ್ಟು:** ಶೇ 5 ಹೆಚ್ಚಳ ಮಾಡಿದಾಗ ₹30 ದರ ಇದ್ದಿದ್ದು ₹31.5 ಆಗಬೇಕು. ಆದರೆ, ಚಿಲ್ಲರೆಗೆ ಸಮಸ್ಯೆಯಾಗಬಾರದು ಎಂದು ಪೈಸೆ ಇರುವುದನ್ನು ಹತ್ತಿರ ರೂಪಾಯಿಗೆ (ರೌಂಡ್ ಫಿಗರ್) ನಿಗದಿ ಮಾಡಲಾಗುತ್ತದೆ ಹಾಗಾಗಿ ₹32 ನೀಡಬೇಕಾಗುತ್ತದೆ.

▶10

# ಜಿ ರಾಮ್ ಜಿ: ವಿರೋಧಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಬಿ ಜಿ ರಾಮ್ ಜಿ ಕಾಯ್ದೆ ರದ್ದುಪಡಿಸಿ, ನರೇಗಾ ಕಾಯ್ದೆಯನ್ನು ಮರು ಸ್ಥಾಪಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ರಾಜ್ಯ ಸರ್ಕಾರ ಮಂಡಿಸಿದ ನಿರ್ಣಯವು ವಿರೋಧ ಪಕ್ಷಗಳ ಸದಸ್ಯರ ಆಕ್ರೋಶ, ಸಭಾತ್ಯಾಗದ ನಡುವೆಯೇ ಉಭಯ ಸದನಗಳಲ್ಲಿ ಬುಧವಾರ ಅಂಗೀಕಾರಗೊಂಡಿತು.

ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ರಾಜೀನಾಮೆಗೆ ಪಟ್ಟು ಹಿಡಿದು ವಿಧಾನ ಸಭಾಧ್ಯಕ್ಷರ ಪೀಠದ ಮುಂದೆ ಬಿಜೆಪಿ, ಜೆಡಿಎಸ್ ಸದಸ್ಯರು ಪ್ರತಿಭಟನೆ ನಡೆಸುತ್ತಿದ್ದರು. ಅದರ ಮಧ್ಯೆಯೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ಣಯವನ್ನು ಅಂಗೀಕರಿಸಬೇಕೆಂದು ಸದನವನ್ನು ಕೋರಿದರು. ಸಭಾಧ್ಯಕ್ಷ ಯು.ಟಿ. ಖಾದರ್ ಸದನದ ಒಪ್ಪಿಗೆಗೆ ನಿರ್ಣಯ ಮಂಡಿಸಿದರು. ಆಗ, ವಿರೋಧ ಪಕ್ಷದ ಸದಸ್ಯರು ತಮ್ಮ ಕೈಯಲ್ಲಿದ್ದ ನಿರ್ಣಯದ ಪ್ರತಿಗಳನ್ನು ಹರಿದು, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಹೊರನಡೆದರು. ನಿರ್ಣಯಕ್ಕೆ ಸದನವು ಧ್ವನಿಮತದ ಮೂಲಕ ಅಂಗೀಕಾರ ನೀಡಿತು. ಕಾನೂನು ಸಚಿವ ಎಚ್‌.ಕೆ. ಪಾಟೀಲ ಅವರು ಕಾಯ್ದೆಯನ್ನು ವಿರೋಧಿಸುವ ನಿರ್ಣಯವನ್ನು ವಿಧಾನ ಪರಿಷತ್ತಿನಲ್ಲಿ ಮಂಡಿಸಿದರು. ಚರ್ಚೆ ಬಳಿಕ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಉತ್ತರ ನೀಡಲು ಆರಂಭಿಸುವ ಮೊದಲೇ, ಬಿಜೆಪಿ–ಜೆಡಿಎಸ್ ಸದಸ್ಯರು ನಿರ್ಣಯ ವಿರೋಧಿಸಿ ಸಭಾತ್ಯಾಗ ಮಾಡಿದರು. ಆ ಬಳಿಕ, ಧ್ವನಿಮತದ ಮೂಲಕ ಸದನ ನಿರ್ಣಯವನ್ನು ಅಂಗೀಕರಿಸಿತು.

ಅಂಗೀಕರಿಸಿರುವ ನಿರ್ಣಯವನ್ನು ರಾಷ್ಟ್ರಪತಿ ಹಾಗೂ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಕಳುಹಿಸಿಕೊಡಲಿದೆ.

### ನಾಲಗೆ ಮಾತು: ಸಿ.ಟಿ ರವಿ ಅಮಾನತು

'ನಾಲಗೆ' ಪದ ಬಳಸಿ ವಿವಾದಕ್ಕೆ ಕಾರಣರಾಗಿದ್ದ ಬಿಜೆಪಿಯ ಸಿ.ಟಿ.ರವಿ ಅವರನ್ನು ಒಂದು ದಿನದ ಮಟ್ಟಿಗೆ ಅಮಾನತು ಮಾಡಿ ಸಭಾಪತಿ ಬಸವರಾಜ ಹೊರಟ್ಟಿ ರೂಲಿಂಗ್ ನೀಡಿದರು.

ವಿಧಾನಪರಿಷತ್ತಿನಲ್ಲಿ ಕಾಂಗ್ರೆಸ್‌ನ ನಸೀರ್ ಅಹಮದ್ ಹೇಳಿಕೆಗೆ ಪ್ರತಿಕ್ರಿಯಿಸುವಾಗ ನೆರೆ ದೇಶದ 'ನಾಲಗೆ' ಪದ ಬಳಸಿದ್ದಕ್ಕೆ ಕ್ಷಮೆಯಾಚಿಸಿ ಎಂದು ರವಿಗೆ ಸಭಾಪತಿ ಸೂಚಿಸಿದರೂ ಅವರು ಜಗ್ಗಲಿಲ್ಲ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವಿರುದ್ಧ ನಸೀರ್ ಅಹಮದ್ ಮಾಡಿದ ಟೀಕೆ ಹಾಗೂ ರವಿ ಅವರು ಬಳಸಿದ 'ನಾಲಗೆ' ವಿಷಯದ ಜಟಾಪಟಿಯಲ್ಲೇ ಮಂಗಳವಾರದ ಪೂರ್ತಿ ಕಲಾಪ ವ್ಯರ್ಥವಾಗಿತ್ತು. ನಸೀರ್ ಅಹಮದ್ ಅವರು ತಮ್ಮ ಹೇಳಿಕೆಗೆ ವಿಷಾದ ವ್ಯಕ್ತಪಡಿಸಿದ್ದರು. ಆದರೆ, ಸಿ.ಟಿ.ರವಿ ಒಪ್ಪಿರಲಿಲ್ಲ.

▶6

# ಅಬಕಾರಿ ಉಪ ಆಯುಕ್ತ ಅಮಾನತು

ಪ್ರಜಾವಾಣಿ ವಾರ್ತೆ

**ಮಂಡ್ಯ:** ಸಿಎಲ್–7 ಸನ್ನದು ಮಂಜೂರು ಮಾಡಲು ₹60 ಲಕ್ಷ ಲಂಚ ಕೇಳಿದ್ದ ಆರೋಪದ ಮೇಲೆ ಜಿಲ್ಲೆಯ ಅಬಕಾರಿ ಉಪ ಆಯುಕ್ತ ಆರ್.ನಾಗಶಯನ ಅವರನ್ನು ಅಮಾನತುಗೊಳಿಸಿ ಸರ್ಕಾರ ಆದೇಶಿಸಿದೆ.

ನಾಗಶಯನ

ಭ್ರಷ್ಟಾಚಾರ ಆರೋಪದ ಮೇರೆಗೆ ಅಬಕಾರಿ ಸಚಿವರ ರಾಜೀನಾಮೆಗೆ ವಿರೋಧ ಪಕ್ಷದ ಮುಖಂಡರು ಒತ್ತಾಯಿಸುತ್ತಿರುವ ಸಂದರ್ಭದಲ್ಲೇ ಅಮಾನತು ಆದೇಶ ಬಂದಿದ್ದು, ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.

2025ರ ಆಗಸ್ಟ್ ತಿಂಗಳಲ್ಲಿ ಅಧಿಕಾರಿಯು ಲಂಚ ಕೇಳಿ ಸುಂದರ್ ಎಂಬವರೊಂದಿಗೆ ಮಾತನಾಡಿದ್ದರೆನ್ನಲಾದ ಆಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ನಂತರ ಅಬಕಾರಿ ಆಯುಕ್ತರು ಕಾರಣ ಕೇಳಿ ನೋಟಿಸ್ ಜಾರಿಗೊಳಿಸಿದ್ದರು.

ಅಧಿಕಾರಿ ನೀಡಿದ್ದ ಸಮಜಾಯಿಷಿ ಪರಿಶೀಲಿಸಿದ ಬಳಿಕ, ಆರೋಪವು ಮೇಲ್ನೋಟಕ್ಕೆ ಸಾಬೀತಾದ್ದರಿಂದ ಅಮಾನತುಗೊಳಿಸಿ, ಅಧಿಕಾರಿಯನ್ನು ಬೆಳಗಾವಿ ಜಿಲ್ಲೆಯ ದಕ್ಷಿಣ ವಿಭಾಗಕ್ಕೆ ವರ್ಗಾಯಿಸಲಾಗಿದೆ.

# 'ಪಶ್ಚಿಮ ಬಂಗಾಳವೇ ಗುರಿ'

## 'ಸುಪ್ರೀಂ'ನಲ್ಲಿ ಸ್ವತಃ ವಾದ ಮಂಡಿಸಿದ ಮಮತಾ ಬ್ಯಾನರ್ಜಿ

ಪ್ರಜಾವಾಣಿ ವಾರ್ತೆ/ಪಿಟಿಐ

**ನವದೆಹಲಿ:** 'ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿಚಾರದಲ್ಲಿ ರಾಜ್ಯವನ್ನೇ ಗುರಿ ಮಾಡಲಾಗುತ್ತಿದೆ. ಈ ಪ್ರಕ್ರಿಯೆ ಮೂಲಕ ರಾಜ್ಯದ ಜನರಿಗೆ ಅನ್ಯಾಯವಾಗುತ್ತಿದೆ' ಎಂದು ಆರೋಪಿಸಿದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, 'ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಕೂಡಲೇ ಮಧ್ಯ ಪ್ರವೇಶಿಸಬೇಕು' ಎಂದು ಬುಧವಾರ ಆಗ್ರಹಿಸಿದರು.

ನ್ಯಾಯಾಲಯದಲ್ಲಿ ಸ್ವತಃ ವಾದ ಮಂಡಿಸಿದ ಅವರು, 'ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಎಸ್‌ಐಆರ್ ವೇಳೆ ಅನುಸರಿಸಲಾಗುತ್ತಿರುವ ಮಾನದಂಡಗಳನ್ನು ನೆರೆ ರಾಜ್ಯ ಅಸ್ಸಾಂನಲ್ಲಿ ಯಾಕೆ ಅನ್ವಯಿಸಲಾಗುತ್ತಿಲ್ಲ' ಎಂದು ಪ್ರಶ್ನಿಸಿದರು.

▶10

### ಮಮತಾ ಬ್ಯಾನರ್ಜಿ ವಾದ

- ಚುನಾವಣಾ ಆಯೋಗವು 'ವಾಟ್ಸ್‌ಆ್ಯಪ್ ಆಯೋಗ' ಎಂಬಂತಾಗಿದೆ. ಬಿಜೆಪಿ ಆಡಳಿತ ಇರುವ ರಾಜ್ಯಗಳ ಸರ್ಕಾರಿ ನೌಕರರನ್ನು 'ಸೂಕ್ಷ್ಮ ವೀಕ್ಷಕ'ರನ್ನಾಗಿ ನಿಯೋಜನೆ ಮಾಡಲಾಗಿದೆ
- 24 ವರ್ಷಗಳ ಬಳಿಕ ಎಸ್‌ಐಆರ್ ಕೈಗೊಳ್ಳಲಾಗಿದ್ದು, ಇದನ್ನು ಮೂರು ತಿಂಗಳಲ್ಲಿ ಪೂರ್ಣಗೊಳಿಸುವ ಅವಸರವೇನಿದೆ?
- ಸೂಕ್ಷ್ಮ ವೀಕ್ಷಕರು ಕಚೇರಿಯಲ್ಲಿ ಇದ್ದುಕೊಂಡೇ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದು ಹಾಕಬಹುದಾಗಿದೆ. ತಮ್ಮ ಹೆಸರು ಕೈಬಿಡಲಾದವರಿಗೆ ಅರ್ಜಿ ನಮೂನೆ–6 ಸಲ್ಲಿಸಲು ಅವಕಾಶ ನೀಡುತ್ತಿಲ್ಲ
- ಎಸ್‌ಐಆರ್ ಮೊದಲ ಹಂತದಲ್ಲಿ 56 ಲಕ್ಷ, ಎರಡನೇ ಹಂತದಲ್ಲಿ 1.30 ಕೋಟಿ ಹೆಸರುಗಳನ್ನು ಕೈಬಿಡಲಾಗಿದೆ. ಮೊದಲ ಹಂತದಲ್ಲಿ ಹೆಸರು ಕೈಬಿಟ್ಟು ಹೋದವರಿಗೆ ನಮೂನೆ– 6 ಸಲ್ಲಿಸಲು ಅವಕಾಶ ನೀಡಿಲ್ಲ

ಎಸ್‌ಐಆರ್ ವಿಚಾರವಾಗಿ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿ ಪಶ್ಚಿಮ ಬಂಗಾಳ ಜನರ ಹಕ್ಕುಗಳನ್ನು ರಕ್ಷಿಸಬೇಕು. ದೇಶದಲ್ಲಿ ಪ್ರಜಾತಂತ್ರ ವ್ಯವಸ್ಥೆಯನ್ನು ಉಳಿಸಬೇಕು

**ಮಮತಾ ಬ್ಯಾನರ್ಜಿ,** ಪಶ್ಚಿಮ ಬಂಗಾಳ ಮುಖ್ಯಮಂತ್ರಿ

## 'ಸಂಪಾಯಿತಲೇ ಪರಾಕ್'

ಪ್ರಜಾವಾಣಿ ಚಿತ್ರ: **ಲವ ಕೆ.**

ಹೂವಿನಹಡಗಲಿ ತಾಲ್ಲೂಕು ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ಬುಧವಾರ ನಡೆದ ಕಾರ್ಣಿಕೋತ್ಸವದಲ್ಲಿ ಬಿಲ್ಲನ್ನೇರಿದ ಗೊರವಯ್ಯ 'ಸಂಪಾಯಿತಲೇ ಪರಾಕ್' ಎಂದು ಕಾರ್ಣಿಕ ನುಡಿದರು. ಇದನ್ನು ಆಲಿಸಿದ ಭಕ್ತರು ನಾಡಿಗೆ ಸುಭಿಕ್ಷವಾಗುತ್ತದೆ ಎಂಬ ತೃಪ್ತಿಯ ಭಾವ ವ್ಯಕ್ತಪಡಿಸಿದರು

# ಗೇಮ್ ವ್ಯಸನ ಸಹೋದರಿಯರ ಸಾವು

**ಗಾಜಿಯಾಬಾದ್ (ಉತ್ತರ ಪ್ರದೇಶ) (ಪಿಟಿಐ):** ಕೊರಿಯಾದ ಆನ್‌ಲೈನ್ ಗೇಮ್‌ವೊಂದರಲ್ಲಿ ನೀಡಲಾದ ಸೂಚನೆ ಪಾಲಿಸಲು ಒಂಬತ್ತನೇ ಮಹಡಿಯಿಂದ ಹಾರಿದ ಮೂವರು ಸಹೋದರಿಯರು ಬುಧವಾರ ಮೃತಪಟ್ಟಿದ್ದಾರೆ.

ನಿಶಿಕಾ (16), ಪಾಚಿ (14), ಪಾಖಿ (12) ಮೃತ ಸಹೋದರಿಯರು. ಅಪಾರ್ಟ್‌ಮೆಂಟ್‌ನ ಒಂಬತ್ತನೇ ಮಹಡಿಯಿಂದ ಜಿಗಿದು ಗಂಭೀರವಾಗಿ ಗಾಯಗೊಂಡಿದ್ದರು. ಆಸ್ಪತ್ರೆಗೆ ಕರೆದೊಯ್ಯುವಾಗ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಮಕ್ಕಳು ಕೊರಿಯಾಕ್ಕೆ ಹೋಗಬೇಕು ಎನ್ನುತ್ತಿದ್ದರು. ಆದರೆ, ಇಂತಹ ಸೂಚನೆಗಳಿದ್ದವು ಎಂದು ತಿಳಿದಿರಲಿಲ್ಲ' ಎಂದು ಮೃತ ಬಾಲಕಿಯರ ತಂದೆ ತಿಳಿಸಿದ್ದಾರೆ.

ಅಳುಮುಖದ ಇಮೋಜಿಯೊಂದಿಗೆ 'ಕ್ಷಮಿಸಿ ಅಪ್ಪ' ಎಂಬ ಕೈಬರಹವಿದ್ದ ಡೈರಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಚಿನಕುರುಳಿ ಪ್ರಕಾಶ್ ಶೆಟ್ಟಿ

### ಆನ್‌ಲೈನ್‌ನಲ್ಲಿ ಕೋಟ್ಯಂತರ ರೂಪಾಯಿ ವರ್ಗಾವಣೆ, ಪ್ರಕರಣ ದಾಖಲು

# ಸೈಬರ್ ವಂಚನೆ: ಹುಬ್ಬಳ್ಳಿ ಬ್ಯಾಂಕ್ ಖಾತೆ ಬಳಕೆ

• ನಾಗರಾಜ್ ಬಿ.ಎನ್.

**ಹುಬ್ಬಳ್ಳಿ:** ದೇಶದ ವಿವಿಧೆಡೆ ನಡೆದಿರುವ ಹಲವು ಸೈಬರ್ ವಂಚನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೋಟ್ಯಂತರ ರೂಪಾಯಿ ವರ್ಗಾವಣೆಗೆ ಹುಬ್ಬಳ್ಳಿಯ ಕೇಶ್ವಾಪುರದ ಬ್ಯಾಂಕ್ ಆಫ್ ಬರೋಡಾ ಶಾಖೆಯ ಖಾತೆಯು (54910200000346) ಹಲವು ಬಾರಿ ಬಳಕೆಯಾಗಿರುವುದು ಬಯಲಾಗಿದೆ.

ಇದೇ ಖಾತೆಯಿಂದ ದೇಶದ ವಿವಿಧ ಬ್ಯಾಂಕ್‌ಗಳ ಖಾತೆಗಳು ಮತ್ತು ಹಲವು ಬ್ಯಾಂಕ್‌ಗಳಿಂದ ಈ ಖಾತೆಗೆ ಹಣ ವರ್ಗಾವಣೆಯಾಗಿದೆ. ಎರಡು ವರ್ಷಗಳಿಂದ ಈ ಖಾತೆ ಸಕ್ರಿಯವಾಗಿತ್ತು. ಸದ್ಯ ಸ್ಥಗಿತಗೊಳಿಸಲಾಗಿದೆ.

ಈ ಖಾತೆಯನ್ನು ಹೊಂದಿರುವ ಇಲ್ಲಿನ ಗೋಪನಕೊಪ್ಪದ ನಿವಾಸಿ ಇರ್ಫಾನ್ ಎಂಬವನನ್ನು ಸೈಬರ್ ಠಾಣೆ ಪೊಲೀಸರು ವಶಕ್ಕೆ ಪಡೆದು, ವಿಚಾರಣೆ ನಡೆಸಿದ್ದಾರೆ. ಈ ಖಾತೆಯು ಆರಂಭಗೊಂಡು, ಸ್ಥಗಿತಗೊಳ್ಳುವವರೆಗೆ ಹಣಕಾಸಿನ ವ್ಯವಹಾರದ ಸಂಪೂರ್ಣ ವಿವರವನ್ನು ತ್ವರಿತವಾಗಿ ನೀಡುವಂತೆ ಪೊಲೀಸರು ಬ್ಯಾಂಕ್ ಶಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಸೈಬರ್ ವಂಚನೆಗೆ ಒಳಗಾಗಿ ಹಣ ಕಳೆದುಕೊಂಡಿದ್ದ ಪ್ರಕರಣಗಳಲ್ಲಿ ಹಲವಾರು ಮಂದಿ 1930 ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ, ಈ ಖಾತೆಗೇ ಹಣ ವರ್ಗಾವಣೆ ಆಗಿರುವ ಬಗ್ಗೆ ಡಿಜಿಟಲ್ ಸಾಕ್ಷ್ಯಸಹಿತ ದೂರು ನೀಡಿದ್ದಾರೆ.

'ಕುಕ್ಕಿಂಗ್ ವಿತ್ ಕೇಟರಿಂಗ್' ಹೆಸರಿನಲ್ಲಿ ಬ್ಯಾಂಕ್ ಆಫ್ ಬರೋಡಾದ ಶಾಖೆಯಲ್ಲಿ ಇರ್ಫಾನ್ ಈ ಖಾತೆ ತೆರೆದಿದ್ದರು. ಖಾತೆ ಮೂಲಕ 50ಕ್ಕೂ ಹೆಚ್ಚು ಬಾರಿ ವಿವಿಧ ಬ್ಯಾಂಕ್‌ಗಳ ಖಾತೆಗಳಿಗೆ, ವಿವಿಧ ಬ್ಯಾಂಕ್‌ಗಳ ಖಾತೆಯಿಂದ ಅದಕ್ಕೆ ಕೋಟ್ಯಂತರ ರೂಪಾಯಿ ವರ್ಗಾವಣೆಯಾಗಿದೆ. ಬೆಂಗಳೂರಿನಿಂದ ಅಲ್ಲದೇ ನವದೆಹಲಿ, ಮುಂಬೈ ಸೇರಿ ಇತರೆಡೆಯಿಂದ ದೂರುಗಳಿವೆ.

'ಆರೋಪಿ ಇರ್ಫಾನ್, ಅಕ್ರಮವಾಗಿ ಲಾಭಮಾಡಿಕೊಳ್ಳಲು ಬ್ಯಾಂಕ್‌ನಲ್ಲಿ ಖಾತೆಯನ್ನು ತೆರೆದಿದ್ದು, ಸೈಬರ್ ವಂಚಕರಿಗೆ ನೀಡಿದ್ದಾನೆ. ಹೀಗಾಗಿ ಆತನ ವಿರುದ್ಧ ಸೈಬರ್ ವಂಚನೆ ಹಾಗೂ ಐಟಿ ಕಾಯ್ದೆಯಡಿ ಪ್ರಕರಣ ದಾಖಲು ಮಾಡಲಾಗಿದೆ. ಖಾತೆ ಯಾರೆಲ್ಲ, ಎಲ್ಲೆಲ್ಲಿ ಬಳಸಿದ್ದಾರೆ ಎಂಬ ವಿವರ ಸಂಗ್ರಹಿಸುತ್ತಿದ್ದೇವೆ' ಎಂದು ಸೈಬರ್ ಅಪರಾಧ ವಿಭಾಗದ ಎಸಿಪಿ ಶಿವರಾಜ್ ಕಟಕಭಾವಿ ತಿಳಿಸಿದರು.

'ಇರ್ಫಾನ್ ಸಂಬಂಧಿಕರು ಈ ಪ್ರಕರಣದಲ್ಲಿ ಶಾಮೀಲಾಗಿರುವ ಶಂಕೆಯಿದೆ. ಪುಣೆಯಲ್ಲಿ ಇರುವ ಸಂಬಂಧಿಕರು ಈ ಖಾತೆಯ ಸಂಖ್ಯೆಯನ್ನು ಬಳಸಿದ್ದಾರೆಯೇ ಮತ್ತು ಯಾರೆಲ್ಲರೂ ಈ ಕೃತ್ಯದಲ್ಲಿ ಭಾಗಿಯಾಗಿದ್ದಾರೆ ಎಂದು ತಿಳಿಯಬೇಕಿದೆ. ಪ್ರಕರಣದ ತನಿಖೆಗಾಗಿ ವಿಶೇಷ ತಂಡವನ್ನು ರಚಿಸಲಾಗಿದ್ದು, ಪುಣೆಗೆ ಭೇಟಿ ನೀಡಲಿದೆ. ಇನ್ನಷ್ಟು ಮಾಹಿತಿ ಸಿಗುವ ನಿರೀಕ್ಷೆಯಿದೆ' ಎಂದರು.

### ಮುಖ್ಯಾಂಶಗಳು

- ಸೈಬರ್ ವಂಚನೆ ಪ್ರಮುಖ ಆರೋಪಿಗಾಗಿ ಶೋಧ
- ಅಕ್ರಮ ಆರ್ಥಿಕ ಲಾಭಕ್ಕೆ ತೆರೆಯಲಾದ ಖಾತೆ

### 'ಖಾತೆದಾರರ ಪತ್ತೆ ಸುಲಭವಲ್ಲ'

ಸೈಬರ್ ವಂಚನೆ ಪ್ರಕರಣದಲ್ಲಿ ಬಳಕೆಯಾಗುವ ಬ್ಯಾಂಕ್ ಖಾತೆಯನ್ನು ಹೊಂದಿರುವ ನೈಜ ವ್ಯಕ್ತಿಯು ಪತ್ತೆ ಆಗುವುದು ವಿರಳ. ಒಂದು ವೇಳೆ ಪತ್ತೆಯಾದರೂ ಆಧಾರ್ ಕಾರ್ಡ್ ವಿಳಾಸ ಅಥವಾ ಮೊಬೈಲ್ ಫೋನ್ ನಂಬರ್ ಬೇರೆ ರಾಜ್ಯಕ್ಕೆ ಸಂಬಂಧಪಟ್ಟಿರುತ್ತದೆ. ವಿಳಾಸದಲ್ಲಿ ಇರುವ ವ್ಯಕ್ತಿಗೂ, ಆತನ ಭಾವಚಿತ್ರಕ್ಕೂ ಹೋಲಿಕೆ ಆಗುವುದಿಲ್ಲ. ಶೇ 95ರಷ್ಟು ಖಾತೆಗಳ ವಿಳಾಸ ನಕಲಿಯಾಗಿರುತ್ತದೆ. ಆದರೆ, ಇರ್ಫಾನ್ ಹೆಸರಲ್ಲಿರುವ ಈ ಖಾತೆಗೆ, ಪೂರಕವಾಗಿ ಸಲ್ಲಿಕೆಯಾಗಿರುವ ಎಲ್ಲ ದಾಖಲೆಗಳು ಅಸಲಿಯಾಗಿವೆ' ಎಂದು ಪೊಲೀಸರು ತಿಳಿಸಿದ್ದಾರೆ.

ಸಹಾಯವಾಣಿ 1930ಕ್ಕೆ ಕರೆ ಮಾಡಿದಾಗ, ನೀಡಲಾಗುವ ಬ್ಯಾಂಕ್ ಖಾತೆ ಸಂಖ್ಯೆಗಳನ್ನು ಪರಿಶೀಲಿಸುತ್ತೇವೆ. ಕೆವೈಸಿ ಹೊಂದಿಕೆಯಾದ ವ್ಯಕ್ತಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳುತ್ತೇವೆ

**ಶಿವರಾಜ್ ಕಟಕಭಾವಿ,** ಎಸಿಪಿ, ಸೈಬರ್ ಠಾಣೆ, ಹುಬ್ಬಳ್ಳಿ

# ₹23 ಲಕ್ಷ ದೋಚಿದ ವಿಕ್ಟೋರಿಯಾ ಆಸ್ಪತ್ರೆ ಸಿಬ್ಬಂದಿ

ಪ್ರಜಾವಾಣಿ ವಾರ್ತೆ





**ಬೆಂಗಳೂರು:** ರೋಗಿಗಳ ಅನುಕೂಲಕ್ಕಾಗಿ ಅಳವಡಿಸಿದ್ದ ಯುಪಿಐ ಸ್ಕ್ಯಾನರ್ ತೆಗೆದು ವೈಯಕ್ತಿಕ ಯುಪಿಐ ಸ್ಕ್ಯಾನರ್ ಅಳವಡಿಸಿಕೊಂಡು ₹23 ಲಕ್ಷ ವಂಚಿಸಿದ್ದ ವಿಕ್ಟೋರಿಯಾ ಆಸ್ಪತ್ರೆಯ ಎಂಟು ಸಿಬ್ಬಂದಿಯ ವಿರುದ್ಧ ವಿಶ್ವೇಶ್ವರಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಆಸ್ಪತ್ರೆಯ ಪ್ರಯೋಗಾಲಯದಲ್ಲಿ ಕೆಲಸ ಮಾಡುತ್ತಿದ್ದ ಪ್ರೀತಿ, ಎಸ್. ಪುನೀತಾ, ಸಲ್ಮಾ, ಸತ್ಯಾ, ಶಶಿಕಲಾ, ಲಕ್ಷ್ಮಿಕಾಂತಮ್ಮ, ದರ್ಶನ್ ಹಾಗೂ ಮಹೇಂದ್ರ ಅವರ ವಿರುದ್ಧ ವಂಚನೆ ಆರೋಪದ ಅಡಿ ಪ್ರಕರಣ ದಾಖಲಾಗಿದೆ.

ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಎಸ್.ದೀಪಕ್ ಅವರು ಜಯಲಕ್ಷ್ಮಿ ಅವರ ಮೂಲಕ ದೂರು ನೀಡಿದ್ದರು. ಆ ದೂರು ಆಧರಿಸಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಆಸ್ಪತ್ರೆಯ ಇನ್ಫೋಸಿಸ್ ಲ್ಯಾಬ್ ಬಿಲ್ಲಿಂಗ್ ಕೌಂಟರ್‌ನಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಎಂಟು ಮಂದಿಯನ್ನು ನೇಮಕ ಮಾಡಿಕೊಳ್ಳಲಾಗಿತ್ತು. ರಕ್ತ ಪರೀಕ್ಷೆಗೆ ಬರುವ ರೋಗಿಗಳು ಕೌಂಟರ್‌ನಲ್ಲಿ ನೀಡುತ್ತಿದ್ದ ಹಣವನ್ನು ಸರ್ಕಾರದ ಖಾತೆಗೆ ಜಮೆ ಮಾಡದೇ ಸ್ವಂತಕ್ಕೆ ಬಳಸಿಕೊಂಡಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿತ್ತು.

**ಹೇಗೆ ವಂಚನೆ?:** ಆಸ್ಪತ್ರೆಯಲ್ಲಿ ರೋಗಿಗಳ ಅನುಕೂಲಕ್ಕಾಗಿ ಯುಪಿಐ ಸ್ಕ್ಯಾನರ್ ಅಳವಡಿಸಲಾಗಿತ್ತು. ಆದರೆ, ಆಸ್ಪತ್ರೆ ಸಿಬ್ಬಂದಿ ವೈಯಕ್ತಿಕ ಕ್ಯೂಆರ್ ಕೋಡ್ ಸ್ಕ್ಯಾನರ್ ಅಳವಡಿಸಿ ತಮ್ಮ ಖಾತೆಗೆ ರೋಗಿಗಳ ಹಣವನ್ನು ಹಾಕಿಸಿಕೊಂಡಿದ್ದರು. ಪ್ರಯೋಗಾಲಯ, ಹೊರ ರೋಗಿಗಳ ವಿಭಾಗ, ಎಕ್ಸ್‌ರೇ ವಿಭಾಗದಲ್ಲಿ ಈ ರೀತಿಯ ಕೃತ್ಯ ಎಸಗಿ ₹23 ಲಕ್ಷ ಹಣ ದೋಚಿದ್ದಾರೆ. ಬಳಿಕ, ಯುಪಿಐ ಸ್ಕ್ಯಾನರ್ ವಿಚಾರದಲ್ಲಿ ಅನುಮಾನ ಬಂದಿದ್ದರಿಂದ ದೀಪಕ್ ಅವರು ಸಮಿತಿ ರಚಿಸಿ ತನಿಖೆ ನಡೆಸಿದಾಗ ಸಿಬ್ಬಂದಿಯ ಕೃತ್ಯ ಬಯಲಾಗಿತ್ತು ಎಂದು ಮೂಲಗಳು ಹೇಳಿವೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಬೆಳಗಿನ ಜಾವ ಚಳಿಯ ವಾತಾವರಣ ನಂತರ ಶುಭ್ರ ಆಕಾಶ ಇರಲಿದೆ

# ಹೈ ಸ್ಪೀಡ್ ರೈಲು: ವೈಷ್ಣವ್ ಭರವಸೆ

## ಬೆಂಗಳೂರು–ಪುಣೆ ನಡುವೆ ರೈಲು ಕಾರಿಡಾರ್ ಆರಂಭಕ್ಕೆ ಮನವಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬೆಂಗಳೂರು–ಪುಣೆ ನಡುವೆ ಹೈ ಸ್ಪೀಡ್ ರೈಲು ಕಾರಿಡಾರ್ ಆರಂಭಿಸಬೇಕು ಎಂದು ಕೇಂದ್ರ ಭಾರಿ ಕೈಗಾರಿಕೆ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹಾಗೂ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಪ್ರತ್ಯೇಕವಾಗಿ ಮನವಿ ಮಾಡಿದರು.

ರೈಲ್ವೆ ಸಚಿವರನ್ನು ಸಂಸತ್ ಭವನದಲ್ಲಿ ಬುಧವಾರ ಭೇಟಿ ಮಾಡಿದ ಜೋಶಿ, 'ಬೆಂಗಳೂರು-ಪುಣೆ ಮಧ್ಯ ಹೈ ಸ್ಪೀಡ್ ರೈಲು ಕಾರಿಡಾರ್ ನಿರ್ಮಾಣವಾದಲ್ಲಿ ಕರ್ನಾಟಕದ ಬಹುತೇಕ ಪ್ರದೇಶದ ಒಟ್ಟಾರೆ ಅಭಿವೃದ್ಧಿ ಸಾಧ್ಯವಾಗುತ್ತದೆ' ಎಂದರು.

'ಈ ರೈಲು ಕಾರಿಡಾರ್ ನಿರ್ಮಾಣದಿಂದ ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕಕ್ಕೆ ಹೆಚ್ಚಿನ ಪ್ರಯೋಜನ ಆಗಲಿದೆ. ರಾಜ್ಯದ ಬೆಳಗಾವಿ, ಹುಬ್ಬಳ್ಳಿ, ಹಾವೇರಿ, ದಾವಣಗೆರೆ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಅಲ್ಲದೆ ಪುಣೆಯಿಂದ ಕರ್ನಾಟಕದ ಆರೇಳು ಜಿಲ್ಲೆಗಳಿಗೆ ತ್ವರಿತ ಪ್ರಯಾಣ, ಸಂಪರ್ಕ ಸಾಧ್ಯವಾಗಲಿದೆ' ಎಂದರು.

ಈ ಪ್ರಸ್ತಾವಕ್ಕೆ ವೈಷ್ಣವ್ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಜೋಶಿ ತಿಳಿಸಿದ್ದಾರೆ.

'ರಾಜ್ಯಕ್ಕೆ ಹೈ ಸ್ಪೀಡ್ ರೈಲು ಕಾರಿಡಾರ್‌ಗಳನ್ನು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. ಅದಕ್ಕೆ ಹುಬ್ಬಳ್ಳಿಯಾಗಿ ಬೆಂಗಳೂರು-ಪುಣೆ ಹೈ ಸ್ಪೀಡ್ ರೈಲು ಕಾರಿಡಾರ್ ನೀಡಲಾಗುತ್ತಿದೆ. ಈ ಮಾರ್ಗವು ಹುಬ್ಬಳ್ಳಿ, ಬೆಳಗಾವಿ ಮೂಲಕ ಹಾದು ಹೋಗಲಿದೆ ಎಂಬುದಾಗಿ ರೈಲ್ವೆ ಸಚಿವರು ತಿಳಿಸಿದರು' ಎಂದು ಕುಮಾರಸ್ವಾಮಿ ಮಾಹಿತಿ ನೀಡಿದರು.

ಬೆಂಗಳೂರು-ಮುಂಬೈಗೆ ಹೊಸ ರೈಲು ಆರಂಭಿಸಲಾಗುವುದು ಎನ್ನುವ ಮಾಹಿತಿಯನ್ನು ರೈಲ್ವೆ ಸಚಿವರು ತಮಗೆ ನೀಡಿದರು. 'ಬೆಂಗಳೂರು-ಪುಣೆ ಹೈ ಸ್ಪೀಡ್ ರೈಲು ಕಾರಿಡಾರ್ ಹಾಗೂ ಬೆಂಗಳೂರು-ಮುಂಬೈ ನಡುವಿನ ಹೊಸ ರೈಲಿನಿಂದ ಕರ್ನಾಟಕಕ್ಕೆ ಮತ್ತಷ್ಟು ಅನುಕೂಲ ಆಗಲಿದೆ' ಎಂದು ಅವರು ತಿಳಿಸಿದರು.

ಹೊಸ ರೈಲು ಸಂಪರ್ಕ ಮತ್ತು ಹಾಲಿ ರೈಲು ಮಾರ್ಗಗಳಲ್ಲಿ ವನ್ಯಜೀವಿಗಳ ಅಪಘಾತಗಳನ್ನು ತಡೆಗಟ್ಟಲು ರೈಲ್ವೆ ಬೇಲಿ ಮತ್ತು ಬ್ಯಾಕ್ ಕಾರಿಡಾರ್‌ಗಳ ಅನುಷ್ಠಾನದ ಕುರಿತು ಮಾತುಕತೆ ನಡೆಸಲಾಯಿತು ಎಂದು ಸಚಿವರು ಹೇಳಿದರು.

ಮಂಡ್ಯ ಲೋಕಸಭೆ ಕ್ಷೇತ್ರವು ಸೇರಿದಂತೆ ಕರ್ನಾಟಕದ ಎಲ್ಲ ಕಡೆ ಬಾಕಿ ಇರುವ ರೈಲ್ವೆ ಯೋಜನೆಗಳ ಬಗ್ಗೆ ಚರ್ಚಿಸಲಾಯಿತು. ಮೈಸೂರು-ಬೆಂಗಳೂರು ನಡುವೆ ಸಂಚರಿಸುವ ಒಡೆಯರ್ ಎಕ್ಸ್‌ಪ್ರೆಸ್ ರೈಲಿಗೆ ರಾಮನಗರದಲ್ಲಿ ನಿಲುಗಡೆ ಕೋರಿ ಮನವಿ ಮಾಡಲಾಯಿತು ಎಂದರು.

ಅಶ್ವಿನಿ ವೈಷ್ಣವ್ ಹಾಗೂ ಎಚ್‌.ಡಿ.ಕುಮಾರಸ್ವಾಮಿ ಚರ್ಚಿಸಿದರು

### ಹೂಡಿಕೆ ಕುರಿತು ಸಚಿವರ ಜತೆಗೆ ಚರ್ಚೆ

ಉಕ್ಕು ಸಚಿವಾಲಯದ ವಿವಿಧ ಅಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿದಂತೆ ಎಚ್‌.ಡಿ. ಕುಮಾರಸ್ವಾಮಿ ಅವರು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು.

ಉಕ್ಕು ಸಚಿವಾಲಯದ ಹೊಸ ಹೂಡಿಕೆಗಳು ಹಾಗೂ ಈಗಾಗಲೇ ನಡೆಯುತ್ತಿರುವ ಯೋಜನೆಗಳ ಬಗ್ಗೆ ಹಾಗೂ ಉಕ್ಕು ವಲಯವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಮಾನ್ಯ ಸಚಿವರ ಜತೆ ಸಮಾಲೋಚನೆ ನಡೆಸಲಾಯಿತು ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ.

### ಡಿಸಿಎಫ್ ಕಚೇರಿ ಪೀಠೋಪಕರಣ ಜಪ್ತಿ

**ಮಂಡ್ಯ:** ಅರಣ್ಯ ಪ್ರದೇಶದಲ್ಲಿ ತಂತಿ ಬೇಲಿ ನಿರ್ಮಿಸಿದ್ದ ಗುತ್ತಿಗೆದಾರರಿಗೆ ಹಣ ಪಾವತಿಸದ ಕಾರಣ, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶದಂತೆ ಅರಣ್ಯ ಭವನದ (ಡಿಸಿಎಫ್ ಕಚೇರಿ) ಪೀಠೋಪಕರಣ ಮತ್ತು 14 ಕಂಪ್ಯೂಟರ್‌ಗಳನ್ನು ಬುಧವಾರ ಜಪ್ತಿ ಮಾಡಲಾಯಿತು.

ಗುತ್ತಿಗೆದಾರರಾದ ನಾಗಮಂಗಲ ತಾಲ್ಲೂಕಿನ ಮಲ್ಲೇಗೌಡನಹಳ್ಳಿಯ ಎಂ.ಎ. ಸುರೇಶ ಹಾಗೂ ಶ್ರೀರಂಗಪಟ್ಟಣ ತಾಲ್ಲೂಕಿನ ಗೌಡಹಳ್ಳಿಯ ರಾಜಣ್ಣ ಪಿ.ಎನ್ ಅವರು, 2022ರಲ್ಲಿ ₹3.24 ಕೋಟಿ ವೆಚ್ಚದಲ್ಲಿ 51 ಕಿ.ಮೀ. ದೂರದವರೆಗೆ ತಂತಿಬೇಲಿ ಕಾಮಗಾರಿ ನಡೆಸಿದ್ದರು. ಬಿಲ್ ಸಲ್ಲಿಸಿದ್ದರೂ ಹಣ ಪಾವತಿಯಾಗಿರಲಿಲ್ಲ. ನಿಗದಿತ ಸಮಯದೊಳಗೆ ಪಾವತಿಸುವಂತೆ ನ್ಯಾಯಾಲಯವು ಆದೇಶಿಸಿದ್ದರೂ ಪಾವತಿಸದ ಕಾರಣ ಮತ್ತೆ ಪ್ರಕರಣ ದಾಖಲಿಸಿ ಜಪ್ತಿ ಆದೇಶ ತಂದಿದ್ದರು. ಡಿಸಿಎಫ್ ರಘು ಅವರು ಹಣ ಪಾವತಿಗೆ ಸಮಯಾವಕಾಶ ಕೋರಿ, ಜಪ್ತಿ ಮಾಡದಂತೆ ಮನವಿ ಮಾಡಿದರು. ಗುತ್ತಿಗೆದಾರರು ಅದಕ್ಕೆ ಒಪ್ಪಲಿಲ್ಲ.

## ಸುದ್ದಿ 2 ನಿಮಿಷ

### ಕೈಗಾರಿಕಾ ಪಾರ್ಕ್ ಉದ್ಘಾಟನೆ

**ಬೆಂಗಳೂರು:** ಉದ್ಯಮ ಒಂದು ಕಾಲಕ್ಕೆ ಮಹಿಳೆಯರಿಗೆ ಸಾಧ್ಯವಾಗದ ಕನಸು ಆಗಿತ್ತು. ಈಗ ಮಹಿಳೆಯರ ವಾಸ್ತವ ಬದಲಾಗಿದೆ. ಅವರು ಮನೆಗೆ ಸೀಮಿತವಾಗದೇ ಕೈಗಾರಿಕೋದ್ಯಮಿಗಳಾಗುತ್ತಿದ್ದಾರೆ ಎಂದು ಕೈಗಾರಿಕಾ ಪಾರ್ಕ್ ಮುಖ್ಯಸ್ಥೆ ರೇವತಿ ರಾಜು ಹೇಳಿದರು.

ಗೌರಿಬಿದನೂರಿನಲ್ಲಿ ಎಫ್‌ಎಲ್‌ಒ ಕೈಗಾರಿಕಾ ಪಾರ್ಕ್ ಉದ್ಘಾಟನೆಯ ಬಳಿಕ ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಿಳೆಯರಲ್ಲಿ ಉಂಟಾಗಿರುವ ಆಂತರಿಕ ಪರಿವರ್ತನೆಯನ್ನು ಕೈಗಾರಿಕಾ ಪಾರ್ಕ್ ಸೂಚಿಸುತ್ತದೆ. ಉದ್ಯಮದ ಹಾದಿಯಲ್ಲಿ ಮಹಿಳೆಯರು ದಾಪುಗಾಲು ಇಡುತ್ತಿರುವುದಕ್ಕೆ ಸಾಕ್ಷಿಯಾಗಿದೆ ಎಂದರು.

ಬೆಂಗಳೂರಿನಲ್ಲಿ ಕೈಗಾರಿಕಾ ವಲಯಗಳು ತುಂಬಿ ಹೋಗಿವೆ. ಜನದಟ್ಟಣೆ, ವಾಹನದಟ್ಟಣೆ ಹೆಚ್ಚಾಗಿದೆ. ಈ ಸಮಸ್ಯೆಯಿಂದ ಪಾರಾಗಲು, ದೀರ್ಘಕಾಲೀನ ಬೆಳವಣಿಗೆಗೆ ಪೂರಕವಾಗುವಂತೆ ಮಾಡಲು ಗೌರಿಬಿದನೂರಿನಲ್ಲಿ ಕೈಗಾರಿಕಾ ಪಾರ್ಕ್ ನಿರ್ಮಿಸಲಾಗಿದೆ ಎಂದು ವಿವರಿಸಿದರು.

ಮೈಸೂರಿನ ರಾಜಮನೆತನದ ಕಾಮಾಕ್ಷಿದೇವಿ ಒಡೆಯರ್, ಮಾಜಿ ಶಾಸಕಿ ಸೌಮ್ಯಾ ರೆಡ್ಡಿ ಭಾಗವಹಿಸಿದ್ದರು.

### ಸರ್ಕಾರದ ನಿಲುವು ಖಂಡಿಸಿ ಎಐಡಿಎಸ್‌ಒ ಪ್ರತಿಭಟನೆ

**ಬೆಂಗಳೂರು:** ರಾಮನಾರಾಯಣ ಚೆಲ್ಲಾರಾಂ (ಆರ್‌.ಸಿ) ಕಾಲೇಜು ಮತ್ತು ಸರ್ಕಾರಿ ಕಲಾ ಕಾಲೇಜುಗಳನ್ನು ಬೆಂಗಳೂರು ನಗರ ವಿ.ವಿಯ ಘಟಕಕ್ಕೆ ಸೇರಿಸಲು ಮುಂದಾಗಿರುವ ರಾಜ್ಯ ಸರ್ಕಾರದ ನಿಲುವನ್ನು ಖಂಡಿಸಿ ಎಐಡಿಎಸ್‌ಒ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಬುಧವಾರ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಯಿತು.

ಸಮಿತಿಯ ಜಿಲ್ಲಾ ಅಧ್ಯಕ್ಷೆ ಅಪೂರ್ವ ಮಾತನಾಡಿ, 'ರಾಜ್ಯ ಸರ್ಕಾರ ಬಡ ವಿದ್ಯಾರ್ಥಿಗಳ ವಿರೋಧಿಯಾಗಿದೆ. ರೈತರು ಹಾಗೂ ಕಾರ್ಮಿಕರ ಮಕ್ಕಳನ್ನು ಶಿಕ್ಷಣ ವಲಯದಿಂದ ದೂರವಿಡುತ್ತಿದೆ' ಎಂದು ಆಕ್ರೋಶ ಹೊರಹಾಕಿದರು.

'ಸರ್ಕಾರಿ ಆರ್‌.ಸಿ ಹಾಗೂ ಸರ್ಕಾರಿ ಕಲಾ ಕಾಲೇಜುಗಳು ಸರ್ಕಾರಿ ಕಾಲೇಜುಗಳಾಗಿಯೇ ಉಳಿಯಬೇಕೆಂದು ಕಳೆದ ವರ್ಷದಿಂದ ಪ್ರತಿಭಟನೆಗಳು ನಡೆಯುತ್ತಾ ಬಂದಿವೆ. ಆದರೂ, ಸರ್ಕಾರದಲ್ಲಿನ ಕೆಲವು ಶಕ್ತಿಗಳು ಇದೇ ಕಾಲೇಜುಗಳ ಒಳಗೆ ಇದ್ದು, ಈ ಕಾಲೇಜುಗಳನ್ನು ಘಟಕ ಕಾಲೇಜುಗಳನ್ನಾಗಿ ಮಾಡಲು ಸರ್ವಪ್ರಯತ್ನ ಮಾಡುತ್ತಿವೆ. ಸರ್ಕಾರ ತನ್ನ ನಿಲುವಿನಿಂದ ಹಿಂದೆ ಸರಿಯಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಕಾರ್ಯದರ್ಶಿ ಕಲ್ಯಾಣ್ ಕುಮಾರ್, 'ಘಟಕ ಕಾಲೇಜುಗಳನ್ನಾಗಿ ಪರಿವರ್ತಿಸುವುದು ಖಂಡನೀಯ. ಕೇವಲ ಆರು ತಿಂಗಳ ಹಿಂದೆಯಷ್ಟೇ ಹೋರಾಟಕ್ಕೆ ಮಣಿದು ನಿಲುವಿನಿಂದ ಹಿಂದೆ ಸರಿದಿದ್ದ ಸರ್ಕಾರ ಈಗ ಮತ್ತೆ ಅದೇ ಯೋಜನೆಯನ್ನು ಜಾರಿಗೆ ತರುತ್ತಿರುವುದು ವಿದ್ಯಾರ್ಥಿ ಸಮುದಾಯದ ಬೆನ್ನಿಗೆ ಚೂರಿ ಹಾಕಿದಂತಾಗಿದೆ' ಎಂದು ಆಕ್ರೋಶ ಹೊರಹಾಕಿದರು.

ಪ್ರತಿಭಟನೆಯಲ್ಲಿ ನವಾಜ್, ಕಿರಣ್, ರೋಹಿತ್ ಭಾಗವಹಿಸಿದ್ದರು.

## ನಿಧನ ವಾರ್ತೆ

### ಜಗನ್ನಾಥ ರಾವುತ್

**ನೆಲಮಂಗಲ:** ಪಟ್ಟಣದ ಸುಭಾಷ್‌ನಗರ ನಿವಾಸಿ, ತ್ಯಾಮಗೊಂಡ್ಲು ಪದವಿ ಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಸಿ.ಎಸ್.ಜಗನ್ನಾಥ ರಾವುತ್ (80) ಮಂಗಳವಾರ ನಿಧನರಾದರು. ಅವರಿಗೆ ಪತ್ನಿ ವೈದ್ಯೆ ವೆಂಕಟರಾಜಮ್ಮ, ಮಗ ಮತ್ತು ಮಗಳು ಇದ್ದಾರೆ. ಪೀಣ್ಯದ ಪುಣ್ಯಧಾಮದಲ್ಲಿ ಬುಧವಾರ ಅಂತ್ಯಕ್ರಿಯೆ ನಡೆಯಿತು.

## ನೀರಾವರಿ ಯೋಜನೆ ಅನುಮೋದನೆಗೆ ಮಾಜಿ ಪ್ರಧಾನಿ ಮನವಿ

# ಕರ್ನಾಟಕ ರಕ್ಷಿಸಿ: ಗದ್ಗದಿತರಾದ ದೇವೇಗೌಡ

**ನವದೆಹಲಿ:** ಕರ್ನಾಟಕ ಎದುರಿಸುತ್ತಿರುವ ನೀರಾವರಿ ಬಿಕ್ಕಟ್ಟಿನ ಬಗ್ಗೆ ರಾಜ್ಯಸಭೆಯಲ್ಲಿ ಗದ್ಗದಿತರಾಗಿ ಮಾತನಾಡಿದ ಜೆಡಿಎಸ್ ಸದಸ್ಯ ಎಚ್‌.ಡಿ. ದೇವೇಗೌಡ, ಕರ್ನಾಟಕದಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ. ದಯಮಾಡಿ ಪರಿಹರಿಸಿ ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡರು.

ರಾಜ್ಯಸಭೆಯಲ್ಲಿ ಬುಧವಾರ ನಡೆದ ರಾಷ್ಟ್ರಪತಿಯವರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾಜಿ ಪ್ರಧಾನಿ ಮಾತನಾಡಿದರು.

ರಾಜ್ಯದ ಅನೇಕ ನೀರಾವರಿ ಯೋಜನೆಗಳು ನನೆಗುದಿಗೆ ಬಿದ್ದಿವೆ. ಆ ಎಲ್ಲಾ ಯೋಜನೆಗಳಿಗೆ ಅನುಮೋದನೆ ನೀಡುವ ಮೂಲಕ ಕರ್ನಾಟಕ ಎದುರಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಬೇಕು ಎಂದು ಅವರು ಕೇಂದ್ರ ಸರ್ಕಾರವನ್ನು ಕೈ ಮುಗಿದು ವಿನಂತಿಸಿದರು.

ತಮ್ಮ ಸಂಕ್ಷಿಪ್ತ ಭಾಷಣದಲ್ಲಿ ರಾಜ್ಯದ ನೀರಾವರಿ ಬಿಕ್ಕಟ್ಟನ್ನು ಎಳೆಎಳೆಯಾಗಿ ಬಿಡಿಸಿಟ್ಟ ಅವರು, 'ನನ್ನ ರಾಜ್ಯಸಭಾ ಅವಧಿ ಇನ್ನೊಂದು ತಿಂಗಳಲ್ಲಿ ಮುಗಿಯಲಿದೆ. ನನ್ನ ರಾಜ್ಯದ ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಅವರ ಹಿತಕಾಯಿರಿ. ನಾವೆಲ್ಲರೂ ಮನುಷ್ಯರು, ಮಳೆ ಬಿದ್ದರೆ ನೀರು, ಇಲ್ಲವಾದರೆ ಇಲ್ಲ. ಈ ಸದನದ ಎಲ್ಲಾ ಸದಸ್ಯರು ಕರ್ನಾಟಕದ ರಕ್ಷಣೆ ಮಾಡಬೇಕು ಎಂಬುದಾಗಿ ನಾನು ಕೈ ಮುಗಿದು ಬೇಡುತ್ತೇನೆ' ಎಂದು ಮನವಿ ಮಾಡಿದರು.

'ಕರ್ನಾಟಕ ನೆರೆ ರಾಜ್ಯಗಳ ಜತೆ ನೀರಾವರಿ ಹಕ್ಕಿಗಾಗಿ ನಿರಂತರವಾಗಿ ಹೋರಾಟ ನಡೆಸುತ್ತಿದೆ. ನಾನು ಕೂಡ ನೀರಿಗಾಗಿ 65 ವರ್ಷಗಳಿಂದ ಹೋರಾಟ ನಡೆಸುತ್ತಾ ಬಂದಿದ್ದೇನೆ. ನ್ಯಾಯಮಂಡಳಿಗಳು ನೀಡಿರುವ ತೀರ್ಪುಗಳ ಬಗ್ಗೆ ಈ ಸದನದಲ್ಲಿ ಚರ್ಚಿಸಲು ನಾನು ಬಯಸುವುದಿಲ್ಲ' ಎಂದ ಅವರು, 'ಕರ್ನಾಟಕ ರಾಜ್ಯಕ್ಕೆ ನೀರಿನದೇ ಬಹುದೊಡ್ಡ ಬಿಕ್ಕಟ್ಟಾಗಿದೆ. ಒಂದೆಡೆ ತಮಿಳುನಾಡು, ಮತ್ತೊಂದೆಡೆಯಲ್ಲಿ ಆಂಧ್ರ ಪ್ರದೇಶ, ಇನ್ನೊಂದು ಕಡೆಯಲ್ಲಿ ಗೋವಾದಿಂದ ತೊಂದರೆ ಎದುರಿಸುತ್ತಿದೆ. ನಾನು ಜೀವನದ ಕೊನೆಕಾಲದಲ್ಲಿ ಇದ್ದೇನೆ. ಈ ವೃದ್ಧನ ಮನವಿಗೆ ಮಾನವೀಯತೆಯಿಂದ ಸ್ಪಂದಿಸಿ' ಎಂದು ಕೋರಿದರು.

'ನರೇಂದ್ರ ಮೋದಿ ಅವರ ಸರ್ಕಾರ ಈ ಬಿಕ್ಕಟ್ಟಿಗೆ ಪರಿಹಾರ ನೀಡಬೇಕು. ನಾನು ನಿಮ್ಮ (ಎನ್‌ಡಿಎ) ಜತೆಯಲ್ಲಿಯೇ ಇರುತ್ತೇನೆ. ನನ್ನ ಮಗ ನಿಮ್ಮ ಸಂಪುಟದಲ್ಲಿ ಇದ್ದಾನೆ. ನಾವು ಮುಂದೆಯೂ ನಿಮ್ಮ ಜತೆಗೇ ಇರುತ್ತೇವೆ ಹಾಗೂ ಮೈತ್ರಿಕೂಟ ಬದಲಾವಣೆ ಮಾಡುವ ಯಾವ ಪ್ರಶ್ನೆಯೂ ಇಲ್ಲ. ರಾಜ್ಯದ ಜನರಿಗೆ ನ್ಯಾಯ ಒದಗಿಸಿ ಎಂಬುದಷ್ಟೇ ನನ್ನ ಮನವಿ' ಎಂದು ದೇವೇಗೌಡರು ಕೋರಿಕೊಂಡರು.

ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅವರನ್ನು ನವದೆಹಲಿಯಲ್ಲಿ ಬುಧವಾರ ಭೇಟಿ ಮಾಡಿದ ಎಚ್‌.ಡಿ.ದೇವೇಗೌಡ ಅವರು ರಾಜ್ಯದ ನೀರಾವರಿ ಯೋಜನೆಗಳಿಗೆ ಅನುಮೋದನೆ ನೀಡುವಂತೆ ಮನವಿ ಮಾಡಿದರು

## ಸಿಎಂಆರ್ ವಿ.ವಿ ಘಟಿಕೋತ್ಸವ 7ರಂದು

**ಬೆಂಗಳೂರು:** ಸಿಎಂಆರ್ ವಿವಿಯ 10ನೇ ವಾರ್ಷಿಕ ಘಟಿಕೋತ್ಸವ ಬಾಗಲೂರಿನಲ್ಲಿರುವ ಲೇಕ್ ಸೈಡ್ ಕ್ಯಾಂಪಸ್ ಸಭಾಂಗಣದಲ್ಲಿ ಫೆ.7ರಂದು ನಡೆಯಲಿದೆ.

ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಅವರು ಪದವಿ ಪ್ರದಾನ ಮಾಡಲಿದ್ದಾರೆ. ಅರವಿಂದ್ ಕನ್ಸಲ್ಟೆನ್ಸಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಂಜೀವ್ ಕೇಸ್ಕರ್ ದಿಕ್ಸೂಚಿ ಭಾಷಣ ಮಾಡುವರು.

ಸುರತ್ಕಲ್‌ನ ಎನ್‌.ಐ.ಟಿ.ಕೆ ಆಡಳಿತ ಮಂಡಳಿಯ ಮಾಜಿ ಅಧ್ಯಕ್ಷ ಕೆ. ಬಾಲವೀರ ರೆಡ್ಡಿ ಮತ್ತು ಗಾಯಕಿ ಸಂಗೀತಾ ಕಟ್ಟಿ ಕುಲಕರ್ಣಿ ಅವರಿಗೆ ಸಿಎಂಆರ್ ವಿವಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದೆ. ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳು ಮತ್ತು ಸಿಎಂಆರ್ ವಿಶ್ವವಿದ್ಯಾಲಯದ ಅಧ್ಯಕ್ಷ ಕೆ.ಸಿ ರಾಮಮೂರ್ತಿ, ಕುಲಾಧಿಪತಿ ಸಬಿತಾ ರಾಮಮೂರ್ತಿ ಭಾಗವಹಿಸಲಿದ್ದಾರೆ.

# 'ಪರಿಪೂರ್ಣರಾಗಲು ರಂಗಭೂಮಿ ಸಹಕಾರಿ'

## ಭಾರತ ರಂಗ ಮಹೋತ್ಸವ: ಕೆ. ಶಿವರುದ್ರಯ್ಯಗೆ 'ಉತ್ಸವ ಗೌರವ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಮ್ಮೊಳಗಿರುವ ಕಲಾವಿದನನ್ನು ಜಾಗೃತಗೊಳಿಸಲು, ಜೀವಂತವಾಗಿಟ್ಟುಕೊಳ್ಳಲು, ಪಾತ್ರವೇ ನಾವಾಗುವ ಪ್ರಕ್ರಿಯೆ ಯಶಸ್ವಿಗೊಳಿಸಲು ರಂಗಭೂಮಿಯಲ್ಲಿ ಅಭಿನಯ ಮಾಡಬೇಕು. ಇಲ್ಲವಾದಲ್ಲಿ ಕಲಾವಿದ ಪೂರ್ಣನಾಗಲು ಸಾಧ್ಯವಿಲ್ಲ' ಎಂದು ನಟ ಸಿಹಿಕಹಿ ಚಂದ್ರು ಅಭಿಪ್ರಾಯಪಟ್ಟರು.

ಕರ್ನಾಟಕ ನಾಟಕ ಅಕಾಡೆಮಿ ಮತ್ತು ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆ ಜಂಟಿಯಾಗಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಮಾಧ್ಯಮ ಸಹಯೋಗದಲ್ಲಿ ಹಮ್ಮಿಕೊಂಡಿರುವ 'ಭಾರತ ರಂಗ ಮಹೋತ್ಸವ' ಹಾಗೂ 'ರಂಗ ಪರಿಷೆ'ಯ ನಾಲ್ಕನೇ ದಿನವಾದ ಬುಧವಾರ ನಡೆದ ಕಾರ್ಯಕ್ರಮದಲ್ಲಿ, ಚಲನಚಿತ್ರ ನಿರ್ದೇಶಕ ಕೆ. ಶಿವರುದ್ರಯ್ಯ ಅವರಿಗೆ 'ಉತ್ಸವ ಗೌರವ' ನೀಡಿ ಸನ್ಮಾನಿಸಲಾಯಿತು.

**ರಂಗ ಗೌರವ ಪ್ರದಾನ:** 40 ವರ್ಷ ಪೂರೈಸಿರುವ ಉಡುಪಿಯ 'ರಂಗಭೂಮಿ' ಮತ್ತು ಚಾಮರಾಜನಗರದ 'ಶಾಂತಲಾ ಕಲಾವಿದರು' ತಂಡಗಳಿಗೆ 'ರಂಗ ಗೌರವ' ನೀಡಿ ಸನ್ಮಾನಿಸಲಾಯಿತು.

ಕಲಾವಿದೆ ಸಿಹಿಕಹಿ ಗೀತಾ, ಕರ್ನಾಟಕ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿಯ ಅಧ್ಯಕ್ಷ ಮೋತಿಲಾಲ ರೂ. ಚೌವ್ಹಾಣ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷೆ ಶುಭಾ ಧನಂಜಯ್, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ರಿಜಿಸ್ಟ್ರಾರ್ ನೀಲಮ್ಮ, ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರದ ನಿರ್ದೇಶಕಿ ವೀಣಾ ಶರ್ಮಾ ಇದ್ದರು.

'ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಶತಮಾನೋತ್ಸವ ಸಂಭ್ರಮ' ಕವಿಗೋಷ್ಠಿಯಲ್ಲಿ, ಕವಯತ್ರಿ ಹೇಮಲತಾ ವಸ್ತ್ರದ ಅವರು ಅಧ್ಯಕ್ಷತೆ ವಹಿಸಿದ್ದರು. ಚಿತ್ರ ವೆಂಕಟರಾಜು ಅವರು ರಂಗ ಚಿಂತನೆ ನಡೆಸಿಕೊಟ್ಟರು. ಪದ್ಮ ಟಿ. ಚಿನ್ಮಯಿ, ಜಯಶ್ರೀ ಕಂಬಾರ, ಕುಮಾರಸ್ವಾಮಿ ಬಿಜ್ಜಿಹಳ್ಳಿ, ಲಕ್ಷ್ಮೀ ಶ್ರೀನಿವಾಸ, ಶಶಿಕಲಾ ಆರ್. ಯರ್ತಿಗಾನಹಳ್ಳಿ, ಕುಮಾರ್ ಇಂದ್ರಬೆಟ್ಟ, ದಯಾ ಗಂಗನಗಟ್ಟ, ನೂತನ್ ದೋಶೆಟ್ಟಿ, ರಂಗಸ್ವಾಮಿ ಸಿದ್ದಯ್ಯ, ಸೈಯದ್ ಯೇಜಸ್ ಪಾಷ, ಮಂಜು ಪಾಂಡವಪುರ, ಶಿವಕುಮಾರ್ ಕೆಂಪನಪುರ, ಆನಂದ ಕುಮಾರ್ ಎಸ್.ಬಿ. ಹಾಗೂ ಪ್ರೇಮಾ ಪಿ.ವೈ.ಕೆ. ಮೋಳೆ ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದರು.

ಕೆ. ಶಿವರುದ್ರಯ್ಯ, ಸಿಹಿಕಹಿ ಚಂದ್ರು ಹಾಗೂ ಸಿಹಿಕಹಿ ಗೀತಾ ಅವರನ್ನು ಗೌರವಿಸಲಾಯಿತು. ನೀಲಮ್ಮ, ಜಿಪಿಒ ಚಂದ್ರು, ಮೋತಿಲಾಲ ರೂ. ಚೌವ್ಹಾಣ, ಕೆ.ವಿ. ನಾಗರಾಜಮೂರ್ತಿ, ಶುಭಾ ಧನಂಜಯ್, ವೀಣಾ ಶರ್ಮಾ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

### ನಾಟಕಗಳ ಪ್ರದರ್ಶನ

ಕೋಲ್ಕತ್ತದ ಭಗ್ವತಿ ನೃತ್ಯ ಮಂದಿರ ತಂಡವು 'ರುದ್ರಗಣಿಕ' ಮೂಕ ನಾಟಕ ಪ್ರದರ್ಶಿಸಿತು. ಧಾರವಾಡ ರಂಗಾಯಣದಿಂದ 'ಕಂದಗಲ್ಲರಿಗೆ ನಮಸ್ಕಾರ ಅರ್ಥಾತ್ ಕಂದಗಲ್ಲ ಭಾರತ' ನಾಟಕ, ಯುವ ರಂಗ ಸಂಭ್ರಮದ ಭಾಗವಾಗಿ 'ಶತಮರ್ಕಟ' ನಾಟಕವನ್ನು ಪ್ರಸ್ತುತಪಡಿಸಲಾಯಿತು. ರಂಗಬದುಕು ಟ್ರಸ್ಟ್ ವತಿಯಿಂದ ವೃತ್ತಿ ಭೂಮಿಯ ರಂಗಗೀತೆಗಳು, ಪದ ದೇವರಾಜ್ ತಂಡದಿಂದ ಪೌರಾಣಿಕ ರಂಗಗೀತೆಗಳು, ರಂಗಚಕ್ರ ತಂಡದಿಂದ ರಂಗಗೀತೆಗಳು, ಮಹಾದೇವಿ ರಾಠೋಡ್ ತಂಡ ಮತ್ತು ಕಲಬುರಗಿಯ ಬಂಜಾರ ಮಹಿಳಾ ನೃತ್ಯ ಮಂದೇವಾಲ ತಾಂಡ ತಂಡಗಳು ಲಂಬಾಣಿ ನೃತ್ಯ ಪ್ರದರ್ಶಿಸಿದವು.

## ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ ಫೆ.12ಕ್ಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇಂದ್ರ ಸರ್ಕಾರ ಜಾರಿಗೊಳಿಸಿರುವ ನಾಲ್ಕು ಕಾರ್ಮಿಕ ಕಾಯ್ದೆಗಳನ್ನು ರದ್ದುಪಡಿಸಬೇಕು. ನರೇಗಾ ಯೋಜನೆ ಮರು ಜಾರಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಫೆ. 12ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಹಮ್ಮಿಕೊಳ್ಳಲಾಗುವುದು ಎಂದು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ಹಾಗೂ ಸಂಯುಕ್ತ ಹೋರಾಟ- ಕರ್ನಾಟಕ ತಿಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಜೆಸಿಟಿಯು ಹಾಗೂ ಸಂಯುಕ್ತ ಹೋರಾಟ-ಕರ್ನಾಟಕದ ಮುಖಂಡರಾದ ಬಡಗಲಪುರ ನಾಗೇಂದ್ರ, ಕೆ.ವಿ. ಭಟ್, ಎಚ್‌. ಬಸವರಾಜಪ್ಪ, ಜಿ.ಆರ್. ಶಿವಶಂಕರ್, ಟಿ. ಯಶವಂತ್, ಎಸ್. ವರಲಕ್ಷ್ಮೀ, 'ಕೇಂದ್ರ ಸರ್ಕಾರ ಜಾರಿಗೊಳಿಸಿರುವ ವಿ ಬಿ ಜಿ ರಾಮ್ ಜಿ ಕಾಯ್ದೆಯನ್ನು ರದ್ದುಗೊಳಿಸಬೇಕು. ಭೂಸ್ವಾಧೀನ ಕಾಯ್ದೆಗಳನ್ನು ಹಿಂಪಡೆಯಬೇಕು' ಎಂದು ಆಗ್ರಹಿಸಿದರು.

**ನೈರುತ್ಯ ರೈಲ್ವೆ**

ಟೆಂಡರು ಉಲ್ಲೇಖ ಸಂ.: ECN-01-2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕಾಮಗಾರಿಯ ವಿವರ | ಅಂದಾಜು ಮೌಲ್ಯ |
|---|---|
| ಪಾಟರಿ ರೋಡ್‌ದಿಂದ ಬೆಂಗಳೂರು ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದವರೆಗೆ ಎಕ್ಸ್‌ಟೆಂಟ್ ಡೆಡಿಕೇಟೆಡ್ ಫೀಡರ್‌ಗಾಗಿ 1150 ಕೆವಿಎ (ಅಸ್ತಿತ್ವದಲ್ಲಿರುವುದು 350 ಕೆವಿಎ) ಒಟ್ಟು 1500 ಕೆವಿಎ ಗೆ ಸರಿದೂಗಿಸುವಂತೆ ಹೆಚ್ಚುವರಿ ಹೈ ಟೆನ್ಶನ್ ವಿದ್ಯುತ್ ಪೂರೈಕೆಯ ವ್ಯವಸ್ಥೆ. | ರೂ. 1,12,52,164.02 |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.02.2026, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಟ್ರ್ಯಾಕ್ಷನ್ ವಿನಿಯೋಗ (ನಿರ್ಮಾಣ)/ಬೆಂಗಳೂರು ದಂಡು
PUB/856/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

**ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು**
**ಪ್ರತಿವಾದಿ ಸಂಖ್ಯೆ. 5 ರಿಗೆ ಸೂಚನೆ**
**ದಿನಾಂಕ: 23-01-2026 ರ ಆದೇಶವನ್ನು ನೋಡಿ**
**ಆರ್.ಎಫ್.ಎ. ಸಂಖ್ಯೆ: 1021/2013**

**ಇಸ್ಲಾಮಿಕ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ**, ಅದರ ಪ್ರಧಾನ ಕಾರ್ಯದರ್ಶಿ ಪ್ರತಿನಿಧಿಸುತ್ತಾರೆ ... **ಮೇಲ್ಮನವಿದಾರರು**

(ಶ್ರೀಯುತರು: ಮೊಹಮ್ಮದ್ ಸಾದಿಕ್ ಮೇಲ್ಮನವಿದಾರರ ಪರ ವಕೀಲರು)

**ಶ್ರೀಮತಿ ರಾಧಮ್ಮ ಮತ್ತು ಇತರರು ... ಪ್ರತಿವಾದಿಗಳು**

**ರವರಿಗೆ, ಪ್ರತಿವಾದಿ ಸಂ.5: 5. ಶ್ರೀಮತಿ ಭಾಗ್ಯಮ್ಮ,** ರಮೇಶ ರವರ ಪತ್ನಿ, ವಿಳಾಸ: ಹುಳಿಮಾವು ವಿಲೇಜ್, ಬೇಗೂರ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು.

ನಗರ ಸಿವಿಲ್ ನ್ಯಾಯಾಧೀಶರು, ಮೇಯೋಹಾಲ್, ಬೆಂಗಳೂರು ರವರ ನ್ಯಾಯಾಲಯದಲ್ಲಿ ದಿನಾಂಕ 02.08.2010 ರಂದು ಓ.ಎಸ್ ಸಂಖ್ಯೆ: 15948/2006 ರಲ್ಲಿ ಹೊರಡಿಸಲಾದ ಆದೇಶ ಮತ್ತು ಡಿಕ್ರಿ ವಿರುದ್ಧ ಮೇಲ್ಮನವಿ.

ನೀವು ಮೇಲ್ಮನವಿಯನ್ನು ಪ್ರಶ್ನಿಸಲು ಉದ್ದೇಶಿಸಿದ್ದರೆ, ದಿನಾಂಕ **24-02-2026** ರಂದು ವೇಲಿನ ಮೇಲ್ಮನವಿಯಲ್ಲಿ ನಿಮಗಾಗಿ ಕಾರ್ಯನಿರ್ವಹಿಸಲು ಈ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ಸೂಕ್ತವಾಗಿ ಸೂಚನೆ ಪಡೆದ ವಕೀಲರ ಮೂಲಕ ಅಥವಾ ಕಾನೂನಿನಿಂದ ಅಧಿಕಾರ ಪಡೆದ ಯಾರಾದರೂ ಮೂಲಕ ಹಾಜರಾಗಲು ಈ ಮೂಲಕ ನಿಮಗೆ ಸೂಚನೆ ನೀಡಲಾಗಿದೆ. ನೀವು ಹಾಜರಾಗಲು ವಿಫಲವಾದರೆ, ನಿಮ್ಮ ಅನುಪಸ್ಥಿತಿಯಲ್ಲಿ ಅದನ್ನು ಪರಿಗಣಿಸಲಾಗುವುದು, ಆಲಿಸಲಾಗುವುದು ಮತ್ತು ನಿರ್ಧರಿಸಲಾಗುವುದು.

ಈ ದಿನಾಂಕ: 28-01-2026 ನನ್ನ ಹಸ್ತಾಕ್ಷರ ಮತ್ತು ಈ ನ್ಯಾಯಾಲಯದ ಮುದ್ರೆಯೊಂದಿಗೆ ಹೊರಡಿಸಲಾಗಿದೆ.

ನ್ಯಾಯಾಲಯದ ಆದೇಶದಂತೆ, ಸಹಾಯಕ ವಿಲೇಖನಾಧಿಕಾರಿ, ಕರ್ನಾಟಕ ಉಚ್ಚ ನ್ಯಾಯಲಯ, ಬೆಂಗಳೂರು.

**ನೈರುತ್ಯ ರೈಲ್ವೆ**

ಟೆಂಡರ್ ಸೂಚನೆ ಸಂಖ್ಯೆ ಸಿಎಒ/ಸಿಎನ್/ಬಿಎನ್‌ಸಿ/133/2025 ದಿನಾಂಕ 29.07.2025ಕ್ಕೆ
ತಿದ್ದುಪಡಿ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ-ಹರಾಜನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ. | ಕೆಲಸದ ವಿವರಣೆ | ಅಂದಾಜು ಮೌಲ್ಯ |
|---|---|---|
| 1 | ಜಮ್ಮಾಪುರ ರಸ್ತೆ | ರೂ. 964,51,54,197/– |

(ಹೊರತುಪಡಿಸಿ) ಸಿಎಚ್: 75400 ಮತ್ತು ಗುರುಗುಂಟಾ (ಸೇರಿದಂತೆ) ಸಿಎಚ್: 134950 (59.55 ಕಿಮೀ) ನಡುವೆ ಹೊಸ ಬ್ರಾಡ್ ಗೇಜ್ ಮಾರ್ಗದ ನಿರ್ಮಾಣಕ್ಕೆ ಆರ್‌ಪಿಎಫ್. ಇದಕ್ಕೆ ವಿದ್ಯುತ್, ಸಂಕೇತ ಮತ್ತು ದೂರಸಂಪರ್ಕ ಕಾಮಗಾರಿ ಒಳಗೊಂಡಂತೆ. ಇಪಿಸಿ ಮೋಡ್‌ನಲ್ಲಿ ಗದಗ-ವಾಡಿ ನಡುವಿನ ಕಾಮಗಾರಿಯಾಗಿದೆ (ಟೆಂಡರ್ ಉಲ್ಲೇಖ ಸಂಖ್ಯೆ. ಜುಮ್ಮಾಪುರ-ಗುರುಗುಂಟಾ-ಇಪಿಸಿ).

| ಮುಕ್ತಾಯ ದಿನಾಂಕ | |
|---|---|
| ಅಸ್ತಿತ್ವದಲ್ಲಿರುವುದು | ಪರಿಷ್ಕರಿಸಿರುವುದು |
| 12–02–2026 (15.00 ಗಂಟೆಗಳು) | 17–03–2026 (15.00 ಗಂಟೆಗಳು) |

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಉಪ ಮುಖ್ಯ ಅಭಿಯಂತರರು/ನಿರ್ಮಾಣ/ಕೆಲಸಗಳು, ಬೆಂಗಳೂರು ಕಂಟೋನ್ಮೆಂಟ್
ಪಿಯುಬಿ/871/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | @SWRAILWAYHQ | @sw_railways

**ವಿಜಯನಗರ ಕ್ಲಬ್**

ವಿಜಯನಗರ, ಬೆಂಗಳೂರು–560104. ದೂ: 080–2330 0675, 9606038126

ವಿ.ಕ್ಲಬ್/ಆಡಳಿತ/2025–26/ ದಿನಾಂಕ: 26.01.2026

**ಟೆಂಡರ್ ಅಧಿಸೂಚನೆ**

ವಿಜಯನಗರ ಕ್ಲಬ್ ಬೆಂಗಳೂರು, ಇಲ್ಲಿಗೆ **ಭದ್ರತಾ ಸೇವೆ (ಗಾರ್ಡ್ಸ್/ಸೂಪರ್‌ವೈಸರ್ಸ್)** ಒದಗಿಸಲು ನೋಂದಾಯಿತ/ಹೆಸರಾಂತ (ಇ.ಎಸ್.ಐ.ಭವಿಷ್ಯನಿಧಿ, ನೋಂದಾಯಿತ) ಪ್ರಮಾಣೀಕೃತ ಭದ್ರತಾ ಸೇವಾ ಸಂಸ್ಥೆಗಳಿಂದ, ಸ್ಪರ್ಧಾತ್ಮಕ ದರಗಳನ್ನು ನಮೂದಿಸಿರುವ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಿದ್ದು ಇಚ್ಛೆಯುಳ್ಳ ಸಂಸ್ಥೆಗಳು ಟೆಂಡರ್‌ಗಳನ್ನು ದಿನಾಂಕ. **15.02.2026** ರೊಳಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೊ.ಸಂ. **9606098126** ನ್ನು ಸಂಪರ್ಕಿಸಿ

ಸಹಿ/– ಕಾರ್ಯದರ್ಶಿ, ವಿಜಯನಗರ ಕ್ಲಬ್

**ನೈರುತ್ಯ ರೈಲ್ವೆ**

ಓಪನ್ ಟೆಂಡರು ಸೂಚನೆ ಸಂ. BE-29-2025-26-OT-29 (ಇ-ಟೆಂಡರಿಂಗ್ ಮೂಲಕ)

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಟೆಂಡರು ಸಂ. | ಕಾಮಗಾರಿಯ ಹೆಸರು | ಅಂದಾಜು ಮೌಲ್ಯ | ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ |
|---|---|---|---|
| BE-29-2025-26-OT-29 | 1) ಬೆಂಗಳೂರು ವಿಭಾಗದಲ್ಲಿ ಹೆಚ್‌ಎಬಿಡಿ ಸ್ಥಾಪನೆಗಾಗಿ ವಿದ್ಯುತ್ ಪೂರೈಕೆಯ ವ್ಯವಸ್ಥೆ. 2) ಯಶವಂತಪುರ – ಸಂಪಿಗೆ ರೋಡ್ ವಿಭಾಗದ ನಿಡವಂದದಲ್ಲಿ ರೋಡ್–01ರ ಬದಿಯಲ್ಲಿ ರೋಡ್–1ಎ ಯ ಪ್ರಸ್ತಾವಿತ ನಿರ್ಮಾಣ. 3) ಕೆಎಸ್‌ಆರ್ ಬೆಂಗಳೂರು – ಪಿಎಫ್ 7 & 8ರ ಕಡಿಮೆ ಎತ್ತರದ ಶೆಲ್ಟರ್‌ಅನ್ನು ಬದಲಾಯಿಸುವುದು, ಎರಡನೇ ಪ್ರವೇಶ ಕಟ್ಟಡ ಮತ್ತು ಪ್ಲಾಟ್‌ಫಾರ್ಮ್ ಪ್ರವೇಶದಲ್ಲಿ ಗ್ರಾನೈಟ್ ಫ್ಲೋರಿಂಗ್ ಸೇರಿದಂತೆ ತೆರೆದ ಪ್ರದೇಶದಲ್ಲಿ ಶೆಲ್ಟರ್‌ನ ವ್ಯವಸ್ಥೆ. 4) ಧರ್ಮಪುರಿ ಗುಡ್ಸ್ ಶೆಡ್‌ನಲ್ಲಿ ಮೂಲಭೂತ ಸೌಕರ್ಯಗಳ ಆಧುನೀಕರಣಕ್ಕೆ ಸಂಬಂಧಿಸಿದ ಉಳಿದಿರುವ ಕಾಮಗಾರಿಗಳು – ವಿದ್ಯುತ್‌ನ ವ್ಯವಸ್ಥೆ. | ರೂ. 1,54,38,265/- | 23.02.2026 / 15:00 ಗಂಟೆಯವರೆಗೆ |

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

PUB/863/AAF/PRB/SWR/2025-26 ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಸಾಮಾನ್ಯ/ಬೆಂಗಳೂರು

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ**
**ಸಾಮಾಜಿಕ ಅರಣ್ಯ ಉಪ ವಿಭಾಗ, ಕೋಲಾರ**

ಸಂಖ್ಯೆ:ಸ.ಅ.ಸ/ಸಾ.ಅ.ಉ/ಸಿಆರ್–02/2025–26 ದಿನಾಂಕ:02.02.2026

**ಮೊದಲನೇ ಬಾರಿಗೆ "ಇ" ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

ಈ ಮೂಲಕ ನೋಂದಾಯಿತ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, 2025–26 ಸಾಲಿನಲ್ಲಿ ಕೋಲಾರ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಗೆ ಒಳಪಡುವ ಎಲ್ಲಾ ತಾಲ್ಲೂಕುಗಳ ಸಾಮಾಜಿಕ ಅರಣ್ಯ ವಲಯಗಳಲ್ಲಿನ ಕೆ.ಎಫ್.ಡಿ.ಎಫ್ ಯೋಜನೆಯಡಿ ರಸ್ತೆ ಬದಿ ಮುಂಗಡ ಕಾಮಗಾರಿಗಳನ್ನು ಮತ್ತು ಕಟ್ಟಡಗಳು ಯೋಜನೆಯಡಿ ಕಟ್ಟಡ ನಿರ್ವಹಣೆ ಹಾಗೂ ಇತರೆ ಕಾಮಗಾರಿಗಳನ್ನು ಕೈಗೊಳ್ಳಲು ನೊಂದಾಯಿತ ಗುತ್ತಿಗೆದಾರರಿಂದ **(http://kppp.karnataka gov.in)** ವೆಬ್ ಸೈಟ್‌ನಲ್ಲಿ ಈ ಮುಂದಿನಂತೆ ಮೊದಲನೆ ಬಾರಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಹಾಗೂ ಸದರಿ ಟೆಂಡರ್‌ನಲ್ಲಿ ಏಕ ಬಿಡ್ಡುದಾರರು/ಯಾರು ಭಾಗವಹಿಸದಿದ್ದಲ್ಲಿ 2ನೇ ಅವಧಿಗೆ ಟೆಂಡರ್ ಆಹ್ವಾನಿಸಲಾಗುವುದು ಆದರೆ ಪ್ರತ್ಯೇಕವಾಗಿ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಆಸಕ್ತರು ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿರುತ್ತದೆ.

| ಕ್ರ.ಸಂ | ವಿವರ |
|---|---|
| 1 | ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 16.02.2026** |
| 2 | ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ:17.02.2026** |
| 3 | ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 18.02.2026** |

ಹೆಚ್ಚಿನ ವಿವರಗಳಿಗೆ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:476/ಕೆಎಸ್‌ಎಂಸಿಎ/2025–26

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

**EDUCATIONAL**

**Correspondence Courses**

PASS DIRECT SSLC, 2nd-PUC within 4 months, eligible for NEET and CET also for Admission Contact: 9880498484/ 9900004099.

**PERSONAL**

**Announcements**

**ANNOUNCEMENT**
I, **Soumya Rachel Rajukutty,** R/at #3, Eden Rock Layout, Athma Vidya Nagar, 1st A Main, Doddagubbi Main Road, Bangalore-77, declare that my name is mentioned as Soumya R Rajukutty in my daughter **Chesed Samuel's** birth certificate. Both names, **Soumya R Rajukutty** and **Soumya Rachel Rajukutty,** refer to the same person. Affidavit dtd: 03-02-2026 Notary P. Sharada, Bangalore.

**ANNOUNCEMENT**
I, **Samuel Ebenezer James,** R/at #3, Eden Rock Layout, Athma Vidya Nagar, 1st A Main, Doddagubbi Main Road, Bangalore-77, declare that my name is mentioned as Samuel E James in my daughter **Chesed Samuel's** birth certificate. Both names, **Samuel E James** and **Samuel Ebenezer James,** refer to the same person. Affidavit dtd: 03-02-2026 Notary P. Sharada, Bangalore.

**Change of Name**

**I YALLAPPA** HUCHCHELLAPPA #32, Kmmasandra Agrahara, Sidihoskote, Anekal, Bengaluru- 562106, have changed my name to ABC YALLAPPA H vide affidavit dated- 03/02/2026 .......

**I, SURAVARAPU** RAVIKUMAR, aged about 26 years, S/o S. Paparao, R/at No. 13/229/1, Gopala Krishna House, Sommaiah Street, Railway Station Road, Kuppam, Chittoor, Andhra Pradesh- 517425, have changed my name from SURAVARAPU RAVIKUMAR to MOHAMMED RAFIQ and embraced Islam, vide affidavit dated 3/2/2026 sworn to before C.V Earappa Notary Bangalore ........

**REAL ESTATE SELLING**

**Industrial & Factory**

**Tumkur Road**

SALE, 10 Acres Industrial Converted Land near Dabaspet Opposite to KIADB Industrial Area. NAIK: 9141326819

**BUSINESS**

**Business to Business**

**Business**

**VALID ARMS** License owner has .32 MPF Revolver and 'Lyon & Lyon' DBBL Gun. Both items Rs. One Laksh. Genuine Arms Licence Holders call:- 9342819739..

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

**ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್**
TeamLease® Putting India to Work
CIN: L74140KA2000PLC118395
**ನೋಂದಾಯಿತ ಕಚೇರಿ:** ಕಛೇರಿ: ಇನ್ಫಿನಿಕ್ಸ್ ಸ್ಕ್ವೇರ್, ಬಿ–4, ಬಿ–5, ಬಿ–6, ಎಚ್‌ಎಎಲ್ ಇಂಡಸ್ಟ್ರಿಯಲ್ ಎಸ್ಟೇಟ್, ಎಚ್‌ಎಎಲ್ ಜಿಬಿ ಕ್ವಾರ್ಟರ್ಸ್, ವಿಭೂತಿಪುರ, ಬೆಂಗಳೂರು – 560 037, ಕರ್ನಾಟಕ, ಭಾರತ.
ಈ–ಮೇಲ್: corporateaffairs@teamlease.com | ವೆಬ್‌ಸೈಟ್: https://group.teamlease.com

**ಡಿಸೆಂಬರ್ 31, 2025 ರಂದು ಕೊನೆಗೊಂಡ ತ್ರೈಮಾಸಿಕದ ಅಪರಿಶೋಧಿತ, ಬಿಡಿ ಮತ್ತು ಕ್ರೋಢೀಕೃತ ಹಣಕಾಸು ಫಲಿತಾಂಶಗಳು**

ಆಡಿಟ್ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ, ಫೆಬ್ರವರಿ 04, 2026 ರಂದು ನಡೆದ ಸಭೆಯಲ್ಲಿ ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್ ("ಟೀಮ್‌ಲೀಸ್/ಕಂಪನಿ") ನಿರ್ದೇಶಕರ ಮಂಡಳಿಯು ಡಿಸೆಂಬರ್ 31, 2025 ಕ್ಕೆ ಕೊನೆಗೊಂಡ ತ್ರೈಮಾಸಿಕದ ಅಪರಿಶೋಧಿತ, ಬಿಡಿ ಮತ್ತು ಕ್ರೋಢೀಕೃತ ಹಣಕಾಸು ಫಲಿತಾಂಶಗಳನ್ನು ಅನುಮೋದಿಸಿದೆ, ಇವುಗಳನ್ನು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಗಳು, 2015 ರ ನಿಯಮ 33 ರ ಪ್ರಕಾರ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಾದ ಮೆ. ಎಸ್.ಆರ್. ಬ್ಯಾಟ್ಲಿಬಾಯ್ & ಅಸೋಸಿಯೇಟ್ಸ್, ಎಲ್‌ಎಲ್‌ಪಿ, ಚಾರ್ಟರ್ಡ್ ಅಕೌಂಟೆಂಟ್ಸ್, ಇವರ ಸೀಮಿತ ಪರಿಶೀಲನೆಗೆ ಒಳಪಡಿಸಲಾಗಿದೆ.

ಅಪರಿಶೋಧಿತ ಬಿಡಿ ಮತ್ತು ಕ್ರೋಢೀಕೃತ ಹಣಕಾಸು ಫಲಿತಾಂಶಗಳ ಸಂಪೂರ್ಣ ಪಾಠವು ಸ್ಟಾಕ್ ಎಕ್ಸ್‌ಚೇಂಜುಗಳ ಬಿಎಸ್‌ಇ (www.bseindia.com) ಮತ್ತು ಎನ್‌ಎಸ್‌ಇ (www.nseindia.com) ವೆಬ್‌ಸೈಟುಗಳಲ್ಲಿ ಮತ್ತು ಕಂಪನಿಯ https://group.teamlease.com/investor/quarterly-results/ ವೆಬ್‌ಸೈಟಿನಲ್ಲಿ ಲಭ್ಯವಿರುತ್ತದೆ. ಕೆಳಗೆ ನೀಡಲಾದ ಕ್ವಿಕ್ ರೆಸ್ಪಾನ್ಸ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕವೂ ಇದನ್ನು ಪಡೆಯಬಹುದು:

ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಕಂಪನಿಯ ವೆಬ್‌ಸೈಟಿನಲ್ಲಿರುವ ಫಲಿತಾಂಶಗಳನ್ನು ನೋಡಬಹುದು.

ದಿನಾಂಕ: ಫೆಬ್ರವರಿ 04, 2026
ಸ್ಥಳ: ಬೆಂಗಳೂರು

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್‌ನ ನಿರ್ದೇಶಕ ಮಂಡಳಿಗಾಗಿ, ಮತ್ತು ಅದರ ಪರವಾಗಿ
ಸಹಿ/–
ಅಶೋಕ್ ಕುಮಾರ್ ನೆಡುರುಮಲ್ಲಿ
ಕಾರ್ಯಕಾರಿ ಉಪಾಧ್ಯಕ್ಷ
DIN: 00151814

# ಗ್ರಾಮೀಣ ಸೊಗಡು ಅನಾವರಣ

## ಬಿಎಂಎಸ್ ಮಹಿಳಾ ಮಹಾವಿದ್ಯಾಲಯದ ಆವರಣದಲ್ಲಿ ವಿದ್ಯಾರ್ಥಿನಿಯರ ಸಂಭ್ರಮ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿವಿಧ ಮಾದರಿಯ ಬಣ್ಣ ಬಣ್ಣದ ಸೀರೆಗಳಲ್ಲಿ ಕಂಗೊಳಿಸಿದ ವಿದ್ಯಾರ್ಥಿನಿಯರು, ನೃತ್ಯ–ಜಾನಪದ ಗೀತೆಗಳಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದರು. ಮನೆಗಳಿಂದ ತಂದಿದ್ದ ಆಹಾರೋತ್ಪನ್ನ ಹಾಗೂ ಅಲಂಕಾರಿಕ ವಸ್ತುಗಳನ್ನು ಮಾರಾಟ ಮಾಡುವ ಜತೆಗೆ, ತರಕಾರಿಗಳನ್ನು ಒಳಗೊಂಡ ಕಿರು ಮಾರುಕಟ್ಟೆಯನ್ನೇ ರೂಪಿಸಿದ್ದರು.

ಈ ದೃಶ್ಯ ಕಂಡುಬಂದದ್ದು ಬಸವನ ಗುಡಿಯ ಬಿ.ಎಂ.ಎಸ್. ಮಹಿಳಾ ಮಹಾ ವಿದ್ಯಾಲಯ ಹಾಗೂ ಬಿ.ಎಂ.ಎಸ್. ಮಹಿಳಾ ಪದವಿಪೂರ್ವ ಮಹಾ ವಿದ್ಯಾಲಯ ಜಂಟಿಯಾಗಿ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಜಾನಪದ ಜಾತ್ರೆಯಲ್ಲಿ.

ಮಹಾವಿದ್ಯಾಲಯದ ಆವರಣವು ಗ್ರಾಮೀಣ ಸೊಗಡನ್ನು ಅನಾವರಣ ಮಾಡಿತ್ತು. ವಿದ್ಯಾರ್ಥಿಗಳಿಗೆ ಜಾನಪದ ಸೊಗಡು ಪರಿಚಯಿಸುವ ಉದ್ದೇಶದಿಂದ ಹಮ್ಮಿಕೊಂಡಿದ್ದ ಈ ಜಾತ್ರೆಯಲ್ಲಿ, ವಿದ್ಯಾರ್ಥಿನಿಯರ ಜತೆಗೆ ಪ್ರಾಧ್ಯಾಪಕರು ಕೂಡ ಸಂಭ್ರಮದ ಭಾಗವಾಗಿದ್ದರು.

ಜಾನಪದ ಕಲಾ ತಂಡಗಳು ಕಾಲೇಜಿನ ಪ್ರವೇಶ ದ್ವಾರದಲ್ಲಿಯೇ ಹೆಜ್ಜೆ ಹಾಕುವ ಮೂಲಕ ಅತಿಥಿಗಳನ್ನು ಬರಮಾಡಿಕೊಂಡವು. ಇದಕ್ಕೂ ಮೊದಲು ಕಾಲೇಜಿನ ಸುತ್ತ ನಡೆದ ಮೆರವಣಿಗೆ ಗಮನಸೆಳೆಯಿತು. ಜಾನಪದ ಸೊಗಡಿನ ವೇಷಭೂಷಣ, ಆಟೋಟ ಸ್ಪರ್ಧೆ, ಆಹಾರ ಮಳಿಗೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜಾತ್ರೆಯ ಮೆರುಗು ಹೆಚ್ಚಿಸಿದವು.

> **ನಮ್ಮ ನಾಡಿನ ಶ್ರೀಮಂತ ಜನಪದ ಪರಂಪರೆಯನ್ನು ಯುವಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಜಾನಪದ ಜಾತ್ರೆ ಆಚರಿಸುತ್ತಿದ್ದೇವೆ**
> **ರಘುಕುಮಾರ ಎನ್.,** ಬಿ.ಎಂ.ಎಸ್. ಮಹಿಳಾ ಮಹಾವಿದ್ಯಾಲಯದ ಪ್ರಾಂಶುಪಾಲ

ಗಾಯಕ ಕಂಬದರಂಗಯ್ಯ ಅವರು ವಿವಿಧ ಜಾನಪದ ಗೀತೆಗಳನ್ನು ಹಾಡುವ ಮೂಲಕ ನೆರೆದಿದ್ದವರನ್ನು ರಂಜಿಸಿದರು. ಜಾನಪದ ಕಲಾವಿದರ ಜತೆಗೆ ವಿದ್ಯಾರ್ಥಿನಿಯರು, ಸೋಲಿಗರ ಕುಣಿತ, ಸುಗ್ಗಿ ಕುಣಿತ, ಜೋಗತಿ ಕುಣಿತ, ಡೊಳ್ಳು ಕುಣಿತ, ಪೂಜಾ ಕುಣಿತ ಸೇರಿ ವಿವಿಧ ಜಾನಪದ ಕಲಾ ಪ್ರಕಾರಗಳಿಗೆ ಹೆಜ್ಜೆ ಹಾಕಿದರು.

ಬಿ.ಎಂ.ಎಸ್.ಇ.ಟಿ. ಹಾಗೂ ಬಿ.ಎಂ.ಎಸ್. ಮಹಿಳಾ ಮಹಾ ವಿದ್ಯಾಲಯದ ಅಧ್ಯಕ್ಷೆ ಬಿ.ಎಸ್. ರಾಗಿಣಿ ನಾರಾಯಣ್ ಅವರು ಜಾನಪದ ಜಾತ್ರೆ ಅಧ್ಯಕ್ಷತೆ ವಹಿಸಿದ್ದರು. ಬಿ.ಎಂ.ಎಸ್. ಶಿಕ್ಷಣ ದತ್ತಿಯ ಧರ್ಮದರ್ಶಿ ಅವಿರಾಮ್ ಶರ್ಮ, ನಿರ್ದೇಶಕ ರಾಘವನ್ ಆರ್.ಎ., ಬಿ.ಎಂ.ಎಸ್. ಟ್ರಸ್ಟ್‌ನ ಉಪ ನಿರ್ದೇಶಕ ಪ್ರಸಾದ್ ವಿ., ಬಿ.ಎಂ.ಎಸ್. ಆಸ್ಪತ್ರೆ ಟ್ರಸ್ಟ್‌ನ ಅಧ್ಯಕ್ಷ ಗೌತಮ್ ವಿ. ಕಲತ್ತೂರ್, ಬಿ.ಎಂ. ಎಸ್. ಮಹಿಳಾ ಮಹಾವಿದ್ಯಾಲಯದ ಪ್ರಾಂಶುಪಾಲ ರಘುಕುಮಾರ ಎನ್., ಬಿ.ಎಂ.ಎಸ್. ಮಹಿಳಾ ಪದವಿಪೂರ್ವ ಮಹಾವಿದ್ಯಾಲಯದ ಪ್ರಾಂಶುಪಾಲ ಸುರೇಶ ಪಿ.ಎಚ್., ಉಪ ಪ್ರಾಂಶುಪಾಲೆ ಸುನೀತ ಕೆ. ಉಪಸ್ಥಿತರಿದ್ದರು.

ಜಾನಪದ ಜಾತ್ರೆಯಲ್ಲಿ ವಿದ್ಯಾರ್ಥಿನಿಯರ ನೃತ್ಯ ಗಮನ ಸೆಳೆಯಿತು ಪ್ರಜಾವಾಣಿ ಚಿತ್ರ: ರಂಜು ಪಿ

### ‘ಜಾನಪದ ಜ್ಞಾನದ ಶಾಲೆ’

‘ಜಾನಪದವು ಜೀವನವಿಧಾನ ಮತ್ತು ಜ್ಞಾನದ ಶಾಲೆಯಾಗಿದೆ. ಜ್ಞಾನ ಎನ್ನುವುದು ಅಕ್ಷರದಲ್ಲಿ ಮಾತ್ರ ಇರಲಿದೆ ಎನ್ನುವುದು ತಪ್ಪು ಕಲ್ಪನೆ. ಅನಕ್ಷರಸ್ತರು ಸೃಷ್ಟಿಸಿದ ಸಾಹಿತ್ಯವನ್ನು ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಲಾಗುತ್ತಿದೆ. ಜಾನಪದದಲ್ಲಿ ಜ್ಞಾನ, ಚಿತ್ರಕಲೆ, ಚಿಕಿತ್ಸೆ ಎಲ್ಲವೂ ಇದೆ. ನಮ್ಮ ಸಂಸ್ಕೃತಿಯ ಬಗ್ಗೆ ತಿಳಿಯಲು ಜಾನಪದ ಜಾತ್ರೆಗಳು ಅಗತ್ಯ’ ಎಂದು ನಿವೃತ್ತ ಪ್ರಾಧ್ಯಾಪಕರೂ ಆಗಿರುವ ವಾಗ್ಮಿ ಪ್ರೊ.ಕೃಷ್ಣೇಗೌಡ ಹೇಳಿದರು.

# ದಾಂಪತ್ಯಕ್ಕೆ ಕಾಲಿರಿಸಿದ ಅಂಧರು

ಪ್ರಜಾವಾಣಿ ವಾರ್ತೆ

**ರಾಜರಾಜೇಶ್ವರಿನಗರ:** ಲಗ್ಗೆರೆಯ ನರಸಿಂಹಸ್ವಾಮಿ ಬಡಾವಣೆಯಲ್ಲಿರುವ ಲಗ್ಗೆರೆ ನಾರಾಯಣಸ್ವಾಮಿ ಅವರ ಮನೆಯ ಆವರಣದಲ್ಲಿ ಆಶ್ರಯ ಮಹಿಳಾ ವೇದಿಕೆ ಮತ್ತು ಅರ್ಪಿತ ಸೇವಾ ಟ್ರಸ್ಟ್ ಆಯೋಜಿಸಿದ್ದ ಅಂಧರ ಉಚಿತ ಸಾಮೂಹಿಕ ವಿವಾಹದಲ್ಲಿ ಹಲವು ಜೋಡಿ ದಾಂಪತ್ಯ ಜೀವನಕ್ಕೆ ಕಾಲಿಟ್ಟವು.

ವಧು-ವರರಿಗೆ ಸೀರೆ-ರವಿಕೆ, ಪಂಚೆ, ಶರ್ಟ್, ತಾಳಿ-ಕಾಲುಂಗುರ, ಹಾಸಿಗೆ, ದಿಂಬು, ಬೀರು, ಫ್ಯಾನ್, ಚೇರು, ಗ್ಯಾಸ್, ಸ್ಟೌ ಮತ್ತು ಒಂದು ತಿಂಗಳಿಗೆ ಆಗುವಷ್ಟು ದವಸ-ಧಾನ್ಯ ಸಹಿತ ಹಲವು ಗೃಹೋಪಯೋಗಿ ವಸ್ತುಗಳನ್ನು ವಿತರಿಸಲಾಯಿತು. ಜನಪದ ಗಾಯಕ ಕುಣಿಗಲ್ ರಾಮಚಂದ್ರ ಅವರು ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.

ದಾಂಪತ್ಯಕ್ಕೆ ಕಾಲಿಟ್ಟ ವಧು–ವರರಿಗೆ ಹನುಮಂತರಾಯಪ್ಪ, ವೇಲುನಾಯ್ಕರ್, ಎಸ್.ಭೂಷಣ್, ಮಂಜುಳಾ ನಾರಾಯಣಸ್ವಾಮಿ, ಬಿ.ಆರ್.ನಂಜುಂಡಪ್ಪ, ಎ.ಅಮರ್‌ನಾಥ್ ಅವರು ಶುಭ ಕೋರಿದರು

ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹನುಮಂತರಾಯಪ್ಪ ಮಾತನಾಡಿ, ‘ಚಿನ್ನ, ಬೆಳ್ಳಿ ದುಬಾರಿಯಾಗಿದ್ದರೂ ಬಡವರು, ನೊಂದವರ ಸೇವೆ ಮಾಡುವ ಮೂಲಕ ಲಗ್ಗೆರೆ ನಾರಾಯಣಸ್ವಾಮಿ ಅವರ ಕುಟುಂಬ ಇತರರಿಗೆ ಮಾದರಿಯಾಗಿದೆ’ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

# ಭಾರತೀಯ ಕಲಾ ಇತಿಹಾಸ ಅಧಿವೇಶನ

**ಬೆಂಗಳೂರು:** ದಿ ಮಿಥಿಕ್ ಸೊಸೈಟಿ, ಭಾರತೀಯ ಕಲಾ ಇತಿಹಾಸ ಕಾಂಗ್ರೆಸ್ (ಗುವಾಹಟಿ) ಮತ್ತು ಭಾರತೀಯ ಇತಿಹಾಸ ಸಂಶೋಧನಾ ಪರಿಷತ್ತು ಇದೇ 7ರಿಂದ 9ರವರೆಗೆ ಮಾಗಡಿ ರಸ್ತೆಯ ಜನಸೇವಾ ವಿದ್ಯಾಕೇಂದ್ರದಲ್ಲಿ ಭಾರತೀಯ ಕಲಾ ಇತಿಹಾಸದ 33ನೇ ಅಧಿವೇಶನ ಹಮ್ಮಿಕೊಂಡಿವೆ.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದಿ ಮಿಥಿಕ್ ಸೊಸೈಟಿಯ ಗೌರವ ಕಾರ್ಯದರ್ಶಿ ಎಸ್. ರವಿ, ‘ಕಲೆಯನ್ನು ಮುಖ್ಯ ವಿಷಯವಾಗಿ ಇಟ್ಟುಕೊಂಡು ದೇಶದಾದ್ಯಂತ ಆಯೋಜಿಸುವ ವಾರ್ಷಿಕ ಸಮ್ಮೇಳನಗಳಲ್ಲಿ ವಿದ್ವಾಂಸರು ಸಂಶೋಧನಾ ಪ್ರಬಂಧಗಳನ್ನು ಮಂಡಿಸುತ್ತಾರೆ’ ಎಂದು ವಿವರಿಸಿದರು.

‘ಫೆ. 7ರಂದು ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ವಿಶ್ರಾಂತ ಕುಲಪತಿ ಜಿ.ಬಿ. ದೆಗ್ಲೂರ್ಕರ್ ಅವರು ಅತಿಥಿಗಳಾಗಿ ಭಾಗವಹಿಸಲಿದ್ದು, ದಿ ಮಿಥಿಕ್ ಸೊಸೈಟಿಯ ಅಧ್ಯಕ್ಷ ವಿ. ನಾಗರಾಜ್ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಫೆ. 9ರಂದು ನಡೆಯುವ ಸಮಾರೋಪದ ಅಧ್ಯಕ್ಷತೆಯನ್ನು ಭಾರತೀಯ ಕಲಾ ಇತಿಹಾಸ ಕಾಂಗ್ರೆಸ್‌ನ ಅಧ್ಯಕ್ಷ ಮಾರುತಿ ನಂದನ್ ಪ್ರಸಾದ್ ತಿವಾರಿ ವಹಿಸಲಿದ್ದು, ವಿದ್ವಾಂಸ ಶತಾವಧಾನಿ ಆರ್. ಗಣೇಶ್ ಸಮಾರೋಪ ಭಾಷಣ ಮಾಡಲಿದ್ದಾರೆ’ ಎಂದರು.

# ಶೋಷಿತ ಸಮುದಾಯಗಳ ವಿಮೋಚನಾ ದಿನ 7ಕ್ಕೆ

**ಬೆಂಗಳೂರು:** ರಮಾಬಾಯಿ ಅಂಬೇಡ್ಕರ್ ಜನ್ಮದಿನದ ಅಂಗವಾಗಿ ದಲಿತ ಸಂಘರ್ಷ ಸಮಿತಿಯಿಂದ (ಅಂಬೇಡ್ಕರ್ ವಾದ) ಫೆ. 7ರಂದು ಕಬ್ಬನ್ ಉದ್ಯಾನದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಶೋಷಿತ ಸಮುದಾಯಗಳ ವಿಮೋಚನಾ ದಿನ ಕಾರ್ಯಕ್ರಮ ಹಮ್ಮಿಕೊಂಡಿದೆ.

‘ಈ ಸಮಾರಂಭವನ್ನು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಉದ್ಘಾಟಿಸಲಿದ್ದು, ವಿಶ್ರಾಂತ ಕುಲಪತಿ ಮಲ್ಲಿಕಾ ಘಂಟಿ, ಪ್ರೊ.ಬಿ. ಕೃಷ್ಣಪ್ಪ ಟ್ರಸ್ಟ್‌ನ ಮುಖ್ಯಸ್ಥೆ ಇಂದಿರಾ ಕೃಷ್ಣಪ್ಪ ಭಾಗವಹಿಸಲಿದ್ದಾರೆ’ ಎಂದು ಸಮಿತಿಯ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ತಿಳಿಸಿದರು.

NATIONAL INSTITUTE OF MENTAL HEALTH AND NEURO SCIENCES
INSTITUTE OF NATIONAL IMPORTANCE
Bengaluru-560 029, India
Ph.: 080 – 2699 5708 / 5127 Website: www.nimhans.ac.in Email: recruitment@nimhans.net

No.NIMH/Rect/Group B&C/ADVT-3/2025-26 Date: 03.02.2026

NOTIFICATION

NIMHANS invites applications for the following vacant posts through online mode from Indian nationals residing in India and abroad with **last date on or before 04.03.2026 upto 04:30 PM.**

| Sl. No. | Name of the post | No. of vacancy | Category | Pay level as per 7th CPC | Upper Age limit | Group |
|---|---|---|---|---|---|---|
| 1 | Senior Scientific Assistant (Human Genetics) | 1 | OBC-1 | 6 | 35 | B |
| 2 | EEG Technician | 3 | ST-1, OBC-1, EWS-1 | 6 | 30 | B |
| 3 | Library Assistant | 3 | SC-1, UR-2 | 6 | 30 | B |
| 4 | Artist | 1 | OBC-1 | 5 | 27 | C |
| 5 | Photographer | 2 | OBC-1, UR-1 | 5 | 27 | C |
| 6 | Stenographer Grade -II | 9 | ST-1, OBC-1, EWS-2, UR-5 | 4 | 27 | C |
| 7 | Assistant Instructor (Panchakarma) | 4 | OBC-1, UR-3 | 4 | 27 | C |
| 8 | Medical Records Technician * | 3 | OBC-1, EWS-1, UR-1 | 4 | 27 | C |
| 9 | Junior Secretarial Assistant | 22 | SC-5, EWS-2, UR-15 | 2 | 27 | C |
| 10 | Hospital Assistant (Panchakarma) | 2 | UR-2 | 1 | 27 | C |
| 11 | Barber | 2 | UR-2 | 1 | 27 | C |

*** The applications received vide previous Notification for this post vide notification No.NIMH/PER(6)/RECT/ADVT-1/2024-25 dated 16.07.2024 will also be considered against the current notification. However, such applicants are informed to send the additional educational qualifications, experience, latest caste certificate and NOC (applicable to in-service applicants) if any, after 17.08.2024 to be sent to the Director, NIMHANS, P.B.No.2900, Hosur Road, Bengaluru – 560 029 by duly mentioning the details of post applied previously without making any payment of application fee. Further, the calculation of cut off age for such applications for all categories will be considered as on 17.08.2024.**

**IMPORTANT NOTICE:**
- **NIMHANS reserves the right to introduce Skill Test for any of the post as mentioned above.**
- Fill the online application carefully after reading the given instructions.
- All applicant must go through the detailed advertisement, posts and eligibility and ensure that they are eligible in all respect before applying.
- The eligibility of the applicant will be provisional and merely filling the application form and appearing in examination shall not be treated as validity of eligibility and Candidature shall stands cancelled in case any ineligibility detected at any stage of recruitment process including after joining on an offered post.
- **Refer NIMHANS Website www.nimhans.ac.in for detailed Notification.**

Sd/-, DIRECTOR

# ಭರತನಾಟ್ಯ ಸ್ಪರ್ಧೆಗೆ ಆಹ್ವಾನ

**ಬೆಂಗಳೂರು:** ಬಿಎಂಶ್ರೀ ಪ್ರತಿಷ್ಠಾನವು ಕೆ.ಮೋಹನ್‌ದೇವ್ ಆಳ್ವ ಮತ್ತು ಎಂ.ಕೆ. ಶೈಲಜಾ ಆಳ್ವ ಸ್ಥಾಪಿತ ರುಕ್ಮಿಣೀದೇವಿ ಅರುಂಡೇಲ್ ದತ್ತಿ ಆಶ್ರಯದಲ್ಲಿ ಭರತನಾಟ್ಯ ಸ್ಪರ್ಧೆ ಆಯೋಜಿಸಿದೆ.

ಫೆ. 15ರಂದು ಸ್ಪರ್ಧೆ ನಡೆಯಲಿದ್ದು, 10ರಿಂದ 16 ವರ್ಷ ವಯೋಮಾನದವರು ಸ್ಪರ್ಧಿಸಬಹುದು. ಫೆ. 10ರ ಒಳಗೆ ನೋಂದಾಯಿಸಿಕೊಳ್ಳಬೇಕು ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

ವಿಳಾಸ: ಬಿ.ಎಂ.ಶ್ರೀ. ಪ್ರತಿಷ್ಠಾನ, ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, 3ನೇ ಮುಖ್ಯರಸ್ತೆ, ನರಸಿಂಹರಾಜು ಕಾಲೊನಿ, ಬೆಂಗಳೂರು–560004

ಸಂಪರ್ಕಕ್ಕೆ: 9972812127

# ‘ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 49 ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಸಬಲೀಕರಣಕ್ಕಾಗಿ ವಿಶೇಷ ಅಭಿವೃದ್ಧಿ ಪ್ಯಾಕೇಜ್ ಮತ್ತು ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು ಎಂದು ಕರ್ನಾಟಕದ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟ ಆಗ್ರಹಿಸಿದೆ.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಬಿ.ಎಚ್.ಮಂಜುನಾಥ್, ‘ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರು ಈಗಾಗಲೇ ಪ್ರತ್ಯೇಕ ನಿಗಮ ಸ್ಥಾಪಿಸುವ ಭರವಸೆ ನೀಡಿದ್ದು, ಪ್ರತಿ ಬಜೆಟ್‌ನ ಒಟ್ಟು ಮೊತ್ತದ ಶೇಕಡ 5ರಷ್ಟು ಅನುದಾನವನ್ನು 49 ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಸಬಲೀಕರಣಕ್ಕೆ ಮೀಸಲಿಡಬೇಕು’ ಎಂದು ಒತ್ತಾಯಿಸಿದರು.

‘ಡಾ.ಬಿ.ಆರ್. ಅಂಬೇಡ್ಕರ್ ಅಲೆಮಾರಿ ವಸತಿ ಯೋಜನೆ ನಿರ್ಮಿಸಿ, 31 ಜಿಲ್ಲೆಗಳಲ್ಲಿ ತಲಾ 500 ಮನೆಗಳಂತೆ ಒಟ್ಟು 15,500 ಮನೆಗಳನ್ನು ನಿರ್ಮಿಸಬೇಕು. ಈ ಯೋಜನೆಯನ್ನು ಮುಂದಿನ ಮೂರು ವರ್ಷದವರೆಗೆ ವಿಸ್ತರಿಸಿ, 46,500 ಮನೆಗಳನ್ನು ನಿರ್ಮಿಸಿ, ಅಲೆಮಾರಿ ಸಮುದಾಯದವರಿಗೆ ಉಚಿತವಾಗಿ ವಿತರಿಸಬೇಕು. ಭೂ ಒಡೆತನ ಯೋಜನೆ ಅಡಿಯಲ್ಲಿ ಪ್ರತಿ ಜಿಲ್ಲೆಗೆ 100 ಎಕರೆ ಕೃಷಿ ಜಮೀನನ್ನು ಅಲೆಮಾರಿ ಸಮುದಾಯಗಳಿಗೆ ಮೀಸಲಿಡಬೇಕು’ ಎಂದು ಆಗ್ರಹಿಸಿದರು.

‘ಎರಡು ಜಿಲ್ಲೆಗಳಿಗೆ ಒಂದರಂತೆ 15 ವಸತಿ ಶಾಲೆ ನಿರ್ಮಿಸಿ, ಸಾವಿತ್ರಿಬಾಯಿ ಫುಲೆ ಅಲೆಮಾರಿಗಳ ವಸತಿ ಶಾಲೆ ಎಂದು ನಾಮಕರಣ ಮಾಡಬೇಕು. ರಮಾಬಾಯಿ ಅಂಬೇಡ್ಕರ್ ಸ್ವಯಂ ಉದ್ಯೋಗ ಯೋಜನೆ ರೂಪಿಸಿ, ಪ್ರತಿಯೊಬ್ಬ ಫಲಾನುಭವಿಗೆ ₹10 ಲಕ್ಷ ಸಾಲ ಸೌಲಭ್ಯ ಒದಗಿಸಬೇಕು. ಅಲೆಮಾರಿ ಸಮುದಾಯಗಳ ಭಾಷೆ ಮತ್ತು ಸಂಸ್ಕೃತಿ ಅಕಾಡೆಮಿ ಸ್ಥಾಪಿಸಬೇಕು. ಅಲೆಮಾರಿ ಮತ್ತು ವಿಮುಕ್ತ ಸಮುದಾಯಗಳ ಸಂಶೋಧನಾ ಕೇಂದ್ರ ಹಾಗೂ ಪ್ರತ್ಯೇಕ ಆಯೋಗ ರಚಿಸಬೇಕು’ ಎಂದು ಒತ್ತಾಯಿಸಿದರು.

# ರಸ್ತೆ ಕತ್ತರಿಸಲು ಪೋರ್ಟಲ್‌ನಲ್ಲಿ ಅನುಮತಿ

## ಮೂಲಸೌಕರ್ಯ ಯೋಜನೆ, ಸಂಚಾರ ದಟ್ಟಣೆ ನಿರ್ವಹಣೆಯಲ್ಲಿ ವಿವಿಧ ಇಲಾಖೆಗಳ ಸಮನ್ವಯಕ್ಕೆ 'ಮಾರ್ಕ್ಸ್'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಸ್ತೆ ಕತ್ತರಿಸುವುದು ಮತ್ತು ಇತರೆ ಸೇವೆಗಳಿಗೆ ಹೊಸದಾಗಿ ಅಭಿವೃದ್ಧಿಪಡಿಸಿರುವ 'ಮಾರ್ಕ್ಸ್' (MARCS) ಪೋರ್ಟಲ್‌ನಲ್ಲೇ ಅರ್ಜಿ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ನಗರದ ಮೂಲಸೌಕರ್ಯ ಯೋಜನೆಗಳು ಮತ್ತು ಸಂಚಾರ ದಟ್ಟಣೆ ನಿರ್ವಹಣೆಯಲ್ಲಿ ವಿವಿಧ ಇಲಾಖೆಗಳ ನಡುವೆ ಹೆಚ್ಚಿನ ಸಮನ್ವಯ ಸಾಧಿಸಲು ನಗರ ಪಾಲಿಕೆ, ಗೇಲ್, ಸಂಚಾರ ಪೊಲೀಸ್, ಬೆಸ್ಕಾಂ, ಕೆಪಿಟಿಸಿಎಲ್ ಮತ್ತು ಜಲಮಂಡಳಿಯ ಹಿರಿಯ ಅಧಿಕಾರಿಗಳ ಜಂಟಿ ಸಮನ್ವಯ ಸಭೆಯಲ್ಲಿ ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ ಅವರು 'ಮಾರ್ಕ್ಸ್' ಕಡ್ಡಾಯಗೊಳಿಸಿರುವ ವಿಷಯ ತಿಳಿಸಿದರು.

ಈ ಹಿಂದಿನ ತಂತ್ರಜ್ಞಾನದಲ್ಲಿ ಅರ್ಜಿ ಸಲ್ಲಿಸಿದ್ದರೂ 'ಮಾರ್ಕ್ಸ್'ನಲ್ಲಿ ಹೊಸ ಅರ್ಜಿಗಳನ್ನು ಸಲ್ಲಿಸಬೇಕು. ಪ್ರಸ್ತುತ ಪೋರ್ಟಲ್‌ನಲ್ಲಿ ತಾಂತ್ರಿಕ ದೋಷಗಳು ಇದ್ದರೆ ಶೀಘ್ರ ಸರಿಪಡಿಸಲಾಗುವುದು ಎಂದರು.

ರಸ್ತೆಗಳ ಸಂಪೂರ್ಣ ವಿವರಗಳನ್ನು ಪಡೆಯಲು 'ರಸ್ತೆ ಮಾಹಿತಿ ನಿರ್ವಹಣಾ ವ್ಯವಸ್ಥೆ' ಸಾಫ್ಟ್‌ವೇರ್ ಅನ್ನು ಶೀಘ್ರದಲ್ಲೇ ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಿದರು.

ಇಬ್ಲೂರು ಜಂಕ್ಷನ್ ಅಭಿವೃದ್ಧಿಗೆ ಅಂಡರ್ ಪಾಸ್ ಮತ್ತು ಮೇಲ್ಸೇತುವೆ ನಿರ್ಮಾಣದ ಪ್ರಸ್ತಾವಗಳಿವೆ. ಈ ಪ್ರದೇಶದಲ್ಲಿ ವಿವಿಧ ಇಲಾಖೆಗಳು ಕೈಗೊಂಡಿರುವ ಯೋಜನೆಗಳ ಮಾಹಿತಿಯನ್ನು ಒದಗಿಸಬೇಕು. ಗೇಲ್ ಸಂಸ್ಥೆಯು 8 ಇಂಚಿನ ಮಧ್ಯಮ ಒತ್ತಡದ ಪೈಪ್‌ಲೈನ್ ಅಳವಡಿಸಿದ್ದು, ಜಂಟಿ ಸಮೀಕ್ಷೆ ನಡೆಸಿ ಕಾರ್ಯಸಾಧ್ಯತಾ ವರದಿ ನೀಡಲು ಸೂಚಿಸಿದರು.

**ಸಲಹೆ:** ನಗರದಲ್ಲಿ ಹಲವು ಸ್ಥಳಗಳಲ್ಲಿ ಸಂಚಾರ ಸುಗಮಗೊಳಿಸಲು ಸಂಚಾರ ಪೊಲೀಸರು ಸಲಹೆಗಳನ್ನು ನೀಡಿದರು.

ಇಬ್ಲೂರಿನ ಮಣಿಪಾಲ್ ಕೌಂಟಿ ಬಳಿ ಚರಂಡಿ ನಿರ್ಮಾಣ ಮತ್ತು ಅಗರ ಕೆರೆ ಬಳಿಯ ಸರ್ವಿಸ್ ರಸ್ತೆ ಮತ್ತು ಮುಖ್ಯ ರಸ್ತೆ ನಡುವೆ ನೀರಿನ ಹರಿವಿನ ಸಮಸ್ಯೆ ನಿವಾರಿಸಬೇಕು. ಅಗರದಿಂದ ಆನೆಪಾಳ್ಯದವರೆಗೆ ಅಪಘಾತ ವಲಯಗಳಲ್ಲಿ ರಸ್ತೆ ವಿಭಜಕಗಳ ಎತ್ತರ ಹೆಚ್ಚಿಸಬೇಕು. ಕಸವನಹಳ್ಳಿ ರಸ್ತೆಯಲ್ಲಿ ವಿಭಜಕ ಅಳವಡಿಕೆ, ಜೀಬ್ರಾ ಕ್ರಾಸಿಂಗ್, ಸ್ಟಾಪ್ ಲೈನ್ ಮತ್ತು ಸಿಗ್ನಲ್ ಮಾಹಿತಿ ಫಲಕಗಳನ್ನು ಅಳವಡಿಸಬೇಕು ಎಂದು ಸಲಹೆ ನೀಡಲಾಯಿತು.

ಸಿಲ್ಕ್ ಬೋರ್ಡ್ ಜಂಕ್ಷನ್, ಇಬ್ಲೂರು ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಮತ್ತು ಬನ್ನೇರುಘಟ್ಟ ರಸ್ತೆಯ ರಾಜಕಾಲುವೆಗಳಲ್ಲಿ ತಕ್ಷಣ ಹೂಳೆತ್ತಲು ಸೂಚಿಸಲಾಯಿತು. ಪ್ರತಿ ಉಪ ವಿಭಾಗ ಮಟ್ಟದಲ್ಲಿ ಎಲ್ಲಾ ಇಲಾಖೆಗಳ ಸಮನ್ವಯದೊಂದಿಗೆ ಕಾರ್ಯಪಡೆ ರಚಿಸಿ, ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕು ಎಂದು ಆಯುಕ್ತರು ಸೂಚಿಸಿದರು

ಹೆಚ್ಚುವರಿ ಅಭಿವೃದ್ಧಿ ಆಯುಕ್ತ ನವೀನ್ ಕುಮಾರ್ ರಾಜು, ದಕ್ಷಿಣ ಸಂಚಾರ ವಿಭಾಗದ ಡಿಸಿಪಿ ಗೋಪಾಲ್, ಮುಖ್ಯ ಎಂಜಿನಿಯರ್‌ಗಳಾದ ಬಸವರಾಜ ಕಬಾಡೆ, ಕೆ.ವಿ. ರವಿ ಉಪಸ್ಥಿತರಿದ್ದರು.

### ಮಾರ್ಗಸೂಚಿ ಉಲ್ಲಂಘನೆ: ನಾಲ್ಕು ಪಿಜಿಗೆ ಬೀಗಮುದ್ರೆ

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಾರ್ಗಸೂಚಿಗಳನ್ನು ಪಾಲಿಸದ ನಾಲ್ಕು ಪಿಜಿಗಳಿಗೆ ಬೀಗಮುದ್ರೆ ಹಾಕಲಾಗಿದೆ.

ವಾರ್ಡ್ ಸಂಖ್ಯೆ 12, ಶೆಟ್ಟಿಹಳ್ಳಿ ವ್ಯಾಪ್ತಿಯಲ್ಲಿನ ಪುರುಷರ ಪಿ.ಜಿ.ಗಳಾದ ಸನ್‌ರೈಸ್ ಬಾಯ್ಸ್ ಪಿಜಿ ಮತ್ತು ಬಾಲಾಜಿ ಎನ್.ಎಸ್ ಲಕ್ಸುರಿ ಪಿ.ಜಿಗಳಲ್ಲಿ ಮಾರ್ಗಸೂಚಿಗಳನ್ನು ಅನುಸರಿಸದಿರುವುದರಿಂದ ಆರೋಗ್ಯ ವಿಭಾಗದ ಅಧಿಕಾರಿಗಳ ಸಮ್ಮುಖದಲ್ಲಿ ಬೀಗಮುದ್ರೆ ಹಾಕಲಾಗಿದೆ. ಶಾರದಾ ಲೇಡಿಸ್ ಪಿ.ಜಿಯ ಅಡುಗೆ ಮನೆಯಲ್ಲಿ ಶುಚಿತ್ವ ಕಾಪಾಡಿಕೊಳ್ಳದಿರುವುದರಿಂದ ಬೀಗ ಹಾಕಲಾಗಿದೆ ಎಂದು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದರು.

ಅಟ್ಟೂರು, ಯಲಹಂಕ 4ನೇ ಹಂತದಲ್ಲಿರುವ ಶ್ರೀ ಅಂಜನಿ ಲೇಡಿಸ್ ಪಿಜಿಯಲ್ಲಿ ಕೂಡ ಅಡುಗೆ ಮನೆಯ ಶುಚಿತ್ವ ಕಾಪಾಡಿಕೊಳ್ಳದ ಕಾರಣಕ್ಕೆ ಬೀಗ ಹಾಕಲಾಗಿದೆ. ಇನ್ನು ಮುಂದೆ ಮಾರ್ಗಸೂಚನೆಗಳನ್ನು ಅನುಸರಿಸದೇ ಇರುವ ಹಾಗೂ ಅನಧಿಕೃತವಾಗಿ ನಡೆಸುತ್ತಿರುವ ಪಿ.ಜಿ.ಗಳ ವಿರುದ್ಧ ಕ್ರಮವಹಿಸಲಾಗುವುದು ಎಂದು ಅವರು ಹೇಳಿದರು.

### ಒಣ ಮರ ಮಾಹಿತಿ ನೀಡಿ

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ರಸ್ತೆ ಬದಿ/ ಸರ್ಕಾರಿ ಜಾಗಗಳಲ್ಲಿ ಒಣಗಿರುವ /ಅಪಾಯದ ಸ್ಥಿತಿಯಲ್ಲಿರುವ ಮರಗಳು ಹಾಗೂ ರೆಂಬೆ ಕೊಂಬೆಗಳನ್ನು ಅರಣ್ಯ ವಿಭಾಗದ ವತಿಯಿಂದ ಈಗಾಗಲೇ ತೆರವುಗೊಳಿಸಲಾಗುತ್ತಿದೆ.

ಇಂತಹ ಮರಗಳು ಹಾಗೂ ರೆಂಬೆಗಳು ಕಂಡುಬಂದಲ್ಲಿ ಸಾರ್ವಜನಿಕರು 1533 ಅಥವಾ 7760933913 /9164597895 ಸಹಾಯವಾಣಿ ಕರೆ ಮಾಡಿ ಮಾಹಿತಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

**ಚಿತಾಗಾರ ಸ್ಥಗಿತ:** ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಕಲ್ಲಹಳ್ಳಿ ವಿದ್ಯುತ್ ಚಿತಾಗಾರದಲ್ಲಿ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಿದ್ದು, ಫೆ.5ರಿಂದ 20 ದಿನ ಚಿತಾಗಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

## ಸುದ್ದಿ 2 ನಿಮಿಷ

### 'ನರೇಗಾ ರದ್ದು: ಜನರ ಗುಳೆಗೆ ಕಾರಣ'

**ಬೆಂಗಳೂರು:** ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಬಿ–ಜಿ ರಾಮ್ ಜಿ ಕಾಯ್ದೆ ರದ್ದು, ಹಿಂದಿನ ನರೇಗಾ ಯೋಜನೆ ಮರು ಜಾರಿಗೆ ಆಗ್ರಹಿಸಿ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಮಂಡಿಸಿದ ನಿರ್ಣಯ ಕುರಿತು ವಿಧಾನ ಪರಿಷತ್‌ನಲ್ಲೂ ಪರ–ವಿರೋಧದ ಚರ್ಚೆ ನಡೆಯಿತು.

ನಿರ್ಣಯ ಮಂಡಿಸಿದ ಎಚ್.ಕೆ.ಪಾಟೀಲ ಅವರು, '20 ವರ್ಷಗಳಿಂದ ಜಾರಿಯಲ್ಲಿರುವ ಅತ್ಯುತ್ತಮ ಯೋಜನೆಯನ್ನು ಬದಲಾಯಿಸಿರುವುದು ಸರಿಯಲ್ಲ. ಇದು ಮಹಾತ್ಮ ಗಾಂಧಿ ಅವರ ಗ್ರಾಮ ಸ್ವರಾಜ್ಯ ಪರಿಕಲ್ಪನೆಯನ್ನೇ ಹಾಳು ಮಾಡುತ್ತದೆ. ಗ್ರಾಮೀಣ ಜನರು ಮತ್ತೆ ಗುಳೆ ಹೋಗುವ ಸ್ಥಿತಿ ನಿರ್ಮಾಣವಾಗುತ್ತದೆ' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನರೇಗಾ ಯೋಜನೆಯ ಅನುಷ್ಠಾನದಲ್ಲಿ ರಾಮನಗರ ಜಿಲ್ಲೆಯ ಕಾರ್ಯ ಶ್ಲಾಘಿಸಿ ಕೇಂದ್ರ ಸರ್ಕಾರವೇ ಪ್ರಮಾಣಪತ್ರ ನೀಡಿದೆ. ಇಂತಹ ಯೋಜನೆಯನ್ನು ರಾಜಕೀಯ ಕಾರಣಗಳಿಗೆ ಬದಲಾಯಿಸುವುದು ಸರಿಯಲ್ಲ ಎಂದರು.

ವಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮುಖ್ಯ ಸಚೇತಕ ಎನ್.ರವಿಕುಮಾರ್ ಅವರು, 'ಕಾಯ್ದೆಯ ಲೋಪಗಳನ್ನು ಸರಿಪಡಿಸಿ ಮರು ಜಾರಿ ಮಾಡಲಾಗಿದೆ. ಗಾಂಧಿ ಹೆಸರಷ್ಟೇ ಬದಲಾಗಿದೆ. ಭ್ರಷ್ಟಾಚಾರಕ್ಕೆ ಅವಕಾಶ ಇಲ್ಲದಂತೆ ಕಾಯ್ದೆ ರೂಪಿಸಲಾಗಿದೆ. ಇದು ಗ್ರಾಮೀಣರ ಬದುಕನ್ನು ಮತ್ತಷ್ಟು ಎತ್ತರಿಸಲಿದೆ. ಸರ್ಕಾರದ ವಿರೋಧ ಸರಿಯಲ್ಲ' ಎಂದರು.

ಕಾಂಗ್ರೆಸ್‌ನ ಕೆ.ಶಿವಕುಮಾರ್, ರಮೇಶ್‌ಬಾಬು, ಉಮಾಶ್ರೀ, ನಾಗರಾಜ್ ಯಾದವ್, ಐವನ್ ಡಿಸೋಜ, ವಸಂತಕುಮಾರ್, ಬಿಜೆಪಿಯ ಕೆ.ಎಸ್.ನವೀನ್, ಪಿ.ಎಚ್.ಪೂಜಾರ್, ನರಸಿಂಹನಾಯಕ್, ಹೇಮಲತಾ ನಾಯಕ್ ಮಾತನಾಡಿದರು.

### ಶ್ರೀನಿಧಿ ಸೌಹಾರ್ದ ಬ್ಯಾಂಕ್ ₹26 ಕೋಟಿ ಷೇರು ಬಂಡವಾಳ

**ಬೆಂಗಳೂರು:** ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ 11 ಸಾವಿರ ಸದಸ್ಯರನ್ನು ಹೊಂದಿದ್ದು, ₹26 ಕೋಟಿ ಷೇರು ಬಂಡವಾಳ ಹೊಂದಿದೆ ಎಂದು ಬ್ಯಾಂಕಿನ ನೂತನ ಅಧ್ಯಕ್ಷ ಸಾಂಬ ಸದಾಶಿವರೆಡ್ಡಿ, ಉಪಾಧ್ಯಕ್ಷ ಸಿ.ಚೆನ್ನಾರೆಡ್ಡಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಜನವರಿ ಅಂತ್ಯಕ್ಕೆ ಠೇವಣಿ ₹478 ಕೋಟಿಯಷ್ಟಿದೆ. ₹336 ಕೋಟಿ ಸಾಲ ನೀಡಲಾಗಿದೆ. ಬ್ಯಾಂಕಿನ ಒಟ್ಟು ಹೂಡಿಕೆ ₹204 ಕೋಟಿಯಿದ್ದು, ಇದರಲ್ಲಿ ಶೇ 68ರಷ್ಟನ್ನು ಸರ್ಕಾರಿ ಹೂಡಿಕೆಗಳಲ್ಲಿ ತೊಡಗಿಸಲಾಗಿದೆ. ಬ್ಯಾಂಕ್ ₹814 ಕೋಟಿ ವ್ಯವಹಾರ ಹೊಂದಿದೆ. 2024-25ನೇ ಸಾಲಿನಲ್ಲಿ ₹8.07 ಕೋಟಿ ನಿವ್ವಳ ಲಾಭಗಳಿಸಿದೆ' ಎಂದು ವಿವರಿಸಿದರು.

2025ರ ಮಾರ್ಚ್ ಅಂತ್ಯಕ್ಕೆ ಬ್ಯಾಂಕಿನ ಒಟ್ಟು ಅನುತ್ಪಾದಕ ಆಸ್ತಿ ಶೇ 1.25ರಷ್ಟಿದೆ. ಎಲ್ಲ ರೀತಿಯ ಡಿಜಿಟಲ್ ಪೇಮೆಂಟ್ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಆರ್‌ಟಿಜಿಎಸ್/ನೆಫ್ಟ್, ಎಟಿಎಂ ಕಾರ್ಡ್, ಲಾಕರ್ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ಎಂದು ಹೇಳಿದರು.

ಬ್ಯಾಂಕಿನ ಆಡಳಿತ ಮಂಡಳಿಯ ಮುಂದಿನ ಐದು ವರ್ಷಗಳ ಅವಧಿಗೆ ಎಲ್ಲ 13 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಧ್ಯಕ್ಷರಾಗಿ ಸಾಂಬ ಸದಾಶಿವರೆಡ್ಡಿ ಮತ್ತು ಉಪಾಧ್ಯಕ್ಷರಾಗಿ ಸಿ. ಚೆನ್ನಾರೆಡ್ಡಿ ಕೂಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವಿ.ವಿ.ಪುರ, ಬೊಮ್ಮನಹಳ್ಳಿ, ಮಾರತ್‌ಹಳ್ಳಿ, ರಘುವನಹಳ್ಳಿ, ಅರೆಕೆರೆ, ಮರಸೂರು, ಹೆಸರಘಟ್ಟ ಮತ್ತು ಅಮೃತಹಳ್ಳಿಯಲ್ಲಿ ಶಾಖೆಗಳು ಕಾರ್ಯನಿರ್ವಹಿಸುತ್ತಿವೆ. ಗಡಿ ಭಾಗದ ಗ್ರಾಮೀಣ ಪ್ರದೇಶದಲ್ಲಿ ನೂತನ ಶಾಖೆಯನ್ನು ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ತಿರುಮಣಿ ಗ್ರಾಮದಲ್ಲಿ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

### ಜಿಲ್ಲಾ ಯೋಜನಾ ಸಮಿತಿ: ಆನೇಕಲ್‌ನ 7 ಮಂದಿ ಆಯ್ಕೆ

**ಆನೇಕಲ್:** ಬೆಂಗಳೂರು ನಗರ ಜಿಲ್ಲಾ ಯೋಜನಾ ಸಮಿತಿ ಸದಸ್ಯರ ಆಯ್ಕೆಗೆ ಬುಧವಾರ ನಡೆದ ಚುನಾವಣೆಯಲ್ಲಿ ಆನೇಕಲ್ ತಾಲ್ಲೂಕಿನ ಏಳು ಮಂದಿ ಆಯ್ಕೆಯಾಗಿದ್ದಾರೆ.

ಹೆಬ್ಬಗೋಡಿ ನಗರಸಭೆ, ಚಂದಾಪುರ ಮತ್ತು ಜಿಗಣಿ ಪುರಸಭೆಯ ಸದಸ್ಯರು ಮತದಾರರಾಗಿದ್ದರು. ಒಟ್ಟು 77 ಮತಗಳು ಯೋಜನಾ ಸಮಿತಿಯ ಚುನಾವಣೆಯಲ್ಲಿ ಚಲಾವಣೆಯಾದ್ದವು. ಈ ಪೈಕಿ ಜಿಗಣಿ ಪುರಸಭೆ ಸದಸ್ಯ ಜಿಗಣಿ ಪುನೀತ್ ಅವರು 51 ಮತ ಪಡೆದು ಮೊದಲ ಸ್ಥಾನಗಳಿಸಿದರು.

ಹೆಬ್ಬಗೋಡಿ ನಗರಸಭೆಯ ಉಪಾಧ್ಯಕ್ಷೆ ಸುಜಾತಾ ಕೆ.ಪಿ.ರಾಜು, ಚಂದಾಪುರ ಪುರಸಭೆ ಸದಸ್ಯ ಉಮೇಶ್ ಅವರು ತಲಾ 50 ಮತ, ಎಚ್.ಆರ್. ರಮೇಶ್ 49 ಮತ, ಚಂದಾಪುರದ ವೆಂಕಟಸ್ವಾಮಿ 48 ಮತ, ಶ್ರೀನಿವಾಸರೆಡ್ಡಿ 47 ಮತ, ನವೀನ್ 46 ಮತ ಪಡೆಯುವ ಮೂಲಕ ಜಿಲ್ಲಾ ಯೋಜನಾ ಸಮಿತಿ ಸದಸ್ಯರಾಗಿ ಚುನಾಯಿತರಾಗಿದ್ದಾರೆ.

## ಐದು ನಗರ ಪಾಲಿಕೆಗಳಲ್ಲಿ 194 ಸಾರ್ವಜನಿಕ ಸ್ಥಳಗಳ ಪುನರುಜ್ಜೀವನಕ್ಕೆ ಯೋಜನೆ

# 'ಬಯಸಿದಂತೆ ಬಯಲು': 250 ಸ್ಥಳ ಗುರುತು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬಯಸಿದಂತೆ ಬಯಲು' ಯೋಜನೆ ಅಡಿ ನಗರದ ರಸ್ತೆ ಹಾಗೂ ಬೀದಿಗಳ ಮೂಲ ಸೌಕರ್ಯವನ್ನು ಸಮುದಾಯದ ಅಗತ್ಯಕ್ಕೆ ಅನುಸಾರವಾಗಿ ಅಭಿವೃದ್ಧಿಗೊಳಿಸುವ 250 ಸ್ಥಳಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಗುರುತಿಸಿದೆ.

ರಸ್ತೆ ಹಾಗೂ ಬೀದಿಗಳು ವಾಹನ ಸಂಚಾರದ ಮಾರ್ಗಗಳಾಗಿ ಮಾತ್ರವಲ್ಲದೆ, ವಿವಿಧ ಸಮುದಾಯಗಳ ಅಗತ್ಯಗಳನ್ನು ಪೂರೈಸುವಂತೆ ಎಲ್ಲರನ್ನೂ ಒಳಗೊಂಡ, ಜನಕೇಂದ್ರಿತ ಸಾರ್ವಜನಿಕ ಸ್ಥಳಗಳಾಗಿ ಪರಿವರ್ತಿಸುವುದೇ ಯೋಜನೆಯ ಉದ್ದೇಶವಾಗಿದೆ.

ಈ ಉಪಕ್ರಮದ ಅಂಗವಾಗಿ, ತಮ್ಮ ನೆರೆಹೊರೆಯಲ್ಲಿರುವ ಕಡಿಮೆ ಬಳಕೆಯಾಗುತ್ತಿರುವ ಅಥವಾ ಬಳಕೆಯಲ್ಲಿಲ್ಲದ ಸಾರ್ವಜನಿಕ ಸ್ಥಳಗಳನ್ನು ಗುರುತಿಸಲು ನಾಗರಿಕರಿಗೆ ಸಾರ್ವಜನಿಕ ಆಹ್ವಾನ ನೀಡಲಾಗಿತ್ತು. ಇದಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು, ನಗರ ವಿನ್ಯಾಸಕಾರರು, ವಾಸ್ತುಶಿಲ್ಪಿಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳು 250ಕ್ಕೂ ಅಧಿಕ ಸ್ಥಳಗಳನ್ನು ಗುರುತಿಸಿದ್ದಾರೆ. ಪ್ರಾಥಮಿಕ ಪರಿಶೀಲನೆ ನಂತರ, 194 ಸ್ಥಳಗಳನ್ನು ಕಾರ್ಯಗತಗೊಳಿಸಬಹುದಾದ ಸ್ಥಳಗಳೆಂದು ಗುರುತಿಸಲಾಗಿದೆ. 'ನಗರಮಟ್ಟದ ಸಾರ್ವಜನಿಕ ಸಂಗ್ರಹ'ದಲ್ಲಿ ಇವುಗಳನ್ನು ಸೇರಿಸಲಾಗಿದ್ದು, ಐದು ನಗರ ಪಾಲಿಕೆಗಳ ಮೂಲಕ ಹಂತ ಹಂತವಾಗಿ ಯೋಜನೆಯನ್ನು ಜಾರಿಗೊಳಿಸಲಾಗುತ್ತದೆ ಎಂದು ಜಿಬಿಎ ತಿಳಿಸಿದೆ.

ಹಿಂದಿನ ಬಿಬಿಎಂಪಿ, 'ಸೆನ್ಸಿಂಗ್ ಲೋಕಲ್ ಹಾಗೂ ಇನ್‌ಸ್ಟಿಟ್ಯೂಟ್ ಆಫ್ ಅರ್ಬನ್ ಡಿಸೈನರ್ಸ್ ಇಂಡಿಯಾ – ಕರ್ನಾಟಕ ಘಟಕದ'ದ ಸಹಯೋಗದಲ್ಲಿ, ಕಳೆದ ಮೇನಲ್ಲಿ 'ಬಯಸಿದಂತೆ ಬಯಲು' ಯೋಜನೆಯಡಿ 'ನಗರದ ಸಾರ್ವಜನಿಕ ಸ್ಥಳಗಳ ಪುನರುಜ್ಜೀವನ' ಎಂಬ ಉಪಕ್ರಮವನ್ನು ಆರಂಭಿಸಿತ್ತು.

ಇದರ ಜೊತೆಗೆ, ಸ್ಥಳೀಯ ಪರಿಸ್ಥಿತಿ ಮೌಲ್ಯಮಾಪನ ಹಾಗೂ ವಿವರವಾದ ಸ್ಥಳ ಪರಿಶೀಲನಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರಸ್ತಾವಿತ ಸ್ಥಳಗಳು ಸ್ಥಳೀಯ ನಾಗರಿಕರ ನೈಜ ಅನುಭವಗಳ ಆಧಾರದಲ್ಲಿದ್ದು, ಸಣ್ಣದಾದರೂ ಸಂದರ್ಭೋಚಿತ ವಿನ್ಯಾಸಗಳ ಮೂಲಕ ದಿನನಿತ್ಯದ ಸಾರ್ವಜನಿಕ ಜೀವನದಲ್ಲಿ ಅರ್ಥಪೂರ್ಣ ಹಾಗೂ ದೀರ್ಘಕಾಲೀನ ಸುಧಾರಣೆ ತರಲು ಅವಕಾಶ ಕಲ್ಪಿಸುತ್ತವೆ. ಈವರೆಗೆ, ರಾಷ್ಟ್ರೀಯ ಸ್ವಚ್ಛ ವಾಯು ಕಾರ್ಯಕ್ರಮದಡಿ 25 ಸ್ಥಳಗಳಿಗೆ ಹಣಕಾಸು ಅನುಮೋದನೆ ನೀಡಲಾಗಿದೆ. ನೆರೆಹೊರೆಯ ಸಾರ್ವಜನಿಕ ಸ್ಥಳಗಳ ಸುಧಾರಣೆಗೆ ನಾಗರಿಕರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವ ಜೊತೆಗೆ, ಈ ಉಪಕ್ರಮವನ್ನು ಮತ್ತಷ್ಟು ವಿಸ್ತರಿಸುವ ಬದ್ಧತೆಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹೊಂದಿದೆ ಎಂದು ತಿಳಿಸಲಾಗಿದೆ.

| 'ಬಯಸಿದಂತೆ ಬಯಲು' ಗುರುತಿಸಿರುವ ಸ್ಥಳಗಳು | |
|---|---|
| ಬೆಂಗಳೂರು ಕೇಂದ್ರ ನಗರ ಪಾಲಿಕೆ | 43 |
| ಬೆಂಗಳೂರು ಉತ್ತರ ನಗರ ಪಾಲಿಕೆ | 49 |
| ಬೆಂಗಳೂರು ಪೂರ್ವ ನಗರ ಪಾಲಿಕೆ | 21 |
| ಬೆಂಗಳೂರು ಪಶ್ಚಿಮ ನಗರ ಪಾಲಿಕೆ | 31 |
| ಬೆಂಗಳೂರು ದಕ್ಷಿಣ ನಗರ ಪಾಲಿಕೆ | 50 |

### ಹೂಡಿಕೆಗೆ 'ಓಪನ್ ಹೌಸ್'

ನಗರ ಪಾಲಿಕೆಗಳು, ಹಣಕಾಸು ಒದಗಿಸುವ ಸಂಸ್ಥೆಗಳು, ಸಿಎಸ್‌ಆರ್ ಪಾಲುದಾರರು, ಪರೋಪಕಾರಿ ವ್ಯಕ್ತಿಗಳು/ಸಂಸ್ಥೆಗಳು ಹಾಗೂ ನಾಗರಿಕರನ್ನು ಒಂದೇ ವೇದಿಕೆಯಡಿ ಒಗ್ಗೂಡಿಸುವ ಉದ್ದೇಶದಿಂದ ಜಿಬಿಎ 'ನಾಗರಿಕರಿಗೆ ಮುಕ್ತ ಅವಕಾಶ' (ಓಪನ್ ಹೌಸ್) ಕಾರ್ಯಕ್ರಮ ಆಯೋಜಿಸಿದೆ. ಈ ಮೂಲಕ ಹೂಡಿಕೆಗೆ ಸಿದ್ಧವಾಗಿರುವ ಸಾರ್ವಜನಿಕ ಸ್ಥಳಗಳ ಯೋಜನೆಗಳನ್ನು ಪ್ರದರ್ಶಿಸಲಾಗುತ್ತಿದೆ. ಈ ವರ್ಷದ ಅನುದಾನದಲ್ಲಿ ನಗರ ಪಾಲಿಕೆಗಳು ಹೆಚ್ಚಿನ ಪರಿಣಾಮ ಬೀರುವ ಆಯ್ದ ಯೋಜನೆಗಳನ್ನು ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದರ ಜೊತೆಗೆ, ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಸಹಭಾಗಿತ್ವಕ್ಕೆ ಅವಕಾಶ ನೀಡಲಿದೆ. ಓಪನ್ ಹೌಸ್ ಕಾರ್ಯಕ್ರಮ, ಪುರಭವನದಲ್ಲಿ ಫೆಬ್ರುವರಿ 6 ಮತ್ತು 7ರಂದು ನಡೆಯಲಿದೆ.

## ಸಾಂಸ್ಕೃತಿಕ ಮುನ್ನೋಟ

### 16ನೇ ಸಂಗೀತೋತ್ಸವ 7ಕ್ಕೆ

**ಬೆಂಗಳೂರು:** ಶ್ರೀಗುರು ಗಾನಲಹರಿ ಸಂಗೀತ ಅಕಾಡೆಮಿಯಿಂದ ಫೆ.7ರಂದು ಮಧ್ಯಾಹ್ನ 3ಕ್ಕೆ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ 16ನೇ ಸಂಗೀತೋತ್ಸವ ಹಮ್ಮಿಕೊಂಡಿದೆ.

ಸಂಜೆ 6ಕ್ಕೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಗಾಯಕರಾದ ವಾಗೀಶ್ ಭಟ್ ಹಾಗೂ ಪ್ರಭುರಾವ್ ಸೊನ್ನ ಅವರಿಗೆ 'ಪುಟ್ಟಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ. ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ, ತಬಲಾ ವಾದಕ ಸತೀಶ್ ಹಂಪಿಹೊಳಿ, ಕಥಕ್ ನೃತ್ಯಗಾರ್ತಿ ಪೂರ್ಣಾ ಆಚಾರ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ವಾಗೀಶ್ ಭಟ್ ಅವರಿಂದ ಹಿಂದೂಸ್ತಾನಿ ಸಂಗೀತ ಕಛೇರಿ, ಪ್ರಭುರಾವ್ ಸೊನ್ನ ಅವರು ಸುಗಮ ಸಂಗೀತ ಕಛೇರಿ ಪ್ರಸ್ತುತಪಡಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ವಾಗೀಶ್ ಭಟ್

### 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ ಪ್ರದರ್ಶನ 7ರಂದು

**ಬೆಂಗಳೂರು:** ವಿಶ್ವಪಥ ಕಲಾ ಸಂಗಮ ತಂಡದಿಂದ ಫೆ. 7ರಂದು ಎನ್.ಆರ್. ಕಾಲೊನಿಯ ಡಾ.ಸಿ. ಅಶ್ವತ್ಥ್ ಕಲಾಭವನದಲ್ಲಿ ಸಂಜೆ 7 ಗಂಟೆಗೆ 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ ಪ್ರದರ್ಶನವಾಗಲಿದೆ.

ರಾಜೇಂದ್ರ ಕಾರಂತ ಅವರು ಈ ನಾಟಕವನ್ನು ರಚಿಸಿದ್ದು, ಬಿ. ಅಶೋಕ್ ಅವರು ನಿರ್ದೇಶಿಸಿದ್ದಾರೆ.

### 'ಶೂರ್ಪನಖಿ' ನಾಟಕ ಪ್ರದರ್ಶನ 10ಕ್ಕೆ

**ಬೆಂಗಳೂರು:** 'ಶೂರ್ಪನಖಿ' ನಾಟಕ ಫೆ.10ರಂದು ಸಂಜೆ 7.30ಕ್ಕೆ ಜೆ.ಪಿ. ನಗರದಲ್ಲಿರುವ ರಂಗ ಶಂಕರದಲ್ಲಿ ಪ್ರದರ್ಶನವಾಗಲಿದೆ.

ಅಪೂರ್ವ ಕಾಸರವಳ್ಳಿ ಅವರು ಈ ನಾಟಕವನ್ನು ರಚಿಸಿದ್ದು, ವಂದನಾ ಸುಪ್ರಿಯಾ ಕಾಸರವಳ್ಳಿ ಅವರು ನಿರ್ದೇಶನ ಮಾಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 78995 49696.

ಶುರ್ಪನಖಿ ನಾಟಕದ ದೃಶ್ಯ

### ಭರತನಾಟ್ಯ ರಂಗಪ್ರವೇಶ 8ಕ್ಕೆ

ವೈಷ್ಣವಿ ಆಚಾರ್ಯ

**ಬೆಂಗಳೂರು:** ಸುಕೃತಿ ನಾಟ್ಯಾಲಯದಿಂದ ಫೆ. 8ರಂದು ಹೊಂಬೇಗೌಡನಗರದ ಪ್ರಭಾತ್ ಕಲಾ ಸಂಭ್ರಮ ಸಭಾಂಗಣದಲ್ಲಿ ಸಂಜೆ 5ಕ್ಕೆ ನಡೆಯುವ ಸಮಾರಂಭದಲ್ಲಿ ವೈಷ್ಣವಿ ಆಚಾರ್ಯ ಅವರು ಭರತನಾಟ್ಯ ರಂಗಪ್ರವೇಶ ಮಾಡಲಿದ್ದಾರೆ.

ಸುಕೃತಿ ನಾಟ್ಯಾಲಯದ ನಿರ್ದೇಶಕಿ ಹೇಮಾ ಪ್ರಭಾತ್, ವಾಗ್ಮಿ ಕೆ.ಪಿ. ಪುತ್ತೂರಾಯ, ಕಲಾವಿದೆ ವೈಜಯಂತಿ ಕಾಶಿ, ಯೋಗ ಶಿಕ್ಷಕಿ ವನಿತಕ್ಕ, ಸಮರ್ಪಣಾ ಭರತನಾಟ್ಯ ಮತ್ತು ಸಂಗೀತ ಶಾಲೆಯ ನಿರ್ದೇಶಕಿ ಗಾರ್ಗಿ ಪಂಚಾಂಗಂ, ಸಂಸ್ಕೃತ ಪಂಡಿತ ಕೃಷ್ಣರಾಜ ಕುತ್ಪಾಡಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 98800 01307.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

## ನಾಳೆಯಿಂದ ಸಿದ್ಧಗಂಗಾ ಜಾತ್ರೆ: 16ಕ್ಕೆ ರಥೋತ್ಸವ

ಪ್ರಜಾವಾಣಿ ವಾರ್ತೆ

**ತುಮಕೂರು:** ನಗರದ ಸಿದ್ಧಗಂಗಾ ಮಠದಲ್ಲಿ ಸಿದ್ಧಗಂಗಾ ಜಾತ್ರೆಯ ಪ್ರಯುಕ್ತ ಫೆ. 6ರಿಂದ 20ರ ವರೆಗೆ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ ಏರ್ಪಡಿಸಲಾಗಿದೆ. ಫೆ. 16ರಂದು ರಥೋತ್ಸವ ನಡೆಯಲಿದೆ.

ಫೆ. 6ರಂದು ಸಂಜೆ 6.30 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ. ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಶಿವಸಿದ್ಧೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ಬಿ.ಸುರೇಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ವಸ್ತು ಪ್ರದರ್ಶನ ಟ್ರಸ್ಟ್ ಕಾರ್ಯದರ್ಶಿ ಬಿ.ಗಂಗಾಧರಯ್ಯ ಇಲ್ಲಿ ಬುಧವಾರ ಹೇಳಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ 21 ಮಳಿಗೆ, ಗೃಹೋಪಯೋಗಿ ಹಾಗೂ ಆಹಾರ ಪದಾರ್ಥಗಳು ಸೇರಿ 175 ಖಾಸಗಿ ಮಳಿಗೆ ಒಳಗೊಂಡಂತೆ ಒಟ್ಟು 195 ಮಳಿಗೆ ಆರಂಭಿಸಲಾಗುತ್ತದೆ. ಮಠದ ಆವರಣದಲ್ಲಿ 1964ರಿಂದ ವಸ್ತು ಪ್ರದರ್ಶನ ನಡೆಯುತ್ತಿದೆ. ವಸ್ತು ಪ್ರದರ್ಶನಕ್ಕೆ ಕೈಗಾರಿಕಾ ಇಲಾಖೆಯಿಂದ ₹2 ಲಕ್ಷ ಅನುದಾನ ನೀಡಲಾಗುತ್ತಿತ್ತು, ಈ ಬಾರಿ ₹5 ಲಕ್ಷಕ್ಕೆ ಹೆಚ್ಚಿಸಲಾಗಿದೆ' ಎಂದರು.

### '13 ನಾಟಕಗಳ ಪ್ರದರ್ಶನ'

ವಸ್ತು ಪ್ರದರ್ಶನ ಟ್ರಸ್ಟ್ ಜಂಟಿ ಕಾರ್ಯದರ್ಶಿ ಕೆಂ.ಬಾ. ರೇಣುಕಯ್ಯ, '20 ದಿನಗಳ ಕಾಲ 31 ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. 13 ನಾಟಕಗಳ ಪ್ರದರ್ಶನ ಏರ್ಪಡಿಸಲಾಗಿದೆ. ದನಗಳ ಜಾತ್ರೆಗೆ 112 ವರ್ಷ ತುಂಬಿದ್ದು, ಮುಂದಿನ ಮೂರು ತಿಂಗಳಲ್ಲಿ ದನಗಳ ಜಾತ್ರೆಯ ವಜ್ರ ಮಹೋತ್ಸವ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ' ಎಂದರು.

## 'ಜನಪ್ರತಿನಿಧಿಗಳು ಜಾಗೃತಿ ಮೂಡಿಸಲಿ'

### ಕ್ಯಾನ್ಸರ್: ಕಿದ್ವಾಯಿ ಸಂಸ್ಥೆ ಹಮ್ಮಿಕೊಂಡಿದ್ದ ಜಾಥಾದಲ್ಲಿ ನಟಿ ಉಮಾಶ್ರೀ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕ್ಯಾನ್ಸರ್ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸಲು ಜನಪ್ರತಿನಿಧಿಗಳು ಕೂಡ ತಮ್ಮ ಕ್ಷೇತ್ರಗಳಲ್ಲಿ ಜಾಗೃತಿ ಜಾಥಾಗಳನ್ನು ನಡೆಸಬೇಕು. ಈ ಮೂಲಕ ರೋಗದ ನಿರ್ಮೂಲನೆಗೆ ಶ್ರಮಿಸಬೇಕು' ಎಂದು ನಟಿ ಉಮಾಶ್ರೀ ಹೇಳಿದರು.

ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕ್ಯಾನ್ಸರ್ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ, ಮಾತನಾಡಿದರು.

'ಕ್ಯಾನ್ಸರ್ ನಿರ್ಮೂಲನೆಗೆ ಸರ್ಕಾರ ಹಾಗೂ ಸಂಘ–ಸಂಸ್ಥೆಗಳು ಹೆಚ್ಚು ಪ್ರೋತ್ಸಾಹ ನೀಡುತ್ತಿವೆ. ಶಾಸಕರು ತಮ್ಮ ಕ್ಷೇತ್ರಗಳಲ್ಲಿ ಜಾಥಾಗಳನ್ನು ಏರ್ಪಡಿಸುವ ಮೂಲಕ ಅರಿವು ಮೂಡಿಸಬೇಕು. ಕ್ಯಾನ್ಸರ್ ತಪಾಸಣೆ ಹಾಗೂ ಪರೀಕ್ಷೆ ಸುಲಭವಾಗಿ ದೊರೆಯುವಂತಾಗಬೇಕು. ಆಗ ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಲು ಸಾಧ್ಯವಾಗುತ್ತದೆ. ಜೀವನಶೈಲಿ ಬದಲಾಯಿಸಿಕೊಂಡು, ಉತ್ತಮ ಆಹಾರ, ವ್ಯಾಯಾಮದಿಂದ ಆರೋಗ್ಯ ಕಾಪಾಡಿಕೊಳ್ಳಬೇಕು. ಜನರು ಪ್ರತಿ ವರ್ಷ ಸ್ವಯಂಪ್ರೇರಿತವಾಗಿ ವೈದ್ಯಕೀಯ ತಪಾಸಣೆಗೆ ಒಳಗಾಗಬೇಕು' ಎಂದರು.

ಸಂಸ್ಥೆ ನಿರ್ದೇಶಕ ಡಾ.ಟಿ.ನವೀನ್, 'ಸಂಸ್ಥೆಯ ವತಿಯಿಂದ ಕ್ಯಾನ್ಸರ್ ತಪಾಸಣೆ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಜನರಲ್ಲಿ ರೋಗದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಕ್ಯಾನ್ಸರ್ ಬಗ್ಗೆ ಭಯಪಡದೆ ವೈದ್ಯಕೀಯ ಪರೀಕ್ಷೆಗೆ ಒಳಗಾಗುವ ಮೂಲಕ ಈ ರೋಗದಿಂದ ಮುಕ್ತವಾಗಬಹುದು. ಪ್ರಾಥಮಿಕ ಹಂತದಲ್ಲಿ ಕ್ಯಾನ್ಸರ್ ಪತ್ತೆಯಾದರೆ ರೋಗಿಯೂ ಅಲ್ಪಾವಧಿಯಲ್ಲಿ ಚೇತರಿಸಿಕೊಳ್ಳಬಹುದು' ಎಂದರು.

ಚಲನಚಿತ್ರ ನಟ ರಮೇಶ್ ಭಟ್, 'ಸಾಮಾನ್ಯ ಜನರಿಗೆ ಕ್ಯಾನ್ಸರ್ ಶ್ರೀಮಂತ ಕಾಯಿಲೆಯಾಗಿ ಮಾರ್ಪಟ್ಟಿದೆ. ಈ ಕಾಯಿಲೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಬೇಕು' ಎಂದರು.

ಸಂಸ್ಥೆಯ ಆವರಣದಿಂದ ಲಾಲ್‌ಬಾಗ್‌ವರೆಗೆ ನಡೆದ ಜಾಥಾದಲ್ಲಿ ನರ್ಸಿಂಗ್ ಕಾಲೇಜಿನ ಸಾವಿರಕ್ಕೂ ಅಧಿಕ ವಿದ್ಯಾರ್ಥಿನಿಯರು, ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್‌ನ ಕುಲಸಚಿವ ಕೆ.ಮಲ್ಲು, ಸಂಸ್ಥೆಯ ವೈದ್ಯರಾದ ಡಾ.ಸುರೇಶ್ ಬಾಬು, ಡಾ.ಮಹಾಂತೇಶ್, ಡಾ.ವಿಜಯ್, ಡಾ.ಅರುಣ್ ಕುಮಾರ್ ಭಾಗವಹಿಸಿದ್ದರು.

ಜಾಥಾಕ್ಕೆ ಉಮಾಶ್ರೀ ಚಾಲನೆ ನೀಡಿದರು. ರಮೇಶ್ ಭಟ್, ಡಾ.ಟಿ.ನವೀನ್ ಹಾಗೂ ವೈದ್ಯರು ಉಪಸ್ಥಿತರಿದ್ದರು

### ಪ್ರತಿಭಟನೆ

ಪ್ರಧಾನಿ ಮೋದಿ ಅವರು ಜನಾಭಿಪ್ರಾಯ ಗೌರವಿಸದೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಲಹೆಯ ಮೇರೆಗೆ ಕಾರ್ಯ ನಿರ್ವಹಿಸುತ್ತಿದ್ದಾರೆಂದು ಆರೋಪಿಸಿ, ಎನ್‌ಎಸ್‌ಯು.ಐ ಕರ್ನಾಟಕ ಸಮಿತಿ ಅಧ್ಯಕ್ಷ ಕೀರ್ತಿ ಗಣೇಶ್ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು

–ಪ್ರಜಾವಾಣಿ ಚಿತ್ರ

## ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಸಂವಾದ

# ಅಮ್ಮನಂಥ 'ಸಿನಿಮಾ' ನನ್ನ ಬಳಿ ಇದೆ: ಕಾಯ್ಕಿಣಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನನ್ನನ್ನು ಬೇಷರತ್ ಲಾಲನೆ ಪಾಲನೆ ಮಾಡಿದ ಅಮ್ಮ ಈ ಸಿನಿಮಾ. ಹೀಗಾಗಿ ನನ್ನ ಬಳಿ ಏನಿದೆ ಎಂದು ಯಾರಾದರೂ ಕೇಳಿದರೆ 'ನನ್ನ ಬಳಿ ಸಿನಿಮಾ ಇದೆ' ಎನ್ನುತ್ತೇನೆ' ಎಂದು ಕವಿ, ಸಾಹಿತಿ ಜಯಂತ ಕಾಯ್ಕಿಣಿ ಹೇಳಿದರು.

17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಅಂಗವಾಗಿ ಸೋಮವಾರ ನಡೆದ ಸಂವಾದದಲ್ಲಿ ಸಿನಿಮಾ ನಂಟಿನ ಕುರಿತು ಅವರು ಮಾತನಾಡಿದರು.

'ಗೋಕರ್ಣದಲ್ಲಿ ಟೂರಿಂಗ್ ಟಾಕೀಸ್‌ನಿಂದಾಗಿ ನನಗೆ ಸಿನಿಮಾ ಕುರಿತು ಆಸಕ್ತಿ ಹುಟ್ಟಿತ್ತು. ಸಿನಿಮಾದ ವಿಸ್ಮಯ ಪ್ರಪಂಚವನ್ನು ಬಾಲ್ಯದಲ್ಲೇ ನೋಡಿದ್ದೆ. ಸಿನಿಮಾ ಯಾವ ಸಂದರ್ಭದಲ್ಲೂ ನಮ್ಮ ಕೈಬಿಡುವುದಿಲ್ಲ. ಒಂದೇ ಸಿನಿಮಾ ನಿಮ್ಮನ್ನು ಬೇರೆ ಬೇರೆ ರೀತಿಯಲ್ಲಿ ಸಂತೈಸುತ್ತದೆ. ಅವುಗಳ ಸನ್ನಿವೇಶಗಳು ನಮ್ಮ ಜೀವನಕ್ಕೆ ನೇರವಾಗಿ ಸಂಬಂಧವಿರದೇ ಇದ್ದರೂ ನಮ್ಮ ಜೀವನದ ಘಟ್ಟಕ್ಕೆ ಸಂಬಂಧಿಸಿದ್ದಾಗಿರುತ್ತವೆ. ಸಿನಿಮಾದ ಹಾಡುಗಳೂ ನಮ್ಮ ಮೇಲೆ ಪರಿಣಾಮ ಬೀರಿವೆ. ಹೀಗಾಗಿಯೇ ಸಿನಿಮಾ ಗೀತೆಗಳು ನಮ್ಮ ಜೀವನದ ಹಿನ್ನೆಲೆ ಸಂಗೀತದಂತಿದೆ' ಎಂದರು.

**ಅನಿಸುತಿದೆ ಬರೆದದ್ದು 52ರಲ್ಲಿ!:** 'ಸಿನಿಮಾ ಹಾಡು ಬರೆಯುವುದು ಸುಲಭ ಎಂದುಕೊಂಡಿದ್ದೆ. ಅದರ ಬಗ್ಗೆ ಉಡಾಫೆ ಇತ್ತು. ಆದರೆ ಅವುಗಳ ಕಷ್ಟ ಗೊತ್ತಾಗಿದ್ದೇ ಬರೆಯಲು ಕುಳಿತಾಗ. ಮೊದಲೇ ಸಿದ್ಧವಾಗಿರುವ ಟ್ಯೂನ್‌ಗೆ ಹಾಡು ಹೊಸೆಯಬೇಕು. ಅದಕ್ಕೊಂದು ಕೌಶಲ ಬೇಕು. ಭಾರತದಲ್ಲಿ ಕೋಟ್ಯಂತರ ಹಾಡುಗಳಿವೆ. ಬೇರೆ ಯಾವ ದೇಶದಲ್ಲೂ ಇಷ್ಟು ಹಾಡುಗಳಿಲ್ಲ. ಯುದ್ಧದಲ್ಲೂ ಹಾಡು ಇತ್ತು. ಹಾಡಿನಲ್ಲಿ ಕಥೆಯ, ಪ್ರೀತಿಯ ಸ್ಥಿತ್ಯಂತರ ತೋರಿಸಬಹುದು. ಒಟ್ಟು ಹಾಡುಗಳ ಶೇ 70ರಷ್ಟು ಹಾಡುಗಳು ಪ್ರೀತಿ ಮೇಲಿವೆ. ಎಲ್ಲ ಪದಗಳನ್ನೂ ಬಳಸಿಯಾಗಿದೆ. ಬಾಳಸಂಗಾತಿಗೆ ಹೇಳದನ್ನು ಇಲ್ಲಿ ಬರೆಯಬೇಕು. ಹದಿಹರೆಯದಲ್ಲಿ ಗಂಭೀರವಾಗಿ 'ಕೋಟಿತೀರ್ಥ' ಬರೆದೆ. 52 ವರ್ಷವಾದಾಗ 'ಅನಿಸುತಿದೆ...' ಬರೆದೆ' ಎಂದು ನೆನಪಿಸಿಕೊಂಡರು.

'ಸಿನಿಮಾ ರಂಗಕ್ಕೆ ಹೋಗಿ ಹಾಳಾದ ಎನ್ನುತ್ತಾರೆ. ಆದರೆ ನಾನು ಬರವಣಿಗೆಯನ್ನು ನಿಲ್ಲಿಸಿಲ್ಲ. ಯುವ ಜನತೆ ನನ್ನ ಹಾಡು ಕೇಳಿದ ಬಳಿಕ ನನ್ನ ಪುಸ್ತಕ ಓದುತ್ತಿದ್ದಾರೆ. ನನ್ನ ಪುಸ್ತಕಗಳ ಮರುಮುದ್ರಣ ಆಗಿದ್ದು 'ಮುಂಗಾರು ಮಳೆ' ಬಂದ ನಂತರ' ಎಂದು ಕಾಯ್ಕಿಣಿ ಹೇಳಿದರು.

'ಸಿನಿಮಾ ಎನ್ನುವುದು ಸಾರ್ವಜನಿಕ ಆಸ್ತಿ. ಜೊತೆಯಾಗಿ ಅನುಭವಿಸಿದರಷ್ಟೇ ಅದರ ಮ್ಯಾಜಿಕ್ ತಿಳಿಯುತ್ತದೆ. ಮೊಬೈಲ್‌ನಲ್ಲಿ ಸಿನಿಮಾ ನೋಡುವುದರಿಂದ ಇದನ್ನು ಕಳೆದುಕೊಳ್ಳುತ್ತಿದ್ದೇವೆ. ಕಾದಂಬರಿಯನ್ನು ಓದುವಾಗಲೇ ಮನಸ್ಸಿನಲ್ಲಿ ನಮ್ಮದೇ ಕಲ್ಪನೆಯಲ್ಲಿ ಒಂದು ಸಿನಿಮಾ ಮಾಡಿರುತ್ತೇವೆ. ಹೀಗಿರುವಾಗ ಅದನ್ನು ಒಂದು ಸಿನಿಮಾದಲ್ಲಿ ನೋಡಿದಾಗ ಕೆಲವೊಮ್ಮೆ ಬೇಸರ ಆಗುತ್ತದೆ. ಕಾಸರವಳ್ಳಿಯವರು ಕಾದಂಬರಿಯ ಒಂದು ಅಂಶ ತೆಗೆದುಕೊಂಡು ಸಿನಿಮಾ ಮಾಡುತ್ತಿದ್ದರು' ಎಂದು ಅವರು ಹೇಳಿದರು.

ಜಯಂತ ಕಾಯ್ಕಿಣಿ ಅವರಿಗೆ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧುಕೋಕಿಲ ಸ್ಮರಣಿಕೆ ನೀಡಿದರು

### 'ಪೊನ್ನಿಯಿನ್ ಸೆಲ್ವನ್' ಸವಾಲು

'ಎ.ಆರ್.ರೆಹಮಾನ್ ಸಂಗೀತ ನಿರ್ದೇಶನದ 'ಪೊನ್ನಿಯಿನ್ ಸೆಲ್ವನ್' ಸಿನಿಮಾದ ಕನ್ನಡ ಅವತರಣಿಕೆಯ ಹಾಡುಗಳ ರಚನೆ ಸವಾಲಿನದ್ದಾಗಿತ್ತು. ಎರಡೂ ಭಾಗಗಳು ಸೇರಿ 14 ಹಾಡುಗಳಿವೆ. ಕನ್ನಡದಲ್ಲಿ ಪ್ರೀತಿ, ಪ್ರೇಮ ಎನ್ನಲು ತುಟಿಗಳನ್ನು ತಾಗಿಸಬೇಕು. ತಮಿಳಿನಲ್ಲಿ 'ಕಾದಲ್' ಎನ್ನುವಾಗ ತುಟಿಗಳೇ ತಾಗುವುದಿಲ್ಲ. ತುಟಿಗಳನ್ನು ಸೇರಿಸದೆ ಪ್ರೀತಿ ಹೇಗೆ ಮಾಡುತ್ತೀರಿ ಎಂದು ಮಣಿರತ್ನಂ ಅವರನ್ನು ಕೇಳಿದ್ದೆ?' ಎಂದು ನೆನಪಿಸಿಕೊಂಡರು.

> **ಗೀತರಚನೆ ಕಲಿಸುವುದಕ್ಕಾಗುವುದಿಲ್ಲ. ಒಂದೊಮ್ಮೆ ಕಲಿಸಿದರೆ ಅದು ಜಿಮ್‌ನಿಂದ ಹೊರಬರುವ ಒಂದೇ ರೀತಿಯ ದೇಹಗಳಂತೆ ಕಾಣಿಸಲಿವೆ**
> **ಜಯಂತ ಕಾಯ್ಕಿಣಿ,** ಕವಿ

# ‘ನಾಯಿ ಸಾಕುವವರ ನಿರ್ಲಕ್ಷ್ಯದಿಂದ ಗಲಾಟೆ’

## ಕ್ಷುಲ್ಲಕ ಕಾರಣಗಳೇ ದೊಡ್ಡದಾಗಿ ಕ್ರಿಮಿನಲ್ ಪ್ರಕರಣಗಳು ಹುಟ್ಟುತ್ತಿವೆ; ನ್ಯಾಯಮೂರ್ತಿ ಎಂ.ನಾಗಪ್ರಸನ್ನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸಾಕು ನಾಯಿಗಳನ್ನು ಅವುಗಳ ಮಾಲೀಕರು ಸರಿಯಾಗಿ ನಿಯಂತ್ರಣ ಮಾಡದೆ ಬೇಕಾಬಿಟ್ಟಿ ತಿರುಗಲು ಬಿಡುತ್ತಿರುವ ಕಾರಣ ಗಲಾಟೆಗಳು ನಡೆಯುತ್ತಿವೆ. ಕ್ಷುಲ್ಲಕ ಆರೋಪಗಳನ್ನು ಹೊತ್ತ ಕ್ರಿಮಿನಲ್ ಪ್ರಕರಣಗಳು ಕೋರ್ಟ್ ಮೆಟ್ಟಿಲೇರುತ್ತಿರುವುದು ಹೆಚ್ಚಾಗುತ್ತಿದೆ’ ಎಂದು ಹೈಕೋರ್ಟ್ ಬೇಸರ ವ್ಯಕ್ತಪಡಿಸಿದೆ.

‘ನಮ್ಮ ವಿರುದ್ಧ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್ಐಆರ್ ಮತ್ತು ಇದಕ್ಕೆ ಸಂಬಂಧಿಸಿದಂತೆ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ನಡೆಯುತ್ತಿರುವ ಪ್ರಕರಣದ ವಿಚಾರಣೆಯನ್ನು ರದ್ದುಪಡಿಸಬೇಕು’ ಎಂದು ಕೋರಿ ದಾಸರಹಳ್ಳಿಯ ‘ಕೆಎಸ್‌ಆರ್ ಕಾರ್ಡೇಲಿಯಾ ಅಪಾರ್ಟ್‌ಮೆಂಟ್’ ನಿವಾಸಿಗಳಾದ ವಕೀಲ ಅಭಿಷೇಕ್, ಕೀಲು ಮೂಳೆ ತಜ್ಞ ಡಾ.ಅಲೋಕ್, ಎಂಜಿನಿಯರ್ ಋಷಿಕೇಶ್ ಮತ್ತು ನಿವೃತ್ತ ಸರ್ಕಾರಿ ನೌಕರ ಅಶೋಕ್ ರಿಟ್ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಯನ್ನು ಬುಧವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಸಾಕು ನಾಯಿಗಳನ್ನು ಮನೆಯಿಂದ ಹೊರಗೆ ಕರೆದುಕೊಂಡು ಬಂದಾಗ ಅವು ಎಲ್ಲೆಂದರಲ್ಲಿ ಮಲ-ಮೂತ್ರ ವಿಸರ್ಜನೆ ಮಾಡುವ ಕಾರಣದಿಂದ ಮನಸ್ತಾಪಗಳು ಉಂಟಾಗುತ್ತಿವೆ. ಸಾಕು ನಾಯಿಗಳ ಮಾಲೀಕರು ಅವುಗಳನ್ನು ನಿಯಂತ್ರಿಸದೆ ಇರುವುದು ತರವಲ್ಲ. ಕಡೆಗೆ ಕ್ಷುಲ್ಲಕ ಕಾರಣಗಳೇ ದೊಡ್ಡದಾಗಿ ಇಂತಹ ಕ್ರಿಮಿನಲ್ ಪ್ರಕರಣಗಳು ಹುಟ್ಟುತ್ತಿವೆ’ ಎಂದು ಅಸಹನೆ ವ್ಯಕ್ತಪಡಿಸಿದರು.

ಹೈಕೋರ್ಟ್ ಸುದ್ದಿ

ನಾಯಿ ಮಾಲೀಕನ ಮೇಲೆ ಹಲ್ಲೆ ಮಾಡಿ ಗಾಯಗೊಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ವಕೀಲ ಮತ್ತು ಅವರ ಕುಟುಂಬದ ಇತರೆ ಮೂವರ ವಿರುದ್ಧದ ತನಿಖೆಗೆ ತಡೆ ನೀಡಿದರು. ಪ್ರತಿವಾದಿಗಳಾದ ಅಮೃತಹಳ್ಳಿ ಠಾಣಾ ಪೊಲೀಸರು ಮತ್ತು ದೂರುದಾರ ಆಕರ್ಷ್ ಕುಮಾರ್ ರೈ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಮಾರ್ಚ್ 13ಕ್ಕೆ ಮುಂದೂಡಿದರು.

### ನಾಯಿ ತ್ಯಾಜ್ಯವೇ ಕಾದಾಟದ ಮೂಲ

ಸಾಕು ನಾಯಿಯ ಮಲ ವಿಸರ್ಜನೆ ವಿಚಾರಕ್ಕೆ ಸಂಬಂಧಿಸಿದಂತೆ ನಗರದ ಅಪಾರ್ಟ್‌ಮೆಂಟ್ ನಿವಾಸಿಗಳ ನಡುವಿನ ಜಗಳದ ಕ್ರಿಮಿನಲ್ ಪ್ರಕರಣದಲ್ಲಿ ನಾಯಿಯ ಒಡತಿ ಮತ್ತು ಅವರ ಕುಟುಂಬದ ಇನ್ನಿಬ್ಬರು ಸದಸ್ಯರ ವಿರುದ್ಧದ ತನಿಖೆಗೆ ಹೈಕೋರ್ಟ್ ತಡೆ ನೀಡಿದೆ.

‘ನಮ್ಮ ವಿರುದ್ಧ ದಾಖಲಾಗಿರುವ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ನಗರದ ‘ರಿನೈಸೆನ್ಸ್ ಪ್ರಾಸ್ಪರೊ ಅಪಾರ್ಟ್‌ಮೆಂಟ್’ ನಿವಾಸಿಗಳಾದ ಅಂಕಿತಾ ಚಟರ್ಜಿ, ಅವರ ತಮ್ಮ ತೀರ್ಥಂಕರ ಚಟರ್ಜಿ ಹಾಗೂ ತಾಯಿ ಜಯಿತಾ ಚಟರ್ಜಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಸದ್ಯಕ್ಕೆ ನಿಮ್ಮ ನಾಯಿಯನ್ನು ಎಲ್ಲಿಗೂ ಕರೆದೊಯ್ಯಬೇಡಿ’ ಎಂದು ಅರ್ಜಿದಾರರಿಗೆ ಕುಟುಕಿ ತನಿಖೆಗೆ ತಡೆ ನೀಡಿತು.

**ಕೋರಿಕೆ:** ‘ಅಮೃತಹಳ್ಳಿ ಠಾಣೆಯಲ್ಲಿ ಸಂಧ್ಯಾ ಅವರು, ಭಾರತೀಯ ನ್ಯಾಯ ಸಂಹಿತಾ–2023ರ ಕಲಂ (ಬಿಎನ್‌ಎಸ್) ಕಲಂ 74, 115(2), 351(1),352 ಮತ್ತು 3(5) ರ ಅಡಿಯಲ್ಲಿ 2026 ಜನವರಿ 13ರಂದು ದಾಖಲಿಸಿರುವ ಮತ್ತು ಇದಕ್ಕೆ ಸಂಬಂಧಿಸಿದಂತೆ ನಗರದ 41ನೇ ಎಸಿಜೆಎಂ ಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣೆ ರದ್ದುಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

# ಕೋಗಿಲು ಪ್ರಕರಣ: ಅಮಿಕಸ್ ಕ್ಯೂರಿ ನೇಮಕ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಯಲಹಂಕ ವ್ಯಾಪ್ತಿಯ ಕೋಗಿಲು ಲೇಔಟ್‌ನ ಫಕೀರ್ ಹಾಗೂ ವಸೀಂ ಕಾಲೊನಿಯಲ್ಲಿ ಯಾವುದೇ ವ್ಯಕ್ತಿಗೆ ನಿವೇಶನ ಮಂಜೂರಾಗಿರುವ ಬಗ್ಗೆ ದಾಖಲೆಗಳಿಲ್ಲ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

‘ತೆರವು ಕಾರ್ಯಾಚರಣೆಯನ್ನು ಅಸಾಂವಿಧಾನಿಕ ಎಂದು ಘೋಷಿಸಬೇಕು, ಸಂತ್ರಸ್ತರಿಗೆ ಪುನರ್ವಸತಿ ಹಾಗೂ ಪರಿಹಾರ ನೀಡಲು ನಿರ್ದೇಶಿಸಬೇಕು’ ಎಂದು ಕೋರಿ ಈ ಪ್ರದೇಶದಲ್ಲಿ ವಾಸವಿದ್ದ ಝೈಬಾ ತಬಸ್ಸುಮ್, ರೆಹಾನ ಮತ್ತು ಅರೀಫಾ ಬೇಗಂ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ನಾಲ್ಕು ಪುನರ್ವಸತಿ ಕೇಂದ್ರಗಳನ್ನು ಮುಚ್ಚಲಾಗಿದೆ. ಸಂಪರ್ಕ ಸಂಖ್ಯೆಯೂ ಸರಿಯಾಗಿಲ್ಲ. ಜಿಬಿಎಗೆ ತೆರವು ಕಾರ್ಯಾಚರಣೆ ನಡೆಸುವ ಅಧಿಕಾರವಿಲ್ಲ’ ಎಂದು ಆಕ್ಷೇಪಿಸಿದರು.

ಇದಕ್ಕೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ‘ವಸೀಂ ಹಾಗೂ ಫಕೀರ್ ಕಾಲೊನಿಗಳಲ್ಲಿ ಯಾವುದೇ ವ್ಯಕ್ತಿಯ ನಿವೇಶನಕ್ಕೆ ಸಂಬಂಧಿಸಿದಂತೆ ತಾತ್ಕಾಲಿಕ ಹಕ್ಕು ಪತ್ರ ನೀಡಲಾಗಿಲ್ಲ. ಕೋಗಿಲು ಬಡಾವಣೆಯ ಹೊರಗೆ ಮೂವರಿಗೆ ತಾತ್ಕಾಲಿಕ ನಿವೇಶನದ ಹಕ್ಕುಪತ್ರ ನೀಡಿರುವ ಮಾಹಿತಿ ಇದೆ. ಅದೂ ಷರತ್ತಿಗೆ ಒಳಪಟ್ಟಿದೆ. ಇನ್ನೂ ನಾಲ್ಕು ಮಂದಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ. ತೆರವು ಕಾರ್ಯಾಚರಣೆಯಲ್ಲಿ 167 ಮಂದಿ ಸಂತ್ರಸ್ತರಾಗಿದ್ದಾರೆ. ನಾಲ್ಕು ಸ್ಥಳಗಳಲ್ಲಿ ಪುನರ್ವಸತಿ ಕಲ್ಪಿಸಲಾಗಿದೆ. ಅಲ್ಲಿಗೆ ಯಾರೂ ಬರುತ್ತಿಲ್ಲ’ ಎಂದು ವಿವರಿಸಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ಪ್ರಕರಣದಲ್ಲಿ ವಕೀಲೆ ಬಿ.ವಿ.ವಿದ್ಯುಲ್ಲತಾ ಅವರನ್ನು ಅಮಿಕಸ್ ಕ್ಯೂರಿಯನ್ನಾಗಿ (ನ್ಯಾಯಾಲಯಕ್ಕೆ ನೆರವಾಗುವ ವಕೀಲರು) ನೇಮಿಸಿ ಆದೇಶಿಸಿತು. ಅಂತೆಯೇ, ‘ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಸಂತ್ರಸ್ತರ ಪುನರ್ವಸತಿಗೆ ಸಂಬಂಧಿಸಿದಂತೆ ವರದಿ ನೀಡಬೇಕು ಹಾಗೂ ಅಮಿಕಸ್ ಕ್ಯೂರಿಗೆ ನೆರವಾಗಬೇಕು’ ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿತು.

# ಪೊಲೀಸ್ ಸಹಾಯವಾಣಿಗೆ ಬರುವ ಕರೆಗಳು ‘ಟೆಲಿ ಮನಸ್’ಗೆ ವರ್ಗ

ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರು ‘ಟೆಲಿ ಮನಸ್’ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಿದರು

**ಬೆಂಗಳೂರು:** ನಗರ ಪೊಲೀಸ್ ಹಾಗೂ ನಿಮ್ಹಾನ್ಸ್ ಸಹಯೋಗದಲ್ಲಿ ‘ಟೆಲಿ ಮನಸ್ –14416’ ಆರಂಭಿಸಲಾಗಿದ್ದು, ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಹಾಗೂ ನಿಮ್ಹಾನ್ಸ್ ನಿರ್ದೇಶಕಿ ಡಾ.ಪ್ರತಿಮಾ ಮೂರ್ತಿ ಅವರು ಟೆಲಿ ಮನಸ್ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಿದರು.

ಪೊಲೀಸ್ ಸಹಾಯವಾಣಿಗೆ ಮಾನಸಿಕ ತೊಂದರೆ, ಒತ್ತಡದ ಪರಿಸ್ಥಿತಿಯಲ್ಲಿರುವ ಕರೆಗಳು ಹೆಚ್ಚು ಬರುತ್ತಿದ್ದು, ‘ಟೆಲಿ ಮನಸ್’ ಮೂಲಕ ಪರಿಹಾರ ರೂಪಿಸುವ ಕಾರ್ಯಕ್ರಮ ಆರಂಭಿಸಲಾಗಿದೆ.

ಪ್ರತಿಮಾ ಮೂರ್ತಿ ಮಾತನಾಡಿ, ‘ರಾಷ್ಟ್ರೀಯ ಟೆಲಿ ಮನಸ್ ಆರೋಗ್ಯ ಕಾರ್ಯಕ್ರಮವು ದೇಶದಾದ್ಯಂತ ಆರೋಗ್ಯ ಸೇವೆ ಒದಗಿಸುತ್ತಿದೆ. ಪೊಲೀಸ್ ಸಹಾಯವಾಣಿ 112ಕ್ಕೆ ಬರುವ ಕರೆಗಳಲ್ಲಿ ಬಹುತೇಕ ಕರೆಗಳು ಮಾನಸಿಕ ಒತ್ತಡ, ಖಿನ್ನತೆ, ಸಂಕಷ್ಟದ ಪರಿಸ್ಥಿತಿಗೆ ಸಂಬಂಧಿಸಿದ್ದಾಗಿವೆ. ಪೊಲೀಸ್ ಕಮಿಷನರ್ ಅದನ್ನು ಗಮನಿಸಿ, ನಿಮ್ಹಾನ್ಸ್ ಸಹಾಯವಾಣಿಗೆ ವರ್ಗಾವಣೆ ಮಾಡುವ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ’ ಎಂದರು.

ಸೀಮಾಂತ್ ಕುಮಾರ್ ಸಿಂಗ್ ಮಾತನಾಡಿ, ‘ರಾತ್ರಿ 9 ಗಂಟೆ ನಂತರ 112ಕ್ಕೆ ಬರುವ ಕರೆಗಳಲ್ಲಿ ಬಹುತೇಕವು ನಿದ್ರೆ ಬರುತ್ತಿಲ್ಲ, ಮಾನಸಿಕ ತೊಂದರೆಯಿದೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಇದಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ನಿಮ್ಹಾನ್ಸ್ ನಿರ್ದೇಶಕರನ್ನು ಸಂಪರ್ಕಿಸಿ, ಯೋಜನೆ ರೂಪಿಸಲಾಗಿದೆ. ಮಾನಸಿಕ ಸಮಸ್ಯೆಯ ಕುರಿತು ಪೊಲೀಸ್ ಸಹಾಯವಾಣಿಗೆ ಹೆಚ್ಚಿನ ಕರೆಗಳು ಬರುತ್ತಿವೆ. ಅಂತಹ ಕರೆಗಳನ್ನು ನಿಮ್ಹಾನ್ಸ್‌ನಲ್ಲಿರುವ ಟೆಲಿ ಮನಸ್ ಸಹಾಯವಾಣಿಗೆ ನಮ್ಮ ಸಿಬ್ಬಂದಿ ವರ್ಗಾವಣೆ ಮಾಡಲಿದ್ದಾರೆ. ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದವರಿಗೆ ನಿಮ್ಹಾನ್ಸ್ ವೈದ್ಯರು ಸಲಹೆ ನೀಡಲಿದ್ದಾರೆ’ ಎಂದು ಮಾಹಿತಿ ನೀಡಿದರು.

ನಿಮ್ಹಾನ್ಸ್ ವೈದ್ಯ ಡಾ.ನವೀನ್, ಜಂಟಿ ಪೊಲೀಸ್ ಕಮಿಷನರ್ ಕುಲದೀಪ್ ಕುಮಾರ್ ಜೈನ್ ಹಾಜರಿದ್ದರು.

## 40ಕ್ಕೂ ಅಧಿಕ ಅಪರಾಧ ಕೃತ್ಯಗಳಲ್ಲಿ ಬಿಹಾರದ ಆರೋಪಿಗಳು ಭಾಗಿ

# ರೌಡಿಶೀಟರ್ ತಂದೆ, ಪುತ್ರನ ಸೆರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಹಾರದಲ್ಲಿ ಕೊಲೆ, ಕೊಲೆ ಯತ್ನ ಸೇರಿದಂತೆ 40ಕ್ಕೂ ಅಧಿಕ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ನಗರಕ್ಕೆ ಬಂದು ತಲೆಮರೆಸಿಕೊಂಡಿದ್ದ ತಂದೆ ಹಾಗೂ ಮಗನನ್ನು ಬೆಂಗಳೂರಿನ ಈಶಾನ್ಯ ವಿಭಾಗದ ಪೊಲೀಸರ ನೆರವು ಪಡೆದು, ಬಿಹಾರದ ವಿಶೇಷ ಕಾರ್ಯಪಡೆ ಪೊಲೀಸರು ಬಂಧಿಸಿದ್ದಾರೆ.

ಮಾಣಿಕ್ ಸಿಂಗ್ (30) ಹಾಗೂ ಅವರ ತಂದೆ ಮನೋಜ್ ಸಿಂಗ್ (65) ಬಂಧಿತರು. ಬಿಹಾರದಿಂದ ನಗರಕ್ಕೆ ಬಂದು ಕೊಡಿಗೇಹಳ್ಳಿ ವ್ಯಾಪ್ತಿಯಲ್ಲಿ ನೆಲಸಿದ್ದರು.

ಮಾಣಿಕ್ ಸಿಂಗ್ ಮತ್ತು ಮನೋಜ್ ಸಿಂಗ್ ಇಬ್ಬರೂ ಬಿಹಾರದ ರೌಡಿಶೀಟರ್‌ಗಳು. ಇಬ್ಬರ ವಿರುದ್ಧವೂ 24ಕ್ಕೂ ಅಧಿಕ ಕೊಲೆ, ಕೊಲೆ ಯತ್ನ ಆರೋಪ ಸೇರಿದಂತೆ ಒಟ್ಟು 40ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದರು.

ಬಿಲ್ಡರ್‌ಗಳು, ಉದ್ಯಮಿಗಳಿಗೆ ಕರೆ ಮಾಡಿ ಬೆದರಿಕೆ ಹಾಕುತ್ತಿದ್ದರು. ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳ ಸೇರಿದಂತೆ ಹಲವು ರಾಜ್ಯಗಳಲ್ಲಿ ಪ್ರಕರಣ ದಾಖಲಾಗಿವೆ ಎಂದರು.

ಮನೋಜ್

ಮಾಣಿಕ್

ಇಬ್ಬರನ್ನೂ ಬಿಹಾರ ಪೊಲೀಸರ ವಶಕ್ಕೆ ಒಪ್ಪಿಸಲಾಗಿದೆ. ಆರೋಪಿಗಳು ಎರಡು ವರ್ಷಗಳಿಂದ ಕೊಡಿಗೇಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬಾಡಿಗೆ ಮನೆ ಪಡೆದು ವಾಸವಿದ್ದರು. ಇಬ್ಬರಿಗೂ ಆಶ್ರಯ ನೀಡಿದವರು ಯಾರು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ. ಆಶ್ರಯ ನೀಡಿದವರ ವಿರುದ್ಧವೂ ಕ್ರಮ ತೆಗೆದುಕೊಳ್ಳಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಮಾಹಿತಿ ನೀಡಿದರು.

ಮಾಣಿಕ್‌ಗಾಗಿ ಐದು ವರ್ಷಗಳಿಂದ ಬಿಹಾರ ಪೊಲೀಸರು, ಬೇರೆ ಕಡೆ ಹುಡುಕಾಟ ನಡೆಸುತ್ತಿದ್ದರು. ಆರೋಪಿಗಳ ಸುಳಿವು ಸಿಕ್ಕಿರಲಿಲ್ಲ. ಆರೋಪಿಗಳ ಬಂಧನಕ್ಕೆ ಕಾರ್ಯಾಚರಣೆ ನಡೆಸಿದ ತಂಡಗಳಿಗೆ ಬಿಹಾರ ಪೊಲೀಸರು ₹3 ಲಕ್ಷ ಬಹುಮಾನ ಘೋಷಿಸಿದ್ದಾರೆ.

### ರಾಜ್ಯಪಾಲರ ಕಚೇರಿಯ ಪತ್ರ ದುರುಪಯೋಗ: ಎಫ್‌ಐಆರ್

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ಕಚೇರಿಯ ಅಧಿಕೃತ ಪತ್ರವನ್ನು ಅನಧಿಕೃತವಾಗಿ ಬಳಸಿಕೊಂಡಿದ್ದ ವಿಜಯನಗರದ ಆರ್.ಪಿ.ಸಿ ಲೇಔಟ್‌ನ ರೈಲ್ವೆ ಪ್ಯಾರಲಲ್ ರಸ್ತೆಯ ನಿವಾಸಿ, ಆರೋಪಿ ಎಚ್.ಎನ್.ಸುಜಯೇಂದ್ರ ಅವರ ವಿರುದ್ಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಪ್ರದೀಪ್ ಅವರು ನೀಡಿದ ದೂರು ಆಧರಿಸಿ, ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 336(3), 336(4), 340(2)ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು

ಅಧಿಕೃತ ಲೆಟರ್‌ಹೆಡ್ ದುರುಪಯೋಗ ಮಾಡಿಕೊಂಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಾನಸೌಧ ಠಾಣೆಗೆ ದೂರು ನೀಡಲಾಗಿತ್ತು. ವೈದ್ಯರೊಬ್ಬರಿಗೆ ವಂಚಿಸಿದ್ದ ಪ್ರಕರಣದಲ್ಲಿ ಸುಜಯೇಂದ್ರ ಅವರ ವಿರುದ್ಧ ವಿಜಯನಗರ ಠಾಣೆಯಲ್ಲಿ ಈ ಹಿಂದೆ ಎಫ್‌ಐಆರ್ ದಾಖಲಾಗಿ ಆರೋಪಿಯನ್ನು ಬಂಧಿಸಲಾಗಿತ್ತು. ಈ ಪ್ರಕರಣವನ್ನೂ ಅದೇ ಠಾಣೆಗೆ ವರ್ಗಾವಣೆ ಮಾಡಲಾಗಿದೆ. ಲೆಟರ್‌ಹೆಡ್ ದುರುಪಯೋಗ ಪ್ರಕರಣದಲ್ಲಿ ಇನ್ನೂ ಆರೋಪಿಯನ್ನು ಬಂಧಿಸಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ರಾಜ್ಯಪಾಲರ ಅಧಿಕೃತ ಪತ್ರವನ್ನು ಅನಧಿಕೃತವಾಗಿ ಬಳಸಿಕೊಂಡು ಆ ಪತ್ರದ ಮೇಲೆ ರಾಜ್ಯಪಾಲರ ಸಹಿಯನ್ನು ನಕಲಿ ಮಾಡಿ, ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಐಟಿ) ಕುಲಪತಿಗೆ ನೀಡಿರುವುದು ಕಂಡುಬಂದಿದೆ. ಅಧಿಕೃತ ಲೆಟರ್‌ಹೆಡ್ ದುರುಪಯೋಗ ಹಾಗೂ ನಕಲಿ ಸಹಿ ಮಾಡಿರುವುದು ಗಂಭೀರ ಅಪರಾಧವಾಗಿದ್ದು, ರಾಜ್ಯಪಾಲರ ಕಾರ್ಯಾಲಯಕ್ಕೆ ಆಡಳಿತಾತ್ಮಕವಾಗಿ, ಕಾನೂನುಬದ್ಧ ಹಾಗೂ ಪ್ರತಿಷ್ಠೆಗೆ ಹಾನಿ ಉಂಟು ಮಾಡಿರುವ ಆರೋಪಿಯ ವಿರುದ್ಧ ಕ್ರಮ ತೆಗೆದುಕೊಳ್ಳಿ’ ಎಂದು ಪ್ರದೀಪ್ ಅವರು ದೂರಿನಲ್ಲಿ ಕೋರಿದ್ದರು.

# 57 ಮೊಬೈಲ್ ಹಸ್ತಾಂತರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉತ್ತರ ವಿಭಾಗದ 13 ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣಗಳಲ್ಲಿ ಆರೋಪಿಗಳಿಂದ ಜಪ್ತಿ ಮಾಡಿಕೊಂಡಿದ್ದ 57 ಮೊಬೈಲ್ ಫೋನ್‌ಗಳನ್ನು ವಾರಸುದಾರರಿಗೆ ಹಸ್ತಾಂತರ ಮಾಡಲಾಯಿತು.

₹7.1 ಲಕ್ಷ ಮೌಲ್ಯದ 57 ಮೊಬೈಲ್ ಫೋನ್‌ಗಳನ್ನು ಮಾಲೀಕರಿಗೆ ಉತ್ತರ ವಿಭಾಗದ ಡಿಸಿಪಿ ಬಿ.ಎಸ್.ನೇಮಗೌಡ ಅವರು ಹಸ್ತಾಂತರಿಸಿದರು. ಸಿಇಐಆರ್ ಪೋರ್ಟಲ್ ಸಹಾಯದಿಂದ ಮೊಬೈಲ್ ಫೋನ್‌ಗಳನ್ನು ಪತ್ತೆ ಮಾಡಲಾಗಿತ್ತು ಎಂದು ಪೊಲೀಸರು ಹೇಳಿದರು.

ಮಲ್ಲೇಶ್ವರ ಠಾಣೆಯ ಪೊಲೀಸರು 2, ಶ್ರೀರಾಮಪುರ 8, ರಾಜಾಜಿನಗರ 5, ಸುಬ್ರಹ್ಮಣ್ಯನಗರ 9, ಮಹಾಲಕ್ಷ್ಮಿಲೇಔಟ್ 4, ನಂದಿನಿ ಲೇಔಟ್ 10, ಯಶವಂತಪುರ 3, ಆರ್‌ಎಂಸಿ ಯಾರ್ಡ್ 2, ಸಂಜಯನಗರ 5, ಜೆ.ಸಿ. ನಗರ 6, ಹೆಬ್ಬಾಳ ಠಾಣೆಯ ಪೊಲೀಸರು 3 ಮೊಬೈಲ್ ಫೋನ್ ಪತ್ತೆ ಮಾಡಿ ಆರೋಪಿಗಳಿಂದ ವಶಕ್ಕೆ ಪಡೆದುಕೊಂಡಿದ್ದರು ಎಂದು ಮೂಲಗಳು ತಿಳಿಸಿವೆ.

ವಾರಸುದಾರರಿಗೆ ಮೊಬೈಲ್ ಹಸ್ತಾಂತರಿಸಿದ ಉತ್ತರ ವಿಭಾಗದ ಡಿಸಿಪಿ ಬಿ.ಎಸ್‌ ನೇಮಗೌಡ

# ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (ಕೆಪಿಟಿಸಿಎಲ್) ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಕಾರಣ, ಜಾಲಹಳ್ಳಿ ವಿಭಾಗದ ಉಪ ಕೇಂದ್ರದ ವ್ಯಾಪ್ತಿಯಲ್ಲಿ ಶುಕ್ರವಾರ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ವಿನಾಯಕ ನಗರ, ವಿಕಾಸ್ ನಗರ, ಶೋಭಾ ಅಪಾರ್ಟ್‌ಮೆಂಟ್, ರಾಮಯ್ಯ ಲೇಔಟ್, ನಾರಾಯಣ ಲೇಔಟ್, ವಿಡಿಯಾ ಸ್ಕೂಲ್, ಕುವೆಂಪು ನಗರ, ವಿಡಿಯಾ ಬಸ್ ನಿಲ್ದಾಣ, ಮುನಿಕೊಂಡಪ್ಪ ಲೇಔಟ್, ಅಶೋಕ್ ನಗರ, ವಿದ್ಯಾ ನಗರ, ಡಿಫೆನ್ಸ್ ಕಾಲೊನಿ, ಮಂಜುನಾಥ್ ನಗರ, ಮಹಾಲಕ್ಷ್ಮಿ ನಗರ, ಕಾಟರಾಯ ನಗರ, ಸೋಪ್ ಫ್ಯಾಕ್ಟರಿ ಲೇಔಟ್, ವಿಜಯಲಕ್ಷ್ಮಿ ಲೇಔಟ್, ಅಂದಾನಪ್ಪ ಲೇಔಟ್, ಬಿಟಿಎಸ್ ಲೇಔಟ್, ಸಿದ್ದೇಶ್ವರ ಲೇಔಟ್, ಸಾಸುವೆಘಟ್ಟ, ಸೋಲದೇವನಹಳ್ಳಿಯ ಕೆಲವೆಡೆ, ತರಬನಹಳ್ಳಿ ಮುಖ್ಯರಸ್ತೆ, ಹೆಸರಘಟ್ಟ ಮುಖ್ಯ ರಸ್ತೆ, ಸಿಡೇದಹಳ್ಳಿ, ವಿಶ್ವೇಶ್ವರಯ್ಯ ಲೇಔಟ್, ರಾಯಲ್ ಎನ್‌ಕ್ಲೇವ್, ಬೈರವೇಶ್ವರ ವೃತ್ತ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ರಾಜಾನುಕುಂಟೆ ಉಪ ಕೇಂದ್ರದ ವ್ಯಾಪ್ತಿಯಲ್ಲಿ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಹೊನ್ನೇನಹಳ್ಳಿ, ಸಿಂಗನಾಯಕನಹಳ್ಳಿ, ರಾಜಾನುಕುಂಟೆ, ಅದ್ದೆವಿಶ್ವನಾಥಪುರ, ಮಾರಸಂದ್ರ, ಶ್ರೀರಾಮನಹಳ್ಳಿ, ನೆಲ್ಲಕುಂಟೆ, ಹನಿಯೂರು, ಚೆಲ್ಲಹಳ್ಳಿ, ಇಟಗಲ್‌ಪುರ, ಬೈರಾಪುರ, ಬೂದಮನಹಳ್ಳಿ, ದಿಬ್ಬೂರು, ಕಾಕೋಳು, ಸೊನ್ನೇನಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಶಾಸಕ ಬೈರತಿ ಬಸವರಾಜ ಅವರ ಜನ್ಮದಿನದ ಅಂಗವಾಗಿ ಕೆ.ಆರ್ ಪುರ ಸಮೀಪದ ಟಿ.ಸಿ ಪಾಳ್ಯದಲ್ಲಿ ಪಾಲಿಕೆ ಮಾಜಿ ಸದಸ್ಯ ಪಿ.ಜೆ.ಅಂತೋಣಿಸ್ವಾಮಿ ಅವರು ಬಡವರಿಗೆ ಸೀರೆ ವಿತರಿಸಿ, ಅನ್ನದಾನ ಏರ್ಪಡಿಸಿದ್ದರು. ಮುಖಂಡರಾದ ಶ್ರೀರಾಮುಲು, ಶಮಂತ್, ಜೆಸಿಬಿ ಅಂತೋಣಿ, ರಮೇಶ್, ಕೆ.ಪಿ.ಕೃಷ್ಣ ಉಪಸ್ಥಿತರಿದ್ದರು

# 300ಕ್ಕೂ ಹೆಚ್ಚು ಕಲಾವಿದರಿಂದ ಶಾಸ್ತ್ರೀಯ ನೃತ್ಯ

ಪ್ರಜಾವಾಣಿ ವಾರ್ತೆ

**ನೆಲಮಂಗಲ:** ಕಲಾಗ್ರಣಿ ಪ್ರತಿಷ್ಠಾನದ 15ನೇ ವಾರ್ಷಿಕೋತ್ಸವದ ಪ್ರಯುಕ್ತ ಹಮ್ಮಿಕೊಂಡಿದ್ದ ‘ನವರಂಗ’ ಕಾರ್ಯಕ್ರಮದಲ್ಲಿ 300ಕ್ಕೂ ಹೆಚ್ಚು ಕಲಾವಿದರು ಭರತನಾಟ್ಯ, ಶಾಸ್ತ್ರೀಯ ಸಂಗೀತ, ವಾದ್ಯ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಭರತನಾಟ್ಯದ ವಿವಿಧ ಪ್ರಕಾರಗಳಾದ ಭರತಾಂಜಲಿ, ಆನಂತರೂಪಿಣಿ, ಕೂಚುಪುಡಿ ಹಾಗೂ ವಿವಿಧ ಶಾಸ್ತ್ರೀಯ ನೃತ್ಯ, ವೀಣಾ, ಮೃದಂಗ, ಪಕ್ಕವಾದ್ಯ, ಘಟಂ ವಾದ್ಯ ವಾದನ, ಶಾಸ್ತ್ರೀಯ ಸಂಗೀತ, ಭಾವಗೀತೆ, ಭಕ್ತಿಗೀತೆಗಳನ್ನು ಪ್ರದರ್ಶಿಸಿದರು. 50 ವರ್ಷ ಮೇಲ್ಪಟ್ಟವರು ಭರತನಾಟ್ಯ ಪ್ರದರ್ಶಿಸಿದ್ದು ವಿಶೇಷವಾಗಿತ್ತು.

ಕಲಾಗ್ರಣಿ ಪ್ರತಿಷ್ಠಾನದ ಕಾರ್ಯದರ್ಶಿ ಸೋನಿಯಾ ಪಡುವಾಲ್ ಮಾತನಾಡಿ, ‘ದೇಶದ ಸಂಸ್ಕೃತಿಯ ಪ್ರತೀಕವಾದ ಶಾಸ್ತ್ರೀಯ ಸಂಗೀತ, ನೃತ್ಯವನ್ನು 15 ವರ್ಷಗಳಿಂದ ಗ್ರಾಮಾಂತರ ಪ್ರದೇಶದಲ್ಲಿ ಪಸರಿಸುವ ಕಾರ್ಯವನ್ನು ಮಾಡುತ್ತಿದ್ದೇವೆ. ಅದರ ಪ್ರತಿಫಲವೇ ಇಂದು 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರದರ್ಶನ ನೀಡಿದರು. ಇದೊಂದು ಅವಿಸ್ಮರಣೀಯ ಕ್ಷಣ’ ಎಂದರು.

ತಾಳವಾದ್ಯ ವಿದ್ವಾಂಸ ಎಸ್.ವಿ.ಗಿರಿಧರ, ಗಮಕ ವಿದ್ವಾಂಸ ಸನತ್ ಕುಮಾರ್ ಸೋಮಯಾಜಿ, ಭರತನಾಟ್ಯ ಸಂಶೋಧಕಿ ಶೋಭಾ ಶಶಿಕುಮಾರ್, ಕೂಚುಪುಡಿ ಕಲಾವಿದೆ ರೂಪಾ ರಾಜೇಶ್ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

‘ನವರಂಗ’ ಕಾರ್ಯಕ್ರಮಲ್ಲಿ 300ಕ್ಕೂ ಹೆಚ್ಚು ಕಲಾವಿದರು ಭರತನಾಟ್ಯ ಪ್ರದರ್ಶಿಸಿದರು

# 19 ಮಂದಿಗೆ ‘ಜಾನಪದ ಲೋಕ’ ಪ್ರಶಸ್ತಿ

**ರಾಮನಗರ:** ಕರ್ನಾಟಕ ಜಾನಪದ ಪರಿಷತ್ತು ಲೋಕೋತ್ಸವದ ಪ್ರಯುಕ್ತ ಪ್ರತಿ ವರ್ಷ ನೀಡುವ ‘ಜಾನಪದ ಲೋಕ’ ಪ್ರಶಸ್ತಿಗೆ ಈ ಸಲ ಪರಿಷತ್ತಿನ ಮಾಜಿ ಅಧ್ಯಕ್ಷ, ಜಾನಪದ ವಿದ್ವಾಂಸ ಪ್ರೊ. ಹಿ. ಶಿ. ರಾಮಚಂದ್ರೇಗೌಡ ಸೇರಿದಂತೆ 19 ಮಂದಿ ಭಾಜನರಾಗಿದ್ದಾರೆ.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರಶಸ್ತಿ ಪುರಸ್ಕೃತರ ಹೆಸರು ಪ್ರಕಟಿಸಿದ ಪರಿಷತ್ತಿನ ಅಧ್ಯಕ್ಷ ಪ್ರೊ. ಹಿ.ಚಿ. ಬೋರಲಿಂಗಯ್ಯ, ಪ್ರಶಸ್ತಿ ₹10 ಸಾವಿರದಿಂದ ₹25 ಸಾವಿರದವರೆಗೆ ನಗದು ಹಾಗೂ ಫಲಕ ಒಳಗೊಂಡಿದೆ ಎಂದು ಹೇಳಿದರು.

ಈ ಸಲ ಫೆ. 7 ಮತ್ತು 8ರಂದು ಜಾನಪದ ಲೋಕದಲ್ಲಿ ವಿದ್ಯಾರ್ಥಿ ಜಾನಪದ ಲೋಕೋತ್ಸವ–2026 ಕಾರ್ಯಕ್ರಮ ನಡೆಯಲಿದೆ. 8ರಂದು ಸಂಜೆ 5.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

# ದರೋಡೆ: 56 ಆರೋಪಿಗಳ ಬಂಧನ

**ಮಂಡ್ಯ:** ಮೈಸೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ (ಎನ್.ಎಚ್-275) ಹಾಗೂ ಸರ್ವಿಸ್ ರಸ್ತೆಗಳಲ್ಲಿ ತಡರಾತ್ರಿ ಪ್ರಯಾಣಿಕರನ್ನು ತಡೆದು ಸುಲಿಗೆ, ದರೋಡೆ ಮಾಡುತ್ತಿರುವುದಕ್ಕೆ ಸಂಬಂಧಿಸಿದಂತೆ ಒಟ್ಟು 34 ಪ್ರಕರಣಗಳು ವರದಿ ಆಗಿದ್ದು, 28 ಪ್ರಕರಣಗಳನ್ನು ಭೇದಿಸಲಾಗಿದೆ.

ಶಾಸಕ ಮಧು ಜಿ.ಮಾದೇಗೌಡ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಗೃಹ ಸಚಿವರು, ‘ಈ ಹೆದ್ದಾರಿ ಸಾರ್ವಜನಿಕ ಬಳಕೆಗೆ ಮುಕ್ತಗೊಂಡ ಬಳಿಕ 2022ರಿಂದ 2025ರ ಅಂತ್ಯಕ್ಕೆ ಈ ಪ್ರಕರಣಗಳು ವರದಿಯಾಗಿವೆ. 56 ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

## ಆರು ಕಿ.ಮೀಗೂ ಹೆಚ್ಚು ದೂರ ವಾಹನ ದಟ್ಟಣೆ • ತಾಸುಗಟ್ಟಲೇ ಪ್ರಯಾಣಿಕರ ಪರದಾಟ

# ಹೆದ್ದಾರಿ ಕಾಮಗಾರಿ ಸ್ಥಳದಲ್ಲಿ ಭೂಕುಸಿತ

ಪ್ರಜಾವಾಣಿ ವಾರ್ತೆ

**ಆನೇಕಲ್:** ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ 44ರ ಕಾಮಗಾರಿ ಸ್ಥಳದಲ್ಲಿ ಭೂಕುಸಿತದಿಂದಾಗಿ ಐದಾರು ಕಿ.ಮೀ.ಗೂ ಹೆಚ್ಚು ದೂರ ಸಂಚಾರ ದಟ್ಟಣೆ ಉಂಟಾಗಿತ್ತು. ವಾಹನ ಸವಾರರು ನಿಂತಲ್ಲೇ ತಾಸುಗಟ್ಟಲೇ ನಿಲ್ಲಬೇಕಾಯಿತು.

ರಾಷ್ಟ್ರೀಯ ಹೆದ್ದಾರಿ 44ರಲ್ಲಿ ಚಂದಾಪುರ-ಅತ್ತಿಬೆಲೆ ರಸ್ತೆಯಲ್ಲಿ ಮೂರು ಅಂಡರ್‌ಪಾಸ್ ಕಾಮಗಾರಿ ನಡೆಯುತ್ತಿದೆ. ಕಳೆದ ಏಳೆಂಟು ತಿಂಗಳಿನಿಂದ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿದೆ.

ಹೆದ್ದಾರಿಗೆ ಹೊಂದಿಕೊಂಡಿರುವ ಹಳೆ ಚಂದಾಪುರದ ಬಳಿ ಕಾಮಗಾರಿ ನಡೆಯುತ್ತಿದ್ದ ಪ್ರದೇಶದಲ್ಲಿ ಭೂಕುಸಿತ ಉಂಟಾಗಿದೆ. ಇದರಿಂದ ಕಿಲೋ ಮೀಟರ್‌ಗಟ್ಟಲೇ ವಾಹನಗಳ ಉದ್ದನೆಯ ಸಾಲು ಕಂಡು ಬಂತು. ನೂರಾರು ವಾಹನಗಳ ಹಾರ್ನ್ ಶಬ್ದ ಕಿವಿಗಡಚಿಕ್ಕುವಂತಿತ್ತು. ವಾಹನ ದಟ್ಟಣೆ ನಿಭಾಯಿಸಲು ಪೊಲೀಸರು ಪರದಾಡಿದರು.

ಅಂಡರ್‌ಪಾಸ್ ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿರುವುದರಿಂದ ಸಾರ್ವಜನಿಕರು ನರಕಯಾತನೆ ಅನುಭವಿಸುವಂತಾಗಿದೆ. ಚಂದಾಪುರ-ಅತ್ತಿಬೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸಲು ಎರಡು ಮೂರು ತಾಸು ಬೇಕಾಗುತ್ತದೆ.

ಹೆದ್ದಾರಿ ವ್ಯಾಪ್ತಿಯಲ್ಲಿ ಹಲವಾರು ಶಾಲೆ, ಕಾಲೇಜುಗಳಿವೆ. ಶಾಲೆಗಳಿಗೆ ತೆರಳುವ ವಿದ್ಯಾರ್ಥಿಗಳು ಪ್ರತಿನಿತ್ಯ ತಡವಾಗಿ ಹೋಗುತ್ತಿದ್ದಾರೆ. ಶಾಲಾ ವಾಹನಗಳು ಹೆದ್ದಾರಿಯಲ್ಲಿ ಸಿಲುಕಿಕೊಂಡು ಪರದಾಡುವಂತಾಗಿದೆ.

ಹೆದ್ದಾರಿ ಪ್ರಾಧಿಕಾರ ಮತ್ತು ಬಿಇಟಿಪಿಎಲ್‌ನಿಂದ ದಾರಿಬಾಲ್ ಎಂಬ ಕಂಪನಿಯು ಅಂಡರ್‌ಪಾಸ್ ನಿರ್ಮಾಣದ ಕಾಮಗಾರಿಯ ಗುತ್ತಿಗೆ ಪಡೆದಿದ್ದು, ಕಾಮಗಾರಿಯ ಹೆಸರಿನಲ್ಲಿ ಅಲ್ಲಲ್ಲಿ ಹಳ್ಳಗಳನ್ನು ತೋಡಿದೆ. ಆಮೆಗತಿಯಲ್ಲಿ ಕಾಮಗಾರಿ ಸಾಗುತ್ತಿರುವುದರಿಂದ ಸಾರ್ವಜನಿಕರು ಹಿಡಿಶಾಪ ಹಾಕುತ್ತಾ ಈ ರಸ್ತೆಯಲ್ಲಿ ಸಂಚರಿಸಬೇಕಾಗಿದೆ.

**ಗುತ್ತಿಗೆದಾರರ ನಿರ್ಲಕ್ಷ್ಯ:** ರಾಷ್ಟ್ರೀಯ ಹೆದ್ದಾರಿ 44ರಲ್ಲಿ ಅಂಡರ್‌ಪಾಸ್ ನಿರ್ಮಿಸಲು ಗುತ್ತಿಗೆದಾರರು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಮಂದಗತಿಯ ಕಾಮಗಾರಿಯಿಂದಾಗಿ ಪರದಾಡುವಂತಾಗಿದೆ. ಹೆದ್ದಾರಿ ಪ್ರಾಧಿಕಾರದ ಸಿಬ್ಬಂದಿ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾದಾಗ ಮಾತ್ರ ಬಂದು ಪರಿಶೀಲಿಸುತ್ತಾರೆ. ನಂತರ ಇತ್ತ ತಲೆ ಹಾಕುವುದಿಲ್ಲ. ಹಾಗಾಗಿ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಕಾಳಜಿ ವಹಿಸಿ ರಾಷ್ಟ್ರೀಯ ಹೆದ್ದಾರಿಯ ಸಮಸ್ಯೆಗೆ ಪರಿಹಾರ ನೀಡಬೇಕು ಎಂದು ಚಂದಾಪುರದ ನಿವಾಸಿ ವಸಂತ್ ಒತ್ತಾಯಿಸಿದ್ದಾರೆ.

### ಒಂದು ತಾಸು ಸಿಲುಕಿದ ಆಂಬುಲೆನ್ಸ್

ರಾಷ್ಟ್ರೀಯ ಹೆದ್ದಾರಿ ವ್ಯಾಪ್ತಿಯಲ್ಲಿ ಹಲವಾರು ಪ್ರತಿಷ್ಠಿತ ಆಸ್ಪತ್ರೆಗಳಿವೆ. ತಮಿಳುನಾಡಿನ ಹೊಸೂರಿಗೂ ಇದೇ ರಸ್ತೆಯನ್ನು ಬಳಸಲಾಗುತ್ತದೆ. ಅವೈಜ್ಞಾನಿಕ ಮತ್ತು ನಿಗದಿತ ಅವಧಿಯಲ್ಲಿ ಆಗದಿರುವ ಕಾಮಗಾರಿಯಿಂದಾಗಿ ರೋಗಿಗಳು ಪರದಾಡುವಂತಾಗಿದೆ. ಭೂ ಕುಸಿತದಿಂದ ಆಂಬುಲೆನ್ಸ್‌ವೊಂದು ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ತಾಸು ಸಿಲುಕಿಕೊಂಡಿತ್ತು. ರೋಗಿಯ ಸಂಬಂಧಿಕರು ಆಂಬುಲೆನ್ಸ್‌ಗೆ ದಾರಿ ಮಾಡಲು ಪರದಾಡಿದರು.

### ಒಳಚರಂಡಿ ನೀರು ಕಾರಣವೇ?

ರಾಷ್ಟ್ರೀಯ ಹೆದ್ದಾರಿ 44ರಲ್ಲಿನ ಹಳೇ ಚಂದಾಪುರದ ಬಳಿ ಚಂದಾಪುರ ಪುರಸಭೆಯ ವ್ಯಾಪ್ತಿಯ ಜಿಪಿಆರ್ ಬಡಾವಣೆ ಬಳಿ ಒಳಚರಂಡಿಯ ನೀರು ರಸ್ತೆಗೆ ಹರಿಯುತ್ತಿದೆ. ಕೊಳಚೆ ನೀರು ಒಂದೆಡೆ ಹರಿದಿದ್ದರಿಂದ ಹೆದ್ದಾರಿಯ ತಳ ಭಾಗ ತೇವಾಂಶಗೊಂಡು ಭೂಕುಸಿತ ಸಂಭವಿಸಿದೆ ಎಂದು ಶಂಕಿಸಲಾಗಿದೆ.

ತ್ಯಾಜ್ಯ ನೀರು ರಸ್ತೆಗೆ ಹರಿಯದಂತೆ ಕ್ರಮ ವಹಿಸಬೇಕೆಂದು ಸ್ಥಳೀಯ ನಿವಾಸಿ ವೆಂಕಟೇಶ್ ಆಗ್ರಹಿಸಿದ್ದಾರೆ.

### ಪರ್ಯಾಯ ರಸ್ತೆ ಬಳಸಲು ಸೂಚನೆ

ರಾಷ್ಟ್ರೀಯ ಹೆದ್ದಾರಿ 44ರಲ್ಲಿ ಕಾಮಗಾರಿ ಪ್ರದೇಶದಲ್ಲಿ ಭೂಕುಸಿತ ಉಂಟಾಗಿರುವುದರಿಂದ ವಾಹನ ದಟ್ಟಣೆ ಹೆಚ್ಚಾಗಿದೆ. ಹಾಗಾಗಿ ಪರ್ಯಾಯ ರಸ್ತೆಗಳನ್ನು ಬಳಸಲು ಪೊಲೀಸರು ಸೂಚನೆ ನೀಡಿದ್ದಾರೆ. ಹೊಸೂರು, ಅತ್ತಿಬೆಲೆಗೆ ತೆರಳುವವರು ಚಂದಾಪುರ-ಆನೇಕಲ್ ರಸ್ತೆಯ ಮೂಲಕ ತೆರಳಬೇಕು ಎಂದು ಪೊಲೀಸರು ತಿಳಿಸಿದರು.

### ನಗರದಲ್ಲಿ ಇಂದು

**ಇ-ಡಿಎಆರ್ ಅನುಷ್ಠಾನ ಹಾಗೂ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ 2026ರ ಸಮಾರೋಪ ಸಮಾರಂಭ:** ಅತಿಥಿಗಳು: ರಾಮಲಿಂಗಾರೆಡ್ಡಿ, ಜಿ. ಪರಮೇಶ್ವರ, ದಿನೇಶ್ ಗುಂಡೂರಾವ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಅರಮನೆ ಮೈದಾನ, ಬೆಳಿಗ್ಗೆ 10ರಿಂದ

**ಐಎಸ್‌ಡಿಸಿಪಿ ಎರಡನೇ ಅಂತರರಾಷ್ಟ್ರೀಯ ಸಮ್ಮೇಳನ:** ಉದ್ಘಾಟನೆ: ಡಾ.ವಿ. ರಾಮಪ್ರಸಾತ್ ಮನೋಹರ್, ಅತಿಥಿಗಳು: ಎಸ್.ಆರ್. ಸುಬ್ರಮಣ್ಯ, ರಾಬರ್ಟ್ ಎ. ವೆಸ್ಟ್, ಆಯೋಜನೆ ಮತ್ತು ಸ್ಥಳ: ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಳಿಗ್ಗೆ 10ರಿಂದ

**‘ಕರೆಂಟ್ ಇನ್ನೊವೇಷನ್ಸ್ ಇನ್ ಕೆಮಿಕಲ್ ಆ್ಯಂಡ್ ಅಪ್ಲೈಡ್ ಸೈನ್ಸಸ್’ ಅಂತರರಾಷ್ಟ್ರೀಯ ಸಮ್ಮೇಳನ:** ಉದ್ಘಾಟನೆ: ಎ.ಎಸ್. ಕಿರಣ್ ಕುಮಾರ್, ಎಸ್.ಆರ್. ನಿರಂಜನ, ಅಧ್ಯಕ್ಷತೆ: ಎಸ್.ಎಂ. ಜಯಕರ, ಅತಿಥಿಗಳು: ಎಸ್.ಸಿ. ಶರ್ಮಾ, ಕೆ.ಟಿ. ಶಾಂತಲಾ, ಆಯೋಜನೆ: ರಸಾಯನ ವಿಜ್ಞಾನ ವಿಭಾಗ, ಸ್ಥಳ: ಸಿ–1 ಲೆಕ್ಚರ್ ಹಾಲ್, ರಸಾಯನ ವಿಜ್ಞಾನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10

**17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ‘ಡಾ. ರಾಜ್‌ಕುಮಾರ್ ಸಿನಿಮಾಗಳ’ ಕುರಿತ ಸಂವಾದ:** ಭಾಗವಹಿಸುವವರು: ಸಾಧು ಕೋಕಿಲ, ರಘುನಾಥ ಚ.ಹ., ಮಂಜುನಾಥ ಅದ್ದೆ, ಮಂಜುಳಾ ಹುಲಿಕುಂಟೆ, ಮುರಳಿ ಮೋಹನ್ ಕಾಟಿ, ಸ್ಥಳ: ಲುಲು ಮಾಲ್, ಬೆಳಿಗ್ಗೆ 11

**ಭಾರತ ರಂಗ ಮಹೋತ್ಸವ ಹಾಗೂ ರಂಗ ಪರಿಷೆ:** ಸಂಜೆ 4ಕ್ಕೆ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಶತಮಾನೋತ್ಸವ ಸಂಭ್ರಮ ಕವಿಗೋಷ್ಠಿ, ಉಪನ್ಯಾಸ: ಎಚ್.ಕೆ. ಶ್ವೇತಾ, ಅಧ್ಯಕ್ಷತೆ: ಕೆ.ಎಸ್. ರಂಜನಿ ಪ್ರಭು, ಸಂಜೆ 5ಕ್ಕೆ ಸಮಾರೋಪ ನುಡಿ: ಶಿವರಾಜ ಎಸ್. ತಂಗಡಗಿ, ಅತಿಥಿಗಳು: ಜೆ. ಮಂಜುನಾಥ್, ಟಿ.ಎನ್. ಸೀತಾರಾಂ, ಅಧ್ಯಕ್ಷತೆ: ಎಸ್. ಟಿ. ಸೋಮಶೇಖರ್, ಉತ್ಸವ ಗೌರವ: ಜನಾರ್ದನ್ (ಜನ್ನಿ), ಬಿ.ಐ. ಈಳಿಗೇರ, ಉಪಸ್ಥಿತಿ: ಮಾನಸ, ಹಿಂದೂಸ್ತಾನಿ ಸಂಗೀತ ಗಾಯನ: ವಿಶ್ವನಾಥ್ ನಾಕೋಡ್, ಸಂಜೆ 7ಕ್ಕೆ ‘ಮಂಟೇಸ್ವಾಮಿ’ ಕಥಾ ಪ್ರಸಂಗ ಪ್ರದರ್ಶನ, ರಚನೆ: ಎಚ್.ಎಸ್. ಶಿವಪ್ರಕಾಶ್, ನಿರ್ದೇಶನ: ಕೆ. ರಾಮಕೃಷ್ಣಯ್ಯ, ‘ಸಂದಿಗ್ಧ’ ನಾಟಕ ಪ್ರದರ್ಶನ: ನಿರ್ದೇಶನ: ಅಕ್ಷರ್ ಕೆ.ಎನ್., ಆಯೋಜನೆ: ನಾಟಕ ಅಕಾಡೆಮಿ, ರಾಷ್ಟ್ರೀಯ ನಾಟಕ ಶಾಲೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ.

**17ನೇ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವ ‘ಪುರಾಣ ಗೀತಂ’ನ ಉದ್ಘಾಟನೆ:** ಗಾಯನ: ಧನ್ಯಾ ದಿನೇಶ್ ರುದ್ರಪಟ್ಟಣ, ಶಿವಶ್ರೀ ಸ್ಕಂದಪ್ರಸಾದ್, ಸಂಗೀತೋತ್ಸವದ ಅಧ್ಯಕ್ಷತೆ: ಆರ್.ಎಸ್. ನಂದಕುಮಾರ್, ಆಯೋಜನೆ: ಭಾರತೀಯ ಸಾಮಗಾನ ಸಭಾ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವೈಯಾಲಿ ಕಾವಲ್, ಮಲ್ಲೇಶ್ವರ, ಸಂಜೆ 4.30ರಿಂದ

ಶಿವಶ್ರೀ

**ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ ‘ಜೈಮಿನಿ ಭಾರತ’ ಉಪನ್ಯಾಸ ಮಾಲಿಕೆ:** ಭಾಗವಹಿಸುವವರು: ಪ್ರಭಾವತಿ ಎಂ. ಹಿರೇಮಠ, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್. ಆರ್. ಕಾಲೊನಿ, ಸಂಜೆ 5.45

**ದಾಸರ ಪದಗಳ ಗಾಯನ:** ಅದಿತಿ ಪ್ರಹ್ಲಾದ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಬನಶಂಕರಿ ಆರನೇ ಹಂತ, ಸಂಜೆ 7

**‘ಮಿಸ್. ಸದಾರಮೆ’ ನಾಟಕ ಪ್ರದರ್ಶನ:** ನಿರ್ದೇಶನ: ಮಂಜುನಾಥ್ ಎಲ್. ಬಡಿಗೇರ್, ಆಯೋಜನೆ: ಸಮಷ್ಟಿ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30



ಹಣಕಾಸಿನ ಸ್ವಾತಂತ್ರ್ಯದ ಬಗ್ಗೆ ತಿಳಿದುಕೊಂಡು ಅದಕ್ಕಾಗಿ ಕೆಲಸ ಮಾಡುತ್ತಿದ್ದರೆ ಅದು ಲಭಿಸುತ್ತದೆ
**ರಾಬರ್ಟ್ ಕಿಯೊಸಾಕಿ,** ಹೂಡಿಕೆ ತಜ್ಞ

ದುಡ್ಡಿನಂಥಾ ಮಾತು

# ಪೋರ್ಟ್‌ಫೋಲಿಯೊ ಕಟ್ಟುವ ಮುನ್ನ...

**2012ರಿಂದ 2025ರವರೆಗೆ ಬೇರೆ ಬೇರೆ ವರ್ಷಗಳಲ್ಲಿ ಹೆಚ್ಚಿನ ಲಾಭ ತಂದುಕೊಟ್ಟ ಹೂಡಿಕೆ ಒಂದೇ ಆಗಿಲ್ಲ... (ಪಟ್ಟಿ–1)**

| 2012 | 2013 | 2014 | 2015 | 2016 | 2017 | 2018 | 2019 | 2020 | 2021 | 2022 | 2023 | 2024 | 2025 |
|---|---|---|---|---|---|---|---|---|---|---|---|---|---|
| ನಿಫ್ಟಿ 29% | ನಿಫ್ಟಿ 8% | ನಿಫ್ಟಿ 33% | ಸಾಲಪತ್ರ 8% | ಬೆಳ್ಳಿ 18% | ನಿಫ್ಟಿ 30% | ಚಿನ್ನ 8% | ಚಿನ್ನ 21% | ಬೆಳ್ಳಿ 51% | ನಿಫ್ಟಿ 26% | ಬೆಳ್ಳಿ 14% | ನಿಫ್ಟಿ 21% | ಚಿನ್ನ 31% | ಬೆಳ್ಳಿ 160% |
| ಬೆಳ್ಳಿ 13% | ಸಾಲಪತ್ರ 1% | ಸಾಲಪತ್ರ 16% | ನಿಫ್ಟಿ (-3%) | ಸಾಲಪತ್ರ 14% | ಚಿನ್ನ 7% | ಸಾಲಪತ್ರ 7% | ಬೆಳ್ಳಿ 18% | ಚಿನ್ನ 28% | ಸಾಲಪತ್ರ 3% | ಚಿನ್ನ 11% | ಚಿನ್ನ 14% | ಬೆಳ್ಳಿ 25% | ಚಿನ್ನ 73% |
| ಸಾಲಪತ್ರ 12% | ಚಿನ್ನ (-19%) | ಚಿನ್ನ 1% | ಚಿನ್ನ (-6%) | ಚಿನ್ನ 11% | ಸಾಲಪತ್ರ 2% | ನಿಫ್ಟಿ 5% | ನಿಫ್ಟಿ 13% | ನಿಫ್ಟಿ 16% | ಚಿನ್ನ (-2%) | ನಿಫ್ಟಿ 6% | ಸಾಲಪತ್ರ 8% | ನಿಫ್ಟಿ 10% | ನಿಫ್ಟಿ 12% |
| ಚಿನ್ನ 11% | ಬೆಳ್ಳಿ (-28%) | ಬೆಳ್ಳಿ (-18%) | ಬೆಳ್ಳಿ (-8%) | ನಿಫ್ಟಿ 4% | ಬೆಳ್ಳಿ (0%) | ಬೆಳ್ಳಿ (0%) | ಸಾಲಪತ್ರ 10% | ಸಾಲಪತ್ರ 12% | ಬೆಳ್ಳಿ (-10%) | ಸಾಲಪತ್ರ 2% | ಬೆಳ್ಳಿ (-0%) | ಸಾಲಪತ್ರ 10% | ಸಾಲಪತ್ರ 7% |

* ಮಾಹಿತಿ: ಎನ್‌ಎಸ್‌ಇ ಸೂಚ್ಯಂಕಗಳು, ಬ್ಲೂಮ್‌ಬರ್ಗ್, ಯುಟಿಐ ರಿಸರ್ಚ್

● ನಿಫ್ಟಿ ಅಂದರೆ ನಿಫ್ಟಿ–50 ಟಿಆರ್‌ಐ ● ಸಾಲಪತ್ರ ಅಂದರೆ ನಿಫ್ಟಿ ಕಾಂಪೊಸಿಟ್ ಜಿ–ಸೆಕ್ ಸೂಚ್ಯಂಕ ● ಚಿನ್ನ ಹಾಗೂ ಬೆಳ್ಳಿಯ ಬೆಲೆಯನ್ನು ರೂಪಾಯಿ ಲೆಕ್ಕದಲ್ಲಿ ಪ್ರತಿ ಔನ್ಸ್‌ಗೆ ಎಷ್ಟು ಎಂಬ ಆಧಾರದಲ್ಲಿ ಪರಿಗಣಿಸಲಾಗಿದೆ

ಹೂಡಿಕೆದಾರರು ತಮ್ಮದೇ ಆದ ಒಂದು ಪೋರ್ಟ್‌ಫೋಲಿಯೊ ಕಟ್ಟುವುದು ಅಂದರೆ ಸುಲಭದ ಕೆಲಸ ಅಲ್ಲ. ಅದಕ್ಕೆ ಅಧ್ಯಯನ ಬೇಕಾಗುತ್ತದೆ, ಶಿಸ್ತು ಬೇಕಾಗುತ್ತದೆ. ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಹೂಡಿಕೆಗಳು ಉತ್ತಮ ಗಳಿಕೆ ತಂದುಕೊಡುತ್ತವೆ ಎಂಬ ಅರಿವು ಬೇಕಾಗುತ್ತದೆ

**2012ರ ನಂತರದಲ್ಲಿ ಸ್ಮಾಲ್, ಮಿಡ್ ಮತ್ತು ಲಾರ್ಜ್‌ಕ್ಯಾಪ್ ಸೂಚ್ಯಂಕಗಳು ನೀಡಿರುವ ಲಾಭ ಹೀಗಿದೆ (ಪಟ್ಟಿ–2)**

| 2012 | 2013 | 2014 | 2015 | 2016 | 2017 | 2018 | 2019 | 2020 | 2021 | 2022 | 2023 | 2024 | 2025 |
|---|---|---|---|---|---|---|---|---|---|---|---|---|---|
| ಮಿಡ್‌ಕ್ಯಾಪ್ 47% | ಲಾರ್ಜ್‌ಕ್ಯಾಪ್ 8% | ಸ್ಮಾಲ್‌ಕ್ಯಾಪ್ 72% | ಸ್ಮಾಲ್‌ಕ್ಯಾಪ್ 11% | ಮಿಡ್‌ಕ್ಯಾಪ್ 7% | ಸ್ಮಾಲ್‌ಕ್ಯಾಪ್ 58% | ಲಾರ್ಜ್‌ಕ್ಯಾಪ್ 3% | ಲಾರ್ಜ್‌ಕ್ಯಾಪ್ 12% | ಸ್ಮಾಲ್‌ಕ್ಯಾಪ್ 26% | ಸ್ಮಾಲ್‌ಕ್ಯಾಪ್ 63% | ಲಾರ್ಜ್‌ಕ್ಯಾಪ್ 5% | ಸ್ಮಾಲ್‌ಕ್ಯಾಪ್ 49% | ಸ್ಮಾಲ್‌ಕ್ಯಾಪ್ 27% | ಲಾರ್ಜ್‌ಕ್ಯಾಪ್ 10% |
| ಸ್ಮಾಲ್‌ಕ್ಯಾಪ್ 40% | ಮಿಡ್‌ಕ್ಯಾಪ್ (-1%) | ಮಿಡ್‌ಕ್ಯಾಪ್ 63% | ಮಿಡ್‌ಕ್ಯಾಪ್ 10% | ಲಾರ್ಜ್‌ಕ್ಯಾಪ್ 5% | ಮಿಡ್‌ಕ್ಯಾಪ್ 56% | ಮಿಡ್‌ಕ್ಯಾಪ್ (-13%) | ಮಿಡ್‌ಕ್ಯಾಪ್ 1% | ಮಿಡ್‌ಕ್ಯಾಪ್ 26% | ಮಿಡ್‌ಕ್ಯಾಪ್ 48% | ಮಿಡ್‌ಕ್ಯಾಪ್ 4% | ಮಿಡ್‌ಕ್ಯಾಪ್ 45% | ಮಿಡ್‌ಕ್ಯಾಪ್ 24% | ಮಿಡ್‌ಕ್ಯಾಪ್ 6% |
| ಲಾರ್ಜ್‌ಕ್ಯಾಪ್ 33% | ಸ್ಮಾಲ್‌ಕ್ಯಾಪ್ (-6%) | ಲಾರ್ಜ್‌ಕ್ಯಾಪ್ 35% | ಲಾರ್ಜ್‌ಕ್ಯಾಪ್ (-1%) | ಸ್ಮಾಲ್‌ಕ್ಯಾಪ್ 1% | ಲಾರ್ಜ್‌ಕ್ಯಾಪ್ 33% | ಸ್ಮಾಲ್‌ಕ್ಯಾಪ್ (-26%) | ಸ್ಮಾಲ್‌ಕ್ಯಾಪ್ (-7%) | ಲಾರ್ಜ್‌ಕ್ಯಾಪ್ 16% | ಲಾರ್ಜ್‌ಕ್ಯಾಪ್ 26% | ಸ್ಮಾಲ್‌ಕ್ಯಾಪ್ (-3%) | ಲಾರ್ಜ್‌ಕ್ಯಾಪ್ 21% | ಲಾರ್ಜ್‌ಕ್ಯಾಪ್ 13% | ಸ್ಮಾಲ್‌ಕ್ಯಾಪ್ (-5%) |

ಮಾಹಿತಿ: ಎನ್‌ಎಸ್‌ಇ ಸೂಚ್ಯಂಕಗಳು, ಬ್ಲೂಮ್‌ಬರ್ಗ್, ಯುಟಿಐ ರಿಸರ್ಚ್.

ಲಾರ್ಜ್‌ಕ್ಯಾಪ್ ಅಂದರೆ ನಿಫ್ಟಿ 100 ಟಿಆರ್‌ಐ ಸೂಚ್ಯಂಕ, ಮಿಡ್‌ಕ್ಯಾಪ್ ಅಂದರೆ ನಿಫ್ಟಿ ಮಿಡ್‌ಕ್ಯಾಪ್ 150 ಟಿಆರ್‌ಐ ಸೂಚ್ಯಂಕ, ಸ್ಮಾಲ್‌ಕ್ಯಾಪ್ ಅಂದರೆ ನಿಫ್ಟಿ ಸ್ಮಾಲ್ ಕ್ಯಾಪ್ 250 ಟಿಆರ್‌ಐ ಸೂಚ್ಯಂಕ.

● ಶರವಣ್ ಗೋಯಲ್

ಸಂಪತ್ತು ಸೃಷ್ಟಿಸಬೇಕು ಎಂದಾದರೆ ಕಳೆದ ವರ್ಷ ಅತ್ಯುತ್ತಮ ಪ್ರಮಾಣದಲ್ಲಿ ಲಾಭ ತಂದುಕೊಟ್ಟ ಮ್ಯೂಚುವಲ್ ಫಂಡ್‌ನಲ್ಲಿ ಹಣ ಹೂಡಿಕೆ ಮಾಡುವುದರ ಆಚೆಗೂ ನೋಟ ಹರಿಸಬೇಕು. ಪೋರ್ಟ್‌ಫೋಲಿಯೊ ಸುಸ್ಥಿರವಾಗಿ ಇರಬೇಕು ಎಂದಾದರೆ ಫಂಡ್‌ನ ಮೂಲಭೂತ ಅಂಶಗಳನ್ನು ಸೂಕ್ಷ್ಮವಾಗಿ ಅವಲೋಕಿಸಬೇಕು. ಹಿಂದಿನ ವರ್ಷದಲ್ಲಿ ಬಹಳ ಉತ್ತಮವಾಗಿ ಲಾಭ ತಂದುಕೊಟ್ಟ ಫಂಡ್ ಆಯ್ಕೆ ಮಾಡುವುದು ಅಂದರೆ 'ಅಲ್ಪಾವಧಿಯ ವೇಗದ ಓಟವೇ ಯಶಸ್ಸು; ದೀರ್ಘಾವಧಿಯ ಮ್ಯಾರಾಥಾನ್ ಓಟ ಯಶಸ್ಸು ಅಲ್ಲ' ಎಂದಂತೆ ಆಗುತ್ತದೆ.

ಯೋಚಿಸಿ ಪೋರ್ಟ್‌ಫೋಲಿಯೊ ಕಟ್ಟಿದಾಗ, ಹಿಂದಿನ ವರ್ಷ ದೊರೆತ ಲಾಭ ಮಾತ್ರವೇ ಅಲ್ಲದೆ ಫಂಡ್‌ನ ಮೂಲಭೂತ ಅಂಶಗಳ ಮೇಲೆ, ಹೂಡಿಕೆಯ ಶೈಲಿಯ ಮೇಲೆ, ಯಾವೆಲ್ಲ ಕಡೆಗಳಲ್ಲಿ ಆ ಫಂಡ್ ಹಣ ತೊಡಗಿಸುತ್ತದೆ ಎಂಬುದರ ಮೇಲೆ ಗಮನ ಹರಿಸಿ, ಯೋಚಿಸಿ ಪೋರ್ಟ್‌ಫೋಲಿಯೊ ಕಟ್ಟಿದರೆ ಅದು ನಿಜವಾದ ಸಂಪತ್ತು ಸೃಷ್ಟಿಗೆ ನೆರವಾಗುತ್ತದೆ. ಪ್ರತಿ ವ್ಯಕ್ತಿಯ ಹೂಡಿಕೆ ಪಯಣವೂ ಭಿನ್ನ. ಎಷ್ಟು ಕಾಲ ಆ ವ್ಯಕ್ತಿ ಹೂಡಿಕೆ ಮಾಡುತ್ತಿರುತ್ತಾನೆ, ಯಾವ ಬಗೆಯಲ್ಲಿ ಹೂಡಿಕೆ ಮಾಡುತ್ತಾನೆ, ಆತನ ಹಣಕಾಸಿನ ಗುರಿಗಳು ಏನು, ಆತ ಎಷ್ಟರಮಟ್ಟಿಗೆ ರಿಸ್ಕ್ ತೆಗೆದುಕೊಳ್ಳಬಲ್ಲ ಎಂಬುದನ್ನು ಆಧರಿಸಿ ಹೂಡಿಕೆಯ ಆ ಪಯಣ ಭಿನ್ನವಾಗಿರುತ್ತದೆ.

ಹೀಗಾಗಿ ಮಾರುಕಟ್ಟೆಯಲ್ಲಿ ಹೆಚ್ಚು ಆದ್ಯತೆ ಪಡೆದಿರುವ ಅಥವಾ ಹೆಚ್ಚು ಚಾಲ್ತಿಯಲ್ಲಿ ಇರುವ ಹೂಡಿಕೆ ಉತ್ಪನ್ನದ ಮೇಲೆ ಮಾತ್ರ ಹಣ ತೊಡಗಿಸುವುದರಿಂದ, ಹೂಡಿಕೆಯ ಮೂಲ ಉದ್ದೇಶವನ್ನು ಪೂರ್ಣವಾಗಿ ಸಾಧಿಸಲು ಆಗದೆ ಇರಬಹುದು. ದೀರ್ಘಾವಧಿಯಲ್ಲಿ ಸಂಪತ್ತು ಸೃಷ್ಟಿ ಸಾಧ್ಯವಾಗಬೇಕು ಎಂದಾದರೆ ಹೂಡಿಕೆಯ ಪೋರ್ಟ್‌ಫೋಲಿಯೊ ಬಹಳ ವೈವಿಧ್ಯಮಯವಾಗಿ ಇರಬೇಕು. ಬೇರೆ ಬೇರೆ ಹೂಡಿಕೆ ಉತ್ಪನ್ನಗಳಲ್ಲಿ ಹಣವನ್ನು ತೊಡಗಿಸುವ ಪೋರ್ಟ್‌ಫೋಲಿಯೊ ಇದ್ದಾಗ ಬಂಡವಾಳ ಮಾರುಕಟ್ಟೆಯಲ್ಲಿ ಎದುರಾಗುವ ಯಾವುದೇ ಅನಿರೀಕ್ಷಿತ ಸಂದರ್ಭಗಳನ್ನು ಮೀರಿ ಮುಂದೆ ಸಾಗಲು ಆಗುತ್ತದೆ. ಅಲ್ಲದೆ, ಮಾರುಕಟ್ಟೆಯಲ್ಲಿನ ರಿಸ್ಕ್ ಹಾಗೂ ಲಾಭದ ಸಾಧ್ಯತೆಯ ನಡುವೆ ಉತ್ತಮ ಸಮತೋಲನವೊಂದನ್ನು ಸಾಧಿಸಲು ಅನುಕೂಲ ಆಗುತ್ತದೆ.

ಕಡಿಮೆ ರಿಸ್ಕ್ ಇರುವ ಹೂಡಿಕೆ ಉತ್ಪನ್ನಗಳಲ್ಲಿ ಹಣ ತೊಡಗಿಸುವುದರಿಂದ ಗಳಿಕೆ ಪ್ರಮಾಣ ಕೂಡ ಕಡಿಮೆ ಆಗುತ್ತದೆ. ಅದೇ ರೀತಿಯಲ್ಲಿ ಹೆಚ್ಚಿನ ರಿಸ್ಕ್ ಇರುವ ಹೂಡಿಕೆ ಉತ್ಪನ್ನಗಳಲ್ಲಿ ತೊಡಗಿಸುವುದರಿಂದ ಸಾಮಾನ್ಯ ಸಂದರ್ಭಗಳಲ್ಲಿ, ಸಿಗಬಹುದಾದ ಲಾಭವೂ ಜಾಸ್ತಿ ಇರುತ್ತದೆ.

ಅಲ್ಪಾವಧಿಯಲ್ಲಿ ಈಕ್ವಿಟಿ ಮೇಲಿನ ಹೂಡಿಕೆಗಳಲ್ಲಿ ಏರಿಳಿತಗಳು ವಿಪರೀತ ಆಗಿರಬಹುದು. ಆದರೆ ಅವು ಹೂಡಿಕೆದಾರರಿಗೆ ದೀರ್ಘಾವಧಿಯಲ್ಲಿ ಹೆಚ್ಚು ಲಾಭ ತಂದುಕೊಡುವ ಸಾಧ್ಯತೆಯನ್ನು ಹೊತ್ತಿರುತ್ತವೆ. ಇದಕ್ಕೆ ತದ್ವಿರುದ್ಧ ಎಂಬಂತೆ, ಸಾಲಪತ್ರ ಆಧಾರಿತ ಹೂಡಿಕೆಗಳು ತೊಡಗಿಸಿದ ಬಂಡವಾಳವನ್ನು ಕಾಪಾಡಿಕೊಳ್ಳುವ ಹಾಗೂ ನಿಶ್ಚಿತ ಪ್ರಮಾಣದಲ್ಲಿ ವರಮಾನ ತಂದುಕೊಡುವ ಗುರಿಯನ್ನು ಹೊಂದಿರುತ್ತವೆ. ಹೀಗಾಗಿ ಹೂಡಿಕೆದಾರರು ಹೂಡಿಕೆ ಮೊತ್ತವನ್ನು ರಿಸ್ಕ್ ತೆಗೆದುಕೊಳ್ಳುವ ತಮ್ಮ ಸಾಮರ್ಥ್ಯ ಹಾಗೂ ಲಾಭದ ನಿರೀಕ್ಷೆಗೆ ಅನುಗುಣವಾಗಿ ಭಿನ್ನ ಉತ್ಪನ್ನಗಳಲ್ಲಿ ವಿನಿಯೋಗಿಸಬೇಕು.

ಒಂದೊಂದು ವರ್ಷದಲ್ಲಿ ಒಂದೊಂದು ಹೂಡಿಕೆಯು ಹೆಚ್ಚಿನ ಲಾಭವನ್ನು ತಂದುಕೊಟ್ಟಿದೆ ಎಂಬುದನ್ನು ಪಟ್ಟಿ–1 ಹೇಳುತ್ತಿದೆ. ಒಂದೇ ಕಡೆಯಲ್ಲಿ ಹೂಡಿಕೆ ಮಾಡುವುದರಿಂದ ಸಿಗಬಹುದಾದ ಲಾಭ ಕಡಿಮೆ ಆಗಬಹುದು ಎಂಬುದನ್ನೂ ಇದು ಹೇಳುತ್ತಿದೆ.

ತಮ್ಮ ಪೋರ್ಟ್‌ಫೋಲಿಯೊ ಈಚಿನ ದಿನಗಳಲ್ಲಿ ನೀಡಿದ ಲಾಭದ ವಿಚಾರವಾಗಿ ಹೂಡಿಕೆದಾರರು ಅತಿಯಾದ ವ್ಯಾಮೋಹ ಬೆಳೆಸಿಕೊಳ್ಳುವುದು ಅಸಹಜವೇನೂ ಅಲ್ಲ. ಹಿಂದಿನ ದಿನಗಳಲ್ಲಿ ಒಳ್ಳೆಯ ಅಥವಾ ಕೆಟ್ಟ ರೀತಿಯ ಪ್ರತಿಫಲ ನೀಡಿರುವ ತಮ್ಮ ಹೂಡಿಕೆಗಳ ಬಗ್ಗೆ ಭಾವನಾತ್ಮಕವಾದ ನಂಟನ್ನು ಬಹುತೇಕ ಹೂಡಿಕೆದಾರರು ಬೆಳೆಸಿಕೊಳ್ಳುವುದಿದೆ. ಪೋರ್ಟ್‌ಫೋಲಿಯೊದಲ್ಲಿನ ಪ್ರತಿ ಫಂಡ್ ಕೂಡ ಏರಿಳಿತಗಳ ಹಂತವನ್ನು ದಾಟಲೇಬೇಕು ಎಂಬುದನ್ನು ನಾವು ಮರೆಯುತ್ತೇವೆ. ಅಲ್ಲದೆ, ನಮ್ಮ ಪೋರ್ಟ್‌ಫೋಲಿಯೊದಲ್ಲಿ ಮತ್ತೆ ಮತ್ತೆ ಬದಲಾವಣೆ ಮಾಡಲು ಮುಂದಾಗುತ್ತೇವೆ. ಅದರಿಂದಾಗಿ ದೀರ್ಘಾವಧಿಯಲ್ಲಿ ಸಿಗಬಹುದಾದ ಲಾಭದ ಪ್ರಮಾಣ ತಗ್ಗಬಹುದು ಕೂಡ.

ಉದಾಹರಣೆಗೆ ಹೇಳುವುದಾದರೆ, ಬಂಡವಾಳ ಮಾರುಕಟ್ಟೆಗಳಲ್ಲಿ ಬೆಳವಣಿಗೆಯು ಹೆಚ್ಚಾಗಿ ಇರುವ ಅವಧಿಯಲ್ಲಿ ಮಿಡ್‌ಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್ ಫಂಡ್‌ಗಳು ಬಹಳ ಅಸಾಧಾರಣ ಪ್ರಮಾಣದಲ್ಲಿ ಲಾಭ ತಂದುಕೊಡುತ್ತವೆ. ಆದರೆ ಮಾರುಕಟ್ಟೆಗಳಲ್ಲಿ ಅನಿಶ್ಚಿತತೆ ಇದ್ದಾಗ ಅಥವಾ 'ಕರಡಿ ಕುಣಿತ' ಜೋರಾಗಿ ಇದ್ದಾಗ ಲಾರ್ಜ್‌ಕ್ಯಾಪ್ ಫಂಡ್‌ಗಳಲ್ಲಿ ಹೂಡಿಕೆಯು ಹೆಚ್ಚು ಉತ್ತಮವಾಗ ಬಹುದು. ಹೀಗಾಗಿ, ಹೆಚ್ಚು ಸ್ಥಿರ ಪ್ರಮಾಣದಲ್ಲಿ ಮತ್ತು ಉತ್ತಮ ಮಟ್ಟದಲ್ಲಿ ಗಳಿಕೆ ಪಡೆಯಬೇಕು ಎಂದಾದರೆ ಎಲ್ಲ ವರ್ಗಗಳ (ಅಂದರೆ ಸ್ಮಾಲ್‌ಕ್ಯಾಪ್, ಮಿಡ್‌ಕ್ಯಾಪ್ ಮತ್ತು ಲಾರ್ಜ್‌ಕ್ಯಾಪ್) ಫಂಡ್‌ಗಳಲ್ಲಿ ಹಣ ತೊಡಗಿಸುವುದು ಮತ್ತು ಹೂಡಿಕೆಯನ್ನು ಮರುಹೊಂದಾಣಿಕೆ ಮಾಡುತ್ತ ಇರುವುದು ಮಹತ್ವದ ನಡೆಯಾಗುತ್ತದೆ.

ಭಿನ್ನ ಮಾರುಕಟ್ಟೆ ಬಂಡವಾಳಕ್ಕೆ ಸೇರಿದ ಫಂಡ್‌ಗಳು ಬೇರೆ ಬೇರೆ ಸಂದರ್ಭಗಳಲ್ಲಿ ಹೇಗೆ ಲಾಭ ತಂದುಕೊಟ್ಟಿವೆ ಎಂಬುದನ್ನು ಪಟ್ಟಿ–2 ವಿವರಿಸುತ್ತದೆ.

**ವಾಸ್ತವಕ್ಕೆ ಹತ್ತಿರವಲ್ಲದ ನಿರೀಕ್ಷೆ:** ಈಕ್ವಿಟಿ ಆಧಾರಿತ ಫಂಡ್‌ಗಳಲ್ಲಿ ಹೂಡಿಕೆ ಮಾಡಿದಾಗ, ಮಾರುಕಟ್ಟೆಯ ಗತಿ ಹೇಗೇ ಇದ್ದರೂ ತಾವು ಹೂಡಿಕೆ ಮಾಡಿದ ಫಂಡ್ ಮಾರುಕಟ್ಟೆಯ ಸೂಚ್ಯಂಕಗಳಿಗಿಂತ ಹೆಚ್ಚು ಲಾಭ ತಂದುಕೊಡುತ್ತದೆ ಎಂಬ ನಿರೀಕ್ಷೆಯಲ್ಲಿ ಹೂಡಿಕೆದಾರರು ಇರುತ್ತಾರೆ. ಆದರೆ ಭಿನ್ನ ಹೂಡಿಕೆ ಶೈಲಿಗಳು ಭಿನ್ನವಾದ ವೈಶಿಷ್ಟ್ಯಗಳನ್ನು ಹೊಂದಿರುತ್ತವೆ, ಆ ಶೈಲಿಯ ಹೂಡಿಕೆಗಳು ತಂದುಕೊಡುವ ಲಾಭದಲ್ಲಿಯೂ ಏರಿಳಿತಗಳು ಇರುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಇದನ್ನು ಸರಿಯಾಗಿ ಅರ್ಥ ಮಾಡಿಕೊಂಡು, ಭಿನ್ನ ಬಗೆಯ ಹೂಡಿಕೆ ಶೈಲಿಗಳಲ್ಲಿ ಸರಿಯಾಗಿ ಹಣ ಹಂಚಿಕೆ ಮಾಡಿದಾಗ ಮಾರುಕಟ್ಟೆಯ ಭಿನ್ನ ಹಂತಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಹೂಡಿಕೆದಾರರಿಗೆ ಸಾಧ್ಯವಾಗುತ್ತದೆ. ಪೋರ್ಟ್‌ಫೋಲಿಯೊದಲ್ಲಿನ ರಿಸ್ಕ್‌ಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ಹಾಗೂ ಒಟ್ಟಾರೆ ಗಳಿಕೆಯನ್ನು ಹೆಚ್ಚಿಸಿಕೊಳ್ಳಲು ಕೂಡ ಅವರಿಗೆ ಆಗುತ್ತದೆ.

ಹೂಡಿಕೆಯಲ್ಲಿ ಎಲ್ಲರಿಗೂ ಸರಿಹೊಂದುವ ಸೂತ್ರವೊಂದು ಇಲ್ಲ. ಹೀಗಾಗಿ, ನಿರ್ದಿಷ್ಟ ಫಂಡ್‌ಗಳಿಗೆ ಹಣವನ್ನು ತೊಡಗಿಸುವ ಮೊದಲು ಹೂಡಿಕೆದಾರರು ಯೋಜನೆಯನ್ನು ಸರಿಯಾಗಿ ಸಿದ್ಧಪಡಿಸಿಕೊಳ್ಳಬೇಕು. ತಮ್ಮ ಪೋರ್ಟ್‌ಫೋಲಿಯೊದಲ್ಲಿ ಒಂದೇ ಅಂಶದ, ಒಂದೇ ಬಗೆಯ ಕಾರ್ಯತಂತ್ರದ ಫಂಡ್‌ಗಳು ಹೆಚ್ಚಿಲ್ಲ ಎಂಬುದನ್ನು ಹೂಡಿಕೆದಾರರು ಖಾತರಿಪಡಿಸಿಕೊಳ್ಳಬೇಕು. ಬೇರೆ ಬೇರೆ ಕಾರ್ಯತಂತ್ರವನ್ನು ಅನುಸರಿಸುವ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಪೋರ್ಟ್‌ಫೋಲಿಯೊ ಹೊಂದುವ ಮೂಲಕ ಹೂಡಿಕೆದಾರರು ಹೆಚ್ಚಿನ ಗಳಿಕೆ ಕಾಣಬಹುದು.

**ಕೊನೆಯ ಮಾತು:** ರಿಸ್ಕ್ ತೆಗೆದುಕೊಳ್ಳುವ ಸಾಮರ್ಥ್ಯ ಹಾಗೂ ಹಣಕಾಸಿನ ಗುರಿಗಳು ಸರಿಹೊಂದುವಂತೆ ಮಾಡಬೇಕಾದರೆ ಹೂಡಿಕೆದಾರರು ಸರಿಯಾದ ಮ್ಯೂಚುವಲ್ ಫಂಡ್‌ಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ದೀರ್ಘಾವಧಿಗೆ ಹೂಡಿಕೆ ಮಾಡುವಾಗ ನಿರಂತರವಾಗಿ ಮೇಲ್ವಿಚಾರಣೆ ನಡೆಸುತ್ತಿರಬೇಕು ಹಾಗೂ ಹೂಡಿಕೆಯಲ್ಲಿ ಮರುಹೊಂದಾಣಿಕೆಗಳ ಅಗತ್ಯವೂ ಇರುತ್ತದೆ.

ಲೇಖಕ ಯುಟಿಐ ಎಎಂಸಿ ಕಂಪನಿಯ ನಿಧಿ ನಿರ್ವಾಹಕ

ಬ್ರೋಕರೇಜ್ ಮಾತು

## ವೆಂಟಿವ್ ಹಾಸ್ಪಿಟಾಲಿಟಿ ಲಿಮಿಟೆಡ್

ಆತಿಥ್ಯ ವಲಯದ ವೆಂಟಿವ್ ಹಾಸ್ಪಿಟಾಲಿಟಿ ಲಿಮಿಟೆಡ್‌ನ ಪ್ರತಿ ಷೇರಿನ ಬೆಲೆ ₹1 ಸಾವಿರ ಆಗಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಕಂಪನಿಯು ಪುಣೆ, ಬೆಂಗಳೂರು ಮತ್ತು ನವಿ ಮುಂಬೈನಂತಹ ನಗರಗಳಲ್ಲಿ ತನ್ನ ವಹಿವಾಟನ್ನು ವಿಸ್ತರಣೆ ಮಾಡಿಕೊಳ್ಳುತ್ತಿದೆ. ಆತಿಥ್ಯ ವಲಯದ ಸೊಹೊ ಹೌಸ್ ಕಂಪನಿ ಜೊತೆ ಪಾಲುದಾರಿಕೆ ಮಾಡಿಕೊಂಡಿದೆ. ಇದು ಕಂಪನಿಯ ವರಮಾನ ಹೆಚ್ಚಿಸುತ್ತಿದೆ.

ಕಂಪನಿಯ ಆತಿಥ್ಯ ವಿಭಾಗದಲ್ಲಿ, ಅಂತರರಾಷ್ಟ್ರೀಯ ಕಾರ್ಯಾಚರಣೆಗಳಿಂದ ಬರುವ ವರಮಾನದ ಪಾಲು ಶೇ 54ರಷ್ಟು ಇದೆ. 2024–25ರಿಂದ 2027–28ರವರೆಗೆ ಕಂಪನಿಯ ವರಮಾನದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರವು (ಸಿಎಜಿಆರ್) ಶೇ 21ರಷ್ಟು ಮತ್ತು ತೆರಿಗೆ, ಬಡ್ಡಿ, ಸಾಲ ತೀರುವಳಿ ಪೂರ್ವದ ವರಮಾನ (ಇಬಿಐಟಿಡಿಎ) ಶೇ 27ರಷ್ಟು ಹೆಚ್ಚಳವಾಗುವ ನಿರೀಕ್ಷೆಯಿದೆ.

ಬೇರೆ ಬೇರೆ ನಗರಗಳಲ್ಲಿ ವಹಿವಾಟಿನ ತ್ವರಿತ ವಿಸ್ತರಣೆ, ಸೊಹೊ ಹೌಸ್ ಕಂಪನಿ ಜೊತೆ ಪಾಲುದಾರಿಕೆ ಮಾಡಿಕೊಳ್ಳುವ ಮೂಲಕ ಆತಿಥ್ಯ ಸೇವೆಯನ್ನು ಕಂಪನಿಯು ವೈವಿಧ್ಯಗೊಳಿಸಿದೆ. ಬೇರೆ ದೇಶಗಳಲ್ಲಿ ಸದೃಢ ವ್ಯವಹಾರ ಹೊಂದಿದೆ. ಕಾರ್ಯಾಚರಣೆ ವೆಚ್ಚದಲ್ಲಿ ಹತೋಟಿ, ಬಡ್ಡಿಯ ಹೊರೆ ಕಡಿಮೆ ಇರುವುದು ಮತ್ತು ತೆರಿಗೆ ಇಳಿಕೆಯಿಂದ ಲಾಭ ದುಪ್ಪಟ್ಟು ಆಗುವ ನಿರೀಕ್ಷೆ ಹೊಂದಲಾಗಿದೆ ಎಂದು ಮೋತಿಲಾಲ್ ಓಸ್ವಾಲ್ ತಿಳಿಸಿದೆ. ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಬೆಲೆ ₹778 ಆಗಿತ್ತು.

## ಸಿಟಿ ಯೂನಿಯನ್ ಬ್ಯಾಂಕ್

ಸಿಟಿ ಯೂನಿಯನ್ ಬ್ಯಾಂಕ್‌ನ ಷೇರು ಮೌಲ್ಯವು ₹353ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಕಂಪನಿ ಆನಂದ ರಾಠಿ ಹೇಳಿದೆ. ಬ್ಯಾಂಕ್ ತನ್ನ ಡಿಸೆಂಬರ್ ತ್ರೈಮಾಸಿಕದ ಫಲಿತಾಂಶ ಪ್ರಕಟಿಸಿದ್ದು, ಬ್ಯಾಂಕ್‌ನ ಆಸ್ತಿಗಳ ಸ್ಥಿತಿಯು ಆರೋಗ್ಯಕರವಾಗಿ ಇದೆ.

ಬ್ಯಾಂಕ್‌ನ ಸಾಲ ನೀಡಿಕೆ ಪ್ರಮಾಣದ ಹೆಚ್ಚಳವು ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ 20.8ಕ್ಕೆ ತಲುಪಿದೆ. ಎಂಎಸ್‌ಎಂಇ ವಲಯಕ್ಕೆ ನೀಡಿರುವ ಸಾಲ ಮತ್ತು ಚಿನ್ನದ ಸಾಲದಲ್ಲಿ ಏರಿಕೆ ಆಗಿದೆ. ಇದು ಇತರ ಬ್ಯಾಂಕ್‌ಗಳಿಗಿಂತ ಈ ಬ್ಯಾಂಕ್ ಹೆಚ್ಚಿನ ಪ್ರಮಾಣದಲ್ಲಿ ಬೆಳವಣಿಗೆ ಸಾಧಿಸಬಲ್ಲದು ಎಂಬುದನ್ನು ಹೇಳುತ್ತಿದೆ ಎಂದು ಆನಂದ ರಾಠಿ ವಿವರಿಸಿದೆ.

'ಬ್ಯಾಂಕ್‌ನ ವರಮಾನದಲ್ಲಿ ಸ್ಥಿರತೆ ಇರಲಿದೆ ಎಂಬುದು ನಮ್ಮ ನಿರೀಕ್ಷೆ' ಎಂದು ಕೂಡ ಅದು ಹೇಳಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಸಿಟಿ ಯೂನಿಯನ್ ಬ್ಯಾಂಕ್‌ನ ಷೇರು ಮೌಲ್ಯವು ₹292 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

---

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

## ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಇಂಗ್ಲಿಷ್

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

## ಪಿಯುಸಿ ಪರೀಕ್ಷೆ ದಿಕ್ಸೂಚಿ — Biology

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಶಂಕರನಾರಾಯಣ್‌ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

### ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

**(42) Write the correct form of the word given in brackets :**

Cricket is a ............... ( *glory* ) game.

*Ans.* : glorious

**(43) Change into comparative degree :**

Vande Bharat Express is the fastest train in India.

*Ans.* : Vande Bharat Express is faster than any other train in India.

**(44) Change into passive voice :**

Scientists launched a satellite.

*Ans.* : A satellite was launched by Scientists

**45) The following paragraph has *two* errors. Edit the paragraph and rewrite it in the answer-book :**

**(*) Dr. Sarabhai realise the importance of industries in India. He set up Sarabhai chemicals, a pharmaceutical industrit at Ahmedabad.**

**a) Spelling mistake to be corrected**

**b) Verbal mistake to be corrected.**

*Ans.* : a) industry

b) realised

**46) Read the following conversation and change the underlined sentence into reported speech :**

*Kusuma* : Hello Nethra, where are you going ?

*Nethra* : Hi, *I am moving to my native place today.*

Nethra told Kusuma .......................................... .

*Ans.* :. Nethra told Kusuma that she was moving to her native place that day

**XI. Study the picture given below. Write a description or an account of what the picture suggests to you in a paragraph:**




**47) The above pictures represents over traffic. The number of vehicles increased**

The increase in vehicles is a major issue in cities like Bengaluru. The rapid urbanization in India has led to a significant increase in the number of motor vehicles. As the number of vehicles increases, so does the congestion, and vehicles are becoming the main source of air pollution in urban India. It is very difficult or horrible to travel. Where Pot holes in the road, Authorities should repair the Pot holes now & then. Over speeding should be checked to avoid accidents. If the authorities built the fly overs, it will help the riders and travellers.

All people should aware of all these anti should Co-operate with the authorities

**XII. Read the following passage and answer the questions that follow:**

**48)** There seems to be a general opinion in this country that Sardar Patel was slightly of a harsh and rough temperament. Men call him the 'Iron man of India.' He was, no doubt, an Iron man in the sense that .one could rely on him for strict and efficient administration. But as a man, to those who had the good fortune of coming into close contact with him, he was kind and considerate. At times, he even became emotional, where his friends and followers were concerned. However, it goes without saying that the Sardar had the great skill for organizing affairs. He knew the way of picking people and putting them in their proper places. Once he judged a man and found him correct, he trusted him fully and got him to do anything he wanted.

**A. What lessons do you learn from the life of the Sardar Patel?**

**Ans:-** The lessons we learn from the life of Sardar Patel were:(i) The Strict and efficient administration.

(ii) The Great skill for Organizing affairs.

(iii) The way of picking people and putting them in their proper places.

(iv) Judging a man and found him correct, trust him fully and got him to do anything he wanted.

**B. What kind of a man war Sardar Patel in his private life?**

**Ans:-** Sardar Patel was kind and considerate. At times, he even became emotional, where his friends and followers were concerned in his private life.

**XII Answer the following question in about 8-10 sentences:**

**49) What reward does a scientist get from the study of science? How is it different from those of lawyers and business people in this respect?**

**Ans :** Science is an exciting adventure where major reward comes from the discovery itself. Scientist get freedom, camaraderie and independence. The honours and promotions will depend on himself more than in other occupations like layers and business people.

*(Contd…..)*

### REVISION : MODEL QUESTIONS

**22. Mention the causes and effects of Phenylketonuria.**

**Ans:-** The affected individuals lack an enzyme that catalyses the conversion of the amino acid phenylalanine is metabolised into phenyl pyruvic and other derivatives, accumulation of these chemicals in the brain results in mental retardation, these are also excreted in the urine as they are not absorbed by the kidney.

**23. List the period, brain capacity and probable food of homoerectus stage of human evolution.**

**Ans:-** Homoerectus were called Javaman, their period was 1.5 million years ago, these fossils were found in Java, their brain capacity is 900 cc, they eat meat.

**24. Describe the out breeding devices that prevent the auto-gamy.**

**Ans:-** Continued self-pollination results in inbreeding depression, flowering plants have developed out breeding devices to discourage self-pollination and to encourage cross-pollination.

1) Pollen grains are released before the stigma becomes receptive or stigma becomes receptive before pollens are released.

2) In some species the anthers and stigma are placed in different position, so that pollen cannot come in contact with stigma of the same flower.

3) Self-incompatibility, it is a genetic mechanism were pollens are prevented from fertilizing the ovule by inhibiting pollen tube germination.

4) By- production of unisexual flowers.

**25. a. What is medical termination of pregnancy? Mention the safe period for medical Termination of pregnancy.**

**Ans.** 1. It is defined as international or voluntary termination of pregnancy before full term.

2. MTP was legalised my Government of India in 1971. If India in 1971.

3. MTP is done in the following situations.

i. Failure of contra captive used during coitus or rapes.

ii. When continued pregnancy is harmful or fatal to either mother or foetus or both.

iii. It is performed during first trimester)ie) up to 12 weeks of pregnancy.

**b. Write three simple principles to prevent sexually transmitted diseases.**

Ans. i. Avoid sex with unknown partners/multiple partners.

ii. Always use condoms during coitus.

iii. Contact a qualified doctor for any doubt in early stage of infection.

**26. Write a note on selection of plants among the progency of the hybrids with desired recombination of characters.**

**Ans:-** a) It involves the selection of plants among the progency of the hybrids with desired recombination of characters.

b) The hybrid are superior to both the parents. This is called hybrid Vigour/heterosis.

c) They are self-pollinated for several generation till they reach a state of uniformity or homozygosity in order to avoid the segregation of characters in the future progency.

**27. Draw a neat labelled diagram of stirred tank bioreactor .**

**Ans:-**




**28. One of the applications of biotechnology is the production of insect resistant crop plants, Justify the statement with reference to Bt. Cotton.**

**Ans:-** Crops are made which are more tolerant to environmental stresses like cold, heat drought,salt etc.

**Bt. Cotton -**

a) Bacillus thuringensis produce crystal proteins called cry proteins which are toxic to larvae of insects like tobacco, budworm, army worm, beetles and mosquitoes.

b) Cry protein exist as inactive prototoxin and gets converted into active toxin when ingested by the insects, as the alkaline PH of the gut solubilises the crystals

c) The activated toxin binds to the surface of epithelial cells of midgut and creates pores.

d) This causes swelling and lysis of cells leading to the death of the insects.

e) The gene (cry genes) encoding this protein are isolated from the bacterium and incorporated into several crop plants like cotton, tomato, corn, rice, soyabean etc.

f) The proteins encoded by the following cry genes control the pest given against them.

i) Cry IAC and cry II Ab it controls cotton bollworms

ii) Cry IAb controls corn borer.

# ದತ್ತಪೀಠ: ಹೊಸ ಆಚರಣೆಗೆ ವಿರೋಧ

## 'ಕಲಮೆ ತಯ್ಯಬಾ' ಆಚರಣೆಯು ಕಾನೂನುಬಾಹಿರ : ವಿಎಚ್‌ಪಿ ಆಕ್ಷೇಪ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಈ ಹಿಂದೆ ಹೋಮ ನಡೆಸಲು ಅನುಮತಿ ನೀಡಿರಲಿಲ್ಲ: ಆರೋಪ
- ನಿಯಮಾನುಸಾರ ಮುಜಾವರ್‌ಗಳ ಬದಲಾವಣೆಗೆ ಆಗ್ರಹ

**ಚಿಕ್ಕಮಗಳೂರು:** 'ಗುರು ದತ್ತಾತ್ರೇಯ ಸ್ವಾಮಿ ಪೀಠದ ಗುಹೆಯಲ್ಲಿ ಹೊಸದಾಗಿ 'ಕಲಮೆ ತಯ್ಯಬಾ' ಆಚರಣೆ ನಡೆಸಲಾಗಿದೆ. ಇದಕ್ಕೆ ಹೆಚ್ಚುವರಿ ಜಿಲ್ಲಾಧಿಕಾರಿ ಅನುಮತಿ ನೀಡಿರುವುದು ಕಾನೂನುಬಾಹಿರ' ಎಂದು ವಿಶ್ವ ಹಿಂದೂ ಪರಿಷತ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಟಿ.ರಂಗನಾಥ್ ಆರೋಪಿಸಿದರು.

ಟಿ.ರಂಗನಾಥ್

'ದತ್ತಪೀಠದಲ್ಲಿ ಹಿಂದೆ ವ್ಯವಸ್ಥಾಪನಾ ಸಮಿತಿ ಇದ್ದಾಗ ಹೊಸ ಆಚರಣೆಗಳಿಗೆ ಅವಕಾಶ ನೀಡಿರಲಿಲ್ಲ. ಸಮಿತಿ ಅವಧಿ ಮುಗಿದ ಬಳಿಕ ಈಗ ಹೆಚ್ಚುವರಿ ಜಿಲ್ಲಾಧಿಕಾರಿ ಆಡಳಿತಾಧಿಕಾರಿಯಾಗಿದ್ದು, ಜ. 23ರಂದು ಹೊಸದಾಗಿ ಈ ಆಚರಣೆಗೆ ಅವಕಾಶ ಮಾಡಿ ಕೊಟ್ಟಿದ್ದಾರೆ' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ದತ್ತಗುಹೆ ಎದುರು ಹೋಮ ನಡೆಸಲು ಹಿಂದೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದಾಗ, ಪ್ರಕರಣ ಕೋರ್ಟ್‌ನಲ್ಲಿ ಇರುವ ಕಾರಣ ಅನುಮತಿ ನೀಡಲಾಗದು ಎಂದು ಉತ್ತರಿಸಿದ್ದರು. ಆದರೆ, ಈಗ ಹೊಸ ಆಚರಣೆಗೆ ಅವಕಾಶ ನೀಡಿರುವುದರಿಂದ ನಮಗೂ ಹೋಮಕ್ಕೆ ಅನುಮತಿ ನೀಡಬೇಕು. ಒಂದು ವೇಳೆ ಹೋಮ ಮಾಡಲು ಅವಕಾಶ ನೀಡದಿದ್ದಲ್ಲಿ, ಜಿಲ್ಲಾಧಿಕಾರಿ ವಿರುದ್ಧ ಅರ್ಜಿ ಸಲ್ಲಿಸಲಾಗುವುದು' ಎಂದರು.

'ವಿಚಾರಣೆ ವೇಳೆ ಆಗಿನ ಶಾಖಾದ್ರಿ ಸೈಯದ್ ಪೀರ್ ಮೊಹಮ್ಮದ್ ಶಾಖಾದ್ರಿ ಅವರು ದತ್ತಪೀಠದಲ್ಲಿ ಪೂಜೆ ಮಾಡುವವರ ಅರ್ಹತೆ ಕುರಿತು ಹೇಳಿಕೆ ನೀಡಿದ್ದರು. ಅದರಂತೆ ಮುಜಾವರ್‌ಗಳು ಅವಿವಾಹಿತರಾಗಿದ್ದು, ಅವರ ಸೇವಾವಧಿ 25 ವರ್ಷಗಳಿಗೆ ಸೀಮಿತ ಎಂದು ಉಲ್ಲೇಖಿಸಿದ್ದರು. ಆದರೆ, ಈಗಿರುವ ಮೂವರು ಮುಜಾವರ್‌ಗಳಿಗೆ ವಿವಾಹವಾಗಿದ್ದು, ಮಕ್ಕಳು, ಮೊಮ್ಮಕ್ಕಳಿದ್ದಾರೆ. 35 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ' ಎಂದು ಹೇಳಿದರು.

'ಹಿಂದೂ ಪದ್ಧತಿಯಲ್ಲಿ ಮದುವೆ ಆಗದಿರುವವರೇ (ಅವಿವಾಹಿತರು) ಪೂಜೆ ಮಾಡಬೇಕೆಂದು ನಿಯಮವಿಲ್ಲ. ಶಾಖಾದ್ರಿಯವರ ಹೇಳಿಕೆಯಂತೆ ನಿಯಮಗಳಿಗೆ ಅನುಸಾರವಾಗಿ ಕೂಡಲೇ ಮುಜಾವರ್‌ಗಳನ್ನು ಬದಲಾಯಿಸಬೇಕು. ಜಿಲ್ಲಾಡಳಿತವು ಒಂದು ವೇಳೆ ಈ ಮುಜಾವರ್‌ಗಳನ್ನು ಮುಂದುವರಿಸಿದರೆ, ಕೋರ್ಟ್ ಹಾಗೂ ಧರ್ಮದತ್ತಿ ಆಯುಕ್ತರ ಆದೇಶ ಉಲ್ಲಂಘನೆಯಾಗಲಿದೆ' ಎಂದು ಟಿ. ರಂಗನಾಥ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವಿಶ್ವಹಿಂದೂ ಪರಿಷತ್ ಜಿಲ್ಲಾ ಕಾರ್ಯದರ್ಶಿ ಅಮಿತ್, ಸಹ ಸಂಯೋಜಕ ಸುನಿಲ್, ಶಾಮ್ ವಿ. ಗೌಡ, ಮಾತೃಶಕ್ತಿ ಪ್ರಮುಖ್ ಪುಷ್ಪಾಂಜಲಿ, ವಿನೂತ, ಮೇಘಾ ಪಾಲ್ಗೊಂಡಿದ್ದರು.

## ಜಾನಪದ ಜಾತ್ರೆ

ಪ್ರಜಾವಾಣಿ ಚಿತ್ರ: ರಂಜು ಪಿ

ಬಿ.ಎಂ.ಎಸ್. ಮಹಿಳಾ ಮಹಾವಿದ್ಯಾಲಯ ಬೆಂಗಳೂರಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಜಾನಪದ ಜಾತ್ರೆಯಲ್ಲಿ ವಿದ್ಯಾರ್ಥಿಗಳು ಜಾನಪದ ನೃತ್ಯ ಪ್ರದರ್ಶಿಸಿದರು

### ಜೋತಿಷಿ ಕಮಲಾಕರ ಭಟ್ಟ ಜತೆಗೆ ಸಂಬಂಧ ಆರೋಪ

# 'ಕೈ'–ಕಮಲ ಶಾಸಕರ 'ಎಕ್ಸ್' ಸಮರ

ಬೆಂಗಳೂರು: ಸಿದ್ಧಾಪುರದ ವಸಂತ ನಾಯ್ಕ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ಜೋತಿಷಿ ಕಮಲಾಕರ ಹೆಗಡೆ (ಭಟ್ಟ) ಅವರನ್ನು ಬೆಂಬಲಿಸಿ ಬಿಜೆಪಿ ಶಾಸಕ ಎಸ್.ಸುರೇಶ್‌ಕುಮಾರ್ ಅವರು ಬಹಳ ಹಿಂದೆ ಮಾಡಿದ್ದ ಪೋಸ್ಟ್ ಒಂದನ್ನು ವಿಧಾನಪರಿಷತ್ತಿನ ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್ ಅವರು 'ಎಕ್ಸ್'ನಲ್ಲಿ ಪ್ರಸ್ತಾಪಿಸಿದ್ದಾರೆ. ಇಂತಹ ಅಪರಾಧಿ ಮನಸ್ಥಿತಿಯವರೊಂದಿಗೆ ಸುರೇಶ್ ಅವರಿಗೆ ಏನು ಸಂಬಂಧ ಎಂದು ಪ್ರಶ್ನಿಸಿದ್ದಾರೆ. ಇದಕ್ಕೆ ಸುರೇಶ್ ಕುಮಾರ್ ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಕೀಳು ರಾಜಕರಣವನ್ನು ಬಿಡಿ ಎಂದಿದ್ದಾರೆ.

### 'ಕೊಳೆತ ಮನಸ್ಥಿತಿಗೆ ಸಾಕ್ಷಿ'

ಈ ಪ್ರಕರಣಕ್ಕೆ ನನ್ನ ಹೆಸರನ್ನು ತಳಕು ಹಾಕುತ್ತಿರುವುದು ನಿಮ್ಮ ಬೌದ್ಧಿಕ ದಿವಾಳಿತನವನ್ನು ಎತ್ತಿ ತೋರಿಸುತ್ತದೆ. ನಮ್ಮ ಜತೆ ಫೋಟೊ ತೆಗೆಸಿಕೊಂಡರು ಅಥವಾ ಪರಿಚಯಸ್ಥರಾಗಿದ್ದರು ಎಂಬ ಒಂದೇ ಕಾರಣಕ್ಕೆ ಅವರ ಖಾಸಗಿ ಬದುಕಿನ ವಿಕೃತಿಗಳಿಗೆ ಮತ್ತು ಅವರ ಎಸಗುವ ಕ್ರಿಮಿನಲ್ ಕೃತ್ಯಗಳಿಗೆ ನಾನು ಉತ್ತರದಾಯಿಯಾಗುತ್ತೇನೆಯೇ? ನಿಮ್ಮ ಪಕ್ಷದ ನಾಯಕರ ಜತೆ ಫೋಟೊ ತೆಗೆಸಿಕೊಂಡವರು ಜೈಲು ಪಾಲಾದ ಉದಾಹರಣೆಗಳಿಲ್ಲವೆ. ಆಗ ನಿಮ್ಮ ನಾಯಕರುಗಳೆಲ್ಲ ನೈತಿಕ ಹೊಣೆ ಹೊತ್ತಿದ್ದಾರೆಯೇ?

ಬಹಳ ಹಿಂದೆ ಯಶವಂತಪುರ ಪೆಟ್ರೋಲ್ ಬಂಕ್ ಬಳಿ ನನ್ನ ವಾಹನಕ್ಕೆ ಇಂಧನ ತುಂಬಿಸುತ್ತಿರುವಾಗ ಒಮ್ಮೆ ಮಾತ್ರ ಆ ವ್ಯಕ್ತಿಯ (ಕಮಲಾಕರಭಟ್ಟ) ಪರಿಚಯವಾಗಿತ್ತು. ನೀವು ನನಗೆ ಸಂವಿಧಾನದ ಆರ್ಟಿಕಲ್ 51ಎ(ಎಚ್) ಪಾಠ ಮಾಡಲು ಬಂದಿದ್ದೀರಿ. ಮಾಜಿ ಕಾನೂನು ಸಚಿವನಾಗಿ ಸಂವಿಧಾನದ ಪ್ರತಿಯೊಂದು ಸಾಲಿನ ಮಹತ್ವ ನನಗೆ ಚೆನ್ನಾಗಿ ತಿಳಿದಿದೆ. ವೈಜ್ಞಾನಿಕ ಮನೋಭಾವ ಮತ್ತು ತಾರ್ಕಿಕತೆ ಎಂದರೆ, ಘಟನೆಗಳ ಸತ್ಯಾಸತ್ಯತೆಯನ್ನು ಅರಿಯದೇ ಕೇವಲ ರಾಜಕೀಯ ದ್ವೇಷಕ್ಕಾಗಿ ಇಲ್ಲ ಸಲ್ಲದ ಆರೋಪ ಮಾಡುವುದಲ್ಲ. ನಿಮ್ಮದು ಕೊಳೆತ ಮನಸ್ಥಿತಿ.

ನಾನು ಜೋತಿಷ್ಯವನ್ನು ತುಂಬಾ ನಂಬುವವನೂ ಅಲ್ಲ, ಮೂಢನಂಬಿಕೆ ಬೆಂಬಲಿಸುವವನೂ ಅಲ್ಲ. ಆದರೆ, ಧಾರ್ಮಿಕ ನಂಬಿಕೆಗಳಿಗೂ, ಕ್ರಿಮಿನಲ್ ಚಟುವಟಿಕೆಗಳಿಗೂ ಇರುವ ವ್ಯತ್ಯಾಸ ತಿಳಿಯದಷ್ಟು ದಡ್ಡನೂ ನಾನಲ್ಲ. ಎಂಇಎಸ್ ಕಾಲೇಜು ಮತ್ತು ರೇಣುಕಾಚಾರ್ಯ ಕಾನೂನು ಕಾಲೇಜಿನಲ್ಲಿ ನಾವಿಬ್ಬರೂ ಒಟ್ಟಿಗೆ ಶಿಕ್ಷಣ ಪಡೆದಿದ್ದೆವು. ಆಗ ನೀವು ಯಾವುದಕ್ಕೆ ಖ್ಯಾತರಾಗಿದ್ದೀರಿ ಎಂಬುದೂ ಗೊತ್ತು. ಭಗವಂತ ನಿಮಗೆ ಸದ್ಬುದ್ಧಿ ನೀಡಲಿ.

**ಎಸ್.ಸುರೇಶ್ ಕುಮಾರ್**, ಬಿಜೆಪಿ

### 'ಸುರೇಶ್‌ಕುಮಾರ್‌ಗೆ ಸಂಬಂಧವೇನು?'



ಕಮಲಾಕರ ಹೆಗಡೆ(ಭಟ್ಟ) ಎಂಬ ಜೋತಿಷಿಯ ಅಕ್ರಮ ಸಂಬಂಧಕ್ಕೆ 41 ವರ್ಷದ ಅಮಾಯಕರೊಬ್ಬರು ಬಲಿಯಾಗಿದ್ದಾರೆ. ಜೋತಿಷಿ ಕೇಳಲು ತನ್ನ ಬಳಿ ಬರುತ್ತಿದ್ದ ಮಹಿಳೆಯರನ್ನು ಶೋಷಿಸುತ್ತಿದ್ದ ಈ ಸ್ತ್ರೀಪೀಡಕನನ್ನು ಪ್ರೋತ್ಸಾಹಿಸಿ ಬೆಳೆಸಿದ್ದು, ರಾಜಾಜಿನಗರ ಶಾಸಕ ಎಸ್. ಸುರೇಶ್‌ಕುಮಾರ್. ಇಂತಹ ವ್ಯಕ್ತಿಗಳಿಗೆ ಪ್ರೋತ್ಸಾಹ ನೀಡಬಾರದು ಎಂಬುದು ಈ ಹಿಂದೆ ಕಾನೂನು ಸಚಿವರಾಗಿದ್ದಂಥ ಶಾಸಕರಿಗೆ ಗೊತ್ತಾಗುವುದಿಲ್ಲವೇ? ಕಮಲಾಕರ ಭಟ್ಟ ಭಾಗಿಯಾದ ಕೊಲೆ ಪ್ರಕರಣದಲ್ಲಿ ಸುರೇಶ್‌ಕುಮಾರ್ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಪಾತ್ರ ಏನು?

ಸದನದಲ್ಲಿ ಮಹಿಳೆಯರನ್ನು ಅವಮಾನಿಸುವವರು, ಸಮಾಜದಲ್ಲಿ ಸ್ತ್ರೀ ಪೀಡಕರು, ಅತ್ಯಾಚಾರಿಗಳು, ಕೊಲೆಗಡುಕರು, ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗುವವರಿಗೆ ಮತ್ತು ಬಿಜೆಪಿಗೆ ಅವಿನಾಭಾವ ಸಂಬಂಧ ಇರುವುದಾದರೂ ಹೇಗೆ? ಬಿಜೆಪಿಯ ಕರ್ನಾಟಕದ ಘಟಕದಲ್ಲಿ ಇದಕ್ಕಾಗಿಯೇ ಪ್ರತ್ಯೇಕ ಮೋರ್ಚಾ ಇದೆಯೇ? ಅಥವಾ ಅಪರಾಧ ಕೃತ್ಯಗಳಲ್ಲಿ ಭಾಗವಹಿಸುವವರಿಗೆ ಹಾಗೂ ಪ್ರೋತ್ಸಾಹಿಸುವವರಿಗೆ ಮಾತ್ರ ಬಿಜೆಪಿಯಲ್ಲಿ ಸ್ಥಾನ–ಮಾನಗಳು ಸಿಗುತ್ತವೆಯೇ?

ವೈಜ್ಞಾನಿಕ ಮನೋಭಾವ ಮತ್ತು ಪ್ರಗತಿಪರ ಚಿಂತನೆ ಬೆಳೆಸಬೇಕು ಎಂದು ಸಂವಿಧಾನದ 51ಎ(ಎಚ್) ವಿಧಿ ಹೇಳುತ್ತದೆ. ಮೂಢನಂಬಿಕೆಯನ್ನು ಬಳಸಿಕೊಂಡು ಅಕ್ರಮ ಎಸಗುವ 'ಜೀ–ಗುರೂಜಿ'ಗಳನ್ನು ಪ್ರೋತ್ಸಾಹಿಸುವುದು ಈ ವಿಧಿಯ ಉಲ್ಲಂಘನೆ. ಸುರೇಶ್‌ಕುಮಾರ್ ಅವರು ಈ ವಿಧಿಯನ್ನು ಉಲ್ಲಂಘಿಸಿ ಪ್ರೋತ್ಸಾಹಿಸಿದ್ದು, ಕಮಲಾಕರ ಭಟ್ಟ ಕೊಲೆ ಮಾಡಲು ಪರೋಕ್ಷವಾಗಿ ಒಂದು ಕಾರಣ. ಸುರೇಶ್ ಅವರು ಈ ಕೊಲೆಯ ನೈತಿಕ ಹೊಣೆ ಹೊರಬೇಕು.

**ಬಿ.ಕೆ.ಹರಿಪ್ರಸಾದ್**, ಕಾಂಗ್ರೆಸ್

## 19ಕ್ಕೆ ಸಾರಿಗೆ ನೌಕರರ ಬೆಂಗಳೂರು ಚಲೊ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆಎಸ್‌ಆರ್‌ಟಿಸಿ ಸೇರಿದಂತೆ ನಾಲ್ಕು ನಿಗಮಗಳ ನೌಕರರ ಬೇಡಿಕೆ ಈಡೇರಿಸದೇ ಇರುವುದನ್ನು ಖಂಡಿಸಿ ಫೆ.19ರಂದು ಬೆಂಗಳೂರು ಚಲೊ ನಡೆಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನಿರ್ಧರಿಸಿದೆ.

ಜ.29ರಂದು ಬೆಂಗಳೂರು ಚಲೊ ನಡೆಸಲು ನಿರ್ಧರಿಸಲಾಗಿತ್ತು. ಆದರೆ, ಕ್ರಿಯಾ ಸಮಿತಿಯ ನಾಯಕ ಎಚ್. ವಿ. ಅನಂತಸುಬ್ಬರಾವ್ ಅವರು ಜ.28ರಂದು ನಿಧನರಾಗಿದ್ದರಿಂದ ಬೆಂಗಳೂರು ಚಲೊ ಕಾರ್ಯಕ್ರಮ ಮುಂದೂಡಲಾಗಿತ್ತು.

'2024ರ ಜನವರಿಯಿಂದ ವೇತನ ಪರಿಷ್ಕರಣೆ ನಡೆಸಬೇಕಿತ್ತು. ಹಲವು ಬಾರಿ ಸರ್ಕಾರದೊಂದಿಗೆ ಮಾತುಕತೆ ನಡೆಸಿದರೂ ಯಾವುದೇ ಪ್ರಯೋಜನವಾಗದೇ ಇರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಅಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಲಾಗುವುದು' ಎಂದು ಕ್ರಿಯಾ ಸಮಿತಿಯ ವಿಜಯ ಭಾಸ್ಕರ್ ಡಿ.ಎ., ಬಿ. ಜಯದೇವ ಅರಸು, ಎಚ್. ಡಿ. ರೇವಪ್ಪ, ವೆಂಕಟರಮಣಪ್ಪ, ವಿ. ಸೋಮಣ್ಣ, ಜಗದೀಶ ಎಚ್.ಆರ್., ರಾಜೇಂದ್ರಗೌಡ ಜಿ.ಕೆ. ತಿಳಿಸಿದ್ದಾರೆ.

# ತಾಂತ್ರಿಕ ಶಿಕ್ಷಣದಲ್ಲಿ ಸುಧಾರಣೆ: ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ತಾಂತ್ರಿಕ ಶಿಕ್ಷಣ ಕ್ಷೇತ್ರವು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಪರಾಮರ್ಶೆ ನಡೆಸಿ, ಸುಧಾರಣೆಗಳನ್ನು ತರುವ ಕುರಿತು ಶಿಫಾರಸುಗಳನ್ನು ಮಾಡಲು ತಜ್ಞರ ಸಮಿತಿ ರಚಿಸಿರುವ ಸರ್ಕಾರ, ಒಂದು ತಿಂಗಳಲ್ಲಿ ವರದಿ ನೀಡುವಂತೆ ಸೂಚಿಸಿದೆ.

ಮುಂಬೈ ಐಐಟಿಯ ಮಾಜಿ ನಿರ್ದೇಶಕ ಡಾ.ಎಸ್.ಸಡಗೋಪನ್ ಸಮಿತಿಯ ಅಧ್ಯಕ್ಷರಾಗಿದ್ದು, ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವಿದ್ಯಾಶಂಕರ್, ಯುವಿಸಿಇ ನಿರ್ದೇಶಕ ಸುಭಾಶಿಷ್ ತ್ರಿಪಾಠಿ, ಪ್ರೊ.ಜಗದೀಶ್, ಪ್ರೊ.ಎಸ್.ಗೋಪಾಲಕೃಷ್ಣನ್, ಶ್ಯಾಂ ಎಸ್.ರಾವ್, ಪ್ರೊ.ವೈ.ನರಹರಿ, ಕೆಇಎ ಆಡಳಿತಾಧಿಕಾರಿ, ಉನ್ನತ ಶಿಕ್ಷಣ ಇಲಾಖೆಯ ಉಪ ಕಾರ್ಯದರ್ಶಿ ಸಮಿತಿಯ ಸದಸ್ಯರಾಗಿದ್ದಾರೆ.

ಕಂಪ್ಯೂಟರ್ ಸೈನ್ಸ್ ಮತ್ತು ಇದಕ್ಕೆ ಪೂರಕವಾದ ಕೋರ್ಸ್‌ಗಳಲ್ಲಿ ಪ್ರವೇಶ ಸಂಖ್ಯೆ ಕುರಿತು ಪುನರ್ ಪರಿಶೀಲನೆ, ಈಗಿನ ಕೈಗಾರಿಕೆಗಳು ಮತ್ತು ಉದ್ಯೋಗಾವಕಾಶಗಳಿಗೆ ತಕ್ಕಂತೆ ಮೂಲ ಎಂಜಿನಿಯರಿಂಗ್ ಕೋರ್ಸ್‌ಗಳ ಪಠ್ಯಕ್ರಮ ಪರಿಷ್ಕರಣೆ, ಮೂಲ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳನ್ನು ಆಕರ್ಷಿಸಲು ಉತ್ತೇಜನಕಾರಿ ಕ್ರಮಗಳ ಬಗ್ಗೆ ಸಮಿತಿ ಅಧ್ಯಯನ ನಡೆಸಿ ವರದಿ ನೀಡಲಿದೆ.

ಮೆಕ್ಯಾನಿಕಲ್, ಸಿವಿಲ್, ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗಗಳನ್ನು ಪುನಶ್ಚೇತನಗೊಳಿಸಿ, ಆ ಕೋರ್ಸ್‌ಗಳತ್ತ ವಿದ್ಯಾರ್ಥಿಗಳನ್ನು ಆಕರ್ಷಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪರಾಮರ್ಶೆ ನಡೆಸಿ, ಅಗತ್ಯವಾದ ಶಿಫಾರಸುಗಳನ್ನು ಮಾಡುವಂತೆ ಸಮಿತಿಗೆ ಸೂಚಿಸಲಾಗಿದೆ.

ಕೆಲವು ಕಾಲೇಜುಗಳಲ್ಲಿ ಮೂಲ ಎಂಜಿನಿಯರಿಂಗ್ ಕೋರ್ಸ್‌ಗಳು ಮುಚ್ಚುವ ಹಂತಕ್ಕೆ ಬಂದಿರುವುದು, ಕೆಲವು ವಿಭಾಗಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಸೀಟುಗಳು ಉಳಿಯುತ್ತಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಎಂಜಿನಿಯರಿಂಗ್ ಪದವಿ ಪಡೆದವರಲ್ಲಿ ಶೇ 17ರಷ್ಟು ಮಂದಿಗೆ ಮಾತ್ರ ಉದ್ಯೋಗ ದೊರೆಯುತ್ತಿದೆ ಎಂಬ ಮಾಹಿತಿ ಇದೆ. ಈ ಹಿನ್ನೆಲೆಯಲ್ಲಿ ತಾಂತ್ರಿಕ ಶಿಕ್ಷಣದಲ್ಲಿ ಸುಧಾರಣೆಗಳನ್ನು ತರಲು ಸರ್ಕಾರ ಮುಂದಾಗಿದೆ.

## ಮಹಿಳೆ ವಿವಸ್ತ್ರ ಪ್ರಕರಣ: 12 ಮಂದಿಗೆ 5 ವರ್ಷ ಕಠಿಣ ಶಿಕ್ಷೆ

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ತಾಲ್ಲೂಕಿನ ಹೊಸ ವಂಟಮುರಿಯಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ, ವಿದ್ಯುತ್ ಕಂಬಕ್ಕೆ ಕಟ್ಟಿ ಹಲ್ಲೆ ಮಾಡಿದ್ದ ಪ್ರಕರಣದಲ್ಲಿ ಇಲ್ಲಿನ 10ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್, ಆರು ಮಹಿಳೆಯರೂ ಸೇರಿ 12 ಅಪರಾಧಿಗಳಿಗೆ ಐದು ವರ್ಷ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ಬುಧವಾರ ಆದೇಶಿಸಿದೆ.

ಬಸಪ್ಪ ರುದ್ರಪ್ಪ ನಾಯಿಕ, ರಾಜು ರುದ್ರಪ್ಪ ನಾಯಿಕ, ಕೆಂಪಣ್ಣ ರಾಜು ನಾಯಿಕ, ಪಾರ್ವತಿ ಬಸಪ್ಪ ನಾಯಿಕ, ಯಲ್ಲವ್ವ ರುದ್ರಪ್ಪ ನಾಯಿಕ, ಲಕ್ಕಪ್ಪ ರಾಜು ನಾಯಿಕ, ಗಂಗವ್ವ ಬಸಪ್ಪ ವಾಲಿಕಾರ, ಸಂಗೀತಾ ಸದಾಶಿವ ಹೆಗ್ಗನಾಯಿಕ, ಸಂತೋಷ ಬಸಪ್ಪ ನಾಯಿಕ, ಶೋಭಾ ರಾಜು ನಾಯಿಕ, ಲಕ್ಕವ್ವ ಯಲ್ಲಪ್ಪ ನಾಯಿಕ, ಶಿವಪ್ಪ ರಾಯಪ್ಪ ವನ್ನೂರಿ ಶಿಕ್ಷೆಗೆ ಒಳಗಾದವರು. ಕಾನೂನು ಸಂಘರ್ಷಕ್ಕೆ ಒಳಪಟ್ಟ ಇನ್ನೊಬ್ಬನ ವಿಚಾರಣೆ ಮುಂದುವರಿದಿದೆ. ಸರ್ಕಾರಿ ವಿಶೇಷ ಅಭಿಯೋಜಕ ಎಲ್.ಎಸ್. ಸುಳ್ಳದ ವಾದ ಮಂಡಿಸಿದ್ದರು. 2023ರ ಡಿ. 11ರಂದು ಈ ಘಟನೆ ನಡೆದಿತ್ತು.


ಕರ್ನಾಟಕ ಸರ್ಕಾರ
**ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.**
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ಮೈಸೂರು–570010, ದೂರವಾಣಿ ಸಂಖ್ಯೆ: 0821-2424673/74, ಫ್ಯಾಕ್ಸ್ ನಂ. 0821–2424665,
Email- commr_amh@yahoo.in, Web : https://archaeology.karnataka.gov.in, https://nammakarnataka.in

ಕ್ರಮ ಸಂಖ್ಯೆ:ಆ.ಪು.ಸಂ.ಪ/ಸಂ.ವಿ/ಅ.ಟೆಂ.ಪ್ರ–29:2025–26 ದಿನಾಂಕ: 02.02.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ವತಿಯಿಂದ ಕೆಡಬ್ಲ್ಯೂ–3&4ರ 28 ಟೆಂಡರ್ ರೀತ್ಯಾ DAMH/2025–26: OW/WORK_INDENT–152, 163 to 166, 180 to 202 & 205 ರವರೆಗಿನ ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.95.99 ಲಕ್ಷಗಳು ಗರಿಷ್ಠ ರೂ. 503.32 ಲಕ್ಷಗಳು. ಈ ಕಾಮಗಾರಿಗಳಿಗೆ ಐಟಂವಾರು ಟೆಂಡರ್‌ನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನಲ್ಲಿನ ಷರತ್ತುಗಳಿಗೆ ಅನುಗುಣವಾಗಿ ಕರೆಯಲಾಗಿದ್ದು, ಇ–ಪ್ರೋಕ್ಯೂರ್‌ಮೆಂಟ್ (https://kppp.karnataka.gov.in/) ಮೂಲಕ ನಿಗಧಿಪಡಿಸಿರುವ ವರ್ಗಗಳ ಅನುಸಾರ ಈ ಕಾಮಗಾರಿಗಳ ಟೆಂಡರ್‌ಗೆ ಭಾಗವಹಿಸಬಹುದಾಗಿರುತ್ತದೆ. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ **03.02.2026** ರಿಂದ ಪಡೆಯಬಹುದು.

| | |
|---|---|
| ಟೆಂಡರ್‌ನ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | 09.02.2026, 17.00 ಗಂಟೆ |
| ಪೂರ್ವಾಭಾವಿ ಸಭೆಯ ದಿನಾಂಕ ಮತ್ತು ಸಮಯ | 07.02.2026, 11.00 ಗಂಟೆ |
| ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | 10.02.2026, 17.00 ಗಂಟೆ |
| ಟೆಂಡರ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಸಮಯ | 12.02.2026, 16.30 ಗಂಟೆ |
| ಟೆಂಡರ್ ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಸಮಯ | 13.02.2026, 16.00 ಗಂಟೆ |

ಸಹಿ/– ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.
ವಾಸಾಸಂ/ಮೈಸೂರು/ಶಿರಡಿ ಸಾಯಿ/1607/2025–26



**ನಗರಸಭಾ ಕಾರ್ಯಾಲಯ, ಮದ್ದೂರು,**
ಮಂಡ್ಯ ಜಿಲ್ಲೆ–571428 ವೆಬ್‌ಸೈಟ್:www.maddurtown.gov.in
ಸಹಾಯವಾಣಿ ಸಂಖ್ಯೆ :08232-232105
ಸಂಖ್ಯೆ:ನಸಮ/ಪ.ಅ/ಟೆಂಡರ್–28/2025–26 ದಿ:02.02.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಮದ್ದೂರು ನಗರಸಭೆ ವ್ಯಾಪ್ತಿಯ ಹೂತಗೆರೆಯಲ್ಲಿರುವ ಘನತ್ಯಾಜ್ಯ ವಸ್ತು ನಿರ್ವಹಣಾ ಘಟಕದಲ್ಲಿ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಆಸಕ್ತಯುಳ್ಳ ಗುತ್ತಿಗೆದಾರರಿಗೆ ಟೆಂಡರ್ ಆಹ್ವಾನಿಸಿದೆ.
**ಕ್ರ ಸಂ** : 01. **ಕಾಮಗಾರಿ ಹೆಸರು** : BIO-REMEDIATION / BIO-MINING OF LEGACY WASTE AT HOOTHAGERE LAND FILL SITE OF TMC MADDUR AS PER CENTRAL POLLUTION BOARD GUIDELINES and SWM rules 2016. (DMA/ 2025-26/SE7184) **.ಅಂದಾಜು ಮೊತ್ತ (ಲಕ್ಷಗಳಲ್ಲಿ)** : 147.48. **ಇ.ಎಂ.ಡಿ ಮೊತ್ತ** : ರೂ.2,95,000/–. **ಅನುದಾನದ ವಿವರ** : ಸ್ವಚ್ಛಭಾರತ 2.0/ ಎನ್.ಜಿ.ಟಿ./ಇತರೆ ನಗರಸಭಾ ಅನುದಾನ. ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 09–02–2025 ರ ಸಂಜೆ 5.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ತೆರೆಯುವ ದಿನಾಂಕ: 11–02–2026 ಬೆಳಿಗ್ಗೆ 11.00 ಗಂಟೆಗೆ ರಂದು ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಹಾಗೂ ಕಛೇರಿ ವೇಳೆಯಲ್ಲಿ ಆರೋಗ್ಯ ಶಾಖೆಯಲ್ಲಿ ಪಡೆಯಬಹುದಾಗಿದೆ.
**ಸಹಿ/–ಪೌರಾಯುಕ್ತರು, ನಗರಸಭೆ, ಮದ್ದೂರು**
ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/754/2025–26



**AUCTION NOTICE**

This is to inform public in general that Kotak Mahindra Bank Ltd has organized an auction in below mention respect of vehicles.

1) CB_Ashok Leyland Dost GOODS
YOM – 2024
Reg No – KA11C7291
2) CB_AL_BADA_DOST
YOM – 2024
Reg No – KA11C8497
3) CB_AL_BADA_DOST
YOM – 2023
Reg No – KA27C6245
4) CB_Tata SFC 407 Fully Built
YOM – 2022
Reg No – KA01AN3786
5) CB_AL_BADA_DOST
YOM – 2023
Reg No – KA28AA9547
6) CB_Escorts JCB 3DX Excavator Loader
YOM – 2023
Reg No – KA26N7165
7) TATA MOTORS LTD. – CB_TATA Ace
YOM – 2024
Reg No – KA33B6328
8) CB_MARUTI SUPER CARRY
YOM – -
Reg No – KA04AD5883
9) CB_MARUTI SUPER CARRY
YOM – 2023
Reg No – KA19AE1109
10) CB_MAHINDRA_BOLERO_ MAXXCITY_PICKUP
YOM – -
Reg No – KA16AB0480
11) ASHOK LEYLAND LIMITED - U-3123T-5250MM
YOM – 2018
Reg No – KA28D0920

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 05.02.2026 (Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE
KARNATAKA – 560001
OR
Contact: Arunlaxman Kokare
Kotak Mahindra Bank Ltd.
Contact / 080 - 61564249



**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ,**
ಕೇಂದ್ರ ಕಛೇರಿ, ಸಂಚಾರ–ವಾಣಿಜ್ಯ (ಅವತಾರ್) ಶಾಖೆ,
ನೆಲಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027.
ಸಂಖ್ಯೆ: ಕರಾಸಾ/ಸಂ/ಅವತಾರ್/03/2025–26 ದಿನಾಂಕ: 04–02–2026.

**ಟೆಂಡರ್ ಆಹ್ವಾನದ ಸೂಚನಾ ಪತ್ರ**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮೂಲಕ "ಇ–ಟಿಕೆಟಿಂಗ್ (e-ticketing), ಪಿಓಎಸ್ (POS) ಮತ್ತು ಕಿಯೋಸ್ಕ್ (Kiosk) ಸೇವೆಗಾಗಿ ಪೇಮೆಂಟ್ ಗೇಟ್ ವೇ (Payment Gateway) ಸರ್ವಿಸ್ ಪ್ರೊವೈಡರ್" ಅನ್ನು ಆಯ್ಕೆ ಮಾಡುವ ಸಲುವಾಗಿ ಇ–ಪೋರ್ಟಲ್ (ಅಂತರ್ಜಾಲ) ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ.

**1. ನಿಗದಿತ ದಿನಾಂಕ ಮತ್ತು ಸಮಯ:**

| ವಿಷಯ | ದಿನಾಂಕ | ಸಮಯ |
|---|---|---|
| ಅಹವಾಲುಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 17.02.2026 | 17:00 ಗಂಟೆ |
| ಪ್ರೀ–ಬಿಡ್ ಸಭೆ | 18.02.2026 | 11:00 ಗಂಟೆ |
| ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ | 02.03.2026 | 17:00 ಗಂಟೆ |
| ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ | 04.03.2026 | 11:00 ಗಂಟೆ |
| ಆರ್ಥಿಕ ಬಿಡ್ ಅನ್ನು ತೆರೆಯುವ ದಿನಾಂಕ | 11.03.2026 | 11:00 ಗಂಟೆ |

2. ತಾಂತ್ರಿಕ ಬಿಡ್‌ನಲ್ಲಿ ಅರ್ಹವಾಗುವ ಬಿಡ್‌ದಾರರುಗಳ ಆರ್ಥಿಕ ಬಿಡ್‌ಗಳನ್ನು ಮಾತ್ರ ತೆರೆಯಲಾಗುವುದು.
3. ಟೆಂಡರ್ ಸಂಬಂಧಿತ ದಾಖಲಾತಿಗಳು, ಷರತ್ತು & ನಿಬಂಧನೆಗಳು, ನಿಗದಿತ ಮಾನದಂಡಗಳು ಮತ್ತು ಇತರೆ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp.karnataka.gov.in** ಮೂಲಕ ಪಡೆಯಬಹುದು.
4. ಒಟ್ಟು ಇ.ಎಂ.ಡಿ **ರೂ. 5,00,000/–** : ಅದರಲ್ಲಿ **ರೂ.500/–** ಗಳನ್ನು ಇ–ಪೋರ್ಟಲ್ ಮುಖೇನ ಹಾಗೂ ಇನ್ನುಳಿದ ರೂ. **4,99,500/–** ಗಳನ್ನು ಡಿ.ಡಿ ಮುಖೇನ CAO-FA KSRTC, Bengaluru-27 ರವರ ಹೆಸರಿಗೆ ಪಡೆದು ಸಲ್ಲಿಸುವುದು.
5. ಯಾವುದೇ ಕಾರಣ ನೀಡದೆ ಟೆಂಡರನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–ಮುಖ್ಯ ಸಂಚಾರ ವ್ಯವಸ್ಥಾಪಕರು(ವಾಣಿಜ್ಯ), ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು–27
ವಾಸಾಸಂಇ/ಯುನಿ–ಸಿ.ಪಿ/5414/ಕೆಎಸ್‌ಎಂಸಿಎ/2025–26



ಕರ್ನಾಟಕ ಸರ್ಕಾರ
**ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಸಂ:ಪಿಬಿ/ಟೆಂಡರ್ ಪ್ರಕಟಣೆ/ AE-1 /2025–26/3633 ದಿ:–31.01.2026

**ಅಲ್ಪಾವದಿ ಇ–ಟೆಂಡರ್ ಆಹ್ವಾನ ಪ್ರಕಟಣೆ**

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **https://kppp.karnataka.gov.in** ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

| ಕ್ರ ಸಂ | ಕಾಮಗಾರಿಯ ಇಂಡೆಂಟ್ ಸಂಖ್ಯೆ | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಕ್ರ ಸಂ | ಕಾಮಗಾರಿಯ ಇಂಡೆಂಟ್ ಸಂಖ್ಯೆ | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|---|---|---|
| 1 | PWD/2025-26/RD/WORK_INDENT30787/CALL-2 | 70.00 | 9 | PWD/2025-26/RD/WORK_INDENT30753 | 500.00 |
| 2 | PWD/2025-26/EL/WORK_INDENT28681 | 400.00 | 10 | PWD/2025-26/RD/WORK_INDENT29856 | 600.00 |
| 3 | PWD/2025-26/EL/WORK_INDENT28680 | 449.83 | 11 | PWD/2025-26/RD/WORK_INDENT32149 | 170.99 |
| 4 | PWD/2025-26/RD/WORK_INDENT32402 | 300.00 | 12 | PWD/2025-26/RD/WORK_INDENT32150 | 228.00 |
| 5 | PWD/2025-26/RD/WORK_INDENT32499 | 400.00 | 13 | PWD/2025-26/RD/WORK_INDENT31414 | 200.00 |
| 6 | PWD/2025-26/RD/WORK_INDENT30622 | 500.00 | 14 | PWD/2025-26/RD/WORK_INDENT32282 | 224.44 |
| 7 | PWD/2025-26/BG/WORK_INDENT28727 | 500.00 | 15 | PWD/2025-26/RD/WORK_INDENT30081 | 500.00 |
| 8 | PWD/2025-26/RD/WORK_INDENT30158 | 450.00 | | | |

1.ಗುತ್ತಿಗೆದಾರರ ಕ್ವಾರೀಸ್ ದಿನಾಂಕ: **KPP Portal** ನಲ್ಲಿ ಇರುವಂತೆ. 2.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **20.02.2026 (16.00 ಗಂಟೆಗೆ)**. 3.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ: **21.02.2026 (16.30 ಗಂಟೆಗೆ)**. 4.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಆರ್ಥಿಕ ಬಿಡ್ ತೆರೆಯುವ ದಿನಾಂಕ: **KPP Portal** ನಲ್ಲಿ ಇರುವಂತೆ
**ವಿಶೇಶ ಸೂಚನೆ:–** ಎಲ್ಲಾ ಕಾಮಗಾರಿ ಟೆಂಡರ್‌ಗಳನ್ನು / ಒಪ್ಪಿಗೆ / ತಿರಸ್ಕರಿಸುವ ಅಥವಾ ಯಾವುದೇ ಕಾರಣ ನೀಡದೆ ಹಿಂತೆಗೆದುಕೊಳ್ಳುವ ಹಾಗೂ ಅನುಮೋದಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕೆ ಇರುತ್ತದೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.
ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/511



**ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ**
ದೇವರಾಜ ಅರಸು ಭವನ, 4ನೇ ಮಹಡಿ, ನಂ 16ಡಿ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು– 560 052.

ಸಂಖ್ಯೆ: ದೇಹಿನಿ/ಸ/ಪ್ರಕಟಣೆ/ಸಿಆರ್–07/2025–26 **ಪ್ರಕಟಣೆ** ದಿನಾಂಕ: 03.02.2026

**ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2025–26ನೇ ಸಾಲಿನಲ್ಲಿ ಆಹಾರ ವಾಹಿನಿ(ಆಹಾರ ಕಿಯೋಸ್ಕ್) ಯೋಜನೆಯ ಅರ್ಜಿ ಆಹ್ವಾನಿಸಲಾಗಿದೆ. ಸೇವಾ ಸಿಂಧು ತಂತ್ರಾಂಶದ ಮುಖಾಂತರ Online ಅರ್ಜಿ ಸ್ವೀಕೃತಿ**

❖ **ಆಹಾರ ವಾಹಿನಿ(ಆಹಾರ ಕಿಯೋಸ್ಕ್) ಯೋಜನೆ:**

ಆಹಾರ ವಾಹಿನಿ(ಆಹಾರ ಕಿಯೋಸ್ಕ್) ಯೋಜನೆಯಡಿ ಸ್ಥಳಾಂತರಿಸಬುದಾದ ತಿಂಡಿ ಮಳಿಗೆಗಳನ್ನು ನಾಲ್ಕು ಚಕ್ರಗಳ EV-ಗೂಡ್ಸ್ ವಾಹನಗಳನ್ನು ಅಗತ್ಯಕ್ಕೆ ತಕ್ಕಂತೆ ನವೀಕರಿಸಿ ಫಲಾನುಭವಿಗಳಿಗೆ ವಿತರಿಸುವ ಯೋಜನೆಯಾಗಿದೆ.ನಿಗಮದಿಂದ ವಾಹನ ಖರೀದಿಗೆ ರೂ 3.00 ಲಕ್ಷಗಳ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು ಉಳಿಕೆ ಮೊತ್ತವನ್ನು ಬ್ಯಾಂಕ್‌ಗಳು/ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಬಹುದಾಗಿರುತ್ತದೆ.

ನಗರ ಪ್ರದೇಶದ ವಿಧಾನಸಭಾ ಕ್ಷೇತ್ರಗಳಾದ **ಬ್ಯಾಟರಾಯನಪುರ, ಮಹಾಲಕ್ಷ್ಮೀ ಲೇಔಟ್, ಮಲ್ಲೇಶ್ವರಂ, ಹೆಬ್ಬಾಳ, ಗಾಂಧಿನಗರ, ಕೆ.ಆರ್.ಪುರ, ಮಹದೇವಪುರ, ಪುಲಕೇಶಿ ನಗರ, ಸರ್ವಜ್ಞ ನಗರ, ಸಿ.ವಿ.ರಾಮನ್ ನಗರ, ಶಿವಾಜಿನಗರ, ದಾಸರಹಳ್ಳಿ, ಬಸವನಗುಡಿ, ಪದ್ಮನಾಭನಗರ, ಬಿ.ಟಿ.ಎಂ. ಲೇಔಟ್, ಜಯನಗರ, ಬೊಮ್ಮನಹಳ್ಳಿ, ಗೋವಿಂದರಾಜನಗರ, ವಿಜಯನಗರ, ಚಾಮರಾಜಪೇಟೆ, ಚಿಕ್ಕಪೇಟೆ, ರಾಜರಾಜೇಶ್ವರಿನಗರ, ಶಾಂತಿನಗರ, ರಾಜಾಜಿನಗರ, ಶಿವಮೊಗ್ಗ ನಗರ, ತುಮಕೂರು ನಗರ, ಕೃಷ್ಣರಾಜ, ಚಾಮರಾಜ, ನರಸಿಂಹರಾಜ ಮಂಗಳೂರು ನಗರ (ದಕ್ಷಿಣ), ಬೆಳಗಾವಿ ಉತ್ತರ, ಹುಬ್ಬಳ್ಳಿ–ಧಾರವಾಡ ಪೂರ್ವ, ಹುಬ್ಬಳ್ಳಿ–ಧಾರವಾಡ ಸೆಂಟ್ರಲ್, ಕಲಬುರಗಿ ಉತ್ತರ, ಬಳ್ಳಾರಿ ನಗರ ಕ್ಷೇತ್ರದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.** ಸೌಲಭ್ಯ ಪಡೆಯ ಬಯಸುವವರು ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. ಕುಟುಂಬದ ವಾರ್ಷಿಕ ವರಮಾನ **ರೂ.3,00,000/–ಗಳ ಒಳಗಿರಬೇಕು, ಅರ್ಜಿದಾರರ ವಯಸ್ಸು 21 ರಿಂದ 45 ವರ್ಷಗಳ ಮಿತಿಯಲ್ಲಿರಬೇಕು.**

ಈ ಮೇಲ್ಕಂಡ ಎಲ್ಲಾ ಯೋಜನೆಗಳು **ವಿಶ್ವಕರ್ಮ, ಉಪ್ಪಾರ, ಅಂಬಿಗ, ಸವಿತಾ, ಮಡಿವಾಳ, ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯ, ಒಕ್ಕಲಿಗ, ಲಿಂಗಾಯತ, ಕಾಡುಗೊಲ್ಲ, ಮರಾಠ, ಮತ್ತು ಇದರ ಉಪ ಸಮುದಾಯಗಳು ಹೊರತುಪಡಿಸಿ** ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿ ನಲ್ಲಿ ಉಳಿದ ಸಮುದಾಯಗಳಿಗೆ ಅನ್ವಯವಾಗುತ್ತದೆ.

ಈ ಮೇಲ್ಕಂಡ ಎಲ್ಲಾ ಯೋಜನೆಗಳಡಿಯಲ್ಲಿ ಸೌಲಭ್ಯ ಒದಗಿಸಲು ಸೇವಾ ಸಿಂಧು ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವಾಗ ಅರ್ಜಿದಾರರು ಆಧಾರ್ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಆಧಾರ್ ಕಾರ್ಡ್ ನಲ್ಲಿರುವಂತೆ ಅರ್ಜಿದಾರರ ಹೆಸರು, (ಶ್ರೀ/ಶ್ರೀಮತಿ ಕುಮಾರಿ ಮುಂತಾದ ಮಾಹಿತಿಗಳೆಲ್ಲವು) ಇತರೆ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಬ್ಯಾಂಕ್ ಪಾಸ್ ಪುಸ್ತಕದಲ್ಲಿಯೂ ಇದ್ದು ಹೊಂದಾಣಿಕೆಯಾಗಬೇಕು.

**ಒಂದು ಬಾರಿ ನಿಗಮದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.**

ಮೇಲ್ಕಂಡ ಸೌಲಭ್ಯಗಳನ್ನು ಪಡೆಯಲು ಇಚ್ಚಿಸುವ ಹಿಂದುಳಿದ ವರ್ಗಗಳ ಅರ್ಜಿದಾರರು ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್ **http://sevasindhu.karnataka.gov.in** ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ನಿಗಮದ ವೆಬ್‌ಸೈಟ್ www.dbcdc.karnataka.gov.in ಇಲ್ಲಿ ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿರುತ್ತದೆ ಅಥವಾ ನಿಗಮದ ಸಹಾಯವಾಣಿ ಸಂಖ್ಯೆ: **080–22374832** ಮತ್ತು **8050770004** ಅಥವಾ **8050770005** ಆಯಾ ಜಿಲ್ಲಾ ಕಛೇರಿಯ ದೂರವಾಣಿ ಸಂಖ್ಯೆಗಳನ್ನು ವೆಬ್‌ಸೈಟ್‌ನಲ್ಲಿ ನೀಡಲಾಗಿದ್ದು ಅದರಂತೆ ಸಂಪರ್ಕಿಸಬಹುದು. ಸೇವಾಸಿಂಧು ತಂತ್ರಾಂಶದ ಮುಖಾಂತರ ಅರ್ಜಿ ಸಲ್ಲಿಸಲು **ದಿನಾಂಕ: 04.03.2026 ರಂದು** ಕೊನೆಯ ದಿನಾಂಕ ನಿಗಧಿ ಪಡಿಸಿದೆ.

ಸಹಿ/–
**ನಟರಾಜ ಜಿ.ಆರ್** ಕೆ.ಎ.ಎಸ್
**ವ್ಯವಸ್ಥಾಪಕ ನಿರ್ದೇಶಕರು.**
ವಾ.ಸಾ.ಸಂ.ಇ/ವಾಪ್ರ/5416/ಆಕಾರ್/2025–26

# ಸದನದ ಘನತೆ ಕೆಡಿಸಿದ ನಾಯಿ, ಕೋತಿ ಪದ

## ‘ಆರೆಸ್ಸೆಸ್‌ನವ್ರಾ ಥೂ ನಿಮ್ಮ’ ಎಂದ ಶಿವಲಿಂಗೇಗೌಡ • ‘ಕೊಬ್ಬರಿ ಕಳ್ಳ’ ಎಂದ ವೇದವ್ಯಾಸ, ಶರಣು ಸಲಗರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಲೇ ಆರೆಸ್ಸೆಸ್‌ನವ್ರಾ ...ಥೂ ನಿಮ್ಮ... ಅಯೋಗ್ಯರಾ. . ಯಾಕೆ ಕೂಗಾಡ್ತೀರಿ... ನಿಮಗೆ ಬೆಂಕಿ ಹಾಕಾ. ಅಸೆಂಬ್ಲಿಗೆ ಬಂದು ಡಾನ್ಸ್ ಮಾಡ್ತೀರಾ? ನಿಮಗೆ ನಾಚಿಕೆ ಮಾನ- ಮರ್ಯಾದೆ ಇಲ್ವಾ? ನಿಮ್ಮಂತ ನೂರು ನಾಯಿಗಳು ಬಂದರೂ ನಾನು ಹೆದರಲ್ಲ...’

ಹೀಗೆಂದು ವಿಧಾನಸಭೆಯಲ್ಲಿ ಬಿಜೆಪಿಯ ಸದಸ್ಯರ ವಿರುದ್ಧ ಕೂಗಾಡಿದ್ದು ಕಾಂಗ್ರೆಸ್‌ನ ಕೆ.ಎಂ.ಶಿವಲಿಂಗೇಗೌಡ.

‘ವಿಬಿ ಜಿ ರಾಮ್ ಜಿ’ ಕಾಯ್ದೆಯನ್ನು ವಿರೋಧಿಸಿ ಮಂಡಿಸಿದ್ದ ನಿರ್ಣಯದ ಪರ ಮಾತನಾಡಲು ನಿಂತ ತಮಗೆ ಅಡ್ಡಿಪಡಿಸಿದರು ಎಂದು ರೊಚ್ಚಿಗೆದ್ದ ಗೌಡರು ಬಿಜೆಪಿ-ಜೆಡಿಎಸ್ ಸದಸ್ಯರನ್ನು ನಾಯಿ, ಕೋತಿ ಎಂದೆಲ್ಲ ಬೈದಾಡಿದರು.

ಶಿವಲಿಂಗೇಗೌಡ ಅವರ ನಿಂದನೆ ಮಾತುಗಳು ಹೆಚ್ಚಾಗುತ್ತಿದ್ದಂತೆ ಬಿಜೆಪಿ ಸದಸ್ಯರು ಅವರ ವಿರುದ್ಧ ಘೋಷಣೆಗಳನ್ನು ಕೂಗುವುದನ್ನೂ

ವಿಧಾನಸಭೆಯ ಕಲಾಪದಲ್ಲಿ ಶಾಸಕ ಶಿವಲಿಂಗೇಗೌಡ ಮಾತನಾಡಿದರು

ತಾರಕಕ್ಕೇರಿಸಿದರು. ‘ಕೊಬ್ಬರಿ ಕಳ್ಳ, ಕೊಬ್ಬರಿ ಭ್ರಷ್ಟ... ದೇವೇಗೌಡರಿಗೆ ಮೋಸ ಮಾಡಿದವರು ’ ಎಂದು ಘೋಷಣೆಗಳನ್ನು ಕೂಗಿದರು.

‘ಇವರು ವಿರೋಧ ಪಕ್ಷದವರಾ... ಏಯ್ ವಿರೋಧ ಪಕ್ಷದ ನಾಯಕರೇ, ಇವರೆಲ್ಲ ಕೋತಿಗಳು. ಕೋತಿಗಳನ್ನು ಇಲ್ಲಿ ತಂದು ಕುಣಿಸ್ತಾ ಇದ್ದೀರಾ. ನೀವು ಆರೆಸ್ಸೆಸ್‌ನವರು ದೇಶವನ್ನು ಹಾಳು ಮಾಡಿದ್ದೀರಿ. ಇಲ್ಲಿ ನಾವು ಭಾಷಣ ಮಾಡುವಾಗ ಅಡ್ಡಿಪಡಿಸುತ್ತೀರಿ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಧರಣಿ ನಿರತ ಬಿಜೆಪಿಯ ಶರಣು ಸಲಗರ ಮತ್ತು ವೇದವ್ಯಾಸ್ ಕಾಮತ್ ಅವರು, ‘ಕೊಬ್ಬರಿಯಲ್ಲಿ ಭ್ರಷ್ಟಾಚಾರ ಮಾಡಿದ ಶಿವಲಿಂಗೇಗೌಡರಿಗೆ ಧಿಕ್ಕಾರ. ಅಧಿಕಾರದ ವ್ಯಾಮೋಹಕ್ಕೆ ಎಚ್‌.ಡಿ.ದೇವೇಗೌಡ ಮತ್ತು ಎಚ್‌.ಡಿ.ಕುಮಾರಸ್ವಾಮಿ ಅವರಿಗೆ ಮೋಸ ಮಾಡಿ, ಅವರ ಬೆನ್ನಿಗೆ ಚೂರಿ ಹಾಕಿ ಕಾಂಗ್ರೆಸ್ ಸೇರಿದ ಶಿವಲಿಂಗೇಗೌಡ ಅವರಿಗೆ ಧಿಕ್ಕಾರ’ ಎಂದು ಹೇಳಿದ್ದು ಗೌಡರನ್ನು ಮತ್ತಷ್ಟು ಕೆರಳಿಸಿತು.

‘ನಿನ್ನ ಹೆಂಡ್ತಿ ತಹಶೀಲ್ದಾರ್. ನೀನು ಹೆಂಡ್ತೀನ ಬಿಟ್ಟು ಹಣ ಹೊಡಿತಾ ಇದ್ದೀಯಾ. ನೀನು ಅತಿ ಭ್ರಷ್ಟ’ ಎಂದು ಶರಣು ಸಲಗರ ವಿರುದ್ಧ ಕಿಡಿಕಾರಿದ ಶಿವಲಿಂಗೇಗೌಡ , ‘ಇವರನ್ನು ಕೂಡಲೇ ಸದನದಿಂದ ಹೊರ ಹಾಕಬೇಕು. 80 ವರ್ಷದ ವಿಧಾನಸಭೆಯ ಇತಿಹಾಸದಲ್ಲಿ ಇಂತಹ ಅಯೋಗ್ಯ ಕೆಲಸ ಮಾಡಿದವರು ಯಾರೂ ಇಲ್ಲ’ ಎಂದರು.

### ಕ್ಷಮೆಗೆ ವಿಪಕ್ಷ ಪಟ್ಟು; ಬಗ್ಗದ ಶಿವಲಿಂಗೇಗೌಡ

ಮಧ್ಯಾಹ್ನ ನಂತರ ಕಲಾಪ ಆರಂಭವಾಗುತ್ತಿದ್ದಂತೆ, ತಮ್ಮನ್ನು ‘ನಾಯಿ’ ಎಂದು ಕರೆದ ಶಿವಲಿಂಗೇಗೌಡ ಕ್ಷಮೆ ಯಾಚಿಸಬೇಕು ಎಂದು ಬಿಜೆಪಿ ಸದಸ್ಯರು ಪಟ್ಟು ಹಿಡಿದರಾದರೂ, ಅವರು ‘ಕ್ಷಮೆ’ ಯಾಚಿಸಲು ನಿರಾಕರಿಸಿದರು.

ಆಗ ತೀವ್ರ ಅಸಮಾಧಾನ ಹೊರಹಾಕಿದ ಆರ್. ಅಶೋಕ, ‘ಈ ಪದವನ್ನು ಕಡತದಿಂದ ತೆಗೆದು ಹಾಕುವುದು ಬೇಡ. ಮುಂದೆ ಇದೇ ಪದ ಅಥವಾ ಇದಕ್ಕಿಂತಲೂ ಕೆಟ್ಟ ಪದವನ್ನು ಅವರ ಮೇಲೆ ಪ್ರಯೋಗಿಸಿದಾಗಲೂ ನೀವು ಇದೇ ನಡೆ ಅನುಸರಿಸಬೇಕು’ ಎಂದು ಸಭಾಧ್ಯಕ್ಷರಿಗೆ ಹೇಳಿದ ಪ್ರಸಂಗವೂ ನಡೆಯಿತು.

‘ನೀವು ಈ ವಿದ್ಯಮಾನ ನಡೆಯುವಾಗ ನಗುತ್ತಿದ್ದೀರಿ. ಇದು ಸರಿಯಲ್ಲ. ಕೆಟ್ಟ ಪರಂಪರೆ. ಬೆಳಿಗ್ಗೆಯಿಂದ ಪೀಠದ ಮುಂದೆ ಇದ್ದೇವೆ, ನಿಮ್ಮ ಮನೆಗೆ ಬಂದ ಸದಸ್ಯರನ್ನು ನೀವು ಇದೇ ರೀತಿ ನಡೆಸಿಕೊಳ್ಳುತ್ತೀರಾ? ಈ ರೀತಿ ಅಮಾನವೀಯವಾಗಿ ನಡೆದುಕೊಳ್ಳುತ್ತಿರುವುದು ಸರಿಯಲ್ಲ. ಯಾವ ಸ್ಥಾನವೂ ಶಾಶ್ವತವೂ ಅಲ್ಲ, ನಿಮಗೆ ಸರ್ಕಾರದ ಒತ್ತಡ ಇರಬಹುದು. ಆದರೆ, ಮಾನವೀಯತೆ ಮುಖ್ಯ’ ಎಂದರು.

ಸ್ಪಷ್ಟೀಕರಣ ನೀಡಿದ ಶಿವಲಿಂಗೇಗೌಡ, ‘ನಾನು ಹೇಳಿದ್ದ ಎಲ್ಲ ವಿಷಯವೂ ಸತ್ಯ, ನನಗೆ ತೆಂಗಿನಕಾಯಿ ಕಳ್ಳ ಎಂದು ಕರೆದಿದ್ದೀರಿ, ಮಾತಿನ ಭರದಲ್ಲಿ ಕೆಲವೊಂದು ಪದಗಳು ಬರಬಹುದು’ ಎಂದಷ್ಟೇ ಹೇಳಿ ಸುಮ್ಮನಾದರು.

**ಜಟಾಪಟಿ:** ಅಶೋಕ, ಕಾಂಗ್ರೆಸ್‌ನ ಪಿ.ಎಂ ನರೇಂದ್ರಸ್ವಾಮಿ, ಸಚಿವ ಶಿವರಾಜ ತಂಗಡಗಿ ನಡುವೆ ಜಟಾಪಟಿಯೇ ನಡೆಯಿತು. ‘ನಿನ್ನಂತೆ ನಾನು ಪಾರ್ಟಿ ಬದಲಿಸಿಲ್ಲ’ ಎಂದು ಅಶೋಕ ಹೇಳಿದಾಗ ಕೆರಳಿದ ತಂಗಡಗಿ, ‘ಈ ಹಿಂದೆ ನಮ್ಮ ದಯೆಯಿಂದ ನಿಮ್ಮ ಸರ್ಕಾರ ಬಂದಿದೆ. ಆಗ ನಮ್ಮ ಕಡೆ ಬಂದು ಜಿ ಹುಜೂರ್ ಎಂದು ನಿಂತುಕೊಂಡಿದ್ದೀರಲ್ಲ’ ಎಂದು ಖಾರವಾಗಿಯೇ ಟೀಕಾ ಪ್ರಹಾರ ನಡೆಸಿದರು.

ಈ ಹಂತದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಅಬಕಾರಿ ಸಚಿವ ತಿಮ್ಮಾಪುರ ಜತೆ ಶಿವಲಿಂಗೇಗೌಡರಿಗೆ ಧಿಕ್ಕಾರ ಹಾಕುವುದನ್ನು ಮುಂದುವರಿಸಿದರು.

ಆಗ ಮಧ್ಯ ಪ್ರವೇಶಿಸಿದ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ, ‘ಶಿವಲಿಂಗೇಗೌಡರು ಕೆಲವು ಅಸಂಸದೀಯ ಪದಗಳನ್ನು ಬಳಸಿದ್ದಾರೆ. ಅವುಗಳನ್ನು ಕಡತದಿಂದ ತೆಗೆದುಹಾಕಬೇಕು. ಶರಣು ಸಲಗರ ಅವರ ಪತ್ನಿಯ ವಿರುದ್ಧವೂ ಆರೋಪ ಮಾಡಿದ್ದಾರೆ. ಅವರು ಇಲ್ಲಿ ಬಂದು ತಮ್ಮನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ನಿಮ್ಮ ಅಪ್ಪ... ಇತ್ಯಾದಿ ಪದಗಳನ್ನು ಬಳಸಿದರೆ. ಈ ಸಂಬಂಧ ಶಿವಲಿಂಗೇಗೌಡರ ವಿರುದ್ಧ ಕ್ರಮ ಜರುಗಿಸಬೇಕು’ ಎಂದು ಆಗ್ರಹಿಸಿದರು.

ಈ ವೇಳೆ ಕಾಂಗ್ರೆಸ್ ಸದಸ್ಯರು ಶಿವಲಿಂಗೇಗೌಡ ನೆರವಿಗೆ ಧಾವಿಸಿದರು. ಬಿಜೆಪಿ ಮತ್ತು ಜೆಡಿಎಸ್ ಸದಸ್ಯರನ್ನು ತರಾಟೆಗೆ ತೆಗೆದುಕೊಂಡರು. ಬಿಜೆಪಿಯವರ ಬಾಯಿ ಮುಚ್ಚಿಸಿ, ಇಲ್ಲವೇ ಸದನದಿಂದ ಹೊರಹಾಕಿ ಎಂದು ಸಭಾಧ್ಯಕ್ಷರನ್ನು ಆಗ್ರಹಿಸಿದರು. ಗದ್ದಲ ಹೆಚ್ಚಾದಾಗ ಸಭಾಧ್ಯಕ್ಷರು ಕಲಾಪ ಮುಂದೂಡಿದರು.

# ಗ್ಯಾರಂಟಿಗಳಿಗೆ ಪರಿಶಿಷ್ಟರ ಹಣ: ‘ಕೈ’ ಸಚಿವರು, ಶಾಸಕರ ಆಕ್ಷೇಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗ್ಯಾರಂಟಿ ಯೋಜನೆಗಳಿಗೆ ಎಸ್‌ಸಿಎಸ್‌ಪಿ ಟಿಎಸ್‌ಪಿ ಅನುದಾನವನ್ನು ರಾಜ್ಯ ಸರ್ಕಾರ ಬಳಕೆ ಮಾಡದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಒತ್ತಡ ಹೇರಲು ದಲಿತ ಸಚಿವರು, ಶಾಸಕರು ನಿರ್ಧರಿಸಿದ್ದಾರೆ.

ಗೃಹ ಸಚಿವ ಜಿ. ಪರಮೇಶ್ವರ ನೇತೃತ್ವದಲ್ಲಿ ಮಂಗಳವಾರ ರಾತ್ರಿ 20ಕ್ಕೂ ಹೆಚ್ಚು ದಲಿತ ಸಚಿವರು, ಶಾಸಕರು ಸಭೆ ಸೇರಿ ಈ ಬಗ್ಗೆ ಚರ್ಚೆ ನಡೆಸಿದ್ದಾರೆ.

ಎಸ್‌ಸಿಎಸ್‌ಪಿ ಟಿಎಸ್‌ಪಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಜೆಟ್‌ನಲ್ಲಿ ಮೀಸಲಿಡುವುದಕ್ಕೆ ಈ ಸಭೆಯಲ್ಲಿ ತೀವ್ರ ಅಸಮಾಧಾನ ವ್ಯಕ್ತವಾಯಿತು ಎಂದು ಗೊತ್ತಾಗಿದೆ.

ಸಚಿವರಾದ ಎಚ್‌.ಸಿ. ಮಹದೇವಪ್ಪ, ಶಿವರಾಜ ತಂಗಡಗಿ, ಕೆ.ಎಚ್‌. ಮುನಿಯಪ್ಪ, ಆರ್‌.ಬಿ. ತಿಮ್ಮಾಪೂರ, ಶಾಸಕರಾದ ಪಿ.ಎಂ. ನರೇಂದ್ರ ಸ್ವಾಮಿ, ಎಸ್‌.ಎ. ನಾರಾಯಣಸ್ವಾಮಿ, ಪ್ರಸಾದ್ ಅಬ್ಬಯ್ಯ, ಬಸಂತಪ್ಪ, ಪಾವಗಡದ ವೆಂಕಟೇಶ್ ಸೇರಿ 20ಕ್ಕೂ ಹೆಚ್ಚು ಶಾಸಕರು ಸಭೆಯಲ್ಲಿ ಭಾಗವಹಿಸಿದ್ದರು.

‘ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭಿವೃದ್ಧಿಗಾಗಿ 2025-26ನೇ ಸಾಲಿನ ಬಜೆಟ್‌ನಲ್ಲಿ ₹ 40 ಸಾವಿರ ಕೋಟಿಗೂ ಹೆಚ್ಚು ಅನುದಾನ ಒದಗಿಸಿರುವುದಾಗಿ ಪ್ರಚಾರ ಮಾಡುತ್ತಿದ್ದೇವೆ. ಆದರೆ, ಇದರಲ್ಲಿ ಗ್ಯಾರಂಟಿ ಯೋಜನೆಗಳಿಗೆ 11 ಸಾವಿರ ಕೋಟಿಗೂ ಹೆಚ್ಚಿನ ಹಣ ಬಳಕೆ ಮಾಡಲಾಗಿದೆ. ಪರಿಶಿಷ್ಟ ಸಮುದಾಯದ ಅಭಿವೃದ್ಧಿಗೆ ಮೀಸಲಿಡುವ ಅನುದಾನವನ್ನು ಈ ರೀತಿ ಬಳಸಿದರೆ, ಯಾವ ಮುಖ ಇಟ್ಟುಕೊಂಡು ನಾವು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಪರ ಮತ ಕೇಳಬೇಕು’ ಎಂದು ಕೆಲವು ಶಾಸಕರು ಆಕ್ರೋಶ ಹೊರ ಹಾಕಿದರು ಎಂದೂ ಗೊತ್ತಾಗಿದೆ.

ಒಳ ಮೀಸಲಾತಿಯ ಗೊಂದಲ ಬಗ್ಗೆಯೂ ಸಭೆಯಲ್ಲಿ ಚರ್ಚೆಯಾಗಿದೆ. ಎಲ್ಲ ಭಿನ್ನಾಭಿಪ್ರಾಯಗಳನ್ನು ಮರೆತು ಒಗ್ಗಟ್ಟಿನಿಂದ ಒಳ ಮೀಸಲಾತಿ ಅನುಷ್ಠಾನ ಮಾಡುವ ಅಗತ್ಯವಿದೆ. ಜೊತೆಗೆ, ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸಂಸತ್ತಿನಲ್ಲಿ ಕಾನೂನು ತಿದ್ದುಪಡಿಯಾಗಿ ಸಂವಿಧಾನದ ಷೆಡ್ಯೂಲ್ ಒಂಬತ್ತಕ್ಕೆ ಸೇರಿಸಲು ಕೇಂದ್ರ ಸರ್ಕಾರ ಮೇಲೆ ಒತ್ತಡ ಹೇರುವ ಬಗ್ಗೆಯೂ ಸಮಾಲೋಚನೆ ನಡೆಯಿತು ಎಂದು ತಿಳಿದುಬಂದಿದೆ.

## ಸಮಾಲೋಚನೆ

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಬೆಂಗಳೂರಿನ ವಿಧಾನಸೌಧದಲ್ಲಿ ಬುಧವಾರ ನಡೆದ ವಿಧಾನ ಪರಿಷತ್ತಿನ ಕಲಾಪದಲ್ಲಿ ಜೆಡಿಎಸ್ ಪಕ್ಷದ ಎಸ್‌. ಎಲ್‌. ಭೋಜೇಗೌಡ, ಬಿಜೆಪಿಯ ಸಿ.ಟಿ. ರವಿ ಹಾಗೂ ಎಂ.ಟಿ.ಬಿ. ನಾಗರಾಜ್ ಸಮಾಲೋಚನೆಯಲ್ಲಿ ತೊಡಗಿದ್ದರು

# ವಿಬಿ ಜಿ ರಾಮ್ ಜಿ ಕಾಯ್ದೆ: ಪರ–ವಿರೋಧ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಹೊಸ ಕಾಯ್ದೆಗೆ ‘ನಾಥೂರಾಮ್ ಗೋಡ್ಸೆ ವಿಕಸಿತ ಭಾರತ’ ಎಂಬ ಹೆಸರನ್ನಾದರೂ ಇಡಿ. ಆದರೆ, ಬಡವರ ಉದ್ಯೋಗ ಕಸಿದುಕೊಳ್ಳುವ ಕೆಲಸ ಮಾಡಬೇಡಿ’ ಎಂದು ಕೇಂದ್ರ ಸರ್ಕಾರಕ್ಕೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮನವಿ ಮಾಡಿದರು.

‘ವಿಬಿ ಜಿ ರಾಮ್ ಜಿ’ ಕಾಯ್ದೆ ರದ್ದುಪಡಿಸಿ, ನರೇಗಾ ಕಾಯ್ದೆಯನ್ನು ಮರು ಸ್ಥಾಪಿಸಬೇಕೆಂದು ಸರ್ಕಾರ ಮಂಡಿಸಿದ ನಿರ್ಣಯ ಬೆಂಬಲಿಸಿ ಮಾತನಾಡಿದ ಪ್ರಿಯಾಂಕ್, ‘ನಮ್ಮ ಹೋರಾಟ ಕೇವಲ ಹೆಸರು ಬದಲಾವಣೆಗೆ ಸೀಮಿತವಲ್ಲ. ಯೋಜನೆಯ ಮೂಲ ಸ್ವರೂಪ ಬದಲಾವಣೆ ಮಾಡಿರುವ ಕಾರಣಕ್ಕೆ ಹೋರಾಟ ಮಾಡುತ್ತಿದ್ದೇವೆ’ ಎಂದು ಹೇಳಿದರು.

ಈ ವೇಳೆ, ತಿಮ್ಮಾಪುರ ರಾಜೀನಾಮೆಗೆ ಆಗ್ರಹಿಸಿ ಸಭಾಧ್ಯಕ್ಷರ ಪೀಠದ ಎದುರು ವಿರೋಧ ಪಕ್ಷದ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರೆ, ಬಿಜೆಪಿಯ ಆರಗ ಜ್ಞಾನೇಂದ್ರ ಅವರು ವಿಬಿ ಜಿ ರಾಮ್ ಜಿ ಕಾಯ್ದೆಯನ್ನು ರದ್ದುಪಡಿಸಬೇಕೆಂಬ ರಾಜ್ಯ ಸರ್ಕಾರದ ನಿರ್ಣಯದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

‘ಸಂವಿಧಾನದ ಆಶಯವನ್ನೇ ಬುಡಮೇಲು ಮಾಡುವ ರೀತಿಯಲ್ಲಿ ಯೋಜನೆಯನ್ನು ಬದಲಾವಣೆ ಮಾಡಲಾಗಿದೆ. ಸ್ವಾಭಿಮಾನದಿಂದ ಉದ್ಯೋಗ ಮಾಡುವ ಕಾರ್ಮಿಕರನ್ನು ಗುತ್ತಿಗೆದಾರರ ಅಡಿಯಲ್ಲಿ ಕಾರ್ಯನಿರ್ವಹಿಸುವ ವ್ಯವಸ್ಥೆ ರೂಪಿಸಿ ಅವರನ್ನು ಗುಲಾಮರನ್ನಾಗಿಸುವ ಪ್ರಯತ್ನ ಹೊಸ ಕಾಯ್ದೆಯ ಮೂಲಕ ನಡೆದಿದೆ. ಕಾಮಗಾರಿಗಳನ್ನು ಆಯ್ಕೆ ಮಾಡುವಲ್ಲಿ ಗ್ರಾಮ ಸಭೆಗೆ ಇದ್ದ ಅಧಿಕಾರವನ್ನು ಮೊಟಕುಗೊಳಿಸಿ, ಪಂಚಾಯಿತಿ ವ್ಯವಸ್ಥೆಯನ್ನೇ ಹಾಳು ಮಾಡುವ, ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಆರ್ಥಿಕ ಹೊರೆ ಹೊರಿಸಿ ಆರ್ಥಿಕ ಭಯೋತ್ಪಾದನೆ ಮಾಡುವ ಪ್ರಯತ್ನವನ್ನು ಕೇಂದ್ರ ಸರ್ಕಾರ ಈ ಯೋಜನೆಯ ಮೂಲಕ ಮಾಡುತ್ತಿದೆ’ ಎಂದು ಪ್ರಿಯಾಂಕ್ ಆಕ್ರೋಶ ವ್ಯಕ್ತಪಡಿಸಿದರು.

‘ನರೇಗಾ ಯೋಜನೆ ಉತ್ತಮವಾದ ಯೋಜನೆ ಎಂದು ವಿಶ್ವಸಂಸ್ಥೆ, ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಗಳೂ ಸೇರಿದಂತೆ ಹಲವು ಸಂಘ ಸಂಸ್ಥೆಗಳು ಶ್ಲಾಘಿಸಿವೆ. ವಿಶ್ವ ಸಂಸ್ಥೆಯ ಸಭೆಯಲ್ಲಿಯೇ ಬಿಜೆಪಿಯ ಲಾಲ್ ಕೃಷ್ಣ ಅಡ್ವಾಣಿಯವರು, ಕೋಟ್ಯಂತರ ಬಡ ಕುಟುಂಬಗಳಿಗೆ ನರೇಗಾ ಆಸರೆ ಎಂದು ಬಣ್ಣಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ನರೇಗಾ ಯೋಜನೆಯನ್ನು ಹೆಮ್ಮೆಯ ಯೋಜನೆ ಎಂದಿದ್ದಾರೆ’ ಎಂದರು.

**ಗೇಮ್ ಅಲ್ಲ, ಬರೀ ನೇಮ್ ಚೇಂಜಿಂಗ್:** ‘ಕೇಂದ್ರದ ಬಿಜೆಪಿ ಸರ್ಕಾರ ಏನೂ ಮಾಡುವುದಿಲ್ಲ. ಯಾವ ಗೇಮ್ ಕೂಡಾ ಅದು ಚೇಂಜ್ ಮಾಡುವುದಿಲ್ಲ. ಅದಕ್ಕೆ ಗೊತ್ತಿರುವುದು ಗೇಮ್ ಚೇಂಜಿಂಗ್ ಅಲ್ಲ. ಬರೀ ನೇಮ್ ಚೇಂಜಿಂಗ್ ಅಷ್ಟೇ’ ಎಂದು ಪ್ರಿಯಾಂಕ್ ವ್ಯಂಗ್ಯವಾಡಿದರು. ಯುಪಿಎ ಸರ್ಕಾರ ಅವಧಿಯಲ್ಲಿ ಜಾರಿಯಲ್ಲಿದ್ದ, ಎನ್‌ಡಿಎ ಸರ್ಕಾರ ಅವಧಿಯಲ್ಲಿ ಮರು ನಾಮಕರಣ ಮಾಡಿದ 50ಕ್ಕೂ ಹೆಚ್ಚು ಯೋಜನೆಗಳ ಪಟ್ಟಿಯನ್ನು ಪ್ರಿಯಾಂಕ್ ಖರ್ಗೆ ಓದಿದರು.

ಬಿಜೆಪಿ–ಜೆಡಿಎಸ್ ಸದಸ್ಯರು ಮಂಗಳವಾರ ಅಹೋರಾತ್ರಿ ಧರಣಿ ನಡೆಸಿದ್ದರು. ಬುಧವಾರ ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆ ತಮ್ಮ ಬೇಡಿಕೆ ಈಡೇರಿಕೆ ಆಗ್ರಹಿಸಿ ಧರಣಿ ಮುಂದುವರೆಸಿದರು. ಗದ್ದಲದ ಮಧ್ಯೆಯೇ ಕಾಯ್ದೆ ಕುರಿತು ಚರ್ಚೆಗೆ ಸಭಾಧ್ಯಕ್ಷರು ಸದಸ್ಯರಿಗೆ ಅವಕಾಶ ನೀಡಿದರು.

### ಮನುವಾದಿ ಕಾಯ್ದೆ

ವಿಬಿ ಜಿ ರಾಮ್‌ಜಿ ಕಾಯ್ದೆಯು ಸಂವಿಧಾನ ವಿರೋಧಿ. ಈ ಕಾಯ್ದೆಯನ್ನು ಜಾರಿ ಮಾಡಲು ಸಂವಿಧಾನ ವಿರೋಧಿ ಶಕ್ತಿಗಳು ಪ್ರಯತ್ನಿಸುತ್ತಿವೆ. ಇದು ಮನುವಾದಿ, ಮನುಸ್ಮೃತಿ ಪ್ರತೀಕವಾದ ಕಾಯ್ದೆ. ಬಡವರು, ಮಹಿಳೆಯರು, ದಲಿತರು ಮತ್ತು ಅಲ್ಪಸಂಖ್ಯಾತರಿಗೆ ಅನ್ಯಾಯ ಮಾಡುವ ಉದ್ದೇಶದ ಕಾಯ್ದೆಯಾಗಿದೆ. ಇದಕ್ಕೆ ರಾಮನ ಹೆಸರಿಟ್ಟು ಅನ್ಯಾಯ ಮಾಡುತ್ತಿದ್ದಾರೆ. ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬಡತನ ಹೆಚ್ಚಾಗಿದೆ.

**ಶರತ್ ಬಚ್ಚೇಗೌಡ,** ಕಾಂಗ್ರೆಸ್

### ಭ್ರಷ್ಟಾಚಾರಕ್ಕೆ ಕಡಿವಾಣ

ನರೇಗಾ ದೋಷ ಪೂರಿತ ಕಾಯ್ದೆಯಾಗಿತ್ತು. ಇದು ವ್ಯಾಪಕ ಭ್ರಷ್ಟಾಚಾರಕ್ಕೆ ಮೂಲವಾಗಿತ್ತು. ವಿಬಿ ಜಿ ರಾಮ್ ಜಿ ಕಾಯ್ದೆಯು ಎಲ್ಲ ಹಂತಗಳ ಭ್ರಷ್ಟಾಚಾರಕ್ಕೆ ಡಿವಾಣ ಹಾಕುತ್ತದೆ. ಗ್ರಾಮೀಣ ಮಟ್ಟದಲ್ಲಿ ಎಲ್ಲ ಅರ್ಹರಿಗೂ ಉದ್ಯೋಗ ದೊರಕುತ್ತದೆ. ಹಿಂದಿನಂತೆ ಯಾರದ್ದೋ ಹೆಸರಿನಲ್ಲಿ ಇನ್ಯಾರೋ ದುಡ್ಡ ಹೊಡೆಯಲು ಆಗಲ್ಲ. ಇದು ಕಾಂಗ್ರೆಸ್‌ನ ಚಿಂತೆಗೆ ಕಾರಣ. ಈ ಕಾಯ್ದೆ ತಂದಿದ್ದಕ್ಕಾಗಿ ಮೋದಿ ಅವರನ್ನು ಅಭಿನಂದಿಸುತ್ತೇನೆ.

**ಬಸನಗೌಡಪಾಟೀಲ ಯತ್ನಾಳ,** ಬಿಜೆಪಿ ಉಚ್ಚಾಟಿತ ಶಾಸಕ

### ಬಡವರ ಹಕ್ಕು ಕಸಿಯಲಾಗಿದೆ

ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ಮೇಲೆ ಒಂದೂ ಹೊಸ ಕಾರ್ಯಕ್ರಮ ಜಾರಿ ಮಾಡಿಲ್ಲ. ಮನಮೋಹನ್ ಸಿಂಗ್ ಅವರ ಕಾರ್ಯಕ್ರಮಗಳಿಗೆ ಬೇರೆ ಹೆಸರಿಟ್ಟು ತಮ್ಮದು ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ. ನರೇಗಾ ಮೂಲಕ ಬಡವರನ್ನು ಮೇಲಕ್ಕೆತ್ತಲು ಮನಮೋಹನ್ ಸಿಂಗ್ ಪ್ರಯತ್ನಿಸಿದ್ದರು. ವಿಬಿ ಜಿ ರಾಮ್ ಜಿ ಮೂಲಕ ಬಿಜೆಪಿಯವರು ಬಡವರ ಹಕ್ಕನ್ನು ಕಸಿದುಕೊಂಡಿದ್ದಾರೆ

**ಬಸವರಾಜ ರಾಯರಡ್ಡಿ,** ಕಾಂಗ್ರೆಸ್

### ಗುಲಾಮಗಿರಿ ಪ್ರತೀಕ

ನಮ್ಮದು ಹೇ ರಾಮ್ ಸಂಸ್ಕೃತಿ. ಜೀ ರಾಮ್ ಎಂದರೆ, ಅದೊಂದು ಗುಲಾಮಗಿರಿಯ ಪ್ರತೀಕದಂತೆ. ನಾವು ಹೇ ರಾಮ್ ಎನ್ನುವುವರು. ನಮ್ಮ ಶ್ರೀರಾಮ ಸೌಮ್ಯ, ಸೌಜನ್ಯದ ಮೂರ್ತಿ. ಮೊದಲು ಶ್ರೀ ರಾಮನಲ್ಲಿ ಆಯುಧ ಇರಲಿಲ್ಲ. ಹನುಮಂತನಲ್ಲಿಯೂ ಇರಲಿಲ್ಲ. ಈಗ ಸೌಜ್ಯನಮಯಿ ರಾಮನ ಕೈಯಲ್ಲಿಯೂ ಆಯುಧ ನೀಡಿದ್ದೀರಿ

**ಬಿ.ಆರ್‌. ಪಾಟೀಲ,** ಕಾಂಗ್ರೆಸ್

### ನಿರ್ಣಯವೇ ಅಕ್ರಮ: ಅಶೋಕ

‘ವಿಬಿ ಜಿ ರಾಮ್ ಜಿ ಕಾಯ್ದೆ ಪಾರದರ್ಶಕವಾಗಿದ್ದು, ಕಾಂಗ್ರೆಸ್ ಏಜೆಂಟ್‌ಗಳಿಗೆ ಅಕ್ರಮ ನಡೆಸಲು ಸಮಸ್ಯೆ ಆಗಿರುವುದರಿಂದ ವಿರೋಧ ಕೇಳಿಬರುತ್ತಿದೆ. ಈ ಬಗ್ಗೆ ಮುಖ್ಯಮಂತ್ರಿ ನಿಯಮಬಾಹಿರವಾಗಿ ನಿರ್ಣಯ ತಂದಿದ್ದು, ಅದನ್ನು ವಿರೋಧಿಸಿದ್ದೇವೆ’ ಎಂದು ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಹೇಳಿದರು.

ಕಲಾಪ ಮುಂದೂಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವಿಬಿ ಜಿ ರಾಮ್ ಜಿ ಕಾಯ್ದೆಯ ವಿರುದ್ಧ ವಿಧಾನಸಭೆಯಲ್ಲಿ ನಿರ್ಣಯ ಮಾಡಿರುವುದೇ ಅಕ್ರಮ’ ಎಂದರು.

‘ನಿರ್ಣಯ ಮಂಡಿಸುವ ಮೊದಲು ಏಳು ದಿನಗಳ ಮೊದಲು ಸೂಚನೆ ನೀಡಿ ಚರ್ಚೆ ಮಾಡಬೇಕಿತ್ತು. ಆದರೆ, ಏಕಾಏಕಿ ನಿರ್ಣಯ ತಂದು ಕೇಂದ್ರ ಸರ್ಕಾರದ ಬಗ್ಗೆ ಅಪಪ್ರಚಾರ ಮಾಡಿದ್ದಾರೆ’ ಎಂದು ಆರೋಪಿಸಿದರು.‘ರಾಜ್ಯ ಸರ್ಕಾರವು ನರೇಗಾ ಯೋಜನೆಯಡಿ ಭಾರಿ ಭ್ರಷ್ಟಾಚಾರ ನಡೆಸಿದೆ. ಸ್ವಜಪಕ್ಷಪಾತ, ಬೋಗಸ್ ಬಿಲ್, ಕಾಂಗ್ರೆಸ್ ಏಜೆಂಟ್‌ಗಳಿಗೆ ಕಾಮಗಾರಿ ಹೀಗೆ ಮೊದಲಾದ ರೀತಿಯಲ್ಲಿ ಲೂಟಿ ಮಾಡಲಾಗಿದೆ’ ಎಂದು ವಾಗ್ದಾಳಿ ನಡೆಸಿದರು.

# ಬಜೆಟ್ ಪೂರ್ವಭಾವಿ ಸಭೆ ಇಂದಿನಿಂದ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನ ಮಂಡಲದ ಅಧಿವೇಶನ ಮುಗಿದ ಬೆನ್ನಲ್ಲೇ, ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ 5ರಿಂದ ಬಜೆಟ್ ಪೂರ್ವಭಾವಿ ಸಭೆ ಆರಂಭಿಸಲಿದ್ದಾರೆ.

ರಾಜ್ಯಪಾಲರ ಭಾಷಣದೊಂದಿಗೆ ಆರಂಭವಾಗಿದ್ದ ಜಂಟಿ ಅಧಿವೇಶನ ಬುಧವಾರ (ಫೆ.4) ಅನಿರ್ದಿಷ್ಟಾವಧಿಗೆ ಮುಂದೂಡಿಕೆಯಾಯಿತು.

ಮಾರ್ಚ್ ತಿಂಗಳಲ್ಲಿ ತಮ್ಮ 17 ನೇ ಬಜೆಟ್ ಮಂಡನೆಗೆ ತಯಾರಿ ಆರಂಭಿಸಿರುವ ಸಿದ್ದರಾಮಯ್ಯ ಅವರು ಗುರುವಾರವೇ 10 ಇಲಾಖೆಗಳ ಜತೆಗೆ ಬಜೆಟ್ ಪೂರ್ವಭಾವಿ ಸಭೆ ನಡೆಸಲಿದ್ದಾರೆ. ರೇಸ್‌ಕೋರ್ಸ್ ರಸ್ತೆಯ ಶಕ್ತಿ ಭವನದಲ್ಲಿ ಬೆಳಿಗ್ಗೆ 11ಕ್ಕೆ ಆರಂಭವಾಗಲಿರುವ ಸಭೆಯು, ಸಂಜೆ 6ರವರೆಗೆ ನಡೆಯಲಿದೆ.

ಅರಣ್ಯ, ಕಾನೂನು, ಪ್ರವಾಸೋದ್ಯಮ, ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ, ಕಾರ್ಮಿಕ, ಒಳಾಡಳಿತ, ಹಿಂದುಳಿದ ವರ್ಗಗಳ ಕಲ್ಯಾಣ, ಉನ್ನತ ಶಿಕ್ಷಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಚಿವರು ಹಾಗೂ ಅಧಿಕಾರಿಗಳನ್ನು ಪ್ರತ್ಯೇಕವಾಗಿ ಸಭೆಗೆ ಕರೆಯಲಾಗಿದೆ.

# ‘ನೆಕ್ಕಂಟಿ ವಿರುದ್ಧ ಆತುರದ ಕ್ರಮ ಬೇಡ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿನ ಬಹುಕೋಟಿ ರೂಪಾಯಿ ದುರ್ಬಳಕೆ ಪ್ರಕರಣದ ಆರೋಪಿ ಮಾಜಿ ಸಚಿವ ಬಿ. ನಾಗೇಂದ್ರ ಅವರ ಆಪ್ತ ನೆಕ್ಕಂಟಿ ನಾಗರಾಜ್ ವಿರುದ್ಧ ಗುರುವಾರದ (ಫೆ.5) ತನಕ ಆತುರದ ಕ್ರಮ ಜರುಗಿಸಬಾರದು’ ಎಂದು ಹೈಕೋರ್ಟ್ ಸಿಬಿಐಗೆ ನಿರ್ದೇಶಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಬಿ.ನಾಗೇಂದ್ರ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುವ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿದ ಸಿಬಿಐ ಅರ್ಜಿ ಹಾಗೂ ನಿರೀಕ್ಷಣಾ ಜಾಮೀನು ಕೋರಿರುವ ನೆಕ್ಕಂಟಿ ನಾಗರಾಜ್ ಅವರ ಎರಡು ಪ್ರತ್ಯೇಕ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್‌. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನೆಕ್ಕಂಟಿಪರ ಪದಾಂಕಿತ ಹಿರಿಯ ವಕೀಲ ಹಷ್ಮತ್ ಪಾಷ ಅವರು, ‘ನಾಗೇಂದ್ರ ಅವರಿಗೆ ಜಾಮೀನು ನೀಡಲಾಗಿದೆ. ಹಾಗಾಗಿ, ನೆಕ್ಕಂಟಿ ಅವರಿಗೂ ಜಾಮೀನು ಮಂಜೂರು ಮಾಡಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಯಾಗಿ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್, ‘ತನಿಖೆಗೆ ನೆಕ್ಕಂಟಿಬಂಧನ ಅನಿವಾರ್ಯವಾಗಿದ್ದು ಅರ್ಜಿದಾರರ ಮನವಿಯನ್ನು ಪುರಸ್ಕರಿಸ ಬಾರದು’ ಎಂದು ಮನವಿ ಮಾಡಿದರು.

ಅಂತಿಮವಾಗಿ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ‘ನೆಕ್ಕಂಟಿಅವರ ವಿರುದ್ಧ ಯಾವುದೇ ಆತುರದ ಕ್ರಮ ಜರುಗಿಸಬಾರದು ಮತ್ತು ಪ್ರಕರಣದ ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು ಎಂದು ನೆಕ್ಕಂಟಿನಾಗರಾಜ್ ಅವರಿಗೆ ತಾಕೀತು ಮಾಡಿತು. ಅಂತೆಯೇ, ನೆಕ್ಕಂಟಿವಿರುದ್ಧ ಆತುರದ ಕ್ರಮ ಬೇಡ ಎಂದು ಸಿಬಿಐಗೆ ನಿರ್ದೇಶಿಸಿ ವಿಚಾರಣೆಯನ್ನು ಇದೇ 5ಕ್ಕೆ ಮುಂದೂಡಿತು.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಂಜೂರು ಮಾಡಿರುವ ನಿರೀಕ್ಷಣಾ ಜಾಮೀನು ರದ್ದುಪಡಿಸುವಂತೆ ಕೋರಿ ಕೇಂದ್ರ ತನಿಖಾ ಸಂಸ್ಥೆ (ಸಿಬಿಐ) ಸಲ್ಲಿಸಿರುವ ಅರ್ಜಿಯನ್ನು ಹೈಕೋರ್ಟ್‌ಗೆ ಗುರುವಾರಕ್ಕೆ ಮುಂದೂಡಿದೆ.

ಅರ್ಜಿದಾರರ ವಿರುದ್ಧ ವಂಚನೆ, ಫೋರ್ಜರಿ, ನಂಬಿಕೆ ದ್ರೋಹ ಮತ್ತು ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಅಪರಾಧಿಕ ದುರ್ನಡತೆ ಮತ್ತು ಅಧಿಕಾರ ದುರ್ಬಳಕೆ ಆರೋಪಗಳಿವೆ.

### ಸಿ.ಟಿ ರವಿ ಅಮಾನತು

ಒಂದನೇ ಪುಟದಿಂದ...

ಕಲಾಪ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಸದಸ್ಯರು ಕ್ಷಮೆಯಾಚನೆಗೆ ಮತ್ತೆ ಪಟ್ಟು ಹಿಡಿದರು. ಮಧ್ಯಾಹ್ನದವರೆಗೂ ವಾಕ್ಸಮರ ಮುಂದುವರಿಯಿತು. ನಂತರವೂ ರವಿ ಗೈರುಹಾಜರಾದರು. ಅದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯರು ಅವರನ್ನು ಅಮಾನತು ಮಾಡುವಂತೆ ಲಿಖಿತ ಮನವಿ ಸಲ್ಲಿಸಿದರು. ಸದನಕ್ಕೆ ರಾತ್ರಿ 8ರೊಳಗೆ ಹಾಜರಾಗಲು ಸೂಚಿಸಿ, ಅವರನ್ನು ಕರೆತರುವ ಹೊಣೆಯನ್ನು ವಿಪಕ್ಷದ ನಾಯಕ, ಮುಖ್ಯ ಸಚೇತಕರಿಗೆ ಸಭಾಪತಿ ನೀಡಿದರು. ಗಡುವಿನೊಳಗೆ ಬಾರದ ಕಾರಣ ಅವರನ್ನು ಒಂದು ದಿನದ ಮಟ್ಟಿಗೆ ಅಮಾನತು ಮಾಡಲಾಗಿದೆ ಎಂದು ಹೊರಟ್ಟಿ ಪ್ರಕಟಿಸಿದರು.

## ಬಿಜೆಪಿ, ಕೇಂದ್ರ ಸರ್ಕಾರಕ್ಕೆ ಬಿ.ಕೆ.ಹರಿಪ್ರಸಾದ್ ಸವಾಲು

# ‘ಪಾಕ್ ಶತ್ರು ದೇಶ ಎಂದು ಘೋಷಿಸಲಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕೇಂದ್ರ ಸರ್ಕಾರವು ಪಾಕಿಸ್ತಾನವನ್ನು ಶತ್ರುದೇಶ ಎಂದು ಘೋಷಿಸಿಬಿಡಲಿ’ ಎಂದು ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಬಿಜೆಪಿ ಸದಸ್ಯರಿಗೆ ಸವಾಲು ಹಾಕಿದರು.

ಮಂಗಳವಾರದ ಕಲಾಪದ ವೇಳೆಬಿಜೆಪಿಯ ಸಿ.ಟಿ.ರವಿ ಅವರು ಪಾಕಿಸ್ತಾನ ಉಲ್ಲೇಖಿಸಿ ಮಾತನಾಡಿದ್ದರು. ಸಿ.ಟಿ.ರವಿ ಅವರ ಮಾತನ್ನು ಸಮರ್ಥಿಸಿಕೊಂಡು ಬುಧವಾರದ ಕಲಾಪದಲ್ಲಿ ಮಾತನಾಡಿದ ಬಿಜೆಪಿಯ ಕೆ.ಎಸ್‌.ನವೀನ್, ‘ಹರಿಪ್ರಸಾದ್ ಅವರು ಈ ಹಿಂದೆ ಪಾಕಿಸ್ತಾನ ಶತ್ರು ದೇಶವಲ್ಲ, ಪಕ್ಕದ ದೇಶ ಎಂದಿದ್ದರು’ ಎಂದರು.

ಇದಕ್ಕೆ ಕಾಂಗ್ರೆಸ್ ಹಲವು ಸದಸ್ಯರು ಆಕ್ಷೇಪಿಸಿದಾಗ ನವೀನ್, ‘ನೀವು ಹಾಗೆ ವರ್ತಿಸುತ್ತೀರಿ. ಹೀಗಾಗಿ ಪಾಕಿಸ್ತಾನದ ಹೆಸರು ಹೇಳಬೇಕಾಗುತ್ತದೆ’ ಎಂದರು.

> ಪುಲ್ವಾಮಾ, ಪಹಲ್ಗಾಮ್‌ನಲ್ಲಿ ಹಿಂದೂಗಳ ಧರ್ಮ ಯಾವುದು ಎಂದು ಪ್ರಶ್ನಿಸಿ, ಪ್ರಶ್ನಿಸಿ ಕೊಲ್ಲಲಾಯಿತು. ಅಂತಹ ದೇಶವನ್ನು ಶತ್ರುದೇಶ ಎನ್ನಲು ಸಮಸ್ಯೆ ಏನು?
> **ಕಿಶೋರ್‌ಕುಮಾರ್ ಪುತ್ತೂರು**, ಬಿಜೆಪಿ ಸದಸ್ಯ

> 12 ವರ್ಷಗಳಿಂದ ಕೇಂದ್ರದಲ್ಲಿ ನೀವೇ ಅಧಿಕಾರದಲ್ಲಿದ್ದೀರಿ. ಉಗ್ರರು ಪುಲ್ವಾಮಾಗೆ, ಪಹಲ್ಗಾಮ್‌ಗೆ ನುಸುಳಿ ಬಂದದ್ದು ಹೇಗೆ? ದೇಶದ ಭದ್ರತೆಯ ಹೊಣೆ ನಿಮ್ಮದೇ ಅಲ್ಲವೇ?
> **ಡಿ.ಟಿ.ಶ್ರೀನಿವಾಸ್**, ಕಾಂಗ್ರೆಸ್ ಸದಸ್ಯ

> ದೇಶದ ಪ್ರಧಾನಿ, ರಕ್ಷಣಾ ಸಚಿವ, ಗೃಹ ಸಚಿವ ಹಿಂದೂಗಳೇ ಆಗಿದ್ದಾರೆ. ಹೀಗಿದ್ದೂ ಪಹಲ್ಗಾಮ್‌ನಲ್ಲಿ ಹಿಂದೂಗಳ ಹತ್ಯೆ ನಡೆಯಿತು. ನಿಮ್ಮಿಂದ ಹಿಂದೂಗಳ ರಕ್ಷಣೆ ಸಾಧ್ಯವಿಲ್ಲ
> **ಬಿ.ಕೆ.ಹರಿಪ್ರಸಾದ್**, ಕಾಂಗ್ರೆಸ್ ಸದಸ್ಯ

ಆಗ ವಿವರಣೆ ನೀಡಿದ ಹರಿಪ್ರಸಾದ್ ಅವರು, ‘ನಾವು ಯಾರೂ ಪಾಕಿಸ್ತಾನಕ್ಕೆ ಹೋಗಿಲ್ಲ. ನಿಮ್ಮದೇ ಪಕ್ಷದ ಮುಖ್ಯಸ್ಥರಾಗಿದ್ದವರು ಕರಾಚಿಗೆ ಹೋಗಿ ಮಹಮದ್ ಅಲಿ ಜಿನ್ನಾ ಗೋರಿ ಎದುರು ನಿಂತು, ‘ಜಿನ್ನಾ ಅವರಂತಹ ಜಾತ್ಯತೀತ ನಾಯಕ ಇನ್ನೊಬ್ಬರಿಲ್ಲ’ ಎಂದಿದ್ದರು. ನಿಮ್ಮದೇ ಪಕ್ಷದಿಂದ ಪ್ರಧಾನಿ ಆದವರು ಪಾಕಿಸ್ತಾನದ ಪ್ರಧಾನಿ ನವಾಜ್ ಷರೀಫ್ ಅವರ ಮೊಮ್ಮಗನ ಜನ್ಮದಿನ ಕಾರ್ಯಕ್ರಮಕ್ಕೆ ಹೋಗಿ, ಬಿರಿಯಾನಿ ತಿಂದು ಬಂದರು’ ಎಂದು ಹೇಳಿದರು.

‘ನೀವು ಪಾಕಿಸ್ತಾನವನ್ನು ಶತ್ರು ರಾಷ್ಟ್ರ ಎನ್ನುತ್ತೀರಿ. ಆದರೆ 2014ರಲ್ಲಿ ಪ್ರಧಾನಿ ಅವರ ಪ್ರಮಾಣ ವಚನ ಕಾರ್ಯಕ್ರಮಕ್ಕೆ ಪಾಕಿಸ್ತಾನದ ಪ್ರಧಾನಿ ಷರೀಫ್ ಅವರನ್ನು ಅತಿಥಿಯಾಗಿ ಕರೆಯಿಸಿದ್ದಿರಿ. ಇದನ್ನೆಲ್ಲಾ ಮೊದಲು ನಿಲ್ಲಿಸಿ’ ಎಂದು ಆಗ್ರಹಿಸಿದರು.

‘ಇಲ್ಲಿ ನಿಂತು ಶತ್ರು ರಾಷ್ಟ್ರ ಎಂದು ಕರೆಯುವ ಬದಲು ಪಾಕಿಸ್ತಾನಕ್ಕೆ ದನದಮಾಂಸ, ಬಟ್ಟೆಯ ರಫ್ತು ಹಾಗೂ ಅಲ್ಲಿಂದ ಸಕ್ಕರೆ ಆಮದನ್ನು ನಿಷೇಧಿಸಿ. ದೆಹಲಿಯಲ್ಲಿ ಇರುವ ಪಾಕಿಸ್ತಾನದ ರಾಯಭಾರ ಕಚೇರಿಯನ್ನು ಖಾಲಿ ಮಾಡಿಸಿ. ಪಾಕಿಸ್ತಾನದ ಶತ್ರು ರಾಷ್ಟ್ರ ಎಂಬುದು ನಿಮ್ಮ ಭಾವನೆ ಇರಬಹುದು, ನಮ್ಮ ವಿದೇಶಾಂಗ ನೀತಿಯಲ್ಲಿ ಅದು ಇಲ್ಲ. ಯಾರೋ ಬೀದಿಯಲ್ಲಿ ನಿಂತವರು ಅದನ್ನು ನಿರ್ಧರಿಸಲು ಸಾಧ್ಯವಿಲ್ಲ. ಕೇಂದ್ರದಲ್ಲಿ ನಿಮ್ಮದೇ ಸರ್ಕಾರವಿದೆ. ‘ಪಾಕಿಸ್ತಾನ ನಮ್ಮ ಶತ್ರು ದೇಶ’ ಎಂದು ಅಧಿಕೃತವಾಗಿ ಘೋಷಿಸಿಬಿಡಿ. ಆನಂತರ ನಾವೂ ಹಾಗೇ ಕರೆಯೋಣ’ ಎಂದು ಸವಾಲು ಹಾಕಿದರು.

## ವಿಚಾರಣೆಗೆ ತಡೆ: ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಆದೇಶ

# ಹಾಲು ತರಲಿಲ್ಲಾ ಅಂತಾ ಕೇಸು...

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಆಕೆ ನನಗೆ ಫೋನ್ ಮಾಡಿ ಮಗುವಿಗೆ ಕುಡಿಸಲು ಹಾಲಿಲ್ಲ, ಮೈಗೆ ಲೇಪಿಸಲು ಬಾಡಿ ಲೋಶನ್ ಇಲ್ಲ. ಮನೆಗೆ ಬರ್ತಾ ತೆಗೆದುಕೊಂಡು ಬನ್ನಿ ಎಂದಳು. ನಾನು ನೀನು ಹೇಳುವುದಕ್ಕೆಲ್ಲಾ ಕವಡೆ ಕಾಸನ್ನೂ ಖರ್ಚು ಮಾಡುವುದಿಲ್ಲ ಎಂದು ನಿರಾಕರಿಸಿದೆ. ಅಷ್ಟಕ್ಕೇ ಆಕೆ ನನ್ನ ವಿರುದ್ಧ ಕೌಟುಂಬಿಕ ದೌರ್ಜನ್ಯ ಆರೋಪದ ಕೇಸು ದಾಖಲಿಸಿದ್ದಾಳೆ...’

‘ನನ್ನ ವಿರುದ್ಧ ಶ್ರೀರಾಮಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ಮತ್ತು ಇದಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ 32ನೇ ಎಸಿಜೆಎಂ ಕೋರ್ಟ್‌ನಲ್ಲಿರುವ ನ್ಯಾಯಿಕ ಪ್ರಕ್ರಿಯೆ ರದ್ದುಗೊಳಿಸಬೇಕು’ ಎಂದು ಕೋರಿ 33 ವರ್ಷದ ಪುರುಷ ದಾಖಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಾಜರಾಗಿದ್ದ ಹೈಕೋರ್ಟ್ ವಕೀಲೆ ಕೆ.ರಾಮುಲಾ ಅವರು, ‘ಅರ್ಜಿದಾರರು ವಿವಾಹ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂಬ ಅಂಶ ತಿಳಿದ ಕೂಡಲೇ ಪತ್ನಿ (32) ಬೇಕೆಂದೇ ಈ ಸುಳ್ಳು ದೂರು ದಾಖಲಿಸಿದ್ದಾರೆ. ದೂರಿನಲ್ಲಿ ಆಕೆ ಆರೋಪಿಸಿರುವ ಅಂಶಗಳೆಲ್ಲಾ ಅಸ್ಪಷ್ಟ, ಸ್ವಯಂ ವಿರೋಧಭಾಸಗಳಿಂದ ಕೂಡಿವೆ’ ಎಂದರು.

‘ಪ್ರಕರಣದ ಸಾಕ್ಷಿಗಳೂ ಸುಳ್ಳು ಹೇಳಿಕೆ ದಾಖಲಿಸಿದ್ದು ಅರ್ಜಿದಾರರ ವಿರುದ್ಧ, ಭಾರತೀಯ ದಂಡ ಸಂಹಿತೆ–1860ರ ಕಲಂ 498(ಎ) ಮತ್ತು 323ರ ಅಡಿಯಲ್ಲಿ ದಾಖಲಿಸಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು’ ಎಂದು ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಅರ್ಜಿದಾರರ ವಿರುದ್ಧದ ಪ್ರಕರಣದ ವಿಚಾರಣೆಗೆ ತಡೆ ನೀಡಿ ಆದೇಶಿಸಿ ವಿಚಾರಣೆ ಮುಂದೂಡಿತು.

### ಎಸ್‌ಜಿಆರ್‌ಸಿ: ಕಾನೂನು ವಿವಿಗೆ ಗಡುವು

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹಾಗೂ ಅದರ ಅಧೀನದಲ್ಲಿ ಬರುವ ಕಾಲೇಜು ಮತ್ತು ಸಂಸ್ಥೆಗಳಲ್ಲಿ, ‘ವಿದ್ಯಾರ್ಥಿಗಳ ಕುಂದುಕೊರತೆ ಪರಿಹಾರ ಸಮಿತಿ‘ಗಳನ್ನು (ಎಸ್‌ಜಿಆರ್‌ಸಿ) ರಚಿಸಲು ಕಾನೂನು ವಿಶ್ವವಿದ್ಯಾಲಯಕ್ಕೆ ಹೈಕೋರ್ಟ್ ಒಂದು ವಾರ ಗಡುವು ನೀಡಿದೆ.

ಈ ಸಂಬಂಧ ಬೆಂಗಳೂರಿನ ಬಿಎಂಎಸ್ ಕಾನೂನು ಕಾಲೇಜಿನ ಮೂರನೇ ವರ್ಷದ ಕಾನೂನು ಪದವಿ ವಿದ್ಯಾರ್ಥಿ ಕೆ.ಎನ್‌.ಪ್ರಣವ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್‌.ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕಾನೂನು ವಿಶ್ವವಿದ್ಯಾಲಯ ಪರ ವಕೀಲರು, ಎಸ್‌ಜಿಆರ್‌ಸಿ ರಚನೆಗೆ ಸಂಬಂಧಿಸಿದ್ದು ಎಂದು 2024ರ ಅಧಿಸೂಚನೆಯೊಂದನ್ನು ಹಾಜರುಪಡಿಸಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಅರ್ಜಿದಾರರ ಪರ ವಕೀಲರು, ‘ಸರ್ಕಾರಿ ವಕೀಲರು ಸಲ್ಲಿಸಿರುವುದು ವಿದ್ಯಾರ್ಥಿಗಳ ಕಲ್ಯಾಣ ಸಮಿತಿಗೆ ಸಂಬಂಧಿಸಿದ ಅಧಿಸೂಚನೆಯೇ ಹೊರತು ಎಸ್‌ಜಿಆರ್‌ಸಿ ಅಲ್ಲ‘ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಕೆರಳಿದ ನ್ಯಾಯಮೂರ್ತಿ ಅವರು, ‘ನ್ಯಾಯಾಲಯದ ಹಾದಿ ತಪ್ಪಿಸುತ್ತಿದ್ದೀರಾ? ರಿಜಿಸ್ಟ್ರಾರ್ ಅವರನ್ನು ಕೋರ್ಟ್‌ಗೆ ಕರೆಯಿಸಬೇಕಾಗುತ್ತದೆ. ರಿಜಿಸ್ಟ್ರಾರ್ ಅವರ ಈ ನಡವಳಿಕೆಯನ್ನು ದಾಖಲಿಸಬೇಕಾ’ ಎಂದು ಸರ್ಕಾರಿ ವಕೀಲರನ್ನು ಖಾರವಾಗಿ ಪ್ರಶ್ನಿಸಿದರು.

ವಿವರಣೆ ನೀಡಲು ಕಾಲಾವಕಾಶ ಕೋರಿದ ಸರ್ಕಾರಿ ವಕೀಲರು ನಂತರ ಹಾಜರಾಗಿ, ‘ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿರ್ದೇಶನದ ಪ್ರಕಾರ ಎಸ್‌ಜಿಆರ್‌ಸಿ ರಚನೆ ಮಾಡಿಲ್ಲ. ಅದಕ್ಕಾಗಿ ಒಂದು ವಾರ ಕಾಲಾವಕಾಶಬೇಕು ನೀಡಬೇಕು’ ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಮೂರ್ತಿಯವರು, ‘ವಿಶ್ವವಿದ್ಯಾಲಯ ಮಟ್ಟದಲ್ಲಿ ವಿದ್ಯಾರ್ಥಿಗಳ ಕುಂದುಕೊರತೆ ಸಮಿತಿ ರಚಿಸಲಾಗಿಲ್ಲ ಎಂದರೆ ಏನರ್ಥ? ಒಂದು ವಾರದಲ್ಲಿ ಸಮಿತಿಗಳನ್ನು ರಚಿಸಿ. ಪುನಃ ಸಮಯ ಕೊಡುವುದಿಲ್ಲ. ಒಂದು ವೇಳೆ ರಚನೆ ಮಾಡದೇ ಹೋದರೆ ರಿಜಿಸ್ಟ್ರಾರ್ ಅವರನ್ನು ನ್ಯಾಯಾಲಯಕ್ಕೆ ಕರೆಸಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿ ವಿಚಾರಣೆ ಮುಂದೂಡಿದರು.

# ಅವಮಾನ ಆರೋಪ: ಭಾರತಿ ಶೆಟ್ಟಿ ಸಭಾತ್ಯಾಗ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸದನದಲ್ಲಿ ಮಹಿಳೆಯರಿಗೆ ಗೌರವ ಸಿಗುತ್ತಿಲ್ಲ. ಸತತವಾಗಿ ಅವಮಾನ ಮಾಡಲಾಗುತ್ತಿದೆ’ ಎಂದು ಆರೋಪಿಸಿ ಬಿಜೆಪಿಯ ಭಾರತಿ ಶೆಟ್ಟಿ ಅವರು ಸಭಾತ್ಯಾಗ ಮಾಡಿದರು.

ವಿಧಾನಪರಿಷತ್‌ನಲ್ಲಿ ಸಿ.ಟಿ.ರವಿಯವರು ‘ನಾಲಗೆ’ ಪದ ಬಳಕೆ ಮಾಡಿದ್ದಕ್ಕೆ, ಕ್ಷಮೆ ಕೇಳಬೇಕೆಂದು ಕಾಂಗ್ರೆಸ್ ಸದಸ್ಯರು ಪಟ್ಟು ಹಿಡಿದಿದ್ದರು. ಆಗ ಮಾತನಾಡಿದ ಭಾರತಿ ಶೆಟ್ಟಿ ಅವರು, ಕಾಂಗ್ರೆಸ್‌ನ ಕೆಲವರು ಮಹಿಳೆಯರಿಗೆ ಗೌರವ ನೀಡುವುದಿಲ್ಲ. ಹಿಂದೆ ಒಬ್ಬರು ಸಚಿವರು ‘ಕೆಲಸ ಪಡೆಯಲು ಪುರುಷರು ಲಂಚ ಕೊಡಬೇಕು. ಮಹಿಳೆಯರು ಮಂಚ ಹತ್ತಬೇಕು’ ಎಂದಿದ್ದರು. ಇದು ನಮ್ಮ ಸಂಸ್ಕೃತಿಯೇ’ ಎಂದು ಪ್ರಶ್ನಿಸಿದರು.

ಅದಕ್ಕೆ ಆಕ್ಷೇಪಿಸಿದ ಸಭಾ ನಾಯಕ ಬೋಸರಾಜು, ‘ಸದನದಲ್ಲಿ ಯಾರೂ ಆ ರೀತಿ ಮಾತನಾಡಿಲ್ಲ. ಸದನದ ಹೊರಗೆ ಯಾರು ಮಾತನಾಡಿದ್ದಾರೆ ಗೊತ್ತಿಲ್ಲ. ಇಂತಹ ಗಂಭೀರ ಆರೋಪವನ್ನು ಸದನದ ಒಳಗೆ ಮಾಡುವುದು ಸರಿಯಲ್ಲ’ ಎಂದರು. ಕಾಂಗ್ರೆಸ್, ಬಜೆಪಿ ಸದಸ್ಯರ ಮಾತಿನ ಚಕಮಕಿ ನಡುವೆ ಭಾರತಿ ಶೆಟ್ಟಿ ಸಭಾತ್ಯಾಗ ಮಾಡಿದರು.

ಬಿಜೆಪಿಯ ಸದಸ್ಯೆ ಭಾರತಿ ಶೆಟ್ಟಿ

**ಏಕವಚನ ಪ್ರಯೋಗ:** ಭಾರತಿ ಶೆಟ್ಟಿ ಮಾತಿಗೆ ರಮೇಶ್ ಬಾಬು ಆಕ್ಷೇಪ ಎತ್ತಿದಾಗ ಬಿಜೆಪಿಯ ಕೇಶವ ಪ್ರಸಾದ್, ಕುಳಿತುಕೊಳ್ಳುವಂತೆ ಅವರಿಗೆ ಹೇಳಿದರು. ಆಗ ರಮೇಶ್ ಬಾಬು ‘ನಾನು ನಿನ್ನ ಗುಲಾಮ ಅಲ್ಲ, ನೀನು ಯಾರು ನನಗೆ ಹೇಳಲು’ ಎಂದು ಗದರಿದರು. ನಾಲಗೆ ಮಾತಿನ ವಿವಾದದ ಕಾರಣಕ್ಕೆ ಸಿ.ಟಿ.ರವಿ ಅವರು ಮಧ್ಯಾಹ್ನದ ನಂತರ ಸದನಕ್ಕೆ ಬಂದಿರಲಿಲ್ಲ. ಅವರನ್ನು ಕರೆಯಿಸುವಂತೆ ಸಭಾಪತಿ ಸೂಚಿಸಿದರು. ಅದಕ್ಕೆ ನಸೀರ್ ಅಹಮದ್, ಇದು ‘ಮ್ಯಾಚ್ ಫಿಕ್ಸಿಂಗ್’ ಎಂದರು.

# ‘ಶಿಕ್ಷಕರ ಸಂಘಕ್ಕೆ ಚುನಾವಣೆ ನಡೆಸಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯನ್ನು ನಡೆಸಲು ತಕ್ಷಣವೇ ಪ್ರಕ್ರಿಯೆ ಆರಂಭಿಸಿ ಎಂದು ರಾಜ್ಯ ಸರ್ಕಾರವು ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಗೆ ಸೂಚಿಸಿದೆ.

ಸಂಘದ ಚುನಾವಣಾ ಅವಧಿಯು 2025ರ ಡಿಸೆಂಬರ್ 12ಕ್ಕೆ ಕೊನೆಯಾಗಿದೆ. ಹೀಗಾಗಿ ತಕ್ಷಣವೇ ಚುನಾವಣೆ ನಡೆಸಬೇಕಿದೆ. ಅಲ್ಲಿಯವರೆಗೆ ಸಂಘದ ದೈನಂದಿನ ಚಟುವಟಿಕೆಗಳು ಮತ್ತು ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದ ನಿರ್ಣಯವನ್ನು ಮಾತ್ರವೇ ತೆಗೆದುಕೊಳ್ಳಬೇಕು. ಸಂಘಕ್ಕೆ ಸಂಬಂಧಿಸಿದ ಇತರ ಚಟುವಟಿಕೆಗಳು ಹಾಗೂ ಆರ್ಥಿಕ ಹೊರೆ ಆಗಬಹುದಾದಂತಹ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳಬಾರದು ಎಂದು ಸಹಕಾರ ಸಂಘಗಳ ಜಿಲ್ಲಾ ನೋಂದಣಾಧಿಕಾರಿ ಸೂಚಿಸಿದ್ದಾರೆ.

ಚುನಾವಣಾ ಅವಧಿ ಮುಗಿದಿದ್ದರೂ ಅಧ್ಯಕ್ಷ ಮತ್ತು ಕಾರ್ಯದರ್ಶಿ ಅವರು ಚುನಾವಣೆ ನಡೆಸಲು ಕ್ರಮ ತೆಗೆದುಕೊಳ್ಳುತ್ತಿಲ್ಲ. ಇದರ ಮಧ್ಯೆಯೇ ಸಂಘದ ಬೈ–ಲಾಗೆ ತಿದ್ದುಪಡಿ ತರುತ್ತಿದ್ದಾರೆ. ಸಂಘದ ಇತರ ಪದಾಧಿಕಾರಿಗಳಿಗೆ ತಿಳಿಸದೆಯೇ ರಾಜ್ಯ ಮಟ್ಟದ ಶಿಕ್ಷಕರ ಸಮ್ಮೇಳನ ನಡೆಸಲು ಸಿದ್ಧತೆ ನಡೆಸುತ್ತಿದ್ದಾರೆ ಎಂದು ಸಂಘದ ಖಜಾಂಚಿ ನೇತೃತ್ವದಲ್ಲಿ ಹಲವು ಸದಸ್ಯರು ಜನವರಿ 22ರಂದು ಸಹಕಾರ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿದ್ದರು.

ಇಲಾಖೆ ಕಾರ್ಯದರ್ಶಿಯು, ಈ ಸಂಬಂಧ ಕ್ರಮ ತೆಗೆದುಕೊಳ್ಳುವಂತೆ ಸಹಕಾರ ಸಂಘಗಳ ನಿಬಂಧಕರಿಗೆ ಸೂಚಿಸಿದ್ದರು.

ಚಿಟಿಕೆ ಸುದ್ದಿ

## ಕರ್ತವ್ಯ ಲೋಪ: ನಾಲ್ವರು ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ

ಚಾಮರಾಜನಗರ: ಹಾಸ್ಟೆಲ್‌ಗಳಲ್ಲಿ ಅವ್ಯವಸ್ಥೆ, ಮಧ್ಯಾಹ್ನದ ಬಿಸಿಯೂಟ ಆಹಾರ ಪದಾರ್ಥಗಳ ದುರ್ಬಳಕೆ, ಬಿಲ್ ಹಾಗೂ ಕಡತಗಳ ನಿರ್ವಹಣೆ ಮಾಡದ ಆರೋಪದ ಮೇಲೆ ನಾಲ್ವರು ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗಿದೆ. ನ್ಯಾಯಬೆಲೆ ಅಂಗಡಿ ವಿತರಕರ ಪರವಾನಗಿ ಅಮಾನತುಗೊಳಿಸಲಾಗಿದೆ.

ಬಂಡಿಗೆರೆ ಅಂಗನವಾಡಿ ಕಾರ್ಯಕರ್ತೆಯನ್ನು ಅಮಾನತುಗೊಳಿಸಲಾಗಿದೆ. ಸರ್ಕಾರಿ ಶಾಲೆಯ ಶಿಕ್ಷಕಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವಾರ್ಡನ್‌ಗಳನ್ನು ಒಂದು ತಿಂಗಳು ಕಡ್ಡಾಯ ರಜೆ ಮೇಲೆ ಕಳಿಸಿ ಶಿಸ್ತು ಕ್ರಮ ಜರುಗಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಸರ್ಕಾರಿ ಹಾಸ್ಟೆಲ್‌ಗಳು, ಶಾಲೆಗಳು, ಅಂಗನವಾಡಿ, ಆಹಾರ ದಾಸ್ತಾನು ಗೋದಾಮುಗಳು, ಸರ್ಕಾರಿ ಆಸ್ಪತ್ರೆಗಳಿಗೆ ಮಂಗಳವಾರ ದಿಢೀರ್ ಭೇಟಿ ನೀಡಿದ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ.ಎಚ್.ಕೃಷ್ಣ ಅವರ ಸೂಚನೆ ಮೇರೆಗೆ ಕ್ರಮ ಕೈಗೊಳ್ಳಲಾಗಿದೆ.

## ಮೊಟ್ಟೆ ಅನುದಾನ ಬಿಡುಗಡೆಗೂ ಲಂಚ, ಸಿಕ್ಕಿಬಿದ್ದ ಇಬ್ಬರು

ಕಲಬುರಗಿ: ಮೊಟ್ಟೆ ಹಣ ಬಿಡುಗಡೆ ಮಾಡಲು ಲಂಚ ಪಡೆಯುತ್ತಿದ್ದ ವೇಳೆ ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಮೇಲ್ವಿಚಾರಕಿ ಬುಧವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಪಿಂಕುಬಾಯಿ

ಸ್ಟೇಷನ್ ಬಜಾರ್ ಅಂಗನವಾಡಿಯ ಕಾರ್ಯಕರ್ತೆ ಹೀನಾ ಹಾಗೂ ಅಂಗನವಾಡಿ ಮೇಲ್ವಿಚಾರಕಿ ಪಿಂಕುಬಾಯಿ ಗಾಯಕವಾಡ 'ಲೋಕಾ' ಬಲೆಗೆ ಬಿದ್ದವರು.

ಹೀನಾ

'ಅಂಗನವಾಡಿ ಕೇಂದ್ರಕ್ಕೆ ಮೂರು ತಿಂಗಳ ಮೊಟ್ಟೆ ಹಣವಾಗಿ ₹14,490 ಜಮೆ ಆಗಿದೆ. ಅದರಲ್ಲಿ ಒಂದು ತಿಂಗಳ ಮೊಟ್ಟೆ ಹಣ ₹4,830 ಹಾಗೂ ನವೆಂಬರ್ ಮತ್ತು ಡಿಸೆಂಬರ್ ತಿಂಗಳಿಗೆ ತಲಾ ₹600 ಸೇರಿದಂತೆ ಒಟ್ಟು ₹6,030 ಲಂಚ ನೀಡುವಂತೆ ಇಬ್ಬರೂ ಬೇಡಿಕೆ ಇಟ್ಟಿದ್ದರು' ಎಂದು ಇಲ್ಲಿನ ಉದಯ ನಗರ ಅಂಗನವಾಡಿ ಕಾರ್ಯಕರ್ತೆ ಸೌಭಾಗ್ಯ ಬಲಭೀಮ ರಾಠೋಡ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

## ಯುಎಇ ಲಾಟರಿ: ₹49 ಕೋಟಿ ಬಹುಮಾನ

ಪಡುಬಿದ್ರಿ (ಉಡುಪಿ): ಅಬುಧಾಬಿಯಲ್ಲಿ ನಡೆದ ಬಿಗ್ ಟಿಕೆಟ್ ಲಕ್ಕಿ ಡ್ರಾದಲ್ಲಿ ಕಟಪಾಡಿ ಮಟ್ಟುವಿನ ನಿವಾಸಿ ಶಾಂತನು ಶೆಟ್ಟಿಗಾರ್ ಅವರಿಗೆ 2 ಕೋಟಿ ದಿರ್‌ಹಂ (₹49 ಕೋಟಿ) ಬಹುಮಾನ ಒಲಿದಿದೆ.

ಶಾಂತನು ಶೆಟ್ಟಿಗಾರ್

ಈ ಡ್ರಾದಲ್ಲಿ ಜಾಕ್‌ಪಾಟ್ ಜೊತೆಗೆ ಹಲವು ಬಹುಮಾನಗಳೂ ಸೇರಿದ್ದವು. ಐದು ಮಂದಿಗೆ ತಲಾ 10 ಲಕ್ಷ ದಿರ್‌ಹಂ ಬಹುಮಾನದ ಜೊತೆಗೆ ಐಷಾರಾಮಿ ವಾಹನ ನೀಡಲಾಯಿತು.

ಸ್ನೇಹಿತರೊಂದಿಗೆ ಸೇರಿ ಟಿಕೆಟ್ ಖರೀದಿಸಿದ್ದು, ಬಹುಮಾನ ಮೊತ್ತವನ್ನು ಸ್ನೇಹಿತರೊಂದಿಗೆ ಹಂಚಿ ಕೊಳ್ಳುವುದಾಗಿ ಶಾಂತನು ಹೇಳಿದ್ದಾರೆ.

## ಭಾರಿ ವಾಹನ ಚಾಲನಾ ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕೆಎಸ್‌ಆರ್‌ಟಿಸಿ ತರಬೇತಿ ಕೇಂದ್ರಗಳಲ್ಲಿ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಭಾರಿ ವಾಹನ ಚಾಲನಾ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಸಮಾಜ ಕಲ್ಯಾಣ ಇಲಾಖೆಯ ಪಿಎಂ–ಅಜಯ್ ಯೋಜನೆಯಡಿ ಈ ತರಬೇತಿ ನೀಡಲಾಗುತ್ತಿದೆ.

45 ವರ್ಷದೊಳಗಿನ ವಯೋಮಾನದ ಆಸಕ್ತರು ಹತ್ತಿರದ ತರಬೇತಿ ಕೇಂದ್ರದಲ್ಲಿ ಅರ್ಜಿ ಸಲ್ಲಿಸಬಹುದು. ಒಂದು ತಿಂಗಳ ತರಬೇತಿ ಇದಾಗಿದ್ದು, ವಸತಿ ಮತ್ತು ಊಟ ಉಚಿತವಾಗಿ ಒದಗಿಸಲಾಗುವುದು.

ksrtcjobs.karnataka.gov.inನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಮಾಹಿತಿಗೆ ಮಾಹಿತಿಗೆ ಮಾಲೂರು: 7760994432, ಚಿಕ್ಕಮಗಳೂರು: 9606037746, ಮಳವಳ್ಳಿ: 7760990137, ಹಾಸನ: 7760990533, ಹೊಳಲ್ಕೆರೆ: 7019072560 ಸಂಪರ್ಕಿಸಲು ಅಧಿಕಾರಿಗಳು ತಿಳಿಸಿದ್ದಾರೆ.

## ಜೋತಿಷಿ ಸೇರಿ ನಾಲ್ವರು ಜೈಲಿಗೆ

ಪ್ರಜಾವಾಣಿ ವಾರ್ತೆ

ಕಾರವಾರ: ಸಿದ್ದಾಪುರ ತಾಲ್ಲೂಕಿನ ಅವರಗುಪ್ಪದಲ್ಲಿ ನಡೆದ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐದು ಮಂದಿ ಆರೋಪಿಗಳ ಪೈಕಿ ನಾಲ್ವರನ್ನು ಕೋರ್ಟ್ ಬುಧವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು.

ಪ್ರಕರಣದ ಪ್ರಮುಖ ಆರೋಪಿ ಸುಚಿತ್ರಾ ನಾಯ್ಕ, ಆಕೆಯ ತಂದೆ ಲೋಕನಾಥ ನಾಯ್ಕ, ಜೋತಿಷಿ ಕಮಲಾಕರ ಹೆಗಡೆ (ಕಮಲಾಕರ ಭಟ್), ಆಕಾಶ್ ಎಂ. ಅವರನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ಉಳಿದ ಮೂವರು ಆರೋಪಿಗಳಾದ ಶಿವಮೊಗ್ಗದ ಮಹಮ್ಮದ್ ಮೈಫೂಜ್, ಫೈಸಲ್ ಜಾನ್ ಮತ್ತು ಇಫ್ರಾನ್ ಅಮಾನುಲ್ಲಾ ಅವರನ್ನು ಹೆಚ್ಚಿನ ವಿಚಾರಣೆಗಾಗಿ ಪೊಲೀಸರು ತಮ್ಮ ವಶಕ್ಕೆ ಪಡೆದಿದ್ದಾರೆ.

'ಆರೋಪಿಗಳನ್ನು ಸಿದ್ದಾಪುರ ಠಾಣೆಯಲ್ಲೇ ವಿಚಾರಣೆ ಒಳಪಡಿಸಲಾಯಿತು. ಠಾಣೆಯ ಹೊರಗೆ ನೂರಾರು ಸಂಖ್ಯೆಯಲ್ಲಿ ಜನರು ಸೇರಿದ್ದರು. ಪ್ರತಿಭಟನೆಯಲ್ಲಿ ತೊಡಗಿದ್ದರಿಂದ ಜನರನ್ನು ಚದುರಿಸಿ, ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

'ಹತ್ಯೆ ಘಟನೆಗೆ ಸಂಬಂಧಿಸಿದಂತೆ ಬಂಧಿತ ಮೂವರು ಯುವಕರನ್ನು ಹೆಚ್ಚಿನ ವಿಚಾರಣೆಗಾಗಿ ವಶಕ್ಕೆ ಪಡೆಯಲಾಗಿದೆ. ಹತ್ಯೆ ನಡೆದಿದ್ದ ದಿನವೇ ಕಿರುಕುಳ ಬಗ್ಗೆ ಸಿದ್ದಾಪುರ ಠಾಣೆಗೆ ದೂರು ನೀಡಲು ಬಂದಿದ್ದರೂ ನಿರ್ಲಕ್ಷಿಸಿದ ಆರೋಪದ ಮೇಲೆ ಪೊಲೀಸ್ ಸಿಬ್ಬಂದಿಯನ್ನೂ ವಿಚಾರಣೆ ನಡೆಸಲಾಗುತ್ತಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್ ತಿಳಿಸಿದ್ದಾರೆ.

# 2 ಸಾವಿರ ಬೋಧಕರ ನೇಮಕ ಶೀಘ್ರ

## ನೇರ ನೇಮಕಾತಿ ಮೂಲಕ ಭರ್ತಿ: ಶಿಕ್ಷಣ ಇಲಾಖೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಎಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್‌ಗಳು ಹಾಗೂ ಯುವಿಸಿಇಯಲ್ಲಿ ಎರಡು ಸಾವಿರ ಬೋಧಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಉನ್ನತ ಶಿಕ್ಷಣ ಇಲಾಖೆ ಬುಧವಾರ ಆದೇಶ ಹೊರಡಿಸಿದೆ.

ಪ್ರಥಮ ದರ್ಜೆ ಕಾಲೇಜುಗಳ 826 ಸಹಾಯಕ ಪ್ರಾಧ್ಯಾಪಕರು, ಪಾಲಿಟೆಕ್ನಿಕ್‌ಗಳ 941 ಉಪನ್ಯಾಸಕರು, ಎಂಜಿನಿಯರಿಂಗ್ ಕಾಲೇಜುಗಳ 186 ಸಹಾಯಕ ಪ್ರಾಧ್ಯಾಪಕರು ಹಾಗೂ ಯುವಿಸಿಇಯಲ್ಲಿ 47 ಬೋಧಕ ಹುದ್ದೆಗಳನ್ನು ಸರ್ಕಾರದ ನಿಯಮಾನುಸಾರ ಭರ್ತಿ ಮಾಡಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕಾಲಕಾಲಕ್ಕೆ ಅನ್ವಯವಾಗುವ ಮೀಸಲಾತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಕಲ್ಯಾಣ ಕರ್ನಾಟಕ ವೃಂದಕ್ಕೆ ಮೀಸಲಿರಿಸಿರುವ ಹುದ್ದೆಗಳನ್ನು ನಿಯಮಾನುಸಾರ ವರ್ಗೀಕರಿಸಬೇಕು. ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ ಅಗತ್ಯ ವಿದ್ಯಾರ್ಹತೆ ಹಾಗೂ ನೇಮಕಾತಿ ನಿಯಮಗಳನ್ನು ಪಾಲಿಸಬೇಕು ಎಂದು ಸೂಚಿಸಲಾಗಿದೆ.

**ಮುಖ್ಯಾಂಶಗಳು**
- 826 ಸಹಾಯಕ ಪ್ರಾಧ್ಯಾಪಕರ ಭರ್ತಿ
- 941 ಉಪನ್ಯಾಸಕರು

## ಕೊಠಡಿ ನಿರ್ಮಾಣಕ್ಕೆ ₹94 ಕೋಟಿ

ಬೆಂಗಳೂರು: ವಿವಿಧ ಪದವಿ ಪೂರ್ವ ಕಾಲೇಜುಗಳಲ್ಲಿ ಹೆಚ್ಚುವರಿ ಕೊಠಡಿ ಮತ್ತು ಶೌಚಾಲಯಗಳ ನಿರ್ಮಾಣ ಹಾಗೂ ಕೊಠಡಿಗಳ ದುರಸ್ತಿಗೆ ₹94.38 ಕೋಟಿ ವೆಚ್ಚದ ಕ್ರಿಯಾ ಯೋಜನೆಗೆ ಸರ್ಕಾರ ಅನುಮೋದನೆ ನೀಡಿದೆ.

ಹೆಚ್ಚುವರಿ ಕೊಠಡಿ ಮತ್ತು ಶೌಚಾಲಯಗಳ ನಿರ್ಮಾಣ, ದುರಸ್ತಿಗೆ ಹಣಕಾಸು ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2025–26ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದರು. ಅದರಂತೆ ಕ್ರಿಯಾಯೋಜನೆ ಸಲ್ಲಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಗೆ (ಪದವಿ ಪೂರ್ವ) ಸೂಚಿಸಲಾಗಿತ್ತು.

116 ಕಾಲೇಜುಗಳಲ್ಲಿ 268 ಕೊಠಡಿಗಳು ಮತ್ತು 123 ಶೌಚಾಲಯಗಳ ನಿರ್ಮಾಣ, 93 ಕಾಲೇಜುಗಳ 264 ಕೊಠಡಿಗಳ ದುರಸ್ತಿಗೆ ₹94.38 ಕೋಟಿ ವೆಚ್ಚದ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ, ಸಲ್ಲಿಸಲಾಗಿತ್ತು. ಪರಿಶಿಷ್ಟ ಜಾತಿಗಳ ಉಪಯೋಜನೆ ಅಡಿಯಲ್ಲಿ ₹19.74 ಕೋಟಿ, ಪರಿಶಿಷ್ಟ ಪಂಗಡಗಳ ಉಪಯೋಜನೆ ಅಡಿಯಲ್ಲಿ ₹7.99 ಕೋಟಿ ಹಾಗೂ ಸಾಮಾನ್ಯ ಅನುದಾನದಲ್ಲಿ ₹66.66 ಕೋಟಿ ಬಳಸಿಕೊಳ್ಳಬಹುದು ಎಂದು ವಿವರಿಸಿತ್ತು. ಈ ಕ್ರಿಯಾ ಯೋಜನೆಗೆ ಸರ್ಕಾರವು ಅನುಮೋದನೆ ನೀಡಿ, ಆದೇಶಿಸಿದೆ.


**ಪೊಲೀಸ್ ಮಹಾನಿರೀಕ್ಷಕರು, ಬಳ್ಳಾರಿ ವಲಯ, ಬಳ್ಳಾರಿ ರವರ ಕಾರ್ಯಾಲಯ.**
ಎಸ್.ಪಿ ರವರ ಕಛೇರಿ ಆವರಣ, ದುರಗುಮ್ಮ ದೇವಸ್ಥಾನದ ಹತ್ತಿರ, ಬಳ್ಳಾರಿ.
ದೂ.ಸಂ.08392–254400. ಇ–ಮೇಲ್: patoigpblr@ksp.gov.in
ಸಂ.18/ಎಸ್‌ಟಿಎಸ್/ಡ್ರೋನ್/ಐಜಿಪಿ/ಬವ/2025–26 ದಿ :03.02.2026
**ಟೆಂಡರ್ ಪ್ರಕಟಣೆ**
ಪೊಲೀಸ್ ಮಹಾನಿರೀಕ್ಷಕರು, ಬಳ್ಳಾರಿ ವಲಯ, ಬಳ್ಳಾರಿಗೆ 10 **Unmanned Aerial Vehicle (Drone)** ಗಳನ್ನು ಖರೀದಿಸುವ ಕುರಿತು ಕೆ.ಟಿ.ಪಿ.ಪಿ ನಿಯಮಗಳಡಿ ನೊಂದಾಯಿತ ಅರ್ಹ ಸರಭರಾಜುದಾರರಿಂದ ದ್ವಿ–ಲಕೋಟೆಯಲ್ಲಿ ದಿ:03.02.2026 ರಂದು ಟೆಂಡರ್ **KSP/2025-26/IND0534** ನ್ನು ಅಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್ ನ್ನು ಸಲ್ಲಿಸಲು ಕೊನೆಯ ದಿನಾಂಕ:17.02.2026 ಇರುತ್ತದೆ. ಹೆಚ್ಚಿನ ವಿವರಗಳನ್ನು **www.kppp.karnataka.gov.in** ಜಾಲತಾಣದಲ್ಲಿ ನೋಡಬಹುದಾಗಿದೆ.
ಸಹಿ/– ಪೊಲೀಸ್ ಮಹಾ ನಿರೀಕ್ಷಕರು, ಬಳ್ಳಾರಿ ವಲಯ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/963/ಕೆಎಸ್‌ಎಂಸಿಎ/2025–26

**ಕಾರ್ಕಳ ಪುರಸಭೆ, ಕಾರ್ಕಳ, ಉಡುಪಿ ಜಿಲ್ಲೆ–574104**
ದೂರವಾಣಿ: 08258–230292, 231023 ಫ್ಯಾಕ್ಸ್: 08258–235664
E-Mail: itstaff_ulb_karkala@yahoo.co.in, tmckarkala@yahoo.co.in
Website: www.karkalatown.mrc.gov.in
ಸಂ: ಪುಸಕಾ:ರೋ.ಸ್ಕಿ.ಮೆ:ಸಿಆರ್:05/2025–26 ದಿನಾಂಕ: 02–02–2026
**ಮರು ಇ–ಟೆಂಡರ್ ಪ್ರಕಟಣೆ**
ಕಾರ್ಕಳ ಪುರಸಭೆಯ ಸ್ವಚ್ಛ ಭಾರತ್ ಮಿಷನ್ 1.0 (ನಗರ) ಯೋಜನೆ (ಉಳಿಕೆ) ಅನುದಾನದಡಿ ಈ ಕೆಳಗಿನ ಕಾಮಗಾರಿಯನ್ನು ನಿರ್ವಹಿಸಲು ಅರ್ಹ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ನಿರ್ದಿಷ್ಟ ಟೆಂಡರ್ ದಸ್ತಾವೇಜಿನಲ್ಲಿ **(Standard tender document)** ಟೆಂಡರನ್ನು **KPPP** ಪೋರ್ಟಲ್ **(Website: kppp.karnataka.gov.in/)** ಮುಖಾಂತರ ಆಹ್ವಾನಿಸಲಾಗಿದೆ.
**(1) DMA/2025-26/BD/WORK_INDENT54631-ರೂ. 10.42 ಲಕ್ಷ**
**ಪೋರ್ಟಲ್ ಮುಖಾಂತರ ಸ್ವೀಕರಿಸುವ ಕೊನೆಯ ದಿನಾಂಕ: 16–02–2026 ಅಪರಾಹ್ನ: 4:30 ಗಂಟೆ, ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 18–02–2026 ಪೂರ್ವಾಹ್ನ 10:30 ಗಂಟೆ**
ಸಹಿ/– ಮುಖ್ಯಾಧಿಕಾರಿ, ಪುರಸಭೆ, ಕಾರ್ಕಳ, ಉಡುಪಿ ಜಿಲ್ಲೆ.
ವಾಸಾಸಂಇ/ಉಡುಪಿ/ಕೆಎಸ್‌ಎಂಸಿಎ/700/25–26 ದಿ: 04.02.2026

**ಇಡಿಸಿಎಸ್ ನಿರ್ದೇಶನಾಲಯ**
ಎಂಬಸಿ ಐಕಾನ್ ಕಟ್ಟಡ. 4ನೇ ಮಹಡಿ, ಇನ್ಫೆಂಟ್ರಿ ರಸ್ತೆ, ಬೆಂಗಳೂರು–560001
ದೂರವಾಣಿ:080–22230281/0282, ಇ–ಮೇಲ್: dir-edcs@karnataka.gov.in
ಸಂ.: EDCS/14/ADM/2020(e-322126) ದಿನಾಂಕ: 05.02.2026
**ಟೆಂಡರ್ ಪ್ರಕಟಣೆ**
**ಇಡಿಸಿಎಸ್ ನಿರ್ದೇಶನಾಲಯದ ಬೆಂಗಳೂರುಒನ್ ಮತ್ತು ಕರ್ನಾಟಕಒನ್ ಯೋಜನೆಗಳಿಗೆ ಬ್ಯಾಂಕಿಂಗ್ ಪಾಲುದಾರರನ್ನು ಆಯ್ಕೆ ಮಾಡುವ ಕುರಿತು.**
ಇಡಿಸಿಎಸ್ ನಿರ್ದೇಶನಾಲಯದ ಬೆಂಗಳೂರುಒನ್ ಮತು ್ತಕರ್ನಾಟಕಒನ್ ಯೋಜನೆಗಳಿಗೆ ಬ್ಯಾಂಕಿಂಗ್ ಪಾಲುದಾರರನ್ನು ಆಯ್ಕೆ ಮಾಡಲು ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ವಿವರಗಳನ್ನು E-Procurement ವೆಬ್‌ಸೈಟ್‌ನಲ್ಲಿ https://kppp.karnataka.gov.in ಟೆಂಡರ್ ಸಂಖ್ಯೆ: DPAREGOV/2025-26/SE0036 ರಲ್ಲಿ ಪಡೆಯಬಹುದು. ಬಿಡ್ ಅನ್ನು ದಿನಾಂಕ: **10.03.2026 ಸಂಜೆ 05.30 ಗಂಟೆಯೊಳಗೆ** ಸಲ್ಲಿಸಬಹುದಾಗಿರುತ್ತದೆ.
ಸಹಿ/– ನಿರ್ದೇಶಕರು, ಇಡಿಸಿಎಸ್ ನಿರ್ದೇಶನಾಲಯ
DIPR/CP/SA/5427/2025-26

**ಕಾನೂನು ಮಾಪನಶಾಸ್ತ್ರ ಇಲಾಖೆ**
ಕಾನೂನು ಮಾಪನಶಾಸ್ತ್ರ ನಿಯಂತ್ರಕರ ಕಛೇರಿ, "ಮಾಪನಸೌಧ", 4ನೇ ಮಹಡಿ, ನಂ.1, ಅಲಿ ಆಸ್ಕರ್ ರಸ್ತೆ, ಪಿ.ಬಿ. ಸಂಖ್ಯೆ.175, ಬೆಂಗಳೂರು.
ಸಂಖ್ಯೆ: ಕಾಮಾಇ/ಬಾ.ಮೂ/ಸಿಆರ್–22/2025–26 ದಿನಾಂಕ: 03–02–2026
**ಇ–ಟೆಂಡರ್ ಅಧಿಸೂಚನೆ**
ರಾಜ್ಯ ಸರ್ಕಾರವು ಕಾನೂನು ಮಾಪನಶಾಸ್ತ್ರ ಇಲಾಖೆಯ ಬೆಂಗಳೂರು ನಗರ ಹಾಗೂ ಜಿಲ್ಲಾ ಕೇಂದ್ರದ/ತಾಲ್ಲೂಕು ಕಛೇರಿಗಳಲ್ಲಿ ಖಾಲಿ ಇರುವ ಡೇಟಾ ಎಂಟ್ರಿ ಅಸಿಸ್ಟೆಂಟ್ (ಕಂಪ್ಯೂಟರ್ ಆಪರೇಟರ್), ವಾಹನ ಚಾಲಕರು, ಕ್ರೇನ್ ಲಾರಿ ಚಾಲಕರು ಕ್ರೇನ್ ಲಾರಿ ಸಹಾಯಕರು ಹಾಗೂ ಗ್ರೂಪ್ "ಡಿ" ಹುದ್ದೆಗಳಿಗೆ (ಬಾಹ್ಯ ಮೂಲದಿಂದ) ಹೊರ ಸಂಪನ್ಮೂಲದ ಏಜೆನ್ಸಿಯ ಮುಖಾಂತರ ಸೇವೆಯನ್ನು ಪಡೆಯುವ ಬಗ್ಗೆ ಇ–**ಟೆಂಡರ್**.
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ).
**ಟೆಂಡರ್ ವೇಳಾಪಟ್ಟಿ/ಬಿಡ್ಡಿಂಗ್ ಶೆಡ್ಯೂಲ್:** 1) ಇ–ಪೋರ್ಟಲ್ ವೆಬ್‌ಸೈಟ್‌ನಿಂದ ಟೆಂಡರ್ ಫಾರಂ ಉಚಿತವಾಗಿ **ದಿನಾಂಕ: 04.02.2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ: **13.02.2026 ಅಪರಾಹ್ನ 12.00 ಗಂಟೆಗೆ.** 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **21.02.2026 ಸಂಜೆ 5.30 ಗಂಟೆವರೆಗೆ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **24.02.2026 ಬೆಳಿಗ್ಗೆ 11.00 ಗಂಟೆಗೆ.** 5) ಆರ್ಥಿಕ ಬಿಡ್ ತೆರೆಯುವ ದಿನಾಂಕ: **27.02.2026 ಬೆಳಿಗ್ಗೆ 11.00 ಗಂಟೆಗೆ.** 6) ಇ.ಎಂ.ಡಿ ಮೊತ್ತ: **ರೂ.1,00,000/–.** 7) ತೆರೆಯುವ ಸ್ಥಳ: ಕಾನೂನು ಮಾಪನಶಾಸ್ತ್ರ ನಿಯಂತ್ರಕರ ಕಛೇರಿ, ಮಾಪನಸೌಧ, 4ನೇ ಮಹಡಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560052. ದೂರವಾಣಿ ಸಂಖ್ಯೆ: 080–22253500.
ಸಹಿ/– ನಿಯಂತ್ರಕರು, ಕಾನೂನು ಮಾಪನಶಾಸ್ತ್ರ ಇಲಾಖೆ
ವಾಸಾಸಂಇ/ವಾ.ಪ್ರ/5410/ಎಂಎಎ/2025–26

ಕರ್ನಾಟಕ ಸರ್ಕಾರ — ಲೋಕೋಪಯೋಗಿ ಇಲಾಖೆ
**ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.**
ಪ್ರಕಟಣೆ ಸಂ: ಐಎಫ್‌ಟಿ–39/ಎಇ–2/2025–26 ದಿನಾಂಕ:– 04.02.2026
**ಅಲ್ಪಾವಧಿ ಕೆಪಿಪಿಪಿ ಟೆಂಡರ್ ಪ್ರಕಟಣೆ**
ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ 39/ ಎಇ–2/2025–26 ದಿನಾಂಕ: 04.02.2026.
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ಹರಿಹರ ಮತ್ತು ದಾವಣಗೆರೆ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ **ಲೆಕ್ಕಶೀರ್ಷಿಕೆ : 4059~80~051~0~60~132~ ಮುಖ್ಯ ಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು 4 ಕಾಮಗಾರಿಗಳಿಗೆ ಮೊತ್ತ 350.00 ಲಕ್ಷದಿಂದ 150.00 ಲಕ್ಷಗಳವರೆಗೆ (ಇಂಡೆಂಟ್ ನಂ. 31609,31611,31610,32605) ಮತ್ತು ಲೆಕ್ಕಶೀರ್ಷಿಕೆ : ಲೆಕ್ಕಶೀರ್ಷಿಕೆ :5054–03–337–0–17–154 ಯೋಜನೆ (ರಾಜ್ಯ ಹೆದ್ದಾರಿ ಸುಧಾರಣೆ) ಅಡಿ 1 ಕಾಮಗಾರಿ ರೂ. 500.00 ಲಕ್ಷ (ಇಂಡೆಂಟ್ ಸಂ : 32214)** ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

| ನಿಗಧಿತ ದಿನಾಂಕಗಳ ವಿವರ | ಕ್ರ.ಸಂ. 1 & 5ರ ಕಾಮಗಾರಿಗಳಿಗೆ | ಕ್ರ.ಸಂ. 2,3 & 4ರ ಕಾಮಗಾರಿಗಳಿಗೆ |
|---|---|---|
| 1. ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗಧಿಪಡಿಸಿದ ದಿನಾಂಕ : | 05.02.2026 ಸಂಜೆ 4.00 ಗಂಟೆಗೆ | 05.02.2026 ಸಂಜೆ 4.00 ಗಂಟೆಗೆ |
| 2. ಪ್ರಿಬಿಡ್ ಮೀಟಿಂಗ್ ಸ್ಥಳ : ಕಾರ್ಯಪಾಲಕ ಇಂಜಿನಿಯರ್, ಲೋಇ ವಿಭಾಗ, ಪಿ.ಬಿ ರಸ್ತೆ, ದಾವಣಗೆರೆ, ದಿನಾಂಕ | 07.02.2026 ಬೆಳಗ್ಗೆ 11.30 ಗಂಟೆಗೆ | 07.02.2026 ಬೆಳಗ್ಗೆ 11.30 ಗಂಟೆಗೆ |
| 3. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : | 19.02.2026 ಸಂಜೆ 4.00 ಗಂಟೆಗೆ | 12.02.2026 ಸಂಜೆ 4.00 ಗಂಟೆಗೆ |
| 4. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : | 20.02.2026 ಸಂಜೆ 4.30 ಗಂಟೆಗೆ | 13.02.2026 ಸಂಜೆ 4.30 ಗಂಟೆಗೆ |

ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.
ವಾಸಾಇ/ಡಿವಿಜಿ/710/ ಕೆಎಸ್‌ಎಂಸಿಎ/2025–26 — ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

**ರಾಷ್ಟ್ರೀಯ ಆರೋಗ್ಯ ಅಭಿಯಾನ**
**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ**
ಕೆ.ಸಿ. ಪಾರ್ಕ್ ಹತ್ತಿರ, ಹಳಿಯಾಳ ರಸ್ತೆ, ಧಾರವಾಡ. ದೂರವಾಣಿ ಸಂಖ್ಯೆ: 0836–2951501
ಇ–ಮೇಲ್: dhodharwad@gmail.com / rchodharwad@gmail.com
ಸಂಖ್ಯೆ: NHM/DWD/MPT/308/2025-26 ದಿನಾಂಕ: 03–02–2026
**ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ**
**Tender No: DHFWS/2025-26/SE1834**
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಧಾರವಾಡ ದಿಂದ **ರಾಷ್ಟ್ರೀಯ ಆರೋಗ್ಯ ಅಭಿಯಾನ ಮತ್ತು ನಮ್ಮ ಕ್ಲೀನಿಕ್ ಯೋಜನೆಗಳಡಿ 2025–26 ನೇ ಸಾಲಿನಲ್ಲಿ ಅನುಮೋದನೆಯಾದಂತೆ ಮಾನವ ಸಂಪನ್ಮೂಲವನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು** ನೋಂದಾಯಿತ ಮಾನವ ಸಂಪನ್ಮೂಲ ಏಜೆನ್ಸಿಯಿಂದ ಕೆ.ಟಿ.ಪಿ.ಪಿ. ನಿಯಮ–1999 ಹಾಗೂ ನಿಯಮಗಳು 2000 ರ ಪ್ರಕಾರ ವೆಬ್‌ಸೈಟ್: **https://kppp.karnataka.gov.in** ಮೂಲಕ ಟೆಂಡರ್ ಕರೆಯಲಾಗಿದೆ.
**1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 17–02–2026 ರಂದು ಸಂಜೆ 4.30 ಗಂಟೆವರೆಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 19–02–2026 ರಂದು ಸಂಜೆ 5.00 ಗಂಟೆಗೆ. 3) ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in** ಮೂಲಕ ಮಾತ್ರ ಸಲ್ಲಿಸುವುದು. **4)** ಟೆಂಡರ್ ಕುರಿತ ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಥವಾ ನಮ್ಮ ಕಚೇರಿಯನ್ನು ಸಂಪರ್ಕಿಸಿ ಪಡೆಯಬಹುದು.
ಸಹಿ/– ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು, ಧಾರವಾಡ. — ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಧಾರವಾಡ.
ವಾಸಾಸಂಇ/ಧಾರವಾಡ/1189/ಅಡ್ವರ್ಟೋರ್/2025–26

**ಕರ್ನಾಟಕ ನಗರ ಮೂಲ ಸೌಕರ್ಯಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ ಎನ್.ಕೆ.ಯು.ಎಸ್.ಐ.ಪಿ–ಕೋಶ ಉಪವಿಭಾಗಾಧಿಕಾರಿಗಳ ಕಾರ್ಯಾಲಯದ ಆವರಣ ಕೆಎಸ್‌ಆರ್‌ಟಿಸಿ ಬಸ್ ಡಿಪೊ ಎದುರುಗಡೆ, ಮುಳಗುಂದ್ ನಾಕಾ, ಗದಗ–582101.**
**ಪೋನ್ : 08372–230068**
**E-mail : eenkusipcell.gadag@gmail.com**
ಸಂಖ್ಯೆ: ಕಾನಿಇಂ/ಕೆಯುಐಡಿಎಫ್‌ಸಿ/ಐಆರ್–46/2025–26/ ದಿನಾಂಕ : 04.02.2026
**ಟೆಂಡರ್ ಪ್ರಕಟಣೆ**
ಗದಗ–ಬೆಟಗೇರಿ ಅವಳಿನಗರಕ್ಕೆ ಸಿಂಗಟರಾಯನ ಕೆರೆ ಹತ್ತಿರ ಜಲ ಸಂಗ್ರಹಗಾರ **(IR)** ನಿರ್ಮಾಣಕ್ಕಾಗಿ, **Geotechnical Investigation, Drilling Borehole and Carrying out the Percolation test** ಮಾಡಲು ಟೆಂಡರ್ ಪ್ರಕಟಿಸಲಾಗಿದೆ. ವಿವರಗಳನ್ನು ವೆಬ್‌ಸೈಟ್ ವಿಳಾಸ: **https://kppp.karnataka.gov.in** ರಲ್ಲಿ ದಿನಾಂಕ : **05.02.2026** ರಿಂದ ದಿನಾಂಕ : **20.02.2026** ರ 17.30 ಗಂಟೆಯ ವರೆಗೆ ಲಭ್ಯವಿರುತ್ತದೆ. ಆಸಕ್ತ ಬಿಡ್ಡುದಾರರು ಇ–ಪ್ರೋಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರವೇ ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ. ಇದರ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಯನ್ನು ಇ–ಪ್ರೋಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿದುಕೊಳ್ಳಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಎನ್‌ಕೆಯುಎಸ್‌ಐಪಿ–ಕೋಶ, ಗದಗ–ಬೆಟಗೇರಿ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/619/2025–26

**ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ**
ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು–560 010.
ದೂ.ಸಂ.: 080–23157189, ಫ್ಯಾಕ್ಸ್: 080–23301683
ಇ–ಮೇಲ್: gttc.projects@karnataka.gov.in, ವೆಬ್‌ಸೈಟ್: https://gttc.karnataka.gov.in
No: GTTC/PROJ/CIVIL-ELE/WORKS/BD-157,158/2025-26 Date:04.02.2026
**ಇ–ಟೆಂಡರ್ ಪ್ರಕಟಣೆ**
2025–26ನೇ ಸಾಲಿನಲ್ಲಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ನ್ನು ಇ– ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.

| ಕ್ರ.ಸಂ. | ಬಿಡ್ ನಂ. | ಜಿಟಿಟಿಸಿ ಕೇಂದ್ರ | ಕಾಮಗಾರಿ ವಿವರ |
|---|---|---|---|
| 1 | 157 | ಮಧುಗಿರಿ | ತುಮಕೂರು ಜಿಲ್ಲೆ ಮಧುಗಿರಿಯಲ್ಲಿ ನೂತನ ಜಿಟಿಟಿಸಿ ಕೇಂದ್ರ ಸ್ಥಾಪನೆ |
| 2 | 158 | ಸಿಂಧನೂರು | ರಾಯಚೂರು ಜಿಲ್ಲೆ ಸಿಂಧನೂರಿನಲ್ಲಿ ನೂತನ ಜಿಟಿಟಿಸಿ ಕೇಂದ್ರ ಸ್ಥಾಪನೆ |

ಟೆಂಡರ್ ದಾಖಲಾತಿಗಳು ಇ–ಪೋರ್ಟಲ್‌ನಲ್ಲಿ **ದಿನಾಂಕ: 06.02.2026 ರಿಂದ** ಲಭ್ಯವಿದ್ದು ಮತ್ತು ಪೂರ್ವ ಸಭೆಯ **ದಿನಾಂಕ: 20.02.2026 ರಂದು** ಹಾಗೂ ದಾಖಲೆಗಳನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 09.03.2026 ಸಂಜೆ 5:30 ಗಂಟೆಯವರೆಗೆ.** ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್ **https://kppp.karnataka.gov.in** ಮೂಲಕ ಅಥವಾ ಸಹಾಯವಾಣಿ ಸಂಖ್ಯೆ + 91 9240214000, + 91 9240214001 ನಲ್ಲಿ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ ಬಾಗಲಕೋಟೆ
**ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಬಾಗಲಕೋಟೆ**
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ
ದೂರವಾಣಿ: 08354–235042 ಇ–ಮೇಲ್: bgkeezpe@yahoo.com ಫ್ಯಾಕ್ಸ್: 08354–235043
ಸಂ:ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ–2/ಸಿ.ಎಮ್.ಐ.ಡಿ.ಪಿ/ಟೆಂಡರ್/2025–26/5488 ದಿನಾಂಕ: 03.02.2026
**ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಏಕ & ದ್ವಿ–ಲಕೋಟೆ ಟೆಂಡರ್ ಪ್ರಕಟಣೆ ಕೆ.ಡಬ್ಲ್ಯೂ–1, 2 & 3 ಬಿಡ್ ಡಾಕ್ಯೂಮೆಂಟ್**
ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಸನ್ 2025–26ನೇ ಸಾಲಿನ ವಿವಿಧ ಲೆಕ್ಕಶಿರ್ಷಿಕೆಯಡಿಯಲ್ಲಿ ಬಾಗಲಕೋಟೆ, ಬೀಳಗಿ, ಹುನಗುಂದ, ಮುಧೋಳ, ರಬಕವಿ ಬನಹಟ್ಟಿ, ಹಾಗೂ ಬಾದಾಮಿ ತಾಲೂಕಿನ ಕಾಮಗಾರಿಗಳಿಗೆ **Standard Tender Document KW-1, 2 & 3** ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ **1999–2000**ರ ಪ್ರಕಾರ ಆ್ಯಕ್ಟ್ **2000**ರ ನಿಯಮದಂತೆ ಏಕ & ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
**ಸಾಮಾನ್ಯ ಗುತ್ತಿಗೆ ಇಂಡೆಂಟ್ ನಂ: 22142/CALL-2, 18132/CALL-2, 2286, 20705/CALL-2, 23972, 23813, 23894**
**ಪ್ರವರ್ಗ–2 (ಎ) ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ: 22138/CALL-2, 22787, 17067/CALL-2, 23787**
**ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ: 22156/CALL-2, 22862, 24076, 18785**
ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ **(ರೂ.6.00 ದಿಂದ 90.00 ಲಕ್ಷಗಳ ಮಿತಿಗೊಳಪಟ್ಟು)**, ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ ಮತ್ತು ಸಮಯ: 17.02.2026** ರ **ಸಾಯಂಕಾಲ 5.30 ಗಂಟೆವರೆಗೆ.**
ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ ಮತ್ತು ಸಮಯ: 19.02.2026 ರಂದು ಮುಂಜಾನೆ 11.00 ಗಂಟೆಯ** ನಂತರ. (ತಾಂತ್ರಿಕ ಬಿಡ್ ದ್ವಿ ಲಕೋಟೆ ಟೆಂಡರ್‌ಗಳಿಗೆ ಮಾತ್ರ ಅನ್ವಯಿಸುತ್ತದೆ.)
ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕ ಬಿಡ್ ಅನುಮೋದನೆ ನಂತರ
**ಸೂಚನೆ:** ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಅಥವಾ ವೆಬ್‌ಸೈಟ್ https://kppp.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.
ವಾ.ಸಾ.ಇ/ಬಾಗಲಕೋಟೆ/557/ ದೇಶಪಾಂಡೆಪಬ್ಲಿಸಿಟಿ/2025–26 — ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಪಂಚಾಯತ ರಾಜ್ (ಇಂ)ವಿಭಾಗ, ಬಾಗಲಕೋಟೆ.

**ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ**
ಉಪ ಪ್ರಧಾನ ವ್ಯವಸ್ಥಾಪರು–1 ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052.
ಸಂಖ್ಯೆ: ಡಿಜಿಎಂ–1/(ಬಿಎಸ್‌ಡಬ್ಲ್ಯೂಎಂಎಲ್)/ಪಿಆರ್/1066/25–26 ದಿನಾಂಕ: 04.02.2026
**ತಿದ್ದುಪಡಿ–3**
ವಿಷಯ: ಟೆಂಡರ್ ಅಧಿಸೂಚನೆಯ ವೇಳಾ ಪಟ್ಟಿಯಲ್ಲಿ ಬದಲಾವಣೆ
ಉಲ್ಲೇಖ: 1. ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಉಪ್ರವ್ಯ–1/ ಬಿಎಸ್‌ಡಬ್ಲ್ಯೂಎಂಎಲ್/ ಟೆಂಡರ್/16/2025–26 ದಿನಾಂಕ: 30.12.2025.
ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮೇಲಿನ ಟೆಂಡರ್ ಪ್ರಕಟಣೆಯ ವೇಳಾಪಟ್ಟಿಯನ್ನು ತಾಂತ್ರಿಕ ಕಾರಣಗಳಿಂದಾಗಿ ವಿಸ್ತರಿಸಲಾಗಿದೆ. ಬದಲಾದ ವೇಳಾ ಪಟ್ಟಿಯನ್ನು ಕೆಳಗಿನ ಕೋಷ್ಟಕದಲ್ಲಿ ಸೂಚಿಸಲಾಗಿದೆ.
**ನಿಗಧಿತ ಅವಧಿ / ವೇಳಾ ಪಟ್ಟಿ**

| ಕ್ರ.ಸಂ | | ಟೆಂಡರ್ ಅಧಿಸೂಚನೆಯ ಪ್ರಕಾರ ತಿದ್ದುಪಡಿ–1&2 | ವಿಸ್ತರಿಸಲಾದ ದಿನಾಂಕಗಳನ್ನು ಓದಿಕೊಳ್ಳುವುದು |
|---|---|---|---|
| 1 | ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ | 04.02.2026 ರಂದು 16:00 ಗಂಟೆಯವರೆಗೆ | 09.02.2026 ರಂದು 16:00 ಗಂಟೆಯವರೆಗೆ |
| 2 | ಬಿಡ್ ತೆರೆಯುವುದು | 05.02.2026 ರಂದು 16:30 ಗಂಟೆಯ ನಂತರ | 10.02.2026 ರಂದು 16:30 ಗಂಟೆಯ ನಂತರ |

ಹೆಚ್ಚಿನ ವಿವರಗಳಿಗಾಗಿ ಜಿಓಕೆ ಕೆಪಿಪಿ ಪೋರ್ಟಲ್ ವೆಬ್‌ಸೈಟ್ **www.kppp.karnataka.gov.in** ಗೆ ಭೇಟಿ ನೀಡಿ.
ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–1, ಬಿಎಸ್‌ಡಬ್ಲ್ಯೂಎಂಎಲ್
ವಾಸಾಸಂಇ/ವಾ.ಪ್ರ/5407/ಶಿರಡಿ ಸಾಯಿ/2025–26

**ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು**
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 30/2025–26 ದಿನಾಂಕ: 31–01–2026
**ಅಲ್ಪಾವಧಿ ಟೆಂಡರ್ ಪ್ರಕಟಣೆ**
ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಲೆಕ್ಕ ಶೀರ್ಷಿಕೆ: 5054–03–337–0–17–154 ರಾಜ್ಯ ಹೆದ್ದಾರಿ ರಸ್ತೆ ಸುಧಾರಣೆಗಳು, 5054–03–337–0–16–154 ರಾಜ್ಯ ಹೆದ್ದಾರಿ ಸೇತುವೆಗಳ ಸುಧಾರಣೆಗಳು 3054–03–102–0–01–200 ರಾಜ್ಯ ಹೆದ್ದಾರಿ ಸೇತುವೆಗಳ ನಿರ್ವಹಣೆ, 4059–80–051–0–60–132 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು, 8443–00–117–0–16–542 ಠೇವಣಿ ವಂತಿಕೆ, 3054–03–337–0–05–200 ರಾಜ್ಯ ಹೆದ್ದಾರಿ ನಿರ್ವಹಣೆ, 3054–04–337–1–10–200 ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ, 2216–07–053–0–01–200–ಲೋಕೋಪಯೋಗಿ ವಸತಿ ಗೃಹಗಳು ಹಾಗೂ ನ್ಯಾಯಾಂಗ ವಸತಿಗೃಹಗಳ ದುರಸ್ತಿ/ನಿರ್ವಹಣೆ ಅಡಿಯಲ್ಲಿನ ಒಟ್ಟು 34 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಹಾಗೂ 02 ಕಾಮಗಾರಿಗಳಿಗೆ ಮ್ಯಾನ್ಯುಯಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document KW –1,2,3 & 4 ರಂತೆ) ವಿವರಗಳನ್ನು ಲಗತ್ತಿಸತಕ್ಕದು, ಗುತ್ತಿಗೆದಾರರಿಗೆ ಅಧಿನಿಯಮ 3ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ.2.50 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ.500.00 ಲಕ್ಷಗಳು ಆಗಿರುತ್ತವೆ. ಮ್ಯಾನ್ಯುಯಲ್ ಮೂಲಕ ಅರ್ಹ ಗುತ್ತಿಗೆದಾರರು ದಿನಾಂಕ: 07.02.2026 ರಿಂದ 10.02.2026 ರವರೆಗೆ ನಿಗಧಿತ ಶುಲ್ಕ ಪಾವತಿಸಿ ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಬೇಕು, ದಿನಾಂಕ:16.02.2026 ರಂದು ಖಾಲಿ ಟೆಂಡರ್ ಫಾರಂ ಪಡೆದು, ದಿನಾಂಕ:18.02.2026 ರಂದು ಸಂಜೆ 5.00 ರವರೆಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಬೇಕು ಹಾಗೂ ಕೆಪಿಪಿ ಪೋರ್ಟಲ್ ಟೆಂಡರ್ ಸಲ್ಲಿಸಬೇಕಾಗಿರುವ 34 ಕಾಮಗಾರಿಗಳಿಗೆ (ಇ.ಸಂಖ್ಯೆ:29891, 29902, 32187 (2ನೇ ಕರೆ), SE0776 (3ನೇ ಕರೆ), SE0759 (3ನೇ ಕರೆ), 29245 (4ನೇ ಕರೆ) ದಿನಾಂಕ:07.02.2026, ಇ.ಸಂಖ್ಯೆ:SE0774 (3ನೇ ಕರೆ), ದಿನಾಂಕ:09.02.2026, ಇ.ಸಂಖ್ಯೆ: 30073, 29598 ದಿನಾಂಕ: 10.02.2026, ಇ.ಸಂಖ್ಯೆ:32720, 32913, 32714, 32716, 32717, 32320, 32431, 32912, 32667 ದಿನಾಂಕ: 11.02.2026 ಇ.ಸಂಖ್ಯೆ:31202, 32545, 32544, 32547, 31082, 32553, 29376, 29831, 29764, 32336, 32345, 29644, 28683, 29320 ದಿನಾಂಕ: 16.02.2026, ಇ.ಸಂಖ್ಯೆ:30713, 32825 ದಿನಾಂಕ:20.02.2026 ರಂದು) ಸಂಜೆ 4.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು ।

**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.**
ಮುಖ್ಯ ಅಭಿಯಂತರವರ ಕಛೇರಿ ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105, ದೂ: 08472–220817,
E-mail ID : kwbceklb14@gmail.com
ಕ್ರ.ಸಂ.ಕಜಮ/ಮುಅ.ಕ/ತಾಂತ್ರಿಕ/ನೀಸ/ಬಳಗಾನೂರ ಅಮೃತ್–2.0/2025–26/1497 ದಿನಾಂಕ:03–02–2026
**:: ಟೆಂಡರ್ ಆಹ್ವಾನಿಸುವ ಸೂಚನೆ ::**
1) ಕಾಮಗಾರಿ ವಿವರ: ಅಮೃತ್–2.0 ಯೋಜನೆಯಡಿ ಬಳಗಾನೂರ ಪಟ್ಟಣಕ್ಕೆ ಸುಧಾರಿತ ನೀರು ಸರಬರಾಜು ಯೋಜನೆಯ ಜೊತೆಗೆ 05 ವರ್ಷದ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿ (01 ವರ್ಷದ ಡಿಫೆಕ್ಟ್ ಲಿಯಬಾಲಿಟಿ ಅವಧಿ ಸೇರಿಸಿ) ಡಿಸೈನ್, ಬಿಲ್ಡ್, ಆಪರೇಟ್ ಮತ್ತು ಟ್ರಾನ್ಸ್ಫರ್ (DBOT) ಮುಖಾಂತರ– ಲಮಸಮ್ ಟೆಂಡರ್ – ವೆರಿಯೇಷನ್ ಇರುವುದಿಲ್ಲ. **(ವರ್ಕ ಇಂಡೆಂಟ್ ಸಂಖ್ಯೆ: ಕೆಯುಡಬ್ಲ್ಯೂಎಸ್.ಡಿ.ಬಿ/2025–26/ ಡಬ್ಲ್ಯೂ.ಎಸ್/ವರ್ಕ _ಇಂಡೆಂಟ್488)** 2) ಕಾಮಗಾರಿ ಅಂದಾಜು ಮೊತ್ತ: **ರೂ. 2023.46 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ) (ಕೆಪೇಕ್ಸ್: ರೂ. 1851.38 ಲಕ್ಷಗಳು, ಓಪೆಕ್ಸ್ : ರೂ. 172.08 ಲಕ್ಷಗಳು),** 3) ಗುತ್ತಿಗೆದಾರರ ಅರ್ಹತೆ ವಿವರ: ಗುತ್ತಿಗೆದಾರರ ಅರ್ಹತೆಯಂತೆ. 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ: ರೂ. 20,23,000/–, 5) ಕಾಮಗಾರಿಯ ಅವಧಿ: 18 (ಹದಿನೆಂಟು) ತಿಂಗಳು (ಮಳೆಗಾಲ ಸೇರಿ), 6) ಇ– ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡುವ ದಿನಾಂಕ: **06–02–2026 ಸಮಯ : 17:00 ಗಂಟೆಯ ನಂತರ,** 7) ಪೂರ್ವ ಟೆಂಡರ್ ಸಭೆ ದಿನಾಂಕ: **21–02–2026 ಸಮಯ 11:30 ಗಂಟೆಯವರೆಗೆ,** 8) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **09–03–2026 ಸಮಯ 17:30 ಗಂಟೆಯುವರೆಗೆ,** 9) ಟೆಂಡರ್ ತೆರೆಯುವ ದಿನಾಂಕ: **11–03–2026 ಸಮಯ 11:00 ಗಂಟೆಯ ನಂತರ,** 10) ಹೆಚ್ಚಿನ ವಿವರಗಳಿಗೆ: ಮುಖ್ಯ ಅಭಿಯಂತರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105 ದೂ: 08472–220817, E-mail ID : kwbceklb14@gmail.com, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in.
ಸಹಿ/– ಮುಖ್ಯ ಅಭಿಯಂತರು, ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/1045/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ
**ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ**
ದೂರವಾಣಿ: 08382–220556 ಇ–ಮೇಲ್: predkarwar@gmail.com
ಕ್ರ.ಸಂ:ಪಂರಾ.ಇಂ/ಕಾ/ಪಿಬಿ–1/2025–26/1397 ದಿ: 03.02.2026
**ಟೆಂಡರ್ ಪ್ರಕಟಣೆ–38/2025–26 (ಕೆ.ಪಿ.ಪಿ.ಪಿ ಮೂಲಕ)**
ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ 2024–25 ನೇ ಸಾಲಿನ ರಾಷ್ಟ್ರೀಯ ಗ್ರಾಮ ಸ್ವರಾಜ ಅಭಿಯಾನ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-1,2 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.
ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) (1) 2024–25 ನೇ ಸಾಲಿನ ರಾಷ್ಟ್ರೀಯ ಗ್ರಾಮ ಸ್ವರಾಜ ಅಭಿಯಾನ ಅನುದಾನದಡಿ ಕಾರವಾರ ತಾಲೂಕಿನ ಶಿರವಾಡ ಗ್ರಾಮ ಪಂಚಾಯತ ಹೊಸ ಕಟ್ಟಡ ನಿರ್ಮಾಣ. RDPR/2025-26/BD/WORK_INDENT22853, ಅಂದಾಜು ಮೊತ್ತ ರೂ. 57.00 ಲಕ್ಷ, ಮುಂಗಡ ಠೇವಣಿ ರೂ. 96700.00 , ಕಾಲಮಿತಿ (ಮಳೆಗಾಲ ಸಹಿತ): 09 ತಿಂಗಳು
(2) 2245–08–101–0–01–059 ರಾಷ್ಟ್ರೀಯ ವಿಪತ್ತು ಉಪಶಮನ ನಿಧಿ (NDRF) ಮತ್ತು ರಾಜ್ಯ ವಿಪತ್ತು ಉಪಶಮನ ನಿಧಿ (SDRF) ಯೋಜನೆಯಡಿ ಕಾರವಾರ ತಾಲೂಕಿನ ಮಾಜಾಳಿ ಪಂಚಾಯತದ ಹಳೆಬಾಗದಲ್ಲಿ ಗುಡ್ಡ ಕುಸಿತದಿಂದ ರಸ್ತೆ ಮೇಲೆ ಬಿದ್ದಿರುವ ಮಣ್ಣು ತೆರವುಗೊಳಿಸುವುದು ಹಾಗೂ ಗುಡ್ಡ ರಸ್ತೆಯ ಮೇಲೆ ಜಾರದಂತೆ ತಡೆಗೋಡೆ ಹಾಗೂ ಚರಂಡಿ ನಿರ್ಮಾಣ. RDPR/2025-26/FP/WORK_INDENT23889, ಅಂದಾಜು ಮೊತ್ತ: ರೂ. 15.50 ಲಕ್ಷ, ಮುಂಗಡ ಠೇವಣಿ ರೂ. 32850.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು
(ಮೀಸಲಾತಿ: ಪರಿಶಿಷ್ಟ ಜಾತಿ) (3) ಅಂಕೋಲಾ ತಾಲೂಕಿನ ಅಗ್ರಗೋಣ ಪಂಚಾಯತದ ಜೂಗ ರಸ್ತೆಯ ತಡೆಗೋಡೆ ನಿರ್ಮಾಣ ಮಾಡಿ ಗುಡ್ಡ ಕುಸಿತವನ್ನು ತಡೆಯುವುದು. RDPR/2025-26/RD/WORK_INDENT239900, ಅಂದಾಜು ಮೊತ್ತ: ರೂ. 30.62 ಲಕ್ಷ, ಮುಂಗಡ ಠೇವಣಿ ರೂ. 51500.00, ಕಾಲಮಿತಿ (ಮಳೆಗಾಲ ಸಹಿತ): 03 ತಿಂಗಳು
(1) ಕಾಮಗಾರಿಯ ಟೆಂಡರ್ ಶೆಡ್ಯೂಲ್–ಬಿಗಳನ್ನು ಮತ್ತು Technical Bid ನ್ನು ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 19.02.2026 ರ ಅಪರಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 20.02.2026 ಅಪರಾಹ್ನ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.
ಸಹಿ/– ಕಾರ್ಯನಿರ್ವಾಹಕ ಇಂಜನೀಯರು, ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ
DIPR/KWR/KSMCA/1040/25-26 dt. 04.02.2026

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

# ಅಭಿಮತ

## ಸುಭಾಷಿತ

ಯಾವುದೇ ಒಂದು ದೇಶ ಮತ್ತೊಂದು ದೇಶದ ಜನರನ್ನು ಕಿತ್ತು ತಿನ್ನಲು ಅವಕಾಶ ನೀಡುವ ಆರ್ಥಿಕ ವ್ಯವಸ್ಥೆಯು ಅನೈತಿಕವಾದುದು.
–ಮಹಾತ್ಮ ಗಾಂಧೀಜಿ

## ಸಂಪಾದಕೀಯ

# ಯುಜಿಸಿ ನಿಯಮ ಅಮಾನತು ತಾರತಮ್ಯ ಪರಿಷ್ಕರಣೆಯ ಸವಾಲು

'ವಿಶ್ವವಿದ್ಯಾಲಯ ಅನುದಾನಗಳ ಆಯೋಗ (ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಮಾನತೆ ಉತ್ತೇಜನ) ನಿಯಮಗಳು – 2026' ಅನ್ನು ಅಮಾನತಿನಲ್ಲಿ ಇರಿಸುವ ಮೂಲಕ ಸುಪ್ರೀಂ ಕೋರ್ಟ್ ಕಾನೂನಿನ ದೃಷ್ಟಿಯಿಂದ ಬಹಳ ಸೂಕ್ತವಾಗಿರುವ ಪ್ರತಿಕ್ರಿಯೆಯೊಂದನ್ನು ನೀಡಿದಂತಾಗಿದೆ. ಈ ನಿಯಮಗಳನ್ನು ರೂಪಿಸಿದ ಬಗೆಯ ಕುರಿತಾಗಿ ಕೋರ್ಟ್ ಕಳವಳ ವ್ಯಕ್ತಪಡಿಸಿದೆ. ಈ ನಿಯಮಗಳು ಎಲ್ಲರನ್ನೂ ಒಳಗೊಳ್ಳುವ ಸ್ವರೂಪವನ್ನು ಹೊಂದಿಲ್ಲ ಎಂದು ಹೇಳಿದೆ. ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ಪಂಗಡಗಳ (ಎಸ್‌ಟಿ) ಹಾಗೂ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಸೇರಿದ ವಿದ್ಯಾರ್ಥಿಗಳು ದೇಶದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿಯ ಕಾರಣಕ್ಕಾಗಿ ತಾರತಮ್ಯವನ್ನು ಅನುಭವಿಸುವ ಪ್ರಕರಣಗಳು ದೇಶದಲ್ಲಿ ವರದಿಯಾಗುತ್ತಲೇ ಇವೆ. 2016ರಲ್ಲಿ ರೋಹಿತ್ ವೇಮುಲ ಅವರ ಆತ್ಮಹತ್ಯೆ ಪ್ರಕರಣದ ನಂತರದಲ್ಲಿ ಈ ವಿಚಾರವಾಗಿ ಕಳವಳಗಳು ತೀವ್ರಗೊಂಡಿವೆ. ಉನ್ನತ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ನಿರ್ಮೂಲಗೊಳಿಸುವ ಉದ್ದೇಶ ಹೊಂದಿರುವ ಸಹಜ ಪ್ರಕ್ರಿಯೆ ಎಂಬಂತೆ ಯುಜಿಸಿ ನಿಯಮಗಳನ್ನು ಕಾಣಬಹುದಾದರೂ, ಆ ನಿಯಮಗಳು ಕೂಡ ಸಮಾಜವನ್ನು 'ವಿಭಜಿಸುತ್ತವೆ' ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈ ನಿಯಮಗಳು ಅವುಗಳ ದುರ್ಬಳಕೆಯನ್ನು ತಡೆಯುವ ಕ್ರಮಗಳನ್ನು ಒಳಗೊಂಡಿಲ್ಲ ಎಂದು ಅದು ಹೇಳಿದೆ.



ಯುಜಿಸಿ ನಿಯಮಗಳು ಎಲ್ಲರನ್ನೂ ಒಳಗೊಳ್ಳುವಂತಿಲ್ಲ ಎನ್ನುವ ದೂರುಗಳಿವೆ. ಸಾಮಾಜಿಕ ಹಿನ್ನೆಲೆಯ ಮಹತ್ವ ಮರೆಯದೆ, ಎಲ್ಲರಿಗೂ ಸ್ವೀಕಾರಾರ್ಹ ಆಗುವ ವ್ಯವಸ್ಥೆಯೊಂದನ್ನು ರೂಪಿಸುವ ಕಡೆ ಗಮನ ಹರಿಸಬೇಕು.

ಹೊಸ ನಿಯಮಗಳನ್ನು ಯುಜಿಸಿ ಈ ತಿಂಗಳ ಆರಂಭದಲ್ಲಿ ಹೊರಡಿಸಿದೆ. 2012ರಲ್ಲಿ ಜಾರಿಗೆ ಬಂದ ಕೆಲವು ನಿಯಮಗಳ ಪರಿಷ್ಕರಣೆಯಂತೆ ಇವು ಇವೆ. ಹೊಸ ನಿಯಮಗಳ ಮೂಲಕ ಆಯೋಗವು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ವರ್ಗದ ವಿದ್ಯಾರ್ಥಿಗಳಿಗೆ ತಾರತಮ್ಯದಿಂದ ರಕ್ಷಣೆ ಒದಗಿಸುವ ಉದ್ದೇಶ ಹೊಂದಿತ್ತು. ಈ ವರ್ಗದ ವಿದ್ಯಾರ್ಥಿಗಳಿಗೆ ಸಲ್ಲಿಸಿದ ದೂರುಗಳ ಬಗ್ಗೆ ಮೇಲ್ವಿಚಾರಣೆಗೆ ವ್ಯವಸ್ಥೆ ಹಾಗೂ ದೂರುಗಳ ಇತ್ಯರ್ಥಕ್ಕೆ ವ್ಯವಸ್ಥೆಯನ್ನು ನಿಯಮಗಳು ಒಳಗೊಂಡಿವೆ. ಆದರೆ ತಾರತಮ್ಯದ ವಿಚಾರವಾಗಿ ನೀಡಿರುವ ವ್ಯಾಖ್ಯಾನವು, ಕೆಲವು ವರ್ಗಗಳ ವಿದ್ಯಾರ್ಥಿಗಳು ಮಾತ್ರ ತಾರತಮ್ಯಕ್ಕೆ ಗುರಿಯಾಗುತ್ತಾರೆ ಎಂಬ ಅರ್ಥ ಕೊಡುತ್ತದೆ, ಇತರ ವಿದ್ಯಾರ್ಥಿಗಳನ್ನು ಈ ನಿಯಮಗಳು ಅಪರಾಧಿಗಳು ಎಂಬಂತೆ ಕಾಣುತ್ತವೆ ಎಂದು ಪ್ರಬಲ ಜಾತಿಗಳಿಗೆ ಸೇರಿದ ಕೆಲವು ಗುಂಪುಗಳು ವಾದಿಸಿವೆ. ಈ ನಿಯಮಗಳ ಅಡಿಯಲ್ಲಿ ಸುಳ್ಳು ದೂರುಗಳು ದಾಖಲಾದಾಗ ಅಂತಹ ದೂರು ನೀಡಿದವರ ವಿರುದ್ಧ ಕ್ರಮ ಜರುಗಿಸಲು ಅವಕಾಶ ಇಲ್ಲ. ಹೀಗಾಗಿ ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ತೊಂದರೆಗೆ ಒಳಗಾಗುವ ಸಾಧ್ಯತೆ ಇದೆ ಎಂದು ಅವು ಪ್ರತಿಪಾದಿಸಿವೆ. ನಿಯಮಗಳನ್ನು ವಿರೋಧಿಸಿ ಉತ್ತರ ಭಾರತದ ಕೆಲವು ಉನ್ನತ ಶಿಕ್ಷಣ ಸಂಸ್ಥೆಗಳ ಕ್ಯಾಂಪಸ್‌ಗಳಲ್ಲಿ ನಡೆದ ಪ್ರತಿಭಟನೆಗಳ ವೇಳೆ ಕೇಳಿಸಿದ ಮಾತುಗಳು, 1990ರಲ್ಲಿ ಮಂಡಲ್ ಆಯೋಗದ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಲು ಕೇಂದ್ರ ಸರ್ಕಾರ ನಿರ್ಧರಿಸಿದ್ದಕ್ಕೆ ಮೊದಲು ನಡೆದ ಹಿಂಸಾತ್ಮಕ ಪ್ರತಿಭಟನೆಗಳ ಸಂದರ್ಭದಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಹೋಲುವಂತೆ ಇದ್ದವು. ಜಾತಿ ಆಧಾರದಲ್ಲಿ ವಿಭಜನೆ, ಧ್ರುವೀಕರಣವು ಸಮಾಜದಲ್ಲಿ ಈಗಲೂ ಅದೆಷ್ಟು ತೀವ್ರವಾಗಿದೆ ಎಂಬುದನ್ನು ಇವು ಹೇಳುತ್ತವೆ.

ಯುಜಿಸಿ ರೂಪಿಸಿದ ಹೊಸ ನಿಯಮಗಳು ಎಲ್ಲ ವರ್ಗಗಳ ಅಭಿಪ್ರಾಯವನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ ಎಂಬ ವಾದದಲ್ಲಿ ಕಾನೂನಿನ ದೃಷ್ಟಿಯಿಂದ ಹುರುಳಿದೆ. ಆದರೆ ಬಹುತೇಕ ಸಂದರ್ಭಗಳಲ್ಲಿ ತಾರತಮ್ಯಕ್ಕೆ ಗುರಿಯಾಗುವವರು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳೇ ಎಂಬುದನ್ನು ನಿರಾಕರಿಸಲು ಆಗುವುದಿಲ್ಲ. ಸಾಮಾಜಿಕ ಶ್ರೇಣೀಕರಣ ಇರುವಲ್ಲಿ ಅವಕಾಶಗಳು ಎಲ್ಲರಿಗೂ ಸಮಾನ ನೆಲೆಯಲ್ಲಿ ಸಿಗುವುದಿಲ್ಲ. ತಾರತಮ್ಯದ ವ್ಯಾಖ್ಯಾನವನ್ನು ಇನ್ನಷ್ಟು ವಿಶಾಲಗೊಳಿಸುವ ಅಗತ್ಯ ಇದೆ. ಸುಳ್ಳು ದೂರುಗಳನ್ನು ಗುರುತಿಸಿ, ಅಂತಹ ದೂರುಗಳು ದಾಖಲಾಗುವುದನ್ನು ತಡೆಯಲು ಬಲಿಷ್ಠ ವ್ಯವಸ್ಥೆಯೊಂದರ ಅಗತ್ಯವಿದೆ. ವಿಕೇಂದ್ರಿತ ಅಂತಹ ವ್ಯವಸ್ಥೆಯನ್ನು ರೂಪಿಸಿದಾಗ, ನಿಜವಾಗಿಯೂ ಅನ್ಯಾಯಕ್ಕೆ ಒಳಗಾದ ವ್ಯಕ್ತಿಯು ತನ್ನ ದೂರು ಹೇಳಿಕೊಳ್ಳಲು ಹಿಂಜರಿಯುವ ಸಾಧ್ಯತೆ ಕಡಿಮೆ ಇರುತ್ತದೆ. ಕೋರ್ಟ್ ಈಗ ಈ ನಿಯಮಗಳನ್ನು ಪರಿಶೀಲಿಸುವ ಮಾತು ಆಡಿದೆ. ಹೀಗಾಗಿ ಈಗ ಎಲ್ಲರಿಗೂ ಸ್ವೀಕಾರಾರ್ಹ ಆಗುವ ವ್ಯವಸ್ಥೆಯೊಂದನ್ನು ರೂಪಿಸುವ ಕಡೆ ಗಮನ ಹರಿಸಬೇಕು. ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸುವ ಕೆಲಸ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಪರಿಗಣಿಸಿ ಆ ಹಿನ್ನೆಲೆಗೆ ಸೂಕ್ತವಾದ ಬಗೆಯಲ್ಲಿ ಅವಕಾಶ ಕಲ್ಪಿಸುವುದರ ನಡುವೆ ಸಂಕೀರ್ಣವಾದ ಸಂಬಂಧ ಇದೆ. ಇದನ್ನು ಬಹಳ ಸೂಕ್ಷ್ಮವಾಗಿ ಅರ್ಥ ಮಾಡಿಕೊಳ್ಳಬೇಕು.

## ಚಾಟಿ

### ಜನತಂತ್ರದ ಸೌಂದರ್ಯ

ಒಕ್ಕೂಟ ಸರ್ಕಾರದ ದಬ್ಬಾಳಿಕೆ, ದೌರ್ಜನ್ಯಗಳು ಮಿತಿ ಮೀರಿದಾಗ, ರಾಜಕಾರಣಿಗಳು ತಾವೇ ಕೋರ್ಟ್ ಅಂಗಳದಲ್ಲಿ ನಿಂತು ವಾದಿಸುವುದು 'ಪ್ರಜಾಸತ್ತಾತ್ಮಕ ವ್ಯವಸ್ಥೆಯ ಸೌಂದರ್ಯ'ವೇ ಸರಿ. ಕ್ರೌರ್ಯ ಯಾವುದು ಎಂದು ಕೇಳಿದಿರಾ?! ಚುನಾವಣಾ ಆಯೋಗದಂತಹ ಸ್ವಾಯತ್ತ ಸಂಸ್ಥೆಯನ್ನು ಅಂಗೈ ಅರಗಿಣಿ ಮಾಡಿಕೊಂಡದ್ದು!

**ರಾಜೇಂದ್ರ ಪ್ರಸಾದ್**, ಕವಿ, 'ಫೇಸ್‌ಬುಕ್'ನಿಂದ

## ಕಿಡಿನುಡಿ

ವಿರೋಧ ಪಕ್ಷಗಳ ನಾಯಕರು ತಾವು ಬದುಕಿದ್ದೇವೆಂದು ತೋರಿಸಲು ಮುಂದಾಗಿದ್ದಾರೆ. ನರೇಗಾ ಯೋಜನೆ ಬಗ್ಗೆ ಸದನದಲ್ಲಿ ಚರ್ಚಿಸುವುದು ಅವರಿಗೆ ಬೇಕಾಗಿಲ್ಲ. ಹೀಗಾಗಿ, ನಾಟಕ ಮಾಡುತ್ತಿದ್ದಾರೆ.

**ಡಿ.ಕೆ. ಶಿವಕುಮಾರ್**, ಉಪಮುಖ್ಯಮಂತ್ರಿ

## 25 ವರ್ಷಗಳ ಹಿಂದೆ

ಸೋಮವಾರ, 5-2-2001

**• ಹುಬ್ಬಳ್ಳಿಯಲ್ಲಿ ಮಾಹಿತಿ ತಂತ್ರಜ್ಞಾನ ಕೇಂದ್ರ ಸ್ಥಾಪನೆ**

ಬೆಂಗಳೂರು, ಫೆ. 4– ಮಾಹಿತಿ ತಂತ್ರಜ್ಞಾನದ ಉನ್ನತ ಶಿಕ್ಷಣದ ಸೌಲಭ್ಯ ಉತ್ತರ ಕರ್ನಾಟಕದ ಪ್ರತಿಭಾವಂತರಿಗೂ ದೊರೆಯುವಂತೆ ಮಾಡಲು ಪ್ರತಿಷ್ಠಿತ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ (ಐಐಐಟಿ–ಬಿ) ಕೇಂದ್ರವನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ಇಲ್ಲಿ ತಿಳಿಸಿದರು.

ನಗರದಲ್ಲಿ ನಡೆದ 'ಐಐಐಟಿ–ಬಿ'ಯ ಪ್ರಥಮ ಘಟಿಕೋತ್ಸವ ಉದ್ಘಾಟಿಸಿ ಈ ವಿಷಯ ತಿಳಿಸಿದ ಅವರು, ಇದಕ್ಕಾಗಿ ಸರ್ಕಾರ ಸಂಸ್ಥೆಗೆ ಹುಬ್ಬಳ್ಳಿಯಲ್ಲಿ 30,000 ಚದರ ಅಡಿ ಜಮೀನು ಜೊತೆಗೆ ಒಂದು ಬಾರಿಯ ಮೂಲ ನಿಧಿ ನೀಡಲಿದೆ ಎಂದರು.

**• ಬೆಳೆಹಾನಿ: ಕೊಪ್ಪಳ ಹತ್ತಿ ಬೆಳೆಗಾರನ ಆತ್ಮಹತ್ಯೆ**

ಕೊಪ್ಪಳ, ಫೆ. 4– ಬೆಳೆಹಾನಿ ನಷ್ಟ, ಕೃಷಿ ಉತ್ಪನ್ನಗಳ ಬೆಲೆ ಕುಸಿತದಿಂದ ರಾಜ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರಕರಣಗಳು ವಿವಿಧೆಡೆ ವರದಿಯಾಗುತ್ತಿರುವ ಬೆನ್ನಲ್ಲೇ, ಕೊಪ್ಪಳ ಜಿಲ್ಲೆಯಲ್ಲೂ ಹತ್ತಿ ಬೆಳೆಗಾರನೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆ ಶನಿವಾರ ರಾತ್ರಿ ನಡೆದಿದೆ.

ಚುಕ್ಕಣಕಲ್ಲದ ನಿವಾಸಿ ಚನ್ನಬಸಪ್ಪ ಹೂಗಾರ (50) ಮೃತಪಟ್ಟವರು.

## 75 ವರ್ಷಗಳ ಹಿಂದೆ

ಸೋಮವಾರ, 5-2-1951

**• 'ಹಿಂಸಾಕೃತ್ಯ ಬಿಟ್ಟರೆ ನಿಷೇಧ ವಜಾ ಸಾಧ್ಯ'**

ಹೈದರಾಬಾದ್, ಫೆ. 4– ಹೈದರಾಬಾದಿನ ತೆಲಂಗಾಣ ಪ್ರದೇಶದಲ್ಲಿ ನಡೆಯುತ್ತಿರುವ ವಿಧ್ವಂಸಕ ಕೃತ್ಯಗಳನ್ನು ಕೊನೆಗಾಣಿಸಿ, ಎರಡು ತಿಂಗಳ ಕಾಲವಾದರೂ ಹಿಂಸಾಕೃತ್ಯ ತ್ಯಜಿಸಿರುವುದನ್ನು ಕಾರ್ಯತಃ ಪ್ರದರ್ಶಿಸಿದರೆ, ಹೈದರಾಬಾದ್ ಕಮ್ಯುನಿಷ್ಟರ ಮೇಲಿರುವ ಪ್ರತಿಬಂಧವನ್ನು ತೆಗೆಯಲು ಕೇಂದ್ರ ಸರ್ಕಾರವು ಆಲೋಚಿಸುವುದೆಂದು, ಸಂಸ್ಥಾನ ಶಾಖಾ ಮಂತ್ರಿಗಳಾದ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ಯರು ಇಂದು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ಜನತೆಯ ಜೀವನವನ್ನು ಉತ್ತಮಗೊಳಿಸಲು ಯಾವ ರಾಜಕೀಯ ತತ್ವವನ್ನೂ ಶಾಂತಿಯುತವಾಗಿ ಪ್ರಸಾರ ಮಾಡಲು ಸರ್ಕಾರದ ಅಭ್ಯಂತರವಿಲ್ಲ ಎಂದರು. ಆದರೆ, ಅವರ ಧ್ಯೇಯೋದ್ದೇಶ ಸಾಧನೆಗೆಂದು ಹಿಂಸಾ ಮಾರ್ಗವನ್ನು ಅವಲಂಬಿಸಿದರೆ ಮಾತ್ರ ಸರ್ಕಾರದೊಡನೆ ಘರ್ಷಣೆ ಆರಂಭವಾಗುವುದೆಂದು ತಿಳಿಸಿದರು.

# ಅತಿ ಪ್ರೀತಿ, ಪ್ರಾಣಿಗಳಿಗೆ ವಿಷ

ವಿಶ್ಲೇಷಣೆ

**ಡಾ. ಮುರಳೀಧರ ಕಿರಣಕೆರೆ**

> ಜೀವನಶೈಲಿ ಕಾಯಿಲೆಗಳು ಮನುಷ್ಯರನ್ನಷ್ಟೇ ಬಾಧಿಸುತ್ತಿಲ್ಲ; ಸಾಕುಪ್ರಾಣಿಗಳನ್ನೂ ಕಾಡುತ್ತಿವೆ. ನಾಯಿ–ಬೆಕ್ಕುಗಳಂತಹ ಪ್ರಾಣಿಗಳು ಮಾಲೀಕರ ಅತಿ ಮುದ್ದಿನಿಂದ ಜಂಕ್ ಫುಡ್ ವ್ಯಸನ ಅಂಟಿಸಿಕೊಂಡಿವೆ, ಕಾಯಿಲೆಗಳಿಗೆ ತುತ್ತಾಗುತ್ತಿವೆ. ವಿವೇಕವಿಲ್ಲದ ಪ್ರೀತಿ ಕೂಡ 'ಪ್ರಾಣಿ ಕ್ರೌರ್ಯ' ಎನ್ನುವುದನ್ನು ಪ್ರಾಣಿಪ್ರಿಯರು ಅರಿತುಕೊಳ್ಳಬೇಕು.

ತನ್ನ ಮುದ್ದು ನಾಯಿಯನ್ನು ಚೆಕಪ್‌ಗೆ ಕರೆತಂದಿದ್ದ ಮಹಿಳೆಯೊಬ್ಬರು, 'ಸರ್, ಇವಳು ಸರಿಯಾಗಿ ಊಟ ಮಾಡುವುದಿಲ್ಲ. ಹೊಟ್ಟೆ ಹುಳಕ್ಕೆ ಔಷಧ ಕೊಟ್ಟಾಯ್ತು. ಹಸಿವಾಗಲಿಕ್ಕೆಂದು ಟಾನಿಕ್ ಹಾಕಾಯ್ತು. ಆದ್ರೂ ಸರಿ ಆಗಿಲ್ಲ. ಈಗ ಕೂದಲು ಉದುರಿ ಚರ್ಮದ ಮೇಲೆ ಅಲ್ಲಲ್ಲಿ ಸಣ್ಣ ಸಣ್ಣ ಪ್ಯಾಚ್‌ಗಳು ಕಾಣ್ತಿವೆ' ಎಂದರು ಆತಂಕದಿಂದ. ಮೈಕೈ ತುಂಬಿಕೊಂಡು ಗುಂಡುಗುಂಡಾಗಿ ಕಾಣುತ್ತಿದ್ದ ನಾಯಿಯನ್ನು ಪರಿಶೀಲಿಸುತ್ತ, 'ಬೇರೆ ಏನಾದ್ರೂ ತಿನ್ನುತ್ತಾ?' ಎಂದು ಅನುಮಾನದಿಂದ ಕೇಳಿದೆ. ಆಕೆ ಅಡ್ಡಡ್ಡ ತಲೆಯಾಡಿಸುತ್ತಾ 'ಇಲ್ಲ ಸರ್, ಇವಳು ಊಟ–ತಿಂಡಿ ಮುಟ್ಟೋದೇ ಇಲ್ಲ. ಬಿಸ್ಕತ್ತು, ರಸ್ಕು, ಬ್ರೆಡ್ ಕೊಟ್ರೆ ಎಷ್ಟು ಬೇಕಾದ್ರೂ ತಿಂತಾಳೆ. ಚಾಕೊಲೇಟ್ ಅಂದ್ರೂ ಪಂಚಪ್ರಾಣ. ಚಿಪ್ಸ್, ಐಸ್‌ಕ್ರೀಮ್, ಕೇಕು ಕೂಡ ತುಂಬಾ ಇಷ್ಟ' ಎಂದರು ಉತ್ಸಾಹದಿಂದ. ಮನುಷ್ಯರಂತೆ ಜಂಕ್ ಫುಡ್ ರುಚಿ ಹತ್ತಿಸಿಕೊಂಡ ನಾಯಿಗೆ ಸಹಜವಾಗಿಯೇ ಬೇರೆ ಊಟ ಸೇರುತ್ತಿರಲಿಲ್ಲ! ಪರಿಣಾಮ, ಸ್ಥೂಲಕಾಯದ ಜೊತೆಗೆ ಚರ್ಮದ ಸಮಸ್ಯೆಯೂ ಕಾಣಿಸಿಕೊಂಡಿತ್ತು.

ಇಂದಿನ ಬದಲಾದ ಕಾಲಘಟ್ಟದಲ್ಲಿ ನಾಯಿ, ಬೆಕ್ಕುಗಳಂತಹ ಸಾಕುಪ್ರಾಣಿಗಳು ಬರೀ ಪ್ರಾಣಿಗಳಾಗಿ ಉಳಿದಿಲ್ಲ. ಅವು ಕುಟುಂಬದ ಅವಿಭಾಜ್ಯ ಅಂಗವಾಗಿ ಅತಿ ಮುದ್ದಿನಿಂದ ಬೆಳೆಯುತ್ತಿವೆ. ತಾವು ತಿನ್ನುವ ಆಹಾರವನ್ನು ತಮ್ಮ ಮುದ್ದುಪ್ರಾಣಿಗಳಿಗೂ ಹಂಚಿ ಖುಷಿಪಡಿಸುವ ಮಾಲೀಕರ ಕುರುಡುಪ್ರೇಮವೇ ಸಾಕುಪ್ರಾಣಿಗಳ ಪಾಲಿಗೆ ವಿಷವಾಗುತ್ತಿದೆ! ತಮ್ಮ ನಾಲಿಗೆಗೆ ರುಚಿ ನೀಡುವ ಸಿಹಿ ತಿನಿಸು, ಬಿಸ್ಕತ್ತು, ಬ್ರೆಡ್, ಪಿಜ್ಜಾ, ಬರ್ಗರ್, ಕರಿದ ತಿಂಡಿಯಂತಹ ಸಂಸ್ಕರಿತ ಆಹಾರ ಪದಾರ್ಥಗಳನ್ನು ನಾಯಿಗೂ ತಿನ್ನಿಸುತ್ತಿದ್ದಾರೆ. ಮಾನವನ ದೇಹಕ್ಕೆ ಹಾನಿ ಮಾಡುವ ಈ ಜಂಕ್ ತಿನಿಸುಗಳು ಪ್ರಾಣಿಗಳಿಗೆ ಮತ್ತಷ್ಟು ಅಪಾಯಕಾರಿ ಎಂಬ ಅರಿವು ಬಹುತೇಕ ಸಾಕಣೆದಾರರಿಗಿಲ್ಲ. ಹಸಿವನ್ನಷ್ಟೇ ಇಂಗಿಸಿ ತೃಪ್ತಿ ಸಿಗುವಂತೆ ಮಾಡುವ, ಆದರೆ ಪೌಷ್ಟಿಕಾಂಶದ ದೃಷ್ಟಿಯಿಂದ ಅತ್ಯಂತ ಕಳಪೆಯಾಗಿರುವ ಈ ತಿಂಡಿಗಳ ಹಾವಳಿಯು ನಾಯಿಗಳ ಸ್ವಾಭಾವಿಕ ಜೈವಿಕ ವ್ಯವಸ್ಥೆಗೆ ಧಕ್ಕೆ ತರುತ್ತಿದ್ದು, ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಬದಲಾದ ಆಹಾರಶೈಲಿಯಿಂದ ಅವುಗಳ ಸಹಜ ಚೈತನ್ಯ, ಉತ್ಸಾಹ ಕುಂದುವ ಜೊತೆಗೆ ಜೀವಿತಾವಧಿಯೂ ಆತಂಕಕಾರಿಯಾಗಿ ಕುಸಿಯುತ್ತಿದೆ.

ನಾಯಿ, ಬೆಕ್ಕುಗಳ ಜೀರ್ಣಕ್ರಿಯೆಯು ಮನುಷ್ಯರಿಗಿಂತ ಭಿನ್ನವಾಗಿದೆ. ನಮ್ಮ ಆಹಾರದಲ್ಲಿ ಅತಿಯಾಗಿ ಬಳಸುವ ಉಪ್ಪು, ಸಕ್ಕರೆ, ಎಣ್ಣೆ, ಮಸಾಲೆ ಪದಾರ್ಥಗಳನ್ನು ಅರಗಿಸಿಕೊಳ್ಳುವ ಸಾಮರ್ಥ್ಯ ಈ ಪ್ರಾಣಿಗಳಿಗಿಲ್ಲ. ಮೊದಲೇ ಜಂಕ್ ಆಹಾರಗಳಲ್ಲಿ ಪೌಷ್ಟಿಕಾಂಶದ ಪ್ರಮಾಣ ಕಡಿಮೆ. ಜೊತೆಗೆ ಅವುಗಳಲ್ಲಿರುವ ಕೃತಕ ಬಣ್ಣಗಳು, ಸಂರಕ್ಷಕಗಳು, ರುಚಿಕಾರಕ ರಾಸಾಯನಿಕಗಳು ಪ್ರಾಣಿಗಳ ಅಂಗಾಂಗಗಳ ಮೇಲೆ ನೇರ ಪರಿಣಾಮ ಬೀರುತ್ತವೆ. ಜಂಕ್ ಫುಡ್‌ನಲ್ಲಿರುವ ಸಕ್ಕರೆ ರೂಪದ ಅತಿಯಾದ ಕ್ಯಾಲೊರಿಗಳು ತುಂಬಾ ವೇಗವಾಗಿ ತೂಕ ಹೆಚ್ಚಳಕ್ಕೆ ಕಾರಣವಾಗುತ್ತವೆ. ಈ ಅತಿ ಬೊಜ್ಜಿನಿಂದಾಗಿ ಮೂಳೆ, ಕೀಲುಗಳ ಮೇಲೆ ಒತ್ತಡ ಬಿದ್ದು ಬೇಗನೆ ನಡೆಯಲಾಗದ ಸ್ಥಿತಿ ತಲಪುತ್ತವೆ. ಸಂಧಿವಾತ, ಉಸಿರಾಟದ ಸಮಸ್ಯೆಗಳು, ಮಧುಮೇಹ, ಥೈರಾಯ್ಡ್ ಸಮಸ್ಯೆ, ಹೃದಯ ಸಂಬಂಧಿ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ.

ನಾಯಿ–ಬೆಕ್ಕುಗಳಲ್ಲೂ ಮಾನವರಂತೆ ಜೀವನಶೈಲಿ ಕಾಯಿಲೆಗಳು ಈಗ ಹೆಚ್ಚು ಹೆಚ್ಚಾಗಿ ಕಾಣಿಸುತ್ತಿವೆ. ಇದಕ್ಕೆ ಕಾರಣ ಮಾನವನೇ. ತಾನು ತಿನ್ನುವುದನ್ನೆಲ್ಲ ತನ್ನ ಸಾಕುಪ್ರಾಣಿಗಳಿಗೆ ತಿನ್ನಿಸುತ್ತಿರುವುದರಿಂದ ಅವುಗಳ ಆರೋಗ್ಯದಲ್ಲಿ ಏರುಪೇರಾಗುತ್ತಿದೆ. ಮೊದಲೇ ಪಟ್ಟಣಗಳಲ್ಲಿ ಸಾಕಲಾಗುತ್ತಿರುವ ಹೆಚ್ಚಿನ ನಾಯಿಗಳಿಗೆ ಓಡಾಡಲು ಸಾಕಷ್ಟು ಸ್ಥಳವಿಲ್ಲ. 'ಪಂಜರದ ಗಿಣಿ'ಗಳಾದ ಕಾರಣ ಶಾರೀರಿಕ ವ್ಯಾಯಾಮವೂ ಆಗುತ್ತಿಲ್ಲ. ಸದಾ ಮಾಲೀಕನ ಕುಟುಂಬದ ಜೊತೆಯಲ್ಲೇ ಇರುವುದರಿಂದ ಮನೆಯ ಎಲ್ಲಾ ಸದಸ್ಯರ ಆಹಾರದ ಒಂದೊಂದು ಪಾಲು ನಾಯಿ ಹೊಟ್ಟೆ ಸೇರುತ್ತಿದೆ! 'ನೀವು ತಿನ್ನುವುದನ್ನೆಲ್ಲಾ ನಾಯಿಗಳಿಗೆ ಹಾಕಬೇಡಿ, ಇದರಿಂದ ಅವುಗಳ ಆರೋಗ್ಯ ಕೆಡುತ್ತದೆ' ಎಂದು ಮಾಲೀಕರಿಗೆ ಎಚ್ಚರಿಸಿದರೆ, 'ಅಯ್ಯೋ ಅದೆಲ್ಲಾ ಎಲ್ಲಿ ಆಗುತ್ತೆ? ನಾವು ತಿನ್ನುವುದನ್ನೇ ಆಸೆಯಿಂದ ನೋಡ್ತಿರ್ತವೆ, ಕೊಡದೆ ಬಿಡೋದೇ ಇಲ್ಲ. ಪಾಪ! ಅವಕ್ಕೆ ಹಾಕದೆ ಬರೀ ನಾವಷ್ಟೇ ತಿನ್ನಲಿಕ್ಕೆ ಹೇಗೆ ಆಗುತ್ತೆ?' ಎಂಬ ಉದ್ದುದ್ದ ಸಮಜಾಯಿಷಿ ಬೇರೆ. ಇದು ಸಾಕುಪ್ರಾಣಿಗಳನ್ನು ನಮ್ಮ ಡೈನಿಂಗ್ ಹಾಲ್, ಮಲಗುವ ಕೋಣೆ, ಅಡುಗೆಮನೆಗಳಿಗೆ ಧಾರಾಳವಾಗಿ ಬಿಟ್ಟುಕೊಂಡಿರುವುದರ ಪರಿಣಾಮ. ಹೌದು, ಮನೆಯಲ್ಲಿ ನಾಯಿಗೇ ನಿಗದಿಪಡಿಸಿದ ನಿರ್ದಿಷ್ಟ ಜಾಗವಿರಬೇಕು. ಅದು ಮನೆಯೊಳಗೆ ಮುಕ್ತವಾಗಿ ಓಡಾಡುವುದನ್ನು ತಪ್ಪಿಸಬೇಕು. ಇಲ್ಲದಿದ್ದರೆ ಆಹಾರ, ಕಾಯಿಲೆ ಸೇರಿದಂತೆ ಎಲ್ಲವನ್ನೂ ಪರಸ್ಪರ ಹಂಚಿಕೊಳ್ಳುವ ಪರಿಸ್ಥಿತಿ ಬರುತ್ತದೆ.

ಕರಿದ ತಿಂಡಿ, ಜಂಕ್ ಆಹಾರಗಳಲ್ಲಿ ಯಥೇಚ್ಛ ಬಳಸುವ ಈರುಳ್ಳಿ, ಬೆಳ್ಳುಳ್ಳಿಗಳು ನಾಯಿಗಳಿಗೆ ವಿಷಕಾರಿ. ಇವು ಕೆಂಪು ರಕ್ತಕಣಗಳಿಗೆ ಹಾನಿ ಮಾಡಿ ರಕ್ತಹೀನತೆಗೆ ಕಾರಣವಾಗುತ್ತವೆ. ಚಾಕೊಲೇಟ್‌ನಲ್ಲಿರುವ ಥಿಯೋಬ್ರೋಮಿನ್, ಕೆಫೀನ್‌ನಂತಹ ಅಂಶಗಳನ್ನು ಅವು ಜೀರ್ಣಿಸಿಕೊಳ್ಳಲಾರವು. ಈ ರಾಸಾಯನಿಕಗಳು ಅವುಗಳ ನರಮಂಡಲ, ಹೃದಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಅತಿಯಾದ ಸಕ್ಕರೆ, ಕೆಫೀನ್ ಅಂಶ ಮೆದುಳಿನ ಮೇಲೆ ಪ್ರಭಾವ ಬೀರುವುದರಿಂದ ಪ್ರಾಣಿಗಳು ಆಕ್ರಮಣಕಾರಿ ವರ್ತನೆ ತೋರಬಹುದು. ತಮ್ಮ ಮುದ್ದು ಪ್ರಾಣಿಗಳಿಗೆ ಪ್ರತಿನಿತ್ಯ ಟೀ, ಕಾಫಿ ಕುಡಿಸುವ ಅಭ್ಯಾಸ ಹಲವರದ್ದು. ಈ ಪಾನೀಯಗಳಲ್ಲಿರುವ ಕೆಫೀನ್ ಅಂಶ ಹೃದಯದ ಬಡಿತವನ್ನು ಅಸಹಜಗೊಳಿಸಿ ದೀರ್ಘಾವಧಿಯಲ್ಲಿ ಹೃದಯ ಸಂಬಂಧಿ ಕಾಯಿಲೆಗಳಿಗೆ ಕಾರಣವಾಗುತ್ತದೆ. ಒಣದ್ರಾಕ್ಷಿಯ ನಿರಂತರ ಸೇವನೆ ಮೂತ್ರಪಿಂಡಗಳ ವೈಫಲ್ಯಕ್ಕೆ ಕಾರಣವಾಗುತ್ತದೆ.

ಬೆಕ್ಕು, ನಾಯಿಗಳಿಗೆ ಸಿಹಿ ಅಪಾಯಕಾರಿ. ಸಿಹಿ ಪದಾರ್ಥಗಳನ್ನು ತುಂಬಾ ಇಷ್ಟದಿಂದಲೇ ತಿನ್ನುವ ಇವು ವಾಂತಿ, ಭೇದಿ, ಹೊಟ್ಟೆಯುಬ್ಬರ ಸಮಸ್ಯೆಯಿಂದ ಬಳಲುತ್ತವೆ. ಹುಳುಕು ಹಲ್ಲು, ಬೊಜ್ಜು, ಸಂಧಿವಾತ, ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳೂ ಕಾಣಿಸಿಕೊಳ್ಳಬಹುದು. ಸಿಹಿ ತಿಂಡಿ, ಜಂಕ್ ಆಹಾರ ಅಲರ್ಜಿ, ಚರ್ಮರೋಗಗಳಿಗೂ ಕಾರಣವಾಗುತ್ತದೆ. ಜಂಕ್ ಆಹಾರದಲ್ಲಿರುವ ಹೆಚ್ಚಿನ ಉಪ್ಪು, ಖಾರ, ಮಸಾಲೆ ಅಂಶಗಳಿಂದ ಜಠರದ ಒಳ ಆವರಣದಲ್ಲಿ ಹುಣ್ಣುಗಳಾಗಿ ಗ್ಯಾಸ್ಟ್ರಿಕ್ ತೊಂದರೆಗಳು ಶುರುವಾಗುತ್ತವೆ. ಎಣ್ಣೆಯಲ್ಲಿ ಕರಿದ ತಿಂಡಿ, ಕೊಬ್ಬಿನ ಅಂಶ ಹೆಚ್ಚಿರುವ ಪದಾರ್ಥಗಳು ಮೇದೋಜೀರಕ ಗ್ರಂಥಿಯ ಉರಿಯೂತಕ್ಕೆ ಕಾರಣವಾಗಬಹುದು. ಇದರಿಂದ ತೀವ್ರ ಹೊಟ್ಟೆನೋವು, ವಾಂತಿಯಂತಹ ತೊಂದರೆಗಳಾಗಿ ಮಾರಣಾಂತಿಕ ಸ್ಥಿತಿ ತರಬಹುದು. ಗೋಲ್ಡನ್ ರಿಟ್ರೀವರ್, ಲೆಬ್ರಡಾರ್, ಡಾಬರ್‌ಮನ್ ನಂತಹ ಶ್ವಾನ ತಳಿಗಳಲ್ಲಿ ಬದಲಾದ ಆಹಾರ ಪದ್ಧತಿಯ ಕಾರಣ ಥೈರಾಯ್ಡ್ ತೊಂದರೆಗಳು ಹೆಚ್ಚು ಕಾಣಿಸುತ್ತಿವೆ.

ಸಾಕುಪ್ರಾಣಿಗಳೊಂದಿಗೆ ಮಾನವನ ಅನುಬಂಧ, ಒಡನಾಟವನ್ನೇ ಬಂಡವಾಳ ಮಾಡಿಕೊಂಡು ನಾಯಿ–ಬೆಕ್ಕುಗಳ ಪೌಷ್ಟಿಕ ಆಹಾರದ ಹೆಸರಿನಲ್ಲಿ ವಿವಿಧ ಬಗೆಯ ತಿನಿಸುಗಳು ಮಾರುಕಟ್ಟೆಗೆ ದಾಂಗುಡಿಯಿಡುತ್ತಿವೆ. ಇವುಗಳ ಗುಣಮಟ್ಟ ಖಾತರಿಪಡಿಸಿಕೊಳ್ಳುವುದು ಸುಲಭದ ಕಾರ್ಯವಲ್ಲ. ಕಳಪೆ ಗುಣಮಟ್ಟದ, ಕಲಬೆರಕೆಯ ತಿನಿಸುಗಳು ಖಂಡಿತವಾಗಿಯೂ ಸಾಕುಪ್ರಾಣಿಗಳ ಆರೋಗ್ಯಕ್ಕೆ ಮಾರಕ. ಹಾಗಾಗಿ, ಆಹಾರದ ವಿಷಯದಲ್ಲಿ ರಾಜಿ ಸಲ್ಲದು. ಜವಾಬ್ದಾರಿಯುತ ಮಾಲೀಕರಾಗಿ ಮಾರುಕಟ್ಟೆಯಲ್ಲಿನ ಆಕರ್ಷಕ ಪ್ಯಾಕೆಟ್ ಆಹಾರಗಳಿಗಿಂತ, ಮನೆಯ ಊಟಕ್ಕೆ ಆದ್ಯತೆ ನೀಡುವುದು ಅಗತ್ಯವಾಗಿದೆ. ಮನೆಯಲ್ಲಿ ನಾವು ನಿತ್ಯ ಉಣ್ಣುವ ಸಾಂಪ್ರದಾಯಿಕ ಆಹಾರವನ್ನೇ ಸಾಕುಪ್ರಾಣಿಗಳಿಗೆ ಅಭ್ಯಾಸ ಮಾಡಿಸುವುದು ಒಳ್ಳೆಯದು. ಬೀನ್ಸ್, ಕ್ಯಾರೆಟ್, ಸೌತೆಕಾಯಿಯಂತಹ ತರಕಾರಿಗಳು, ಬೀಜ ತೆಗೆದ ಸೇಬುಹಣ್ಣು, ಬೇಯಿಸಿದ ಮೊಟ್ಟೆ ಊಟದ ಭಾಗವಾಗಿರಲಿ. ಜೊತೆಗೆ ಕೊಡುವ ಆಹಾರ ಹಿತಮಿತವಾಗಿರುವಂತೆ, ಬೊಜ್ಜು ಬಾರದಂತೆ ಜಾಗೃತಿ ವಹಿಸಬೇಕು. ಮನೆಯ ಮಕ್ಕಳಂತೆ ನಾಯಿ–ಬೆಕ್ಕುಗಳೂ ದುಂಡು ದುಂಡು ಕಾಣಬೇಕೆಂದು ಹೆಚ್ಚಿನ ಉಪಚಾರ ಮಾಡದೆ, ಸಪೂರವಾಗಿ, ಲವಲವಿಕೆಯಿಂದ ಇರುವುದೇ ಆರೋಗ್ಯ ಎಂಬುದನ್ನು ಸಾಕುವವರು ಮನಗಾಣಬೇಕಿದೆ. ನಿಸ್ಸಹಾಯಕ ಜೀವಿಗಳಿಗೆ ಆಹಾರದ ವಿಷಯದಲ್ಲಿ ವಿವೇಚನೆಯಿಲ್ಲದೆ ತೋರುವ ಅತಿ ಮಮತೆಯೂ ಒಂದರ್ಥದಲ್ಲಿ ಪ್ರಾಣಿ ಕ್ರೌರ್ಯವೇ.

ಬಹುಮುಖ್ಯವಾಗಿ, ನಾಯಿ ಸಾಕಲು ನಿರ್ಧರಿಸುವ ಮುಂಚೆ ಓಡಾಟಕ್ಕೆ ಸಾಕಷ್ಟು ಸ್ಥಳವಿದೆಯೇ; ಅದಕ್ಕೆ ವ್ಯಾಯಾಮ, ವಾಕಿಂಗ್ ಮಾಡಿಸಲು, ಜೊತೆಗೆ ಒಡನಾಡಲು, ಅನಾರೋಗ್ಯದ ಸಂದರ್ಭದಲ್ಲಿ ನೋಡಿಕೊಳ್ಳಲು ಸಮಯವಿದೆಯೇ; ಚಿಕ್ಕ ಮನೆ, ದೊಡ್ಡ ವಸತಿ, ಅಪಾರ್ಟ್‌ಮೆಂಟ್‌ಗೆ ಯಾವ ತಳಿ ಸೂಕ್ತ ಎಂದು ಯೋಚಿಸಿ, ಸಲಹೆ ಪಡೆದು, ಕುಟುಂಬದವರೊಂದಿಗೆ ಚರ್ಚಿಸಿ ಮುಂದುವರಿಯುವುದು ಒಳಿತು. ನಾಯಿ–ಬೆಕ್ಕುಗಳು ಮುಗ್ಧ ಪ್ರಾಣಿಗಳು, ಅವುಗಳಿಗೆ ಯಾವುದು ಒಳ್ಳೆಯದು, ಯಾವುದು ಕೆಟ್ಟದು ಎಂಬ ಅರಿವಿಲ್ಲ. ಹಾಗಾಗಿ, ಅವುಗಳ ವಸತಿಯ ಕುರಿತಾಗಲಿ, ಆಹಾರದ ವಿಷಯವಾಗಲಿ, ಆರೈಕೆಯ ವಿಚಾರವಾಗಲಿ ಮಾಲೀಕರೇ ಹೆಚ್ಚು ಜವಾಬ್ದಾರಿ, ವಿವೇಚನೆಯಿಂದ ನಡೆದುಕೊಳ್ಳಬೇಕಿದೆ. 'ಒಂದು ರಾಷ್ಟ್ರದ ಶ್ರೇಷ್ಠತೆ ಮತ್ತು ಅದರ ನೈತಿಕ ಪ್ರಗತಿಯನ್ನು ಅಲ್ಲಿನ ಪ್ರಾಣಿಗಳನ್ನು ನಡೆಸಿಕೊಳ್ಳುವ ರೀತಿಯಿಂದ ಅಳೆಯಬಹುದು' ಎನ್ನುವ ಮಹಾತ್ಮ ಗಾಂಧೀಜಿಯ ಮಾತನ್ನು ಪ್ರಾಣಿಗಳ ಸಾಂಗತ್ಯದಲ್ಲಿರುವವರೆಲ್ಲ ಸದಾ ನೆನಪಿಡಬೇಕು.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ

## ವಾಚಕರ ವಾಣಿ

### ವಿಪಕ್ಷ ಶಾಸಕರ ಅಸಾಂವಿಧಾನಿಕ ವರ್ತನೆ

**ಸದನದಲ್ಲಿ** ವಿರೋಧ ಪಕ್ಷದ ಕೆಲವು ಶಾಸಕರು ತೋರುತ್ತಿರುವ ವರ್ತನೆ ಖಂಡನಾರ್ಹ. ಆಡಳಿತ ಪಕ್ಷದ ತಪ್ಪುಗಳನ್ನು ಸಂವಿಧಾನಬದ್ಧವಾಗಿ ಎತ್ತಿ ತೋರಿಸಿ ಸರ್ಕಾರಕ್ಕೆ ಅಂಕುಶ ಹಾಕುವುದು ವಿಪಕ್ಷದ ಜವಾಬ್ದಾರಿ. ಆ ಜವಾಬ್ದಾರಿ ಮರೆತು, ಯಾವುದೇ ಫಲಪ್ರದ ಅಥವಾ ರಚನಾತ್ಮಕ ಟೀಕೆ ಇಲ್ಲದೆ ಕೇವಲ ವ್ಯಂಗ್ಯ, ಹಾಸ್ಯ, ಅಣಕಕ್ಕೆ ಇಳಿಯುತ್ತಿರುವುದು ದುರದೃಷ್ಟಕರ. ಇಂತಹ ವರ್ತನೆ ಸದನದ ಗೌರವವನ್ನು ಕುಗ್ಗಿಸುವುದಲ್ಲದೆ, ಪ್ರಜಾಪ್ರಭುತ್ವದ ಮೌಲ್ಯಗಳಿಗೂ ಧಕ್ಕೆ ತರುತ್ತದೆ. ಜೊಳ್ಳು ವಾದಗಳು, ಪೊಳ್ಳು ಮಾತುಗಳು ಮತ್ತು ಅಪ್ರೌಢ ನಡವಳಿಕೆಯಿಂದ ಸಾರ್ವಜನಿಕ ಹಿತಕ್ಕೆ ಯಾವ ಪ್ರಯೋಜನವೂ ಇಲ್ಲ.

**ಎಂ.ಎಸ್. ಅಲ್ಲಮ ಪ್ರಭು**, ಬೆಂಗಳೂರು

### ಕೃಷಿ ಪ್ರವಾಸ: ಹೊಸ ಆದಾಯದ ದಾರಿ

'ಪ್ರವಾಸಿಗರೇ, ಕೃಷಿಕರ ಹೊಲಗಳಿಗೆ ಬನ್ನಿ!' ಲೇಖನವು (ಲೇ: ಆನಂದತೀರ್ಥ ಪ್ಯಾಟಿ, ಪ್ರ.ವಾ., ಫೆ. 4) ಸಮಯೋಚಿತವಾಗಿದೆ. ಮಾರುಕಟ್ಟೆ ಸಂಸ್ಕೃತಿಯಲ್ಲಿ ರೈತ ಮತ್ತು ಸಾರ್ವಜನಿಕರ ನಡುವಿನ ನಂಟು ನಾಶವಾಗಿದೆ. ಕೃಷಿಕನ ದುಡಿಮೆ, ಬೆಳೆ ರಕ್ಷಣೆಗಾಗಿನ ಹೋರಾಟ, ಶುದ್ಧ ಆಹಾರದ ಪರಿಚಯ ಕುರಿತ ಮಾಹಿತಿಗಾಗಿ ಮತ್ತು ಸ್ನೇಹ ಸಂಪರ್ಕಕ್ಕಾಗಿ ಉಪಭೋಕ್ತ ಸಂಪರ್ಕಿಸಲೇಬೇಕಾಗಿದೆ. ಅನಾಥಪ್ರಜ್ಞೆಯಿಂದ ಸೊರಗುತ್ತಿರುವ ರೈತನಿಗೂ ಮಾನಸಿಕವಾಗಿ, ವ್ಯವಹಾರದ ದೃಷ್ಟಿಯಿಂದ ಈ ಸಾಂಗತ್ಯದ ಅಗತ್ಯವಿದೆ. ಸರ್ಕಾರದ ವ್ಯವಸ್ಥೆಗಾಗಿ ಕಾಯುವುದಕ್ಕಿಂತ ಸ್ವತಃ ಕೃಷಿ ಪ್ರವಾಸ ಆಯೋಜಿಸುವುದು ಜಾಣತನದ ಮಾತಾದೀತು. ಈ ಪ್ರವಾಸವು ಸಾರ್ವಜನಿಕರಿಗೆ, ಕೃಷಿಕನಿಗೆ ಮತ್ತು ಸಮಾಜಕ್ಕೆ ಅತ್ಯಂತ ಹಿತಕಾರಿ.

**ಮಾಲತಿ ಪಟ್ಟಣಶೆಟ್ಟಿ**, ಧಾರವಾಡ

### ಸುಂಕ ಇಳಿಕೆ: ವೈಭವೀಕರಣ ಬೇಡ

**ಅಮೆರಿಕವು** ಭಾರತದ ಮೇಲೆ ವಿಧಿಸುತ್ತಿದ್ದ ಸುಂಕದಲ್ಲಿ ಒಂದಷ್ಟು ಕಡಿತಗೊಳಿಸಿದ್ದನ್ನು ನರೇಂದ್ರ ಮೋದಿಯ ದಿಗ್ವಿಜಯವೆಂಬಂತೆ ಆಡಳಿತ ಪಕ್ಷವು ವೈಭವೀಕರಿಸುತ್ತಿದೆ. ಭಾರತವು ರಷ್ಯಾದಿಂದ ತೈಲ ಆಮದನ್ನು ನಿಲ್ಲಿಸಿ ಅಮೆರಿಕದ ಇಚ್ಛಾನುಸಾರ ವೆನೆಜುವೆಲಾದಿಂದ ಆಮದು ಮಾಡಿಕೊಂಡರಷ್ಟೆ ಸುಂಕದಲ್ಲಿ ಕಡಿತ ತೋರಲಾಗುವುದೆಂಬುದು ಇಲ್ಲಿ ಗಮನಾರ್ಹ. ಹಾಗೊಮ್ಮೆ ರಷ್ಯಾದಿಂದ ಆಮದು ನಿಲ್ಲಿಸಿ ನಾವು ಅಮೆರಿಕದ ಇಚ್ಛೆಯಂತೆ ಸಾಗಿದರೆ ಆಗ ತೈಲದ ಆಮದು ಬೆಲೆಯೂ ಹೆಚ್ಚಿ, ದಿನಬಳಕೆಯ ಅಗತ್ಯ ವಸ್ತುಗಳವರೆಗೂ ದೇಶದಲ್ಲಿ ಬೆಲೆ ಏರಿಕೆಯಾಗಲಿದೆ. ಇಂತಹ ಸಾಧಕ–ಬಾಧಕ ಪರಿಶೀಲಿಸಿದ ನಂತರವಷ್ಟೇ, ಇದು ಮೋದಿಯ ದಿಗ್ವಿಜಯವೋ ಅಥವಾ ಮೋದಿಯ ಮೇಲೆ ಟ್ರಂಪ್ ದಿಗ್ವಿಜಯವೋ ಎಂಬುದನ್ನು ಅರಿಯಲು ಸಾಧ್ಯ.

**ಎಚ್. ಆನಂದರಾಮ ಶಾಸ್ತ್ರೀ**, ಬೆಂಗಳೂರು

### ಶಾಲೆಗಳಿಗೆ ಆಪ್ತಸಮಾಲೋಚಕರು ಬೇಕು

**ಕೇಂದ್ರೀಯ** ಪ್ರೌಢಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ತನ್ನ ಶಾಲೆಯಲ್ಲಿರುವ ಪ್ರತಿ 500 ವಿದ್ಯಾರ್ಥಿಗಳಿಗೆ ಒಬ್ಬರು ಕೌನ್ಸೆಲಿಂಗ್ ಹಾಗೂ ವೆಲ್‌ನೆಸ್ ಟೀಚರ್ ನೇಮಕ ಮಾಡಬೇಕೆಂದು ಕಡ್ಡಾಯಗೊಳಿಸಿದೆ. ವಿದ್ಯಾರ್ಥಿಗಳು ಕಲಿಕಾ ಒತ್ತಡದ ವಾತಾವರಣದಿಂದಾಗಿ ಮಾನಸಿಕ ಸ್ಥಿರತೆ ಕಳೆದುಕೊಂಡು ಖಿನ್ನರಾಗುತ್ತಿರುವುದು ಹೆಚ್ಚಾಗುತ್ತಿದೆ. ಮಗುವಿನ ಸಾಮಾಜಿಕ-ಭಾವನಾತ್ಮಕ ಕಲಿಕೆಯ ಜೊತೆಗೆ ಮಕ್ಕಳ ಮಾನಸಿಕ ಆರೋಗ್ಯಕ್ಕೆ ಒತ್ತು ನೀಡುವ ಕಾರಣ ಈ ವ್ಯವಸ್ಥೆಯ ಅಗತ್ಯವಿದೆ. ರಾಜ್ಯ ಶಿಕ್ಷಣ ಇಲಾಖೆಯು ಸಹ ಪ್ರತಿ ಕ್ಲಸ್ಟರ್, ತಾಲ್ಲೂಕುಮಟ್ಟದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಆಪ್ತಸಮಾಲೋಚಕ ಶಿಕ್ಷಕರ ನೇಮಕಕ್ಕೆ ಕ್ರಮಗೊಳ್ಳಬೇಕಿದೆ.

**ಸುರೇಂದ್ರ ಪೈ**, ಭಟ್ಕಳ

### ಫಲಿತಾಂಶ ಹೆಚ್ಚಳಕ್ಕೆ ವಿನೂತನ ಪ್ರಯೋಗ

**ಎಸ್‌ಎಸ್‌ಎಲ್‌ಸಿ** ಮತ್ತು ದ್ವಿತೀಯ ಪಿಯು ಪರೀಕ್ಷೆಗೆ ಕೆಲವೇ ದಿನಗಳು ಬಾಕಿಯಿವೆ. ವಿದ್ಯಾರ್ಥಿಗಳ ಓದಿಗೆ ತೊಂದರೆಯಾಗದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ವಿನೂತನ ಪ್ರಯೋಗಕ್ಕೆ ಮುಂದಾಗಿದ್ದಾರೆ. ಊರುಗಳಲ್ಲಿ ರಾತ್ರಿ 7ರಿಂದ 9ಗಂಟೆವರೆಗೆ ಟಿ.ವಿ ಹಾಗೂ ಮೊಬೈಲ್ ಸ್ವಿಚ್‌ಆಫ್ ಮಾಡುವಂತೆ ಪೋಷಕರಿಗೆ ಜಾಗೃತಿ ಮೂಡಿಸುವುದು ಈ ಕ್ರಮಗಳಲ್ಲಿ ಒಂದಾಗಿದೆ. ಹಾವೇರಿ ತಾಲ್ಲೂಕಿನ 33 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಈ ಬಗ್ಗೆ ಡಂಗೂರ ಸಾರುವಂತೆ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಅವರು, ಪಿಡಿಒಗಳಿಗೆ ಸೂಚಿಸಿದ್ದಾರೆ. ಶಿಕ್ಷಣಾಧಿಕಾರಿಯ ಕೋರಿಕೆ ಮೇರೆಗೆ ಈ ಆದೇಶ ಹೊರಡಿಸಲಾಗಿದೆ. ಅಧಿಕಾರಿಗಳ ಶ್ರಮಕ್ಕೆ ಕುಟುಂಬದ ಸದಸ್ಯರ ಸಹಕಾರ ಬೇಕಿದೆ.

**ಶ್ರೀಧರ್ ಕೆ. ಅಂಗಡಿ**, ರಾಣೆಬೆನ್ನೂರು

### ಇಂದ್ರಿಯ ಕಳೆದುಕೊಂಡು ಕುರುಡಾಗದಿರಿ

'**ಗಾಂಧಿ:** ಕಾಂಗ್ರೆಸ್‌ನ ರಾಜಕೀಯ ಗುರಾಣಿ' ಲೇಖನವು (ಲೇ: ಅರವಿಂದ ಬೆಲ್ಲದ, ಪ್ರ.ವಾ., ಫೆ. 3) 'ನಾ ಸರಿ ನೀನು ತಪ್ಪು' ಎಂಬ ಧೋರಣೆ ಹೊಂದಿದೆ. ಗಾಂಧೀಜಿ ಹೇಳಿದಂತೆ, ಕಾಂಗ್ರೆಸ್ 'ಲೋಕ ಸೇವಕ ಸಂಘ' ಆಗಬೇಕಿತ್ತು ಎನ್ನುವ ಇತಿಹಾಸದ ತಂಗಳು ಮಾತನ್ನೇ ಆಡಿರುವುದು ಕುಚೋದ್ಯ. ಗಾಂಧಿ ಬಗ್ಗೆ ವಿಪರೀತ ಅಸಹನೆ ಹೊಂದಿರುವವರು, 'ಗಾಂಧೀಜಿಯ ಅಭಿಪ್ರಾಯವನ್ನು ವ್ಯವಸ್ಥಿತವಾಗಿ ಮರೆಮಾಡಿತು' ಎಂದು ಕಾಂಗ್ರೆಸನ್ನು ಟೀಕಿಸುವುದು ತಮಾಷೆ ಎನಿಸುತ್ತದೆ. ಗಾಂಧೀಜಿಯ ಹೆಸರನ್ನು ಕಿತ್ತು ವಿಬಿ–ಜಿ ರಾಮ್ ಜಿ ಆಗಿ ಪರಿವರ್ತಿಸಿದವರು ರಾಷ್ಟ್ರಪಿತನ ಬಗ್ಗೆ ಮಾತಾಡುವುದು ಆತ್ಮವಂಚನೆಯ ಪರಾಕಾಷ್ಠೆಯಲ್ಲದೆ ಮತ್ತೇನು? ಕಾಂಗ್ರೆಸ್ ಗಾಂಧಿ ಸಂಕಥನದಲ್ಲಿ ಭಾವುಕ ರಾಜಕಾರಣ ಮಾಡುತ್ತಿದೆ ಎಂದು ಹಳಿಯುವವರು, ರಾಷ್ಟ್ರೀಯತೆಯೊಂದಿಗೆ ಧರ್ಮ, ರಾಮನನ್ನು ಬೆಸೆದು ಮಾಡುತ್ತಿರುವ ಸಂಕಥನದ ರಾಜಕಾರಣ ಭಾವುಕದ್ದಲ್ಲದೆ ಇನ್ನೇನು? ಪಕ್ಷದ ಕಾಲಾಳು ಆಗುವುದು ಎಂದರೆ ಇಂದ್ರಿಯ ಕಳೆದುಕೊಂಡು ಕುರುಡಾಗುವುದೇ?

**ದೊಡ್ಡಿಶೇಖರ್**, ಆನೇಕಲ್

## ಚುರುಮುರಿ

# ಡಾನ್ಸ್ ರಾಜ ಡಾನ್ಸ್!

• ಗುರು ಪಿ.ಎಸ್.

'ಪ್ರತಿ ಆ್ಯನಿವರ್ಸರಿಗೆ ಗೋಲ್ಡ್‌ದು ಏನಾದರೂ ಗಿಫ್ಟ್ ಕೊಡಸ್ತಿದ್ರಿ. ಈ ವರ್ಷ ಏನೂ ಕೊಡಿಸಲೇ ಇಲ್ವಲ್ರೀ...' ಬೇಸರ ಮತ್ತು ಸಿಟ್ಟಿನಲ್ಲೇ ಪೀಠಿಕೆ ಹಾಕಿದಳು ಹೆಂಡತಿ.

'ನೀನೇ ಚಿನ್ನ, ನಿನಗೇಕೆ ಬೇಕು ಚಿನ್ನ ಅಂತೆಲ್ಲ ಪೂಸಿ ಹೊಡಿತೀನಿ ಅಂತ ಅಂದ್ಕೊಬೇಡ, ಇನ್ಮುಂದೆ ಬಂಗಾರ ಕೊಡಿಸೋದೇ ಇಲ್ಲ' ಕಡ್ಡಿ ಮುರಿದಂತೆ ಹೇಳಿದೆ.

'ಯಾಕ್ರೀ ಹೀಗಂತೀರ, ಹೇಗಿದೆ ಮೈಗೆ'

'ಗೋಲ್ಡ್ ರೇಟು ರಾಕೆಟ್ ಸ್ಪೀಡ್‌ನಲ್ಲಿ ಮೇಲಕ್ಕೆ ಹೋಗ್ತಿದೆಯಮ್ಮ'

'ಚಿನ್ನ ಬೇಡ, ಬೆಳ್ಳಿಯಾದರೂ ಕೊಡಿಸಿ'

'ಈಗ ಮೌನವಷ್ಟೇ ಅಲ್ಲ, ಮಾತೂ ದುಬಾರಿ'

'ಅಂದ್ರೆ?' ಗೊಂದಲದಲ್ಲಿ ಕೇಳಿದಳು ಹೆಂಡತಿ.

'ಅಂದ್ರೆ, ಬೆಳ್ಳಿನೂ ನಾಗಾಲೋಟದಲ್ಲಿ ಓಡುತ್ತಿದೆ'

'ಯಾಕ್ ಸುಳ್ಳು ಹೇಳ್ತಿರ್ರೀ... ಬೆಳ್ಳಿ ಇಳಿಕೆ ಅಂತ ಸುದ್ದಿ ಇದೆ ನೋಡಿ ಇಲ್ಲಿ' ಪೇಪರ್ ಮುಖದ ಮುಂದೆ ಹಿಡಿದಳು.

'ಲಕ್ಷದಲ್ಲಿ ಏರಿಕೆಯಾದರೆ, ಸಾವಿರದಲ್ಲಿ ಇಳಿಯುತ್ತೆ ಗೊತ್ತಾ' ಎನ್ನುತ್ತಾ ಜಾಗ ಖಾಲಿ ಮಾಡಬೇಕು ಎನ್ನುವಷ್ಟರಲ್ಲೇ, 'ಇದೇನ್ರೀ ಇದು, ಎಪ್‌ಸ್ಟೈನ್ ಫೈಲ್ ಅನ್ನೋದೇನೋ ಸುದ್ದಿ ಇದೆಯಲ್ಲ, ಹಂಗಂದ್ರೇನು...' ಎಂದಳು.

'ಜಗತ್ತಿನ ದೊಡ್ಡ ದೊಡ್ಡವರದೆಲ್ಲ ರಹಸ್ಯಗಳು ಆ ಫೈಲ್‌ನಲ್ಲಿ ಇವೆಯಂತೆ, ಅದರಲ್ಲಿ ಹೆಸರಿರೋರೆಲ್ಲ ಈಗ ಕುಣೀತಿದಾರೆ, ಬ್ಲ್ಯಾಕ್‌ಮೇಲ್ ಮಾಡೋರಿಗೆಲ್ಲ ಈಗ ಇದೇ ಹೊಸ ಅಸ್ತ್ರ' ವಿವರಿಸಿದೆ.

ಥಟ್ಟನೇ ಏನೋ ಹೊಳೆದಂತೆ ಎದ್ದ ಹೆಂಡತಿ, 'ನಿಮ್ಮ ಕಾಲೇಜು ದಿನಗಳ ಫೈಲ್ ಇಲ್ಲೇ ಎಲ್ಲೋ ನೋಡಿದಂಗಿತ್ತು ರೀ...' ಎಂದಳು.

'ಹೋಗ್ಲಿಬಿಡು ಆ ವಿಷಯವೆಲ್ಲ ಈಗ್ಯಾಕೆ... ನಿನಗೇನು ಬೇಕು, ಗೋಲ್ಡ್ ಚೈನ್ ಬೇಕಾ? ನೆಕ್ಲೇಸ್ ಬೇಕಾ?' ಅರಿವಿಲ್ಲದೆ ನನ್ನ ಕಾಲು ಕುಣಿಯತೊಡಗಿತು.

'ಇದ್ಯಾಕ್ರೀ, ಇದ್ದಕ್ಕಿದ್ದಂತೆ ಡಾನ್ಸ್ ಮಾಡೋಕೆ ಶುರು ಮಾಡಿದ್ರೀ, ಗೋಲ್ಡ್ ರೇಟ್ ಜಾಸ್ತಿ ಇದೆಯಲ್ವ, ನೆಕ್ಲೇಸ್ ತಗೊಂಡ್ರೇ ಟ್ಯಾಕ್ಸೂ ಜಾಸ್ತಿ ಬೀಳುತ್ತಲ್ವ?'

'ನಿನಗಿಂತ ಚಿನ್ನ ಹೆಚ್ಚಿನದೇನಮ್ಮ, ಅದೆಷ್ಟೇ ರೇಟ್ ಆಗಲಿ, ಎಷ್ಟೇ ಟ್ಯಾಕ್ಸ್ ಬೀಳಲಿ. ಬಂಗಾರ ತರ್ತೀನಿರು ಬಂಗಾರ' ಎನ್ನುತ್ತಾ ಹೊರಗಡಿಯಿಟ್ಟೆ.

## ಸಂಗತ

# ಸರ್ವಾಧಿಕಾರದತ್ತ ಅಪಾಯಕಾರಿ ನಡಿಗೆ

ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆಸುವ ಬದಲು ಆಡಳಿತಾಧಿಕಾರಿ ನೇಮಿಸುವುದು ಸರಿಯಲ್ಲ. ಅದು ಸಾಂವಿಧಾನಿಕ ವ್ಯವಸ್ಥೆಯ ಸ್ಪಷ್ಟ ಉಲ್ಲಂಘನೆ.

• ಕೃಪಾ ಎಂ.ಎಂ.

**ರಾಜ್ಯ** ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಯವರು, 2026–2031ರ ಅವಧಿಗೆ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿ ನೇಮಿಸುವ ಕುರಿತು ಆದೇಶ ಹೊರಡಿಸಿದ್ದಾರೆ. ಈ ಆದೇಶದಲ್ಲಿ, ಈಗಾಗಲೇ ಅಸ್ತಿತ್ವದಲ್ಲಿರುವ ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆದು ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ನಡೆಯುವವರೆಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 8(iii)ರ ಅನ್ವಯ ಜಿಲ್ಲಾಧಿಕಾರಿಯು ಆಡಳಿತಾಧಿಕಾರಿಗಳನ್ನು ನೇಮಿಸಬಹುದೆಂದು ಹೇಳಲಾಗಿದೆ. ಆದರೆ, ಈ ಆದೇಶವೇ ಕಾನೂನಿನ ತಪ್ಪು ವ್ಯಾಖ್ಯಾನವಾಗಿದೆ ಮತ್ತು ಸಾಂವಿಧಾನಾತ್ಮಕ ವ್ಯವಸ್ಥೆಯ ಉಲ್ಲಂಘನೆಯಾಗಿದೆ. ಪ್ರಕರಣ 8 ಅನ್ವಯವಾಗುವುದು ಗ್ರಾಮ ಪಂಚಾಯಿತಿಗಳ 'ಸ್ಥಾಪನೆ' ಸಂದರ್ಭದಲ್ಲಿ ಮಾತ್ರವೇ ವಿನಾ ಅಸ್ತಿತ್ವದಲ್ಲಿರುವ ಪಂಚಾಯಿತಿಗಳಿಗಲ್ಲ.

ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯ ಪ್ರಕರಣ 8 ಅನ್ವಯವಾಗುವುದು ಗ್ರಾಮ ಪಂಚಾಯಿತಿ ಸ್ಥಾಪನೆಯಾದ ತರುವಾಯ ಕೂಡಲೇ, ಯಾವುದೋ ಕಾರಣದಿಂದಾಗಿ ಪಂಚಾಯಿತಿ ರಚಿಸಲು ಸಾಧ್ಯವಾಗದ ಸಂದರ್ಭಗಳಲ್ಲಿ ಮಾತ್ರ. ಅಂದರೆ, ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ, ಜನರಿಂದ ಚುನಾಯಿತ ಸಂಸ್ಥೆಗಳಾಗಿರುವ ಗ್ರಾಮ ಪಂಚಾಯಿತಿಗಳಿಗೆ ಈ ಪ್ರಕರಣವನ್ನು ಬಳಸುವ ಅವಕಾಶವೇ ಇಲ್ಲ.

ಸರ್ಕಾರದ ಆದೇಶದಲ್ಲಿ ಉಲ್ಲೇಖಿಸಿರುವಂತೆ ಕಾಯ್ದೆಯಲ್ಲಿ 'ಪ್ರಕರಣ 8(iii)' ಎಂಬ ಸ್ವತಂತ್ರ ಪ್ರಕರಣವೇ ಇಲ್ಲ. ನಿಖರವಾಗಿ ಹೇಳುವುದಾದರೆ, ಅದು ಪ್ರಕರಣ 8(1)(ಎ)(iii) ಆಗಿರಬೇಕು. ಕಾಯ್ದೆಯ ನಿಖರ ಪಠ್ಯ ಹೀಗೆ ಹೇಳುತ್ತದೆ:

ಗ್ರಾಮ ಪಂಚಾಯಿತಿಗಳ ಸದಸ್ಯರನ್ನು ಚುನಾಯಿಸಲು ತಪ್ಪಿದಲ್ಲಿ ಆಡಳಿತ ಸಮಿತಿಯ ಅಥವಾ ಆಡಳಿತಾಧಿಕಾರಿಯ ನೇಮಕ ಈ ಮುಂದಿನಂತೆ ಆಗಬಹುದು. ಡೆಪ್ಯುಟಿ ಕಮಿಷನರ್ ಅವರಿಗೆ ಗ್ರಾಮ ಪಂಚಾಯಿತಿಯನ್ನು ಸ್ಥಾಪಿಸಿದ ತರುವಾಯ ಕೂಡಲೇ ಗ್ರಾಮಕ್ಕಾಗಿ ಅಥವಾ ಗ್ರಾಮಗಳ ಗುಂಪಿಗಾಗಿ ಗ್ರಾಮ ಪಂಚಾಯಿತಿಯನ್ನು, ಗ್ರಾಮ ಪಂಚಾಯಿತಿಯ ಸದಸ್ಯರ ಚುನಾವಣೆಯನ್ನು ನಡೆಸುವುದಕ್ಕೆ ಯಾವುದೇ ತೊಂದರೆಯ ಕಾರಣದಿಂದಾಗಿ; 5ನೇ ಪ್ರಕರಣದ (6ನೇ) ಉಪಪ್ರಕರಣದ ಅಡಿಯಲ್ಲಿ ನಡೆಸಲಾದ ಎರಡು ಅನುಕ್ರಮ ಚುನಾವಣೆಗಳಲ್ಲಿ ಅಂಥ ಸದಸ್ಯರನ್ನು ಚುನಾಯಿಸಲು ವಿಫಲವಾಗಿರುವ ಕಾರಣದಿಂದಾಗಿ; ಇತರ ಯಾವುದೇ ಸಾಕಷ್ಟು ಕಾರಣದಿಂದಾಗಿ, ಪಂಚಾಯಿತಿ ರಚಿಸಲು ಸಾಧ್ಯವಿಲ್ಲವೆಂದು ಮನದಟ್ಟಾದರೆ; ಗ್ರಾಮ ಪಂಚಾಯಿತಿಗೆ ಚುನಾವಣೆಯಲ್ಲಿ ಯಾವುದೇ ಸದಸ್ಯನು ಚುನಾಯಿತನಾಗದಿದ್ದರೆ; ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟಕ್ಕಿಂತಲೂ ಕಡಿಮೆ ಸದಸ್ಯರು ಚುನಾಯಿತರಾಗಿದ್ದರೆ – ಇಂಥ ಸಂದರ್ಭಗಳಲ್ಲಿ ಡೆಪ್ಯುಟಿ ಕಮಿಷನರ್ ಅವರು, ಅಧಿಸೂಚನೆಯ ಮೂಲಕ, ಚುನಾಯಿತರಾಗಲು ಅರ್ಹರಾದ ವ್ಯಕ್ತಿಗಳನ್ನು ಒಳಗೊಂಡ ಆಡಳಿತ ಸಮಿತಿಯನ್ನು ನೇಮಕ ಮಾಡತಕ್ಕದ್ದು. ಅಂಥ ವ್ಯಕ್ತಿಗಳ ಸಂಖ್ಯೆಯು 5ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ಧರಿಸಿರುವ ಸದಸ್ಯರ ಸಂಖ್ಯೆಗೆ ಸಮನಾಗಿರತಕ್ಕದ್ದು, ಅಥವಾ ಆಡಳಿತಾಧಿಕಾರಿಯನ್ನು ನೇಮಕ ಮಾಡತಕ್ಕದ್ದು.

ಇವೆಲ್ಲವೂ ಗ್ರಾಮ ಪಂಚಾಯತ್ ಸ್ಥಾಪನೆಯಾದಾಗ ಅದರ ರಚನೆಯ ಆರಂಭಿಕ ಹಂತಕ್ಕೆ ಮಾತ್ರ ಸೀಮಿತ ಆಗಿರುವ ವಿಧಿಗಳು. ಇವುಗಳನ್ನು ಈಗಾಗಲೇ ಅಸ್ತಿತ್ವದಲ್ಲಿರುವ ಗ್ರಾಮ ಪಂಚಾಯಿತಿಗಳಿಗೆ ಅನ್ವಯಿಸುವುದು ಸಾಧ್ಯವಿಲ್ಲ.

ಒಂದೊಮ್ಮೆ ಈ ಆದೇಶವು ಪ್ರಕರಣ 8(3) ಅನ್ನು ಉಲ್ಲೇಖಿಸಿದರೂ, ಅದೂ ಕೂಡ ಪ್ರಕರಣ 8(1)ರ ಅಡಿಯಲ್ಲಿ ನಡೆದ ನೇಮಕಗಳಿಗೇ ಅನ್ವಯಿಸುತ್ತದೆ. ಪ್ರಕರಣ 8(3) ಹೇಳುವುದೇನೆಂದರೆ, (1)ನೇ ಉಪ ಪ್ರಕರಣದ ಅಡಿಯಲ್ಲಿ, ಆಡಳಿತ ಸಮಿತಿಯು ಅಥವಾ ಆಡಳಿತಾಧಿಕಾರಿಯು ನೇಮಕಗೊಂಡಾಗ, ಅಂಥ ನೇಮಕಕ್ಕೆ ಮುಂಚೆ, ಗ್ರಾಮ ಪಂಚಾಯಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದ ವ್ಯಕ್ತಿಗಳು ಯಾರಾದರೂ ಇದ್ದರೆ, ಅವರು ಗ್ರಾಮ ಪಂಚಾಯಿತಿಯ ಸದಸ್ಯರಾಗಿರುವುದು ನಿಂತುಹೋಗತಕ್ಕದ್ದು ಮತ್ತು ಆ ಗ್ರಾಮ ಪಂಚಾಯಿತಿಯ ಎಲ್ಲ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಅಂಥ ಆಡಳಿತ ಸಮಿತಿಯು ಅಥವಾ ಆಡಳಿತಾಧಿಕಾರಿಯು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.

ಚುನಾವಣೆಯನ್ನು ಸಕಾಲದಲ್ಲಿ ನಡೆಸುವುದು ರಾಜ್ಯ ಚುನಾವಣಾ ಆಯೋಗದ ಪ್ರಾಥಮಿಕ ಕರ್ತವ್ಯ; ಅದಕ್ಕೆ ಅಗತ್ಯವಿರುವ ಎಲ್ಲಾ ಪ್ರಕ್ರಿಯೆಗಳಿಗೆ ಸಹಕಾರ ನೀಡುವುದು ರಾಜ್ಯ ಸರ್ಕಾರದ ಸಂವಿಧಾನಾತ್ಮಕ ಜವಾಬ್ದಾರಿ. ಚುನಾವಣೆ ನಡೆಸಲು ವಿಫಲವಾದುದಕ್ಕೆ ಪರಿಹಾರವಾಗಿ ಆಡಳಿತಾಧಿಕಾರಿ ನೇಮಕ ಮಾಡುವುದು ಸಂವಿಧಾನದ ಆತ್ಮಕ್ಕೇ ವಿರುದ್ಧ.

ಪಂಚಾಯತ್ ವ್ಯವಸ್ಥೆಗಳನ್ನು ಸದೃಢಗೊಳಿಸಲು ಸಂವಿಧಾನಕ್ಕೆ 73ನೇ ತಿದ್ದುಪಡಿ ತಂದು, ಪಂಚಾಯತ್‌ಗಳನ್ನು 9ನೇ ಪರಿಚ್ಛೇದದಲ್ಲಿ ಸೇರಿಸಲಾಯಿತು. ಈ ಆಶಯದ ಮೇರೆಗೆ 1993ರಲ್ಲಿ ರೂಪುಗೊಂಡ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯು ಸ್ವಯಂ ಆಡಳಿತಕ್ಕೆ ಬಲ ತುಂಬಿತು. ಆದರೆ, ಇಂದು ತಿದ್ದುಪಡಿಯ ಆಶಯವೇ ನಾಶವಾಗುತ್ತಿದೆ. ಚುನಾವಣೆ ನಡೆಸದೆಯೇ ಆಡಳಿತಾಧಿಕಾರಿಗಳ ಮೂಲಕ ಗ್ರಾಮ ಪಂಚಾಯಿತಿಗಳನ್ನು ನಡೆಸುವ ಪ್ರಯತ್ನವು 'ಜನಾದೇಶವಿಲ್ಲದ ಸ್ಥಳೀಯ ಸರ್ಕಾರ' ಎಂಬ ಅಪಾಯಕಾರಿ ಸ್ಥಿತಿಯನ್ನು ನಿರ್ಮಿಸುತ್ತದೆ.

ಆಡಳಿತಾಧಿಕಾರಿ ನೇಮಕದ ಆದೇಶವು ಪಂಚಾಯತ್ ರಾಜ್ ಕಾಯ್ದೆಯ ಉಲ್ಲಂಘನೆಯಾಗಿದೆ. ಸಂವಿಧಾನದ ವಿಧಿ 243ಇಗೆ ವಿರುದ್ಧವಾದ ಮತ್ತು ಪ್ರಜಾಪ್ರಭುತ್ವದ ಬೇರುಗಳನ್ನೇ ದುರ್ಬಲಗೊಳಿಸುವ ಕ್ರಮ. ಇದು ವಿಕೇಂದ್ರೀಕೃತ ಜನಾಡಳಿತದಿಂದ ಕೇಂದ್ರೀಕೃತ ಸರ್ವಾಧಿಕಾರತ್ವದತ್ತ, ಅಧಿಕಾರಶಾಹಿ ವ್ಯವಸ್ಥೆಯತ್ತ ರಾಜ್ಯವನ್ನು ಕೊಂಡೊಯ್ಯುವ ಅಪಾಯಕಾರಿ ದಾರಿಯಂತೆ ಭಾಸವಾಗುತ್ತಿದೆ. ಇಂತಹ ಆದೇಶಗಳನ್ನು ತಕ್ಷಣ ಹಿಂಪಡೆಯದೇ ಹೋದರೆ, ಗ್ರಾಮ ಸ್ವರಾಜ್ಯದ ಅಸ್ತಿತ್ವವೇ ಪ್ರಶ್ನಾರ್ಥಕವಾಗಲಿದೆ.

ಲೇಖಕಿ: ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಕಾರ್ಯಾಲಯದ ಸದಸ್ಯರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಎಪ್‌ಸ್ಟೈನ್ ಫೈಲ್ಸ್: ಬಗೆದಷ್ಟೂ ಆಳ



ಅಮೆರಿಕದ ಜೆಫ್ರಿ ಎಪ್‌ಸ್ಟೈನ್ ಎಂಬ ಲೈಂಗಿಕ ಅಪರಾಧಿಯ ಕಥೆ ಜಾಗತಿಕ ಮಟ್ಟದಲ್ಲಿ ತಲ್ಲಣ ಉಂಟುಮಾಡಿದೆ. ಡೊನಾಲ್ಡ್ ಟ್ರಂಪ್, ನರೇಂದ್ರ ಮೋದಿ, ಬಿಲ್ ಕ್ಲಿಂಟನ್ ಅವರಂಥ ಪ್ರಭಾವಿ ರಾಜಕಾರಣಿಗಳು, ಎಲಾನ್ ಮಸ್ಕ್, ಬಿಲ್ ಗೇಟ್ಸ್, ಅನಿಲ್ ಅಂಬಾನಿ ಅವರಂಥ ಉದ್ಯಮಿಗಳು, ಬ್ರಿಟಿಷ್ ರಾಜಮನೆತನದ ಆಂಡ್ರ್ಯೂ ಮೌಂಟ್‌ಬ್ಯಾಟನ್-ವಿಂಡ್ಸರ್, ಅಮೆರಿಕದ ಆತ್ಮಸಾಕ್ಷಿಯಂತಿದ್ದ ಭಾಷಾಶಾಸ್ತ್ರಜ್ಞ ನೋಮ್ ಚಾಮ್‌ಸ್ಕಿ ಅವರ ಹೆಸರುಗಳು ಎಪ್‌ಸ್ಟೈನ್ ಫೈಲ್ಸ್‌ನಲ್ಲಿವೆ. ಅಮೆರಿಕದ ನ್ಯಾಯಾಂಗ ಇಲಾಖೆ ಬಿಡುಗಡೆ ಮಾಡಿರುವ ಈ ದಾಖಲೆಗಳಲ್ಲಿ ಹೆಸರು ಪ್ರಸ್ತಾಪ ಆಗಿರುವವರೆಲ್ಲರೂ ತಪ್ಪು ಮಾಡಿದವರು ಎಂದು ಹೇಳಲಾಗದು. ಆದರೆ, ಹಲವರ ಹೆಸರುಗಳಿಗೆ ಕಳಂಕ ಅಂಟಿದೆ. ಕೆಲವರ ವಿರುದ್ಧದ ಆರೋಪಗಳು ಸುಳ್ಳು ಎನ್ನುವ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ

## ಲೈಂಗಿಕ ಅಪರಾಧಿಯ ಸಂಪರ್ಕದಲ್ಲಿ ಜಗತ್ತಿನ ಖ್ಯಾತನಾಮರು, ಪ್ರಭಾವಿಗಳು



ಪ್ರಜಾವಾಣಿ ವಾರ್ತೆ

ಬಗೆದಷ್ಟೂ ಆಳ, ಮೊಗೆದಷ್ಟೂ ಕೆಸರು. ಅಮೆರಿಕದ ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೈನ್‌ನ ಸಂಪರ್ಕದಲ್ಲಿ ಇದ್ದಂಥವರ ಪಟ್ಟಿ ಬೆಳೆಯುತ್ತಲೇ ಇದೆ. ಜನವರಿ 30ರಂದು ಅಮೆರಿಕದ ನ್ಯಾಯಾಂಗ ಇಲಾಖೆ ಬಿಡುಗಡೆ ಮಾಡಿರುವ 30 ಲಕ್ಷ ಪುಟಗಳ ದಾಖಲೆಗಳು, 1.8 ಲಕ್ಷ ಚಿತ್ರಗಳು ಮತ್ತು ಎರಡು ಸಾವಿರ ವಿಡಿಯೊಗಳು ಜಗತ್ತಿನ ಹಲವು ದೇಶಗಳ, ಹಲವು ಕ್ಷೇತ್ರಗಳ ಪ್ರಭಾವಿಗಳ ಹೆಸರುಗಳನ್ನು ಒಳಗೊಂಡಿವೆ. ಒಬ್ಬೊಬ್ಬರ ಹೆಸರು ಹೊರಗೆ ಬಂದಾಗಲೂ ಸಂಚಲನ ಉಂಟಾಗುತ್ತಿದೆ. ಅದಕ್ಕೆ ಕಾರಣ ಜೆಫ್ರಿ ಎಪ್‌ಸ್ಟೈನ್‌ನ ಹೀನ ಚಾರಿತ್ರ್ಯ ಮತ್ತು ಅವನು ಎಸಗಿದ ಅಪರಾಧಗಳ ಸ್ವರೂಪ.

ನ್ಯೂಯಾರ್ಕ್‌ನಲ್ಲಿ ಕೆಳಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿ ಬೆಳೆದ ಎಪ್‌ಸ್ಟೈನ್, ಪದವಿ ಶಿಕ್ಷಣ ಪೂರೈಸದಿದ್ದರೂ ಮ್ಯಾನ್‌ಹಟನ್‌ನ ಪ್ರತಿಷ್ಠಿತ ಖಾಸಗಿ ಶಾಲೆಯೊಂದರಲ್ಲಿ ಗಣಿತ ಮತ್ತು ಭೌತಶಾಸ್ತ್ರ ಕಲಿಸುವ ಶಿಕ್ಷಕನಾಗಿದ್ದ. ಶ್ರೀಮಂತರ ಮಕ್ಕಳ ಶಾಲೆ ಅದು. ಅಲ್ಲಿನ ಪರಿಚಯಗಳಿಂದ ಹಣಕಾಸು ಸಂಸ್ಥೆಯೊಂದರಲ್ಲಿ ಪಾಲುದಾರನಾಗಿ ಸೇರಿದ. ಅಲ್ಪ ಅವಧಿಯಲ್ಲೇ ಅಪಾರ ಹಣ ಗಳಿಸಿದ. ತನ್ನ ಬೆಳವಣಿಗೆಯ ಹಂತದಲ್ಲಿ ಅವನು ಕಾನೂನು ಮತ್ತು ನೈತಿಕತೆಯ ಎಲ್ಲೆಗಳನ್ನು ಧಿಕ್ಕರಿಸುತ್ತಲೇ ಸಾಗಿದ. ಶ್ರೀಮಂತನಾದ ನಂತರ ಫ್ಲಾರಿಡಾದ ಪಾಮ್ ಬೀಚ್‌ನಲ್ಲಿ, ಮೆಕ್ಸಿಕೊ, ನ್ಯೂಯಾರ್ಕ್‌ಗಳಲ್ಲಿ ಬಂಗಲೆಗಳನ್ನು ಖರೀದಿಸಿದ. ಅವುಗಳಲ್ಲಿ ರಾಜಕಾರಣಿಗಳು, ಉದ್ಯಮಿಗಳು, ಶ್ರೀಮಂತರಿಗೆ ಅದ್ದೂರಿ ಪಾರ್ಟಿಗಳನ್ನು (ಔತಣಕೂಟ) ಸಂಘಟಿಸುವುದಕ್ಕೆ ಆರಂಭಿಸಿ, ಅದರ ಮೂಲಕ ಪ್ರಭಾವಿಗಳ ಸಂಪರ್ಕ ಗಳಿಸಿದ. ದಿನಕಳೆದಂತೆ ಆತನ ಪಾರ್ಟಿಗಳು ಜನಪ್ರಿಯವಾದವು. ದೇಶವಿದೇಶಗಳ ಖ್ಯಾತನಾಮರೂ ಅವನ ಸಂಪರ್ಕಕ್ಕೆ ಬಂದರು. ‘ನನಗೆ ಎಪ್‌ಸ್ಟೈನ್ 15 ವರ್ಷಗಳಿಂದ ಗೊತ್ತು. ಭಯಂಕರ ಆಸಾಮಿ. ಆತನ ಜತೆಗಿರುವುದು ಖುಷಿ ನೀಡುತ್ತದೆ. ನನ್ನಂತೆಯೇ ಆತನೂ ಸುಂದರ ಯುವತಿಯರನ್ನು ಇಷ್ಟಪಡುತ್ತಾನೆ’ ಎಂದು ಡೊನಾಲ್ಡ್ ಟ್ರಂಪ್ 2002ರಲ್ಲಿ ಹೇಳಿದ್ದರು.

ಆದರೆ, ಎಪ್‌ಸ್ಟೈನ್‌ನ ನಿಜವಾದ ಮುಖ ಹೊರಬರಲು ಹೆಚ್ಚು ಕಾಲ ಬೇಕಾಗಲಿಲ್ಲ. ಅವನು ತನ್ನ ಕಾಮತೃಷೆಗೆ ಅನೇಕ ಬಾಲಕಿಯರನ್ನು ಬಳಸಿಕೊಂಡಿದ್ದರ ಬಗ್ಗೆ ವರದಿಗಳು ಬಂದವು. ಅದಕ್ಕಿಂತಲೂ ಮುಖ್ಯವಾಗಿ ಅನೇಕ ಬಾಲಕಿಯರನ್ನು, ಮಹಿಳೆಯರನ್ನು ಕಳ್ಳಸಾಗಣೆ ಮಾಡಿ, ಅವರನ್ನು ಲೈಂಗಿಕ ಕಾರ್ಯಕರ್ತೆಯರನ್ನಾಗಿ ಬಳಸಿದ್ದಾನೆ, ಅವರ ಮೂಲಕ ವೇಶ್ಯಾವಾಟಿಕೆ ಮಾಡಿದ್ದಾನೆ ಎನ್ನುವ ಆಘಾತಕಾರಿ ವಿಚಾರಗಳು ಹೊರಬಂದವು.

2005ರಲ್ಲಿ ಲೈಂಗಿಕ ಅಪರಾಧಗಳಿಗಾಗಿ ಎಪ್‌ಸ್ಟೈನ್ ಮೊದಲ ಬಾರಿಗೆ ಬಂಧನಕ್ಕೊಳಗಾದ. 2008ರಲ್ಲಿ ಅವನ ವಿರುದ್ಧದ ಆರೋಪಗಳು ಸಾಬೀತಾಗುತ್ತವೆ. ಆದರೂ ಜೈಲು ಶಿಕ್ಷೆಯಿಂದ ಬಚಾವಾದ. ಆದರೆ, ಬಾಲಕಿಯರ ಕಳ್ಳಸಾಗಣೆ ಮತ್ತು ಅವರ ಮೇಲೆ ಲೈಂಗಿಕ ದೌರ್ಜನ್ಯದ ಆರೋಪದಲ್ಲಿ 2019ರಲ್ಲಿ ಜೈಲು ಸೇರಿ, ವಿಚಾರಣೆಗೆ ಮುನ್ನವೇ ಜೈಲಿನಲ್ಲೇ ಆತ್ಮಹತ್ಯೆ ಮಾಡಿಕೊಂಡ. ಅವನ ಐಫೋನ್, ಹಾರ್ಡ್‌ಡಿಸ್ಕ್ ಮತ್ತು ಇ-ಮೇಲ್‌ನಲ್ಲಿದ್ದ ಬೃಹತ್ ಪ್ರಮಾಣದ (300 ಗಿಗಾಬೈಟ್‌ಗೂ ಹೆಚ್ಚು) ದಾಖಲೆಗಳು ಎಪ್‌ಸ್ಟೈನ್ ಫೈಲ್ಸ್ ಎಂದು ಹೆಸರು ಪಡೆದವು. ಅವುಗಳನ್ನು ಬಹಿರಂಗಪಡಿಸಬೇಕು ಎನ್ನುವ ಕೂಗು ಕೇಳಿಬಂತು. 2024ರ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿಯೂ ಪ್ರಸ್ತಾಪವಾಯಿತು. ಈ ಫೈಲ್ಸ್ ಅನ್ನು ಬಹಿರಂಗಪಡಿಸುವುದಕ್ಕಾಗಿಯೇ ‘ಎಪ್‌ಸ್ಟೈನ್ ಫೈಲ್ಸ್ ಪಾರದರ್ಶಕ ಕಾಯ್ದೆ’ (2025ರ ನವೆಂಬರ್) ರೂಪಿಸಲಾಯಿತು. ಆನಂತರ ಹಂತಹಂತವಾಗಿ ಫೈಲ್ಸ್ ಅನ್ನು ಬಿಡುಗಡೆ ಮಾಡಲಾಗುತ್ತಿದ್ದು, ಇನ್ನೂ ಅನೇಕ ದಾಖಲೆಗಳು ಬಿಡುಗಡೆಯಾಗದೇ ಉಳಿದಿವೆ ಎನ್ನಲಾಗುತ್ತಿದೆ. ಬಿಡುಗಡೆಯಾಗಿರುವ ದಾಖಲೆಗಳು ಅಮೆರಿಕದ ನ್ಯಾಯಾಂಗ ಇಲಾಖೆ ವೆಬ್‌ಸೈಟ್‌ನಲ್ಲಿ ಲಭ್ಯವಿವೆ.

ಈ ದಾಖಲೆಗಳಲ್ಲಿ ಅನೇಕರ ಹೆಸರು ಉಲ್ಲೇಖವಾಗಿದ್ದು, ಅವರೆಲ್ಲರೂ ತಪ್ಪಿತಸ್ಥರು ಎನ್ನಲಾಗುವುದಿಲ್ಲ. ಹಲವರ ಹೆಸರು ಅಲ್ಲಿ ಹೇಗೆ ಮತ್ತು ಏಕೆ ಪ್ರಸ್ತಾಪವಾಗಿದೆ ಎನ್ನುವುದೂ ಗೊತ್ತಿಲ್ಲ. ಕೆಲವರು ಎಪ್‌ಸ್ಟೈನ್ ಜತೆಗಿನ ನಂಟನ್ನು ನಿರಾಕರಿಸಿದ್ದು, ತಾವು ಏನೂ ತಪ್ಪು ಮಾಡಿಲ್ಲ ಎಂದಿದ್ದಾರೆ. ಹಲವರು ಎಪ್‌ಸ್ಟೈನ್ ಜತೆಗೆ ಇರುವ ಚಿತ್ರಗಳು ಮಾಧ್ಯಮಗಳಲ್ಲಿ ಪ್ರಕಟವಾಗಿವೆ. ಹೆಸರುಗಳ ಜತೆಗೆ ಜಾಗತಿಕ ರಾಜಕೀಯ, ವ್ಯವಹಾರಗಳ ಬಗ್ಗೆಯೂ ಚರ್ಚೆಗಳು ನಡೆದಿರುವುದನ್ನು ದಾಖಲೆಗಳು ಹೇಳುತ್ತಿವೆ. ಹಲವು ಕಾರಣಗಳಿಗೆ ಹೆಸರುಗಳು ಪ್ರಸ್ತಾಪವಾಗಿರುವ ಸಾಧ್ಯತೆ ಇದೆ. ಆದರೆ, ಎಪ್‌ಸ್ಟೈನ್ ಫೈಲ್ಸ್‌ನಿಂದ ಅನೇಕರ ಹೆಸರಿಗೆ ಕಳಂಕ ಅಂಟಿರುವುದಂತೂ ಸತ್ಯ.

ಎಪ್‌ಸ್ಟೈನ್ ಫೈಲ್ಸ್‌ನಲ್ಲಿ ಮಹಿಳೆಯೊಂದಿಗೆ ಒಳಉಡುಪಿನಲ್ಲಿರುವ ಚಿತ್ರ ಬಹಿರಂಗಗೊಂಡಿದ್ದರಿಂದ ಇಂಗ್ಲೆಂಡ್‌ನ ಹೌಸ್ ಆಫ್ ಲಾರ್ಡ್ಸ್ (ಮೇಲ್ಮನೆ) ಸದಸ್ಯ ಸ್ಥಾನಕ್ಕೆ ಪೀಟರ್ ಮ್ಯಾಂಡೆಲ್‌ಸನ್ ರಾಜೀನಾಮೆ ನೀಡಿದರೆ, ಮಹಿಳೆಯೊಂದಿಗೆ ಅನುಚಿತ ಸ್ಥಿತಿಯಲ್ಲಿರುವ ಚಿತ್ರ ಹೊರಗೆ ಬಂದಿದ್ದರಿಂದ ಬ್ರಿಟನ್‌ನ ಬಕಿಂಗ್‌ಹ್ಯಾಮ್ ಅರಮನೆಯಿಂದ ಆ್ಯಂಡ್ರೂ ಮೌಂಟ್‌ಬ್ಯಾಟನ್ ವಿಂಡ್ಸರ್ ಅವರನ್ನು ಹೊರಹಾಕಲಾಗಿದೆ. ಎಪ್‌ಸ್ಟೈನ್‌ನೊಂದಿಗೆ ಮಹಿಳೆಯರ ಬಗ್ಗೆ ಚಾಟ್ ಮಾಡಿದ್ದಕ್ಕೆ ಸ್ಲೊವಾಕಿಯಾದ ವಿದೇಶಾಂಗ ಸಚಿವ ಮೀರೊಸ್ಲಾವ್ ಲಾಜಾಕ್ ಪದವಿ ತೊರೆದಿದ್ದಾರೆ.

**ಫೈಲ್ಸ್‌ನಲ್ಲಿ ಯಾರ್‍ಯಾರು:** ಅಮೆರಿಕದ ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್, ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್, ನಾರ್ವೆಯ ನೊಬೆಲ್ ಸಮಿತಿ ಮಾಜಿ ಅಧ್ಯಕ್ಷ ತೂರಬ್‌ಯೆರ್ನ್ ಯಾಕ್‌ಲ್ಯಾಂಡ್, ಉದ್ಯಮಿ ಸ್ಟೀವ್ ಟಿಶ್, ಮೈಕೆಲ್ ಜಾಕ್ಸನ್, ಗೂಗಲ್ ಸಹ ಸಂಸ್ಥಾಪಕ ಸರ್ಗೆ ಬ್ರಿನ್, ಪತ್ರಕರ್ತ ಕೇಟಿ ಕೊರಿಕ್, ನಿರ್ದೇಶಕರಾದ ವೂಡಿ ಅಲೆನ್, ಮೀರಾ ನಾಯರ್, ಅನುರಾಗ್ ಕಶ್ಯಪ್, ಟ್ರಂಪ್ ಆಪ್ತ ಸ್ಟೀವ್ ಬ್ಯಾನನ್, ಲೇಖಕ ದೀಪಕ್ ಚೋಪ್ರಾ ಹೀಗೆ ದೇಶವಿದೇಶಗಳ ಖ್ಯಾತನಾಮರಿದ್ದಾರೆ.

ಆಧಾರ: ಸಿಎನ್‌ಎನ್, ಬಿಬಿಸಿ, ಮಾಧ್ಯಮ ವರದಿಗಳು, ಅಮೆರಿಕದ ನ್ಯಾಯಾಂಗ ಇಲಾಖೆಯ ದಾಖಲೆಗಳು

> ಜಾಗತಿಕ ರಾಜಕಾರಣ, ವ್ಯಾಪಾರ, ಕಾರ್ಪೊರೇಟ್ ಜಾಲದ ಕೊಂಡಿಯಾಗಿ ಎಪ್‌ಸ್ಟೈನ್ ಕಾರ್ಯ ನಿರ್ವಹಿಸುತ್ತಿದ್ದ

### ಮೋದಿ, ಅನಿಲ್ ಅಂಬಾನಿ, ಹರ್ದೀಪ್ ಸಿಂಗ್ ಪುರಿ ಹೆಸರು

ಅಮೆರಿಕ ನ್ಯಾಯಾಂಗ ಇಲಾಖೆ ಬಿಡುಗಡೆ ಮಾಡಿರುವ ದಾಖಲೆಗಳಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ, ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಮತ್ತು ಉದ್ಯಮಿ ಅನಿಲ್ ಅಂಬಾನಿ ಅವರ ಹೆಸರುಗಳೂ ಪ್ರಸ್ತಾಪವಾಗಿವೆ.

ಹರ್ದೀಪ್ ಸಿಂಗ್ ಪುರಿ ಮತ್ತು ಅನಿಲ್ ಅಂಬಾನಿ ಅವರು ಎಪ್‌ಸ್ಟೈನ್‌ನೊಂದಿಗೆ ನೇರವಾಗಿ ಸಂಪರ್ಕ ಹೊಂದಿದ್ದರು ಎಂಬುದನ್ನು ದಾಖಲೆಗಳು ಹೇಳುತ್ತವೆ. ಸಿಂಗ್ ಅವರು ಎಪ್‌ಸ್ಟೈನ್‌ಗೆ ಇಮೇಲ್ ಮಾಡಿರುವುದು, ಅವನ ಮನೆಗೆ ಭೇಟಿ ನೀಡಿರುವುದು, ಅನಿಲ್ ಅಂಬಾನಿ ಅವರು ಸಂದೇಶ ಕಳುಹಿಸಿರುವುದು, ಅಮೆರಿಕದಲ್ಲಿ ಭೇಟಿ ಮಾಡಿದ ವಿವರಗಳೂ ದಾಖಲೆಯಲ್ಲಿವೆ. ಅನಿಲ್ ಅಂಬಾನಿ ಮತ್ತು ಎಪ್‌ಸ್ಟೈನ್ ನಡುವೆ ನಡೆದಿದ್ದ ಸಂಭಾಷಣೆಯಲ್ಲಿ ಪ್ರಧಾನಿ ಮೋದಿ ಅವರ ಹೆಸರು ಪ್ರಸ್ತಾಪವಾಗುತ್ತದೆ.

## ಮೋದಿ ಪರ ಅನಿಲ್ ಅಂಬಾನಿ ಮಾತು

ಅನಿಲ್ ಅಂಬಾನಿ

ರಿಲಯನ್ಸ್ ಸಮೂಹದ ಅಧ್ಯಕ್ಷ ಅನಿಲ್ ಅಂಬಾನಿ ಅವರು ಎಪ್‌ಸ್ಟೈನ್‌ನೊಂದಿಗೆ 2017ರಿಂದ 2019ರವರೆಗೂ ಸಂಪರ್ಕದಲ್ಲಿದ್ದರು ಎಂಬುದನ್ನು ದಾಖಲೆಗಳು ಹೇಳುತ್ತವೆ. ಪ್ರಧಾನಿ ಮೋದಿ ಅವರ ಅಮೆರಿಕ ಭೇಟಿ ಸೇರಿದಂತೆ ಹಲವು ವಿಚಾರಗಳ ನಡುವೆ ಇಬ್ಬರೂ ಇಮೇಲ್, ಮೊಬೈಲ್ ಸಂದೇಶಗಳ (ಐಮೆಸೇಜಸ್) ಮೂಲಕ ಮಾತುಕತೆ ನಡೆಸಿದ್ದರೆ, 2019ರ ಲೋಕಸಭಾ ಚುನಾವಣೆ ನಡೆಯುತ್ತಿದ್ದ ಸಮಯದಲ್ಲಿ ಇಬ್ಬರೂ ಭೇಟಿಯಾದ್ದಾರೆ.

2017ರ ಮಾರ್ಚ್ 16ರಂದು ಅಂಬಾನಿ ಅವರು ಎಪ್‌ಸ್ಟೈನ್‌ಗೆ, ‘ಡೊನಾಲ್ಡ್ ಟ್ರಂಪ್ ಆಪ್ತ, ಶ್ವೇತಭವನದ ಹಿರಿಯ ಅಧಿಕಾರಿಯಾಗಿದ್ದ ಸ್ಟೀವ್ ಬಾನನ್ ಸೇರಿದಂತೆ ಟ್ರಂಪ್ ವಲಯದಲ್ಲಿರುವ ಪ್ರಮುಖ ನಾಯಕರನ್ನು ಸಂಪರ್ಕಿಸಲು ‘ನಾಯಕತ್ವ’ವು ಸಹಾಯ ಕೇಳುತ್ತಿದೆ’ ಎಂದು ಅಂಬಾನಿ ಐಮೆಸೇಜ್ ಕಳುಹಿಸಿದ್ದರು. ಟ್ರಂಪ್ ಅವರು ಮೊದಲ ಬಾರಿಗೆ ಅಧ್ಯಕ್ಷರಾಗಿ ಎರಡು ತಿಂಗಳ ಬಳಿಕ ಈ ಮಾತುಕತೆ ನಡೆದಿತ್ತು.

ಮೋದಿ

ಎರಡು ವಾರದ ನಂತರ, ಮಾರ್ಚ್ 29ರಂದು ಮತ್ತೆ ಎಪ್‌ಸ್ಟೈನ್‌ಗೆ ಸಂದೇಶ ಕಳುಹಿಸಿದ್ದ ಅಂಬಾನಿ, ಪ್ರಧಾನಿ ಮೋದಿ ಅವರ ಅಮೆರಿಕ ಭೇಟಿಯ ದಿನಾಂಕ ಮತ್ತು ಸ್ಥಳಗಳ ಬಗ್ಗೆ ವಿಚಾರಿಸಿದ್ದರು.

ಜುಲೈ 5, 6ರಂದು ಮೋದಿ ಅವರ ಇಸ್ರೇಲ್ ಭೇಟಿಯನ್ನು ಪ್ರಸ್ತಾಪಿಸಿದ್ದ ಅವರು, 7 ಮತ್ತು 8 ರಂದು ಜಿ20 ಶೃಂಗಸಭೆಯಲ್ಲಿ ಭಾಗವಹಿಸುವ ಮತ್ತು ಅಲ್ಲಿ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿ ಮಾಡಲಿದ್ದಾರೆ ಎಂದೂ ಹೇಳುತ್ತಾರೆ. ವಾಷಿಂಗ್ಟನ್‌ನಲ್ಲಿ ಮತ್ತೊಂದು ಪ್ರತ್ಯೇಕ ಭೇಟಿ ಆಯೋಜನೆಯಾಗುತ್ತಿರುವ ಬಗ್ಗೆಯೂ ಕೇಳಿದ್ದರು.

ಜುಲೈ 6, 7ರಂದು ಮೋದಿ ಇಸ್ರೇಲ್‌ಗೆ ಭೇಟಿ ನೀಡಿದ್ದರು. ಈ ಭೇಟಿ ಬಳಿಕ ಎಪ್‌ಸ್ಟೈನ್ ಜೇಬರ್ ವೈ ಎಂಬ ವ್ಯಕ್ತಿಗೆ ಮೇಲ್ ಮಾಡಿ, ‘ಭಾರತದ ಪ್ರಧಾನಿ ಮೋದಿ ಸಲಹೆ ಪಡೆದರು. ಅಮೆರಿಕ ಅಧ್ಯಕ್ಷರ ಲಾಭಕ್ಕಾಗಿ ಇಸ್ರೇಲ್‌ನಲ್ಲಿ ಕುಣಿದರು, ಹಾಡಿದರು. ಅವರಿಬ್ಬರೂ ಕೆಲವು ವಾರಗಳ ಹಿಂದೆ ಭೇಟಿಯಾಗಿದ್ದರು. ಅದು ಕೆಲಸ ಮಾಡಿತು’ ಎಂದು ಹೇಳಿದ್ದ.

ಮೋದಿ–ಟ್ರಂಪ್ ವಾಷಿಂಗ್ಟನ್‌ನಲ್ಲಿ ಜೂನ್ 26ರಂದು ಭೇಟಿ ಮಾಡಿ ಮಾತುಕತೆ ನಡೆಸಿದ್ದರು.

**ನಿರಾಕರಿಸಿದ ಕೇಂದ್ರ:** ಮೋದಿ ಅವರ ಕುರಿತಾಗಿ ಎಪ್‌ಸ್ಟೈನ್ ದಾಖಲೆಗಳಲ್ಲಿರುವ ಅಂಶಗಳಿಗೆ ಪ್ರತಿಕ್ರಿಯಿಸಿರುವ ವಿದೇಶಾಂಗ ಇಲಾಖೆಯು 2017ರ ಜುಲೈನಲ್ಲಿ ಪ್ರಧಾನಿ ಅವರು ಇಸ್ರೇಲ್ ಅವರಿಗೆ ಭೇಟಿ ನೀಡಿದ್ದು ಬಿಟ್ಟರೆ, ಉಳಿದೆಲ್ಲವೂ ಸುಳ್ಳು ಎಂದು ಸ್ಪಷ್ಟನೆ ನೀಡಿದೆ.

### ಫಲಿತಾಂಶದ ದಿನವೇ ಭೇಟಿ

ಎಪ್‌ಸ್ಟೈನ್ ದಾಖಲೆಗಳಿಗೆ ಸಂಬಂಧಿಸಿದಂತೆ ಚರ್ಚೆಯಾಗುತ್ತಿರುವ ಮತ್ತೊಂದು ವಿಚಾರ–2019ರ ಲೋಕಸಭಾ ಚುನಾವಣೆ ಮತ್ತು ಫಲಿತಾಂಶದ ಹೊತ್ತಿನಲ್ಲಿ ಅನಿಲ್ ಅಂಬಾನಿ ಮತ್ತು ಎಪ್‌ಸ್ಟೈನ್ ನಡೆದ ಸಂಭಾಷಣೆಗಳು ಹಾಗೂ ಭೇಟಿ.

ಚುನಾವಣೆಯಲ್ಲಿ ಗೆದ್ದ ಬಳಿಕ, ಮೋದಿ ಮತ್ತು ಟ್ರಂಪ್ ಆಪ್ತ, ಶ್ವೇತಭವನದ ಕಾರ್ಯತಂತ್ರ ವಿಭಾಗದ ಮುಖ್ಯಸ್ಥ ಸ್ಟೀವ್ ಬ್ಯಾನನ್ ನಡುವೆ ಭೇಟಿ ನಿಗದಿಪಡಿಸಿಕೊಡುವುದಾಗಿ ಎಪ್‌ಸ್ಟೈನ್ ಹೇಳಿದ್ದ. ಮೇ 19ರಂದು ಬ್ಯಾನನ್‌ಗೆ ಐಮೆಸೇಜ್ ಕಳುಹಿಸಿದ್ದ ಆತ ‘ನನ್ನನ್ನು ಕಾಣಲು ಮೋದಿ ಅವರು ಯಾರನ್ನೋ ಶುಕ್ರವಾರ (ಮೇ 23) ಕಳುಹಿಸುತ್ತಾರೆ’ ಎಂದಿದ್ದ. ಆದರೆ, ವ್ಯಕ್ತಿಯ ಹೆಸರು ಅಲ್ಲಿ ಉಲ್ಲೇಖಿಸಿರಲಿಲ್ಲ. ಮೇ 23ರ ಗುರುವಾರ, ನ್ಯೂಯಾರ್ಕ್‌ನಲ್ಲಿ ಅನಿಲ್ ಅಂಬಾನಿ ಅವರು ಎಪ್‌ಸ್ಟೈನ್‌ನನ್ನು ಭೇಟಿಯಾಗಿದ್ದರು. ಅಂಬಾನಿ ಭೇಟಿ ಬಳಿಕ ಬ್ಯಾನನ್‌ಗೆ ಇಮೇಲ್ ಮಾಡಿದ್ದ ಎಪ್‌ಸ್ಟೈನ್, ‘ಮೋದಿ ಭೇಟಿ ನಿಜಕ್ಕೂ ಆಸಕ್ತಿಕರವಾಗಿದೆ. ಅವರು ಭಾರಿ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ. ವಾಷಿಂಗ್ಟನ್‌ನಲ್ಲಿ ಯಾರೊಬ್ಬರೂ ಅವರೊಂದಿಗೆ ಮಾತನಾಡುವುದಿಲ್ಲ ಎಂದು ‘ಅವರ ವ್ಯಕ್ತಿ’ ಹೇಳಿದ್ದಾರೆ. ಅವರ ಮುಖ್ಯ ಶತ್ರು ಚೀನಾ. ಮತ್ತು ಆ ಪ್ರದೇಶದಲ್ಲಿರುವ ಅದರ ಮುಖವಾಡ ಪಾಕಿಸ್ತಾನ. 2022ರಲ್ಲಿ ಅವರು ಜಿ20ಯ ಅಧ್ಯಕ್ಷತೆ ವಹಿಸಲಿದ್ದಾರೆ. ಇದು ನಿಮ್ಮ ದೃಷ್ಟಿಕೋನಕ್ಕೆ ಸರಿಯಾಗಿ ಹೊಂದಿಕೆಯಾಗುತ್ತದೆ’ ಎಂದು ಹೇಳಿದ್ದ.

ನಂತರ ಅಂಬಾನಿಗೂ ಸಂದೇಶ ಕಳುಹಿಸಿದ್ದ ಆತ, ‘ಮೋದಿ ಅವರು ಸ್ಟೀವ್ ಬಾನನ್ ಅವರನ್ನು ಭೇಟಿ ಮಾಡಿ ಮಾಡಿದರೆ ಖುಷಿ ಪಡಬಹುದು. ನೀವೆಲ್ಲರೂ ಚೀನಾದ ಸಮಸ್ಯೆಯನ್ನು ಎದುರಿಸುತ್ತಿದ್ದೀರಿ’ ಎಂದು ಹೇಳಿದ್ದ. ಇದಕ್ಕೆ ಅನಿಲ್ ಅಂಬಾನಿ ‘ಖಂಡಿತ’ ಎಂದು ಪ್ರತಿಕ್ರಿಯಿಸಿದ್ದರು. ಬಳಿಕ ಬ್ಯಾನನ್‌ಗೆ ಸಂದೇಶ ಕಳಿಸಿದ್ದ ಎಪ್‌ಸ್ಟೈನ್ ‘ಮೋದಿ ಅವರು ನಮ್ಮ ಜೊತೆಗೆ ಇದ್ದಾರೆ’ ಎಂದು ಹೇಳಿದ್ದ.

**ಅನಿಲ್ ಅಂಬಾನಿ ಮೌನ:** ಈ ದಾಖಲೆಗಳಲ್ಲಿ ತಮ್ಮ ಹೆಸರು ಕೇಳಿಬಂದಿರುವ ಬಗ್ಗೆ ಅನಿಲ್ ಅಂಬಾನಿ ಅವರು ಈವರೆಗೂ ಎಲ್ಲೂ ಪ್ರತಿಕ್ರಿಯಿಸಿಲ್ಲ. ಪ್ರಧಾನಿ ಮೋದಿ ಅಥವಾ ಕೇಂದ್ರ ಸರ್ಕಾರದ ಪರವಾಗಿ ಮಾತುಕತೆ ನಡೆಸಲು ಅನಿಲ್ ಅಂಬಾನಿ ಅವರಿಗೆ ಕೇಂದ್ರ ಸರ್ಕಾರ ಸೂಚಿಸಿತ್ತೇ ಎಂಬುದೂ ದೃಢಪಟ್ಟಿಲ್ಲ.

## 3 ಬಾರಿ ಭೇಟಿ ಮಾಡಿದ್ದ ಪುರಿ



ಹರ್ದೀಪ್ ಸಿಂಗ್

ಹಾಲಿ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಹಾಗೂ ಎಪ್‌ಸ್ಟೈನ್ ನಡುವೆ 2014ರಿಂದ ಇಮೇಲ್ ವಿನಿಮಯ ಆಗಿರುವುದನ್ನು ದಾಖಲೆಗಳು ಉಲ್ಲೇಖಿಸಿವೆ. ಎಪ್‌ಸ್ಟೈನ್, ಪುರಿ ಅವರಿಗೆ ಮೇಲ್ ಮಾಡಿ ಲಿಂಕ್ಡ್‌ಇನ್ ತಾಣದ ಸಹ ಸಂಸ್ಥಾಪಕ ರೀಡ್ ಹಾಫ್‌ಮನ್ ಅವರ ಭಾರತ ಭೇಟಿಗೆ ವ್ಯವಸ್ಥೆ ಮಾಡುವ ಬಗ್ಗೆ ಮಾತನಾಡಿದ್ದ.

ನಂತರ ಪುರಿ ಅವರು ಭಾರತದಲ್ಲಿ ಇರುವ ಹೂಡಿಕೆ ಅವಕಾಶಗಳ ಬಗ್ಗೆ ಮತ್ತು ಮೋದಿ ಸರ್ಕಾರದ ಆರ್ಥಿಕ ಯೋಜನೆಗಳ ಬಗ್ಗೆಯೂ ವಿವರಿಸಿದ್ದರು. ಪುರಿ ಅವರು 2015 ಫೆ.4, 2016ರ ಜನವರಿ 6 ಮತ್ತು 2017ರ ಮೇ 19ರಂದು ಮ್ಯಾನ್‌ಹಟನ್‌ನಲ್ಲಿರುವ ಎಪ್‌ಸ್ಟೈನ್‌ನ ಮನೆಯಲ್ಲೇ ಆತನನ್ನು ಭೇಟಿ ಮಾಡಿದ್ದರು.

ದಾಖಲೆಗಳಲ್ಲಿ ತಮ್ಮ ಹೆಸರು ಇರುವ ಬಗ್ಗೆ ಪ್ರತಿಕ್ರಿಯಿಸಿರುವ ಪುರಿ, ನಮ್ಮ ಭೇಟಿ ಹಾಗೂ ಎಪ್‌ಸ್ಟೈನ್‌ನೊಂದಿಗಿನ ಮಾತುಕತೆ ಉದ್ಯಮಕ್ಕೆ ಸಂಬಂಧಿಸಿದ್ದಾಗಿತ್ತು ಎಂದು ಹೇಳಿದ್ದಾರೆ.

ರಾಷ್ಟ್ರೀಯ

## ‘ಅನಿಲ್ ಅಂಬಾನಿ ವಿಚಾರಣೆ ನ್ಯಾಯಯುತವಾಗಿರಲಿ’

ನವದೆಹಲಿ (ಪಿಟಿಐ): ಅನಿಲ್ ಧೀರೂಭಾಯಿ ಅಂಬಾನಿ ಗ್ರೂಪ್ (ಎಡಿಎಜಿ) ಹಾಗೂ ಉದ್ಯಮಿ ಅನಿಲ್ ಅಂಬಾನಿ ಅವರನ್ನು ಒಳಗೊಂಡ ಭಾರಿ ಬ್ಯಾಂಕ್ ಸಾಲದ ವಂಚನೆ ಪ್ರಕರಣದಲ್ಲಿ ನ್ಯಾಯಯುತ, ವಸ್ತುನಿಷ್ಠ ತನಿಖೆ ನಡೆಸುವಂತೆ ಕೇಂದ್ರ ತನಿಖಾ ಸಂಸ್ಥೆ (ಸಿಬಿಐ) ಹಾಗೂ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಸುಪ್ರೀಂ ಕೋರ್ಟ್ ಬುಧವಾರ ನಿರ್ದೇಶನ ನೀಡಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ, ನ್ಯಾಯಮೂರ್ತಿ ವಿಪುಲ್ ಎಂ.ಪಂಚೋಲಿ ಅವರನ್ನೊಳಗೊಂಡ ಪೀಠವು ಈ ನಿರ್ದೇಶನ ನೀಡಿದ್ದು, ತನಿಖೆಗೆ ಸಂಬಂಧಿಸಿದ ಹೊಸ ಪ್ರಗತಿ ವರದಿಯನ್ನು ಇನ್ನು ನಾಲ್ಕು ವಾರಗಳ ಒಳಗೆ ಸಲ್ಲಿಸುವಂತೆಯೂ ಇ.ಡಿ ಮತ್ತು ಸಿಬಿಐಗೆ ಸೂಚಿಸಿದೆ.

ತನಿಖೆ ಆರಂಭಿಸುವುದಕ್ಕೆ ಈಗಾಗಲೇ ತನಿಖಾ ಸಂಸ್ಥೆಗಳು ಸಮಯ ತೆಗೆದುಕೊಂಡಿರುವುದನ್ನು ಗಮನಿಸಿದ ನ್ಯಾಯಪೀಠ, ಹಿರಿಯ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆಯೂ ಜಾರಿ ನಿರ್ದೇಶನಾಲಯಕ್ಕೆ ತಿಳಿಸಿದೆ.

ಎಡಿಎಜಿ ಹಾಗೂ ಅನಿಲ್ ಅಂಬಾನಿ ಪರವಾಗಿ ಹಾಜರಾಗಿದ್ದ ವಕೀಲರಾದ ಮುಕುಲ್ ರೋಹಟಗಿ, ಶ್ಯಾಮ್ ದಿವಾನ್ ಅವರಿಗೆ ಪಿಐಎಲ್‌ಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ಸಲ್ಲಿಸಲು ನಾಲ್ಕು ವಾರಗಳ ಕಾಲಾವಕಾಶವನ್ನೂ ಒದಗಿಸಿದೆ.

ಅನಿಲ್ ಅಂಬಾನಿ ಅವರು ದೇಶದಿಂದ ಪಲಾಯನ ಮಾಡದಂತೆ ನೋಡಿಕೊಳ್ಳಲು ನ್ಯಾಯಾಲಯದ ನಿರ್ದೇಶನ ಕೋರಿದ್ದ ಅರ್ಜಿಯ ಬಗ್ಗೆ ರೋಹಟಗಿ ಇದೇ ವೇಳೆ ಆಕ್ಷೇಪಿಸಿದರು. ಅನಿಲ್ ಅಂಬಾನಿ ದೇಶದಲ್ಲಿಯೇ ಇರುತ್ತಾರೆ. ನ್ಯಾಯಾಲಯದ ಅನುಮತಿ ಇಲ್ಲದೆ ಅವರು ಹೋಗುವುದಿಲ್ಲ ಎಂದೂ ನ್ಯಾಯಪೀಠಕ್ಕೆ ತಿಳಿಸಿದರು.

## ‘ನೀಟ್–ಪಿಜಿ’ ಕಟ್ ಆಫ್ ಪರ್ಸೆಂಟೈಲ್ ಕಡಿತ: ನೋಟಿಸ್

ನವದೆಹಲಿ (ಪಿಟಿಐ): ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಪರೀಕ್ಷಾ ಮಂಡಳಿಯು (ಎನ್‌ಬಿಇಎಂಎಸ್) 2025–26ನೇ ಸಾಲಿನ ‘ನೀಟ್–ಪಿಜಿ’ಯ ಕಟ್ ಆಫ್ ಪರ್ಸೆಂಟೈಲ್‌ಗಳನ್ನು ಕಡಿತಗೊಳಿಸಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯ ಕುರಿತು ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರ ಮತ್ತು ಪ್ರಕರಣಕ್ಕೆ ಸಂಬಂಧಿಸಿದ ಇತರರಿಗೆ ಸುಪ್ರೀಂ ಕೋರ್ಟ್ ಬುಧವಾರ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್ ನರಸಿಂಹ ಮತ್ತು ಅಲೋಕ್ ಆರಾಧೆ ಅವರಿದ್ದ ನ್ಯಾಯಪೀಠವು, ಕೇಂದ್ರ ಸರ್ಕಾರ, ಎನ್‌ಬಿಇಎಂಎಸ್, ರಾಷ್ಟ್ರೀಯ ವೈದ್ಯಕೀಯ ಆಯೋಗ ಮತ್ತು ಇತರರಿಗೆ ನೋಟಿಸ್ ಜಾರಿ ಮಾಡಿದೆ. ಪ್ರಕರಣದ ವಿಚಾರಣೆಯನ್ನು ಫೆಬ್ರುವರಿ 6ಕ್ಕೆ ಮುಂದೂಡಲಾಗಿದೆ.

ದೇಶದಾದ್ಯಂತ 18 ಸಾವಿರಕ್ಕೂ ಅಧಿಕ ವೈದ್ಯಕೀಯ ಸೀಟುಗಳು ಖಾಲಿಯಿದ್ದ ಕಾರಣ ನೀಟ್–ಪಿಜಿ 2025ರ ಪ್ರವೇಶಾತಿಯಲ್ಲಿ ಮೀಸಲು ವರ್ಗಗಳ ಕಟ್ ಅಫ್ ಪರ್ಸೆಂಟೈಲ್‌ಗಳನ್ನು ಮಂಡಳಿಯು ಶೇ 40ರಿಂದ ಶೂನ್ಯಕ್ಕೆ ಇಳಿಸಿತ್ತು. ಸಾಮಾನ್ಯ ವರ್ಗದವರಿಗೆ ಕಟ್ ಅಫ್ ಪರ್ಸೆಂಟೈಲ್‌ಗಳನ್ನು ಶೇ 50ರಿಂದ ಶೇ 7ಕ್ಕೆ ಇಳಿಸಲಾಗಿತ್ತು.

ಆಯ್ಕೆ ಪ್ರಕ್ರಿಯೆ ಆರಂಭಗೊಂಡ ಬಳಿಕ ಅರ್ಹತಾ ಮಾನದಂಡಗಳನ್ನು ಬದಲಾಯಿಸುವುದು ಸರಿಯಲ್ಲ ಎಂದು ಕೆಲ ಸಾಮಾಜಿಕ ಕಾರ್ಯಕರ್ತರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

## ಜಮ್ಮು: 3 ಭಯೋತ್ಪಾದಕರ ಹತ್ಯೆ

ಜಮ್ಮು (ಪಿಟಿಐ): ಜೈಷ್–ಎ–ಮೊಹಮ್ಮದ್ ಸಂಘಟನೆಯ ಸ್ವಯಂಘೋಷಿತ ಉನ್ನತ ಕಮಾಂಡರ್ ಸೇರಿದಂತೆ ಮೂವರು ಪಾಕಿಸ್ತಾನಿ ಭಯೋತ್ಪಾದಕರನ್ನು ಭದ್ರತಾ ಪಡೆಗಳು ಜಮ್ಮು–ಕಾಶ್ಮೀರದಲ್ಲಿ ಬುಧವಾರ ಹತ್ಯೆ ಮಾಡಿವೆ.

ಗುಪ್ತಚರ ಮಾಹಿತಿಯ ಆಧಾರದಲ್ಲಿ ಪೊಲೀಸರು ಮತ್ತು ಕೇಂದ್ರ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಸಿಬ್ಬಂದಿ ರಾಮನಗರ ಮತ್ತು ಬಸಂತ್‌ಗಢದಲ್ಲಿ 20 ಗಂಟೆ ಕಾರ್ಯಾಚರಣೆ ನಡೆಸಿದ್ದಾರೆ. ಇದಕ್ಕೆ ‘ಕಿಯಾ’ ಎಂದು ಹೆಸರಿಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಂಗಳವಾರ ಸಂಜೆ ಭಯೋತ್ಪಾದಕರು ಮತ್ತು ಭದ್ರತಾ ಸಿಬ್ಬಂದಿ ನಡುವೆ ಗುಂಡಿನ ಚಕಮಕಿ ಆರಂಭಗೊಂಡಿತ್ತು. ಗುಹೆಯೊಳಗೆ ಅವಿತಿದ್ದ ಇಬ್ಬರನ್ನು ಹತ್ಯೆ ಮಾಡಲಾಗಿದೆ.

ಎಂ4 ಕಾರ್ಬೈನ್, ಎ.ಕೆ ಸರಣಿಯ ರೈಫಲ್ ಸೇರಿದಂತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮೃತ ಭಯೋತ್ಪಾದಕರಲ್ಲಿ ಒಬ್ಬನನ್ನು ರುಬಾನಿ ಅಲಿಯಾಸ್ ಅಬು ಮವಿಯಾ ಎಂದು ಗುರುತಿಸಲಾಗಿದೆ. ಆತ ಈ ಪ್ರದೇಶದಲ್ಲಿ ಹಲವು ವರ್ಷಗಳಿಂದ ಭಯೋತ್ಪಾದಕ ಚಟುವಟಿಕೆ ನಡೆಸುತ್ತಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಪದಬಂಧ 6306

ವಿದ್ಯಾ ವಿನಯ್



**ಎಡದಿಂದ ಬಲಕ್ಕೆ**

2.ಅರಸಿಕನ ಹತ್ತಿರವಿರುವ ರಾಜ (3)
5.ತಾರೀಕು ಇಲ್ಲಿ ನಮೂದಾಗಿದೆ (3)
6.ಬಿಡದಿ ಬಳಿ ಕಾಣಿಸಿದ ಹೆಂಡತಿ (3)
7.ಅಲಯದ ಹತ್ತಿರವಿರುವ ವಟವೃಕ್ಷ (2)
8.ವನದಲ್ಲಿ ತಿರುಗಿರುವಾಗ ಹೊಸದು ಕಂಡಿದೆ (2)
12.ಅಸತ್ಯವಿದು (2)
14.ಸ್ವಯಂವರದಲ್ಲಿರುವ ನಾದ! (2)
15.ಮಗ ಇಲ್ಲಿದ್ದಾನೆ (3)
16.ರಾಜನ ಸಭೆ (3)
17.ಚಾಳಿ ಅಥವಾ ಚಟ (3)

**ಮೇಲಿಂದ ಕೆಳಕ್ಕೆ**

1.ದೊಡ್ಡ ಹೊಟ್ಟೆಯುಳ್ಳವನು (3)
2.ಯಾವುದೇ ಕಳಂಕ ಇಲ್ಲದ್ದು (4)
3.ಹೊಂದಾಣಿಕೆಯನ್ನು ಹೀಗೆನ್ನಿ (4)
4.ಒಳ್ಳೆಯ ದಿನ (3)
7.ಉದ್ದವಾದ ತೋಳು (5)
9.ಬಣ್ಣಗುಂದುವಿಕೆಯನ್ನು ಹೀಗೆನ್ನಿ (5)
10.ತನ್ನದೆಂಬ ಭಾವನೆ (4)
11.ಕೊನೆಗೆ ವಾಲುತ್ತಾ ಮಾಡಿದ ಮನವಿ (4)
13.ಮರಳಿರುವ ತೀರ (3)
14.ತನಗೆ ತಾನೇ ಮಾತನಾಡಿ ಕೊಳ್ಳುವುದು (3)

### 6305ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಅಲೆಮಾರಿ 3.ಆಘ್ರಾಣಿಸು
5.ಯಾಚಕ 6.ನಿಜ
8.ತಿರುಕ 9.ಹಂತ
10.ಜಲ 11.ಅಸುರ 13.ಕರ
15.ಮಯನಿ 16.ನರಾಕೃತಿ
17.ಪರಸ್ಪರ

**ಮೇಲಿಂದ ಕೆಳಕ್ಕೆ:**
1.ಅವಧಾನಿ 2.ರಿಯಾಯಿತಿ
3.ಆಕಸ್ಮಿಕ 4.ಸುರಕ್ಷಿತ
7.ಜಟಿಲ 9.ಹಂತಕ
10.ಜಮಖಾನ 11.ಅನುಮತಿ
12.ರಜನಿಪ 14.ರತ್ನಾಕರ

## ಸುಡೊಕು 6690

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| | | 1 | | 7 | | 6 | | 2 |
| | | 5 | 2 | | 9 | | | |
| 2 | 8 | | | 1 | | | 9 | |
| | 5 | | 7 | | 4 | 8 | | |
| | | | | 8 | | 5 | | 9 |
| 8 | 3 | 6 | | | | | | 4 |
| 6 | | | | 5 | | 9 | | 7 |
| | 7 | 8 | 1 | 3 | | | | |
| 5 | | 3 | | 6 | | 1 | | 8 |

### 6689ಸುಡೊಕು

| | | | | | | | | |
|---|---|---|---|---|---|---|---|---|
| 9 | 2 | 1 | 6 | 5 | 7 | 8 | 4 | 3 |
| 8 | 5 | 7 | 3 | 4 | 9 | 6 | 2 | 1 |
| 6 | 4 | 3 | 2 | 1 | 8 | 9 | 5 | 7 |
| 1 | 3 | 2 | 5 | 9 | 4 | 7 | 8 | 6 |
| 5 | 8 | 6 | 1 | 7 | 2 | 3 | 9 | 4 |
| 7 | 9 | 4 | 8 | 3 | 6 | 2 | 1 | 5 |
| 3 | 1 | 8 | 9 | 6 | 5 | 4 | 7 | 2 |
| 2 | 7 | 5 | 4 | 8 | 3 | 1 | 6 | 9 |
| 4 | 6 | 9 | 7 | 2 | 1 | 5 | 3 | 8 |

## ಪ್ರಾರ್ಥನೆ ಎಂದರೆ ಬೇಡಿಕೆಯಲ್ಲ

ನುಡಿ ಬೆಳಗು

ಪಿ.ಚಂದ್ರಿಕಾ

ಗಾಂಧೀಜಿ ನೂಲುತ್ತಾ, ಭಗವದ್ಗೀತೆಯನ್ನು ಓದುತ್ತಾ ಕುಳಿತಿದ್ದರು. ಕುಸಿದ ಮನಸ್ಸಿನವನೊಬ್ಬ ಅಲ್ಲಿಗೆ ಬಂದ. ಗಾಂಧೀಜಿಯು ತದೇಕಚಿತ್ತರಾಗಿ ಪಠಣದಲ್ಲಿ ಇದ್ದುದರಿಂದ ವ್ಯಕ್ತಿ ಅವರನ್ನು ಮಾತನಾಡಿಸಲು ಕಾಯುತ್ತಾ ಕುಳಿತ. ಸ್ವಲ್ಪ ಸಮಯದ ನಂತರ ತಮ್ಮ ಕೆಲಸವನ್ನೂ, ಗೀತಾ ಪಠಣವನ್ನೂ ಮುಗಿಸಿ, ಬಂದ ವ್ಯಕ್ತಿಯ ಜೊತೆ ಮಾತನಾಡತೊಡಗಿದರು. ಆ ವ್ಯಕ್ತಿಯ ಮನಃಸ್ಥಿತಿ ಗಾಂಧಿಯವರಿಗೆ ಅರ್ಥವಾಗುತ್ತಾ ಬಂದಿತು. ಅವನೊಬ್ಬ ಸೋತ ಮನುಷ್ಯ. ತನ್ನ ಸೋಲಿನ ಕಾರಣವನ್ನು ಹುಡುಕಿಕೊಳ್ಳಲಾರದವನಾಗಿದ್ದ. ‘ನನಗೆ ದೈವ ಸಹಾಯವೂ ಇಲ್ಲ. ಬಡತನ ಬೆನ್ನುಬಿಟ್ಟಿಲ್ಲ. ಮನೆಯಲ್ಲಿ ಹೆಂಡತಿ ಮಕ್ಕಳ ಜವಾಬ್ದಾರಿ. ಹೀಗಿರುವಾಗ ನಾನೇನು ಮಾಡಬೇಕು ಹೇಳಿ?’ ಎಂದ. ಗಾಂಧೀಜಿ, ‘ನೀನು ಏನು ಕೆಲಸ ಮಾಡುತ್ತಿದ್ದೀಯಾ?’ ಎಂದರು. ‘ನನ್ನ ಸಮಸ್ಯೆ, ಏನು ಮಾಡಬೇಕೆನ್ನುವುದೇ ಗೊತ್ತಾಗದಿರುವುದು. ಏನು ಮಾಡಲಿ ಎಂದು ನಿಮ್ಮನ್ನು ಕೇಳಲು ಬಂದೆ’ ಎಂದ.

ಗಾಂಧೀಜಿಗೆ ಇನ್ನು ಯಾವ ಅನುಮಾನವೂ ಉಳಿಯಲಿಲ್ಲ; ಈ ಮನುಷ್ಯ ಪರಾವಲಂಬಿ, ತಾನಾಗಿ ಏನನ್ನೂ ಮಾಡಲಾರ, ಮಾಡಲಾರದ್ದಕ್ಕೆ ಕಾರಣಗಳನ್ನು ಹುಡುಕುತ್ತಿದ್ದಾನೆ ಎಂದು. ಅವನನ್ನು ಉದ್ದೇಶಿಸಿ ಗಾಂಧೀಜಿ, ‘ದೇವರನ್ನು ಪ್ರಾರ್ಥಿಸು, ನಾನೂ ಅದನ್ನೇ ಮಾಡುತ್ತಿರುವೆ’ ಎಂದರು. ‘ಪ್ರಾರ್ಥನೆ, ಅದೊಂದು ಮೂಢ ಸಂಪ್ರದಾಯ. ಅರ್ಥವಿಲ್ಲದ ಸುಳ್ಳು. ದೇವರನ್ನು ಪ್ರಾರ್ಥಿಸುತ್ತಿದ್ದೇನೆ ಎಂದಿರಲ್ಲಾ, ಈಗ ಹೇಳಿ ನಿಮ್ಮ ಪ್ರಾರ್ಥನೆ ಫಲ ಕೊಟ್ಟಿದ್ದಿದ್ದರೆ ಇಷ್ಟು ಹೊತ್ತಿಗೆ ನಮ್ಮ ದೇಶ ಸ್ವತಂತ್ರವಾಗಬೇಕಿತ್ತಲ್ಲ’ ಎಂದ ಬಂದವ. ಗಾಂಧೀಜಿ ನಕ್ಕರು. ‘ಹೌದು ಸಿಗಬೇಕಿತ್ತು’. ‘ಮತ್ತೆ ಪ್ರಾರ್ಥನೆಯ ಫಲಿತವೇನು? ಸುಮ್ಮನೆ ನೀವು ಕೇಳಿಕೊಳ್ಳುವುದು ಮಾತ್ರವಾ?’ ಎಂದವನಿಗೆ ಗಾಂಧೀಜಿ, ‘ಓಹೋ ನಿನಗೆ ಪ್ರಾರ್ಥನೆಯ ಅರ್ಥವೇ ಗೊತ್ತಿಲ್ಲವೆಂದಾಯಿತು’ ಎಂದರು. ಬಂದವನ ಅಹಂ ಕೆರಳಿತು. ‘ಗೊತ್ತಿಲ್ಲದೆ ಏನು? ನನಗೆ ಏನು ಬೇಕೋ ಅದನ್ನು ಕೇಳಿಕೊಳ್ಳುವುದು’ ಎಂದ. ಗಾಂಧೀಜಿ, ‘ಎಲ್ಲವೂ ಪ್ರಾರ್ಥನೆಯಿಂದಲೇ ಆಗುತ್ತದೆ, ದೇವರು ಎಲ್ಲವನ್ನೂ ಕೊಡಬೇಕು ಎನ್ನುವ ನಿರೀಕ್ಷೆ ನನ್ನದಲ್ಲ. ಪ್ರಾರ್ಥನೆಯ ಅರ್ಥವೂ ಅದಲ್ಲ. ದಿನವೂ ದೇಶಕ್ಕೆ ಸ್ವಾತಂತ್ರ್ಯ ಕೊಡು ಎಂದು ಕೇಳಿಕೊಳ್ಳುತ್ತಿದ್ದೇನೆ ಎಂದುಕೊಂಡಿದ್ದೀಯಾ? ನಾನು ಕೇಳಿಕೊಳ್ಳುವುದು, ಈ ದೇಶವನ್ನು ಬ್ರಿಟಿಷರಿಂದ ವಿಮೋಚನೆಗೊಳಿಸಲು ನಾನು ಪ್ರಯತ್ನಿಸುವೆ, ನಿನ್ನ ಅನುಗ್ರಹವಿರಲಿ ಎಂದು. ಅಷ್ಟನ್ನು ಕೇಳಿ ಜನರನ್ನು ಸಂಘಟಿಸುತ್ತಿರುವೆ, ನಾಡಿನ ಉದ್ದಗಲಕ್ಕೂ ಓಡಾಡುತ್ತಿರುವೆ. ಚಿತ್ತಶುದ್ಧಿಯಿಂದ ಕೆಲಸವನ್ನು ಮಾಡುತ್ತಿರುವೆ. ಒಂದಲ್ಲಾ ಒಂದು ದಿನ ದೇಶ ಸ್ವತಂತ್ರವಾಗುತ್ತದೆ’ ಎಂದರು ದೃಢವಿಶ್ವಾಸದಿಂದ. ಬಂದವ ಮತ್ತಷ್ಟು ಖಿನ್ನನಾದ.

‘ದೇವರು ನನಗೆ ಈ ದೇಹವನ್ನು ಕೊಟ್ಟಿದ್ದಾನೆ, ಅದರಲ್ಲಿ ಕಸುವು ಇಟ್ಟಿದ್ದಾನೆ. ತಲೆಯಲ್ಲಿ ಬುದ್ಧಿಯನ್ನು ತುಂಬಿದ್ದಾನೆ. ಮನಸ್ಸಿನಲ್ಲಿ ಆಸೆ ಹುಟ್ಟಿಸಿದ್ದಾನೆ- ನಿನ್ನ ಕೆಲಸವನ್ನು ನೀನು ಮಾಡಿಕೊ ಎಂದು ಬಿಟ್ಟಿದ್ದಾನೆ. ನಾನು ನನಗೆ ಸರಿದೋರಿದ ಕೆಲಸವನ್ನು ಇನ್ನೊಬ್ಬರಿಗೆ ಕಷ್ಟ, ನೋವಾಗದ ದಾರಿಯಲ್ಲಿ ಮಾಡುವೆ. ಅದಕ್ಕಾಗಿ ನಿನ್ನ ಅನುಗ್ರಹವಿರಲಿ ಎಂದು ಬೇಡುವೆ’ ಎಂದರು ಗಾಂಧಿ.

ನಿಜ ಪ್ರಾರ್ಥನೆ ಎಂದರೆ ಬೇಡಿಕೆ ಅಲ್ಲ; ನಮ್ಮ ಸಂಕಲ್ಪಶಕ್ತಿಗೆ ವಿಶ್ವಶಕ್ತಿಯಿಂದ ಸಿಗುವ ಬೆಂಬಲ, ನಮ್ಮನ್ನು ಅಲ್ಪತ್ವದಿಂದ ಪಾರುಮಾಡುವ ಸಾಧನ ಮಾತ್ರ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

**05 ಫೆಬ್ರವರಿ 2026 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ:** ಮಾಘ ಕೃಷ್ಣ ಚತುರ್ಥಿ ಗಂ.24-23 ನಕ್ಷತ್ರ: ಉತ್ತರಫಲ್ಗುನಿ ಗಂ. 22-58 ಯೋಗ: ಸುಕರ್ಮ ಗಂ. 24-04 ಕರಣ: ಬವ ಗಂ 12-11 ಮಕರ ಮಾಸದ 22 ನೇ ದಿನ. ಮಳೆ ನಕ್ಷತ್ರ : ಶ್ರವಣ 4 ನೇ ಪಾದ. **ರಾಹುಕಾಲ :** ಮಧ್ಯಾಹ್ನ 01-30 - 03-00 , **ಸೂರ್ಯೋದಯ :** 07-00 **ಸೂರ್ಯಾಸ್ತ :** 06-29, **ಮುಸ್ಲಿಂ ದಿನಾಂಕ :** 3 ಶಬನ್ ,**ಅದೃಷ್ಟ ಸಂಖ್ಯೆ :** 10, 1.

**ಮೇಷ:** ತೆಗೆದುಕೊಂಡಿರುವ ನಿರ್ಧಾರ ಸರಿಯಾದುದೆಂದು ಮನವರಿಕೆಯಾಗುವುದು. ತಾರ್ಕಿಕ ಹಾದಿಯಲ್ಲಿ ಬರುವ ಭಾವನಾತ್ಮಕ ಆಲೋಚನೆಗಳನ್ನು ಬದಿಗೆ ಸರಿಸಿ. ವಿದ್ಯಾರ್ಥಿಗಳಿಗೆ ಪರಿಶ್ರಮ ಅಗತ್ಯವಾಗುವುದು.

**ವೃಷಭ:** ಇಂದಿನ ಕಾರ್ಯ ವೈಖರಿ ಸ್ವಲ್ಪ ಬದಲಿಸಿ ಹೊಸ ಕೆಲಸ ಮಾಡಿದರೆ ವಿಶಿಷ್ಟವಾದ ಜಯ ಕಾಣುವಿರಿ. ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವಿರಿ.

**ಮಿಥುನ:** ಸರ್ಕಾರದಿಂದ ನಿವೇಶನ ಮಂಜೂರು ಮಾಡಿಸಿಕೊಳ್ಳಲು ಸ್ವಲ್ಪ ಹಣ ಖರ್ಚು ಮಾಡಿದರೆ ಸಾಧ್ಯವಿದೆ. ವಯಸ್ಸಾದ ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿವಹಿಸಿ.

**ಕರ್ಕಾಟಕ:** ಅಧಿಕ ಒತ್ತಡದ ಕೆಲಸದ ನಡುವೆ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವಿರಿ. ಸಂಬಂಧಿಕರ ಆಗಮನದಿಂದ ಸಂತೋಷ ಆಗುವುದು. ವಾಹನದಿಂದ ಕೈ ಕಾಲಿಗೆ ಪೆಟ್ಟಾಗುವ ಸಾಧ್ಯತೆ ಇರುವುದರಿಂದ ಎಚ್ಚರವಿರಲಿ.

**ಸಿಂಹ:** ಈಗಿನ ಕಾಲ ಘಟ್ಟಕ್ಕೆ ಸರಿಯಾದ ಸಮಾನ ಸ್ಥಾನಮಾನಗಳು ದೊರಕುವ ಬಗ್ಗೆ ಪ್ರಯತ್ನವಿರಲಿ. ಎಲ್ಲಾ ಕೆಲಸಗಳನ್ನು ಅತೀವ ಒತ್ತಡದ ನಡುವೆ ಮಾಡುವಂತೆ ಆಗುವುದು. ಮಾತುಗಳು ಯಾರ ಮನಸ್ಸನ್ನೂ ನೋಯಿಸದಿರಲಿ.

**ಕನ್ಯಾ:** ವೃತ್ತಿ ಬದುಕಿನಲ್ಲಿ ತಪ್ಪುಗಳು ನಡೆಯುವ ಸಂಭವ ಹೆಚ್ಚಿರುವುದರಿಂದ ಜಾಗರೂಕತೆ ವಹಿಸಬೇಕಾಗುತ್ತದೆ. ಆಟೋಟಗಳಲ್ಲಿ ಹಿಂದಿನಕ್ಕಿಂತ ಉತ್ತಮ ಪ್ರದರ್ಶನ ತೋರುವಿರಿ. ಆತ್ಮೀಯರಿಂದ ವ್ಯವಹಾರದಲ್ಲಿ ಲಾಭ.

**ತುಲಾ:** ಕೆಲವೊಂದು ಸಮಾರಂಭದಲ್ಲಿ ಹಾಜರಿಯು ವಿಶೇಷವಾದ ಕಳೆ ತರುವುದು. ಸಂಬಂಧಿಗಳೊಂದಿಗೆ ವಾದವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ. ಧ್ಯೇಯಗಳನ್ನು ಪಸರಿಸುವ ಕೆಲಸವನ್ನು ಮಾಡುವಿರಿ.

**ವೃಶ್ಚಿಕ:** ರಚನಾತ್ಮಕ ಕಾರ್ಯಕ್ರಮಗಳ ಕುರಿತು ದೂರದರ್ಶನ ಮಾಧ್ಯಮದವರಿಂದ ಮೆಚ್ಚುಗೆಯ ಮಾತು ಕೇಳಲಿದ್ದೀರಿ. ಕೆಲಸಕ್ಕೆ ಸಂಬಂಧ ಪಟ್ಟ ಹಾಗೆ ದೂರದ ಊರಿನ ಪ್ರವಾಸ ಮಾಡುವ ಸಾಧ್ಯತೆಗಳಿರಬಹುದು.

**ಧನು:** ಕಠಿಣ ಶ್ರಮದ ಫಲವಾಗಿ ಬಯಸಿದ ಸಂತೋಷದ ಜತೆಗೆ ಹೊಸ ಅನುಭವದ ಲಾಭ ನಿಮ್ಮದಾಗಲಿದೆ. ವೈದ್ಯರಿಗೆ ಬಿಡುವಿಲ್ಲದ ಅಭ್ಯಾಸದ ಜೊತೆಗೆ ಉನ್ನತ ಜವಾಬ್ದಾರಿ ಸ್ಥಾನಕ್ಕೆ ವರ್ಗಾವಣೆಯಾಗುವುದು.

**ಮಕರ:** ಸಾಂಸಾರಿಕವಾಗಿ ಸದ್ಯದ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವುದೇ ಉತ್ತಮ ಎಂಬ ಭಾವನೆ ಸರಿಯಾಗಿದೆ. ಪರಿಶ್ರಮದಿಂದ ವೃತ್ತಿಯಲ್ಲಿನ ಸಾಧನೆಗೆ ಸಾಮಾಜಿಕವಾಗಿ ಗೌರವವನ್ನು ಪಡೆದುಕೊಳ್ಳುವಿರಿ.

**ಕುಂಭ:** ಆಲಸ್ಯತನ ದೂರ ಮಾಡಿಕೊಳ್ಳುವುದರಿಂದ ಸಮಸ್ಯೆಗಳು ಬರಲಾರದು. ಸ್ವಾದವನ್ನು ಅರಸಿ ತಿಂದ ಆಹಾರವು ಅನಾರೋಗ್ಯಕ್ಕೆ ಕಾರಣವಾಗುವುದು. ಯಂತ್ರೋಪಕರಣಗಳ ಮಾರಾಟದಿಂದ ಅಧಿಕ ಲಾಭ.

**ಮೀನ:** ಮಾನಸಿಕ ಒತ್ತಡ ಕಡಿಮೆಯಾಗದ ಹೊರತು ಇತರರೊಂದಿಗೆ ವಾಗ್ವಾದಕ್ಕೆ ಇಳಿಯಬೇಡಿ. ಕುಟುಂಬದವರೊಡನೆ ಮನರಂಜನೆಗಾಗಿ ಅಲ್ಪ ಕಾಲ ಮೀಸಲಿಡಲು ಪ್ರಯತ್ನಿಸಿ. ಸಂಗೀತವನ್ನು ಆಲೈಸಿ.

## ಗುಂಡಣ್ಣ



**ಷೇರುಪೇಟೆ ವಹಿವಾಟು**




| ಎನ್‌ಎಸ್‌ಇ ನಿಫ್ಟಿ | |
|---|---|
| ಹಿಂದಿನ ಅಂತ್ಯ: | 25,727 |
| ಇಂದಿನ ಅಂತ್ಯ: | 25,776 |
| ದಿನದ ಗರಿಷ್ಠ: | 25,818 |
| | 48 |

| ಮೊಟ್ಟೆ ಧಾರಣೆ (ಎನ್‌ಇಸಿಸಿ) | | |
|---|---|---|
| ಬೆಂಗಳೂರು | | |
| | 100 ಕ್ಕೆ | ₹560 |
| | 12 ಕ್ಕೆ | ₹80 |
| ಮೈಸೂರು: | 100 ಕ್ಕೆ | ₹562 |

| ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ) | |
|---|---|
| ಆರ್‌ಎಸ್‌ಎಸ್-4 | ₹200.50 |
| ಆರ್‌ಎಸ್‌ಎಸ್-5 | ₹195.50 |
| ಗುಡ್ ಲಾಟ್ | ₹183.50 |

| ರಾಮನಗರ ರೇಷ್ಮೆಗೂಡು | |
|---|---|
| ಮಿಶ್ರತಳಿ(ಸಿ.ಬಿ) | ₹535-754 |
| ದ್ವಿತಳಿ (ಬಿ.ವಿ) | ₹158-903 |

| ಮುದ್ರೆಮನೆ ಕಾಫಿ | |
|---|---|
| ಎಪಿ | ₹24500 |
| ಎಸಿ | ₹13150 |
| ಆರ್‌ಪಿ | ₹17750 |
| ಆರ್‌ಸಿ | ₹10180 |

| ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ) | |
|---|---|
| ಶೇಂಗಾ (ರಿಫೈನ್ಡ್) | ₹1740 (1770) |
| ಸೋಯಾ (ರಿಫೈನ್ಡ್) | ₹1405 (1395) |
| ಸೂರ್ಯಕಾಂತಿ (ರಿಫೈನ್ಡ್) | ₹1620 (1620) |
| ಪಾಮೋಲಿನ್ | ₹1330 (1320) |

## ಚಿನ್ನದ ದರ ₹7,400, ಬೆಳ್ಳಿ ₹14,300 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆ ಕಂಡಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹7,400 ಹೆಚ್ಚಳವಾಗಿ ₹1,65,100ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹14,300 ಏರಿಕೆಯಾಗಿ, ₹2,98,300ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಡಾಲರ್ ಮೌಲ್ಯ ಇಳಿಕೆ ಮತ್ತು ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟಿನಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನ ಮತ್ತು ಬೆಳ್ಳಿ ಖರೀದಿಗೆ ಮುಂದಾದರು. ಇದು ದರ ಏರಿಕೆಗೆ ಕಾರಣ ಎಂದು ತಿಳಿಸಿದೆ.

# 6ರಿಂದ ಅಂತರರಾಷ್ಟ್ರೀಯ ವಾಣಿಜ್ಯ ಮೇಳ

## ‘ಉತ್ಪಾದನೋತ್ತರ ಕೃಷಿ– ರೈತರ ಸಬಲೀಕರಣ’ ಘೋಷವಾಕ್ಯದಡಿ ಆಯೋಜನೆ: ಸಚಿವ ಎನ್. ಚಲುವರಾಯಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉತ್ಪಾದನೋತ್ತರ ಕೃಷಿ– ರೈತರ ಸಬಲೀಕರಣ’ ಪರಿಕಲ್ಪನೆಯಡಿ ರೈತರನ್ನು ಉದ್ಯಮಿಗಳನ್ನಾಗಿಸುವ ಆಶಯದಡಿ ಅಂತರರಾಷ್ಟ್ರೀಯ ವಾಣಿಜ್ಯ ಮೇಳ ಫೆ.6ರಿಂದ ಮೂರು ದಿನ ನಡೆಯಲಿದೆ.

ನಗರದ ಅರಮನೆ ಮೈದಾನದಲ್ಲಿ ಮೇಳ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆ.6ರಂದು ಮೇಳಕ್ಕೆ ಚಾಲನೆ ನೀಡಲಿದ್ದಾರೆ. ಕೇಂದ್ರದ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜಸಿಂಗ್ ಚೌಹಾಣ್ ಅವರು ಫೆ.8ರಂದು ನಡೆಯುವ ಸಮಾರೋಪದಲ್ಲಿ ಭಾಗವಹಿಸಲಿದ್ದಾರೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಪತ್ರಿಕಾಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

‘ಉತ್ಪಾದನೋತ್ತರ ಕೃಷಿ ವಿಷಯದ ಮೇಲೆ ದೇಶದಲ್ಲೇ ಮೊದಲ ಬಾರಿಗೆ ಮೇಳವನ್ನು ಆಯೋಜಿಸಲಾಗುತ್ತಿದೆ. ಸಂಸ್ಕರಣೆ ಮತ್ತು ಮೌಲ್ಯವರ್ಧನೆ, ಕೃಷಿ ಪರಿಸರ ವಿಜ್ಞಾನ, ಬ್ರ್ಯಾಂಡಿಂಗ್ ಮತ್ತು ಕ್ರೆಡಿಟ್ ಸೇವೆ ಎಂಬ ಮೂರು ಉಪ ಪರಿಕಲ್ಪನೆಗಳಿವೆ. ಈ ಮೂಲಕ ರೈತರು ತಮ್ಮ ಬೆಳೆಯನ್ನು ಬ್ರ್ಯಾಂಡಿಂಗ್ ಮಾಡಿ, ನೇರ ಮಾರುಕಟ್ಟೆಯಲ್ಲಿ ಒಂದರಿಂದ ನಾಲ್ಕು ಪಟ್ಟು ಲಾಭವನ್ನು ಗಳಿಸಿ ಕೃಷಿ ಉದ್ಯಮಿಗಳನ್ನಾಗಿ ಮಾಡುವ ಉದ್ದೇಶವಿದೆ’ ಎಂದರು.

**ಮುಖ್ಯಾಂಶಗಳು**

- ಖರೀದಿ, ಸಂಸ್ಕರಣೆ, ರಫ್ತುದಾರರೊಂದಿಗೆ ಸಂಪರ್ಕ
- ಡಿಜಿಟಲ್ ಮಾರುಕಟ್ಟೆ ಸಂಪರ್ಕಗಳು
- ಉತ್ಪಾದಕ, ಕೃಷಿ ಸಂಘ, ನವೋದ್ಯಮ, ರೈತ ಸಂಘಟನೆಗಳೊಂದಿಗೆ ಕರ್ನಾಟಕ ಪೆವಿಲಿಯನ್

‘ಕಾಂಗ್ರೆಸ್ ಸರ್ಕಾರ 2017ರಲ್ಲಿ ಆರಂಭಿಸಲಾದ ಸಿರಿಧಾನ್ಯ ಅಂತರರಾಷ್ಟ್ರೀಯ ವಾಣಿಜ್ಯ ಮೇಳ, ಕೋವಿಡ್ ಸಂದರ್ಭದಲ್ಲಿ ಮೂರು ವರ್ಷ ನಡೆದಿರಲಿಲ್ಲ. ನಮ್ಮ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದ ಮೇಲೆ 2023ರಿಂದ ಪ್ರತಿವರ್ಷ ಮೇಳವನ್ನು ಆಯೋಜಿಸಲಾಗುತ್ತಿದೆ. ಕಳೆದ ವರ್ಷ 10 ದೇಶ, 25 ರಾಜ್ಯಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ₹185 ಕೋಟಿ ಮೌಲ್ಯದ ಒಪ್ಪಂದಗಳಾಗಿತ್ತು. ಈ ಬಾರಿ ಇದಕ್ಕಿಂತ ಹೆಚ್ಚಿನ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ’ ಎಂದು ಮಾಹಿತಿ ನೀಡಿದರು.

ಮೇಳದಲ್ಲಿ 14 ಕೃಷಿ ಪಂಡಿತ ಹಾಗೂ 108 ಕೃಷಿ ಸಾಧಕ ಪ್ರಶಸ್ತಿ ಸೇರಿದಂತೆ ಒಟ್ಟಾರೆ 122 ಪ್ರಶಸ್ತಿಗಳನ್ನು ಸಿದ್ದರಾಮಯ್ಯ ಅವರು ಫೆ.6ರಂದು ಪ್ರದಾನ ಮಾಡಲಿದ್ದಾರೆ
ಎನ್. ಚಲುವರಾಯಸ್ವಾಮಿ, ಕೃಷಿ ಸಚಿವ

ಕೃಷಿ ಇಲಾಖೆ, ರಾಜ್ಯ ಬೀಜ ನಿಗಮದ ವತಿಯಿಂದ ಮೇಳವನ್ನು ಆಯೋಜಿಸಲಾಗುತ್ತಿದ್ದು, ಸೆಕೆಂಡರಿ ಕೃಷಿ ನಿರ್ದೇಶನಾಲಯ, ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮ, ಜಲಾನಯನ ಅಭಿವೃದ್ಧಿ ಇಲಾಖೆ, ಗೆಸೆಲ್‌ಶಾಫ್ಟ್ ಫ್ಯೂರ್ ಇಂಟರ್‌ನ್ಯಾಷನಲ್ ಜುಸಾಮೆನ್ ಅರ್ಬೈಟ್ ಸಹಯೋಗವಿದೆ. ನವೀನ, ಸುಸ್ಥಿರ ಮತ್ತು ಮಾರುಕಟ್ಟೆ ಸಮನ್ವಯದ ಮೂಲಕ ಆಧುನಿಕ ಮೌಲ್ಯ ಸರಪಳಿಯಲ್ಲಿ ರೈತರು ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ ಎಂದು ಹೇಳಿದರು.

### ‘ಜಿಐ ಟ್ಯಾಗ್ ಉತ್ಪನಗಳ ಬಳಸುವಂತೆ ಪ್ರಚಾರ’

‘ರೈತರ ಆದಾಯ ದ್ವಿಗುಣಗೊಳಿಸುವ ಸಲುವಾಗಿ ಕೃಷಿ ತ್ಯಾಜ್ಯಗಳ ಮರುಬಳಕೆ, ದೇಸಿ ತಳಿಗಳ ಸಂರಕ್ಷಣೆ, ಭೌಗೋಳಿಕ ಮಾನ್ಯತೆ ಹೊಂದಿರುವ (ಜಿಐ ಟ್ಯಾಗ್) ಉತ್ಪನ್ನಗಳನ್ನು ಬಳಸುವಂತೆ ವ್ಯಾಪಕ ಪ್ರಚಾರ ಮಾಡಲಾಗುತ್ತಿದೆ’ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಕೃಷಿ ಇಲಾಖೆ ಆಯೋಜಿಸಿರುವ ‘ಉತ್ಪಾದನೋತ್ತರ ಕೃಷಿ ಹಾಗೂ ರೈತರ ಸಬಲೀಕರಣ’ ಎಂಬ ಎರಡು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನವನ್ನು ಬುಧವಾರ ಇಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು.

‘ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಒತ್ತು ನೀಡಲು ಈಗಾಗಲೇ ಸೆಕೆಂಡರಿ ಕೃಷಿ ನಿರ್ದೇಶನಾಲಯ ಸ್ಥಾಪಿಸಲಾಗಿದ್ದು, ಅದರ ಮೂಲಕ ರೈತರ ಉತ್ಪನ್ನಗಳ ಸಂಸ್ಕರಣೆಗೆ ಆದ್ಯತೆ ನೀಡಲಾಗುತ್ತಿದೆ. ಈ ಬಗ್ಗೆ ಜರ್ಮನಿ, ಅಮೆರಿಕ, ವಿಯೆಟ್ನಾಂ, ಕಾಂಬೋಡಿಯಾ ಹಾಗೂ ನಮ್ಮ ದೇಶದ ವಿವಿಧ ರಾಜ್ಯಗಳಿಂದ ಬಂದಿರುವ ತಜ್ಞರು ಹಾಗೂ ರೈತರೊಂದಿಗೆ ಈ ಕುರಿತು ಚರ್ಚಿಸಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

### 1.25 ಲಕ್ಷ ಹೆಕ್ಟೇರ್‌ನಲ್ಲಿ ಸಾವಯವ

‘ರಾಜ್ಯ ಸರ್ಕಾರ ಸಿರಿಧಾನ್ಯ ಕೃಷಿಯನ್ನು ಪ್ರೋತ್ಸಾಹಿಸುತ್ತಿದ್ದು, ಪ್ರತಿ ಹೆಕ್ಟೇರ್‌ಗೆ ₹10 ಸಾವಿರ ಸಹಾಯಧನ ನೀಡುತ್ತಿದೆ. 55 ಸಾವಿರ ಹೆಕ್ಟೇರ್‌ನಲ್ಲಿ ಸಾವಯವ ಕೃಷಿ ಚಟುವಟಿಕೆ ನಡೆಯುತ್ತಿದ್ದು, ಇದನ್ನು 1.25 ಲಕ್ಷ ಹೆಕ್ಟೇರ್‌ಗೆ ವಿಸ್ತರಿಸುವ ಗುರಿ ಹೊಂದಲಾಗಿದೆ’ ಎಂದು ಚಲುವರಾಯಸ್ವಾಮಿ ತಿಳಿಸಿದರು.

‘ಕಾಳಸಂತೆಯಲ್ಲಿ ಗೊಬ್ಬರ ಮಾರಾಟವನ್ನು ನಿಯಂತ್ರಿಸಲು ಕಠಿಣ ಕ್ರಮ ಕೈಗೊಳ್ಳಲಾಗಿದೆ. ರೈತರಿಗೆ ಲಭ್ಯವಾಗಬೇಕಿರುವ ಗೊಬ್ಬರವನ್ನು ರಿಯಾಯಿತಿ ದರದಲ್ಲಿ ಅವರಿಗೇ ತಲುಪಿಸಲಾಗುತ್ತದೆ. 25 ದಿನ ನೀರಿನಲ್ಲಿ ಮುಳುಗಿದ್ದರೂ ಬೆಳೆಗೆ ಹಾನಿಯಾಗದಂತಹ ಭತ್ತದ ತಳಿಯನ್ನು ಶಿವಮೊಗ್ಗದಲ್ಲಿ ಪ್ರಾಯೋಗಿಕವಾಗಿ ಬೆಳೆಸಲಾಗಿದೆ. ಐದು ವಿಶ್ವವಿದ್ಯಾಲಯಗಳು ಎರಡೂ ವರ್ಷದಲ್ಲಿ ತಳಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಪೂರಕ ಕೆಲಸ ಮಾಡಿವೆ’ ಎಂದು ಹೇಳಿದರು.

‘ರೈತರ ಆತ್ಮಹತ್ಯೆಗೆ ಕೃಷಿ ನಡೆಯೊಂದೇ ಕಾರಣ ಅಲ್ಲ. ಅದಕ್ಕೆ ಹಲವಾರು ಕಾರಣಗಳಿವೆ. ಐದು ಗ್ಯಾರಂಟಿಗಳು ಸೇರಿದಂತೆ ಹಲವು ಯೋಜನೆಗಳಿಂದ ಪ್ರತಿ ಕುಟುಂಬಕ್ಕೆ ತಿಂಗಳಿಗೆ ಕನಿಷ್ಠ ₹10 ಸಾವಿರ ಸಿಗುತ್ತದೆ. ಹೀಗಾಗಿ, ರೈತರು ಆತ್ಮಸ್ಥೈರ್ಯದಿಂದ ಬದುಕಬೇಕು. ಸಾವೊಂದೇ ಪರಿಹಾರ ಅಲ್ಲ ಎಂಬುದನ್ನು ಅರಿತುಕೊಳ್ಳಬೇಕು’ ಎಂದರು.

## ಸುದ್ದಿ 2 ನಿಮಿಷ

### ಭಾರತ್ ಟ್ಯಾಕ್ಸಿ: ಚಾಲನೆ ಇಂದು

ನವದೆಹಲಿ (ಪಿಟಿಐ): ‘ಭಾರತ್ ಟ್ಯಾಕ್ಸಿ’ ಸೇವೆಗೆ ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಗುರುವಾರ ಚಾಲನೆ ನೀಡಲಿದ್ದಾರೆ.

ಮುಂದಿನ ಎರಡು ವರ್ಷದಲ್ಲಿ ದೇಶದ ಎಲ್ಲ ರಾಜ್ಯಗಳು ಮತ್ತು ವಿವಿಧ ನಗರಗಳಲ್ಲಿ ಈ ಸೇವೆಯನ್ನು ವಿಸ್ತರಿಸುವ ಉದ್ದೇಶ ಹೊಂದಲಾಗಿದೆ.

ಕಳೆದ ಡಿಸೆಂಬರ್ 2ರಂದು ದೆಹಲಿ–ಎನ್‌ಸಿಆರ್ ಮತ್ತು ಗುಜರಾತ್‌ನಲ್ಲಿ ಪ್ರಾಯೋಗಿಕವಾಗಿ ಈ ಸೇವೆಯನ್ನು ಆರಂಭಿಸಲಾಯಿತು. ಈ ಸೇವೆಯು ಓಲಾ, ಊಬರ್ ಮತ್ತು ರ್‍ಯಾಪಿಡೋಗೆ ಸ್ಪರ್ಧೆ ನೀಡಲಿದೆ ಎನ್ನಲಾಗಿದೆ.

ಸಹಕಾರ ತತ್ತ್ವದ ಆಧಾರದಲ್ಲಿ ಆ್ಯಪ್ ಮೂಲಕ ಟ್ಯಾಕ್ಸಿ ಸೇವೆ ಒದಗಿಸುವ ಜಗತ್ತಿನ ಅತಿದೊಡ್ಡ ವೇದಿಕೆ ಇದಾಗಿದೆ. ಅಲ್ಲದೆ, ಚಾಲಕರ ಮಾಲೀಕತ್ವದ ವಿಶ್ವದ ಅತಿದೊಡ್ಡ ವೇದಿಕೆಯೂ ಹೌದು ಎಂದು ಸಹಕಾರ ಸಚಿವಾಲಯವು ಹೇಳಿದೆ.

ಈ ಸೇವೆ ಆರಂಭಗೊಂಡಾಗಿನಿಂದ ಇಲ್ಲಿಯವರೆಗೆ 3 ಲಕ್ಷಕ್ಕೂ ಅಧಿಕ ಚಾಲಕರು ಈ ವೇದಿಕೆ ಸೇರಿದ್ದಾರೆ, 1 ಲಕ್ಷ ಹೆಚ್ಚು ಬಳಕೆದಾರರು ನೋಂದಣಿ ಆಗಿದ್ದಾರೆ.

### ಸೇವಾ ವಲಯದ ಪ್ರಗತಿ ಏರಿಕೆ

ನವದೆಹಲಿ (ಪಿಟಿಐ): ‘ದೇಶದ ಸೇವಾ ವಲಯದ ಬೆಳವಣಿಗೆ ಜನವರಿ ತಿಂಗಳಿನಲ್ಲಿ ಎರಡು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದೆ’ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷಾ ವರದಿ ತಿಳಿಸಿದೆ.

ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಪಿಎಂಐ ಬ್ಯುಸಿನೆಸ್ ಆ್ಯಕ್ಟಿವಿಟಿ ಸೂಚ್ಯಂಕವು 2025ರ ಡಿಸೆಂಬರ್‌ನಲ್ಲಿ 58 ಆಗಿತ್ತು. ಅದು ಜನವರಿಯಲ್ಲಿ 58.5ಕ್ಕೆ ಏರಿಕೆ ಆಗಿದೆ.

ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿದ್ದರೆ ಅದನ್ನು ಬೆಳವಣಿಗೆ ಎಂದು, 50ಕ್ಕಿಂತ ಕೆಳಕ್ಕೆ ಬಂದರೆ ಅದನ್ನು ಕುಸಿತ ಎಂದು ಪರಿಗಣಿಸಲಾಗುತ್ತದೆ.

‘ಜನವರಿಯಲ್ಲಿ ಸೇವಾ ವಲಯವು ಬೆಳವಣಿಗೆ ದಾಖಲಿಸಿದೆ. ದಕ್ಷಿಣ ಮತ್ತು ಆಗ್ನೇಯ ಏಷ್ಯಾದಿಂದ ಹೆಚ್ಚಿದ ಅಂತರರಾಷ್ಟ್ರೀಯ ಬೇಡಿಕೆ ಸೇರಿದಂತೆ ಹೊಸ ಕಾರ್ಯಾದೇಶಗಳು ಉತ್ಪಾದನೆಯ ಬೆಳವಣಿಗೆಗೆ ಕಾರಣವಾದವು’ ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ತಿಳಿಸಿದ್ದಾರೆ.

ದೇಶದಲ್ಲಿನ ಸೇವಾ ಪೂರೈಕೆದಾರರು ಹೊಸ ವ್ಯವಹಾರ ಮತ್ತು ಉತ್ಪಾದನೆಯಲ್ಲಿ ವೇಗದ ಬೆಳವಣಿಗೆ ಕಂಡಿದ್ದಾರೆ. ಇದರಿಂದ ಹೆಚ್ಚುವರಿ ಸಿಬ್ಬಂದಿಯನ್ನು ಕಂಪನಿಗಳು ನೇಮಿಸಿಕೊಂಡವು ಎಂದು ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ

ಎ. ಶ್ರೀನಿವಾಸ ರೆಡ್ಡಿ
ಜನನ: 08-07-1948 – ಮರಣ: 25-01-2026
ಇಂತಿ ದುಃಖತಪ್ತರು:
ಡಾ|| ದಿನೇಶ್ ಎಸ್. (ಮಗ)
ಕುಟುಂಬವರ್ಗದವರು ಹಾಗೂ ಬಂಧು–ಮಿತ್ರರು
9886125229

3rd Year Death Anniversary
In Loving Memory of

Smt. S. SHAKUNTHALA
11-10-1962 - 05-02-2023
“YOU WILL LIVE FOREVER IN OUR HEARTS”
We miss you in every moments of our lives
Deeply mourned by
Husband: Shivanarayana
Children: Deepa S, Mahesh S, Akash S along with Family and Friends

| ಮುಂಬೈ ಧಾರಣೆ (ಶೇಂಗಾ) | |
|---|---|
| 04-02-2026 | |
| ಜಾವಾ 70/80(ಹೊಸ) | 11400-11500 |
| ಜಾವಾ 80/90(ಹೊಸ) | 10700-10800 |
| ದಪ್ಪ ಮಧ್ಯಪ್ರದೇಶ (ಹೊಸ) | 8400-8500 |
| ದಪ್ಪ ಗುಜರಾತ್ (ಹೊಸ) | 9700-9800 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1750 (1780) |
| ಒಂದು ವಾರದ ಡೆಲಿವರಿ | 1745 (1775) |
| ಪಾಮ್ ವಾರದ ಡೆಲಿವರಿ | 1328 (1318) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1525 (1525) |
| **ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 1,56,000 (1,52,000) |
| ಬೆಳ್ಳಿ ಕೆ.ಜಿಗೆ | 2,85,000 (2,67,000) |

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

| ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ) | |
|---|---|
| ಅರಸೀಕೆರೆ | ₹20000-24600 |
| ದಾವಣಗೆರೆ | ₹12000-12000 |
| ಪುತ್ತೂರು | ₹6000-22000 |
| ವಿಜಯಪುರ | ₹8400-8400 |

# ಇದು ಭಾರತದ ಯುಗ: ಫಿಂಕ್

## ಠೇವಣಿ ಬದಲು ಮಾರುಕಟ್ಟೆಯಲ್ಲಿ ಹಣ ತೊಡಗಿಸಲು ಕರೆ

ಮುಂಬೈ (ಪಿಟಿಐ): ಮುಂದಿನ ಒಂದು ದಶಕದ ಅವಧಿಯಲ್ಲಿ ಭಾರತದ ಒಟ್ಟು ಆಂತರಿಕ ಉತ್ಪಾದನೆಯು (ಜಿಡಿಪಿ) ವಾರ್ಷಿಕ ಶೇ 8ರಿಂದ ಶೇ 10ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಆಸ್ತಿ ನಿರ್ವಹಣಾ ಕ್ಷೇತ್ರದ ಜಾಗತಿಕ ದೈತ್ಯ ‘ಬ್ಲ್ಯಾಕ್‌ರಾಕ್’ ಕಂಪನಿಯ ಸಿಇಒ ಲ್ಯಾರಿ ಫಿಂಕ್ ಭವಿಷ್ಯ ನುಡಿದರು.

ಅಲ್ಲದೆ, ಮುಂದಿನ ಕೆಲವು ವರ್ಷಗಳು ‘ಭಾರತದ ಯುಗ’ವಾಗಲಿದೆ ಎಂದೂ ಅವರು ಹೇಳಿದರು. ಬ್ಲ್ಯಾಕ್‌ರಾಕ್ ಕಂಪನಿಯು ಭಾರತದ ಜಿಯೊ ಫೈನಾನ್ಶಿಯಲ್ ಸರ್ವಿಸಸ್ ಜೊತೆ ಆಸ್ತಿ ನಿರ್ವಹಣೆ ಮತ್ತು ಸಂಪತ್ತು ನಿರ್ವಹಣಾ ಕ್ಷೇತ್ರದಲ್ಲಿ ಪಾಲುದಾರಿಕೆ ಹೊಂದಿದೆ.

ಜನರು ತಮ್ಮಲ್ಲಿನ ಹಣವನ್ನು ಬಂಡವಾಳ ಮಾರುಕಟ್ಟೆಗಳಲ್ಲಿ ತೊಡಗಿಸಬೇಕು, ಹಣವನ್ನು ಅವರು ಬ್ಯಾಂಕ್‌ಗಳಲ್ಲಿ ಠೇವಣಿ ರೂಪದಲ್ಲಿ ಇರಿಸಬಾರದು ಎಂದು ಫಿಂಕ್ ಕರೆ ನೀಡಿದರು.

ಅಮೆರಿಕದ ಉದಾಹರಣೆಯನ್ನು ನೀಡಿದ ಅವರು, ಬಂಡವಾಳ ಮಾರುಕಟ್ಟೆಗಳಲ್ಲಿ ಹಣ ಹೂಡಿಕೆ ಮಾಡಿದವರು ಬ್ಯಾಂಕ್‌ಗಳಲ್ಲಿ ಹಣ ಇರಿಸಿದ್ದವರಿಗಿಂತ ಹೆಚ್ಚು ಲಾಭ ಮಾಡಿಕೊಂಡರು ಎಂದು ಹೇಳಿದರು. ‘ಜಿಯೊ ಬ್ಲ್ಯಾಕ್‌ರಾಕ್’ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಅವರು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಮುಕೇಶ್ ಅಂಬಾನಿ ಅವರ ಜೊತೆ ಸಂವಾದ ನಡೆಸಿದರು. ವಾಣಿಜ್ಯ ವಹಿವಾಟು, ಬೇಡಿಕೆ ಮತ್ತು ಮಾಹಿತಿ ಕ್ಷೇತ್ರದಲ್ಲಿ ಬದಲಾವಣೆ ತರಲು ಭಾರತವು ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡ ಬಗೆಯ ಸ್ಫೂರ್ತಿದಾಯಕ ಎಂದರು.

ಎರಡು ಅಂಕಿಗಳ ಬೆಳವಣಿಗೆ ದರವನ್ನು ದೇಶದಲ್ಲಿ ಕಾಯ್ದುಕೊಳ್ಳಲು ಸಾಧ್ಯವಿದೆ ಎಂದು ಅಂಬಾನಿ ಪ್ರತಿಪಾದಿಸಿದರು.

‘ಭಾರತವು ಹಿಂದಿನಿಂದಲೂ ಹಣ ಉಳಿತಾಯ ಮಾಡುವವರ ದೇಶ. ಆದರೆ ಭಾರತೀಯರು ಹಿಂದಿನ ವರ್ಷದಲ್ಲಿ 60 ಬಿಲಿಯನ್ ಡಾಲರ್‌ಗಿಂತ (₹5.42 ಲಕ್ಷ ಕೋಟಿ) ಹೆಚ್ಚಿನ ಮೊತ್ತವನ್ನು ಚಿನ್ನದ ಮೇಲೆ, 15 ಬಿಲಿಯನ್ ಡಾಲರ್ (₹1.35 ಲಕ್ಷ ಕೋಟಿ) ಮೊತ್ತವನ್ನು ಬೆಳ್ಳಿಯ ಮೇಲೆ ಹೂಡಿಕೆ ಮಾಡಿದ್ದಾರೆ. ಹಣ ಉಳಿತಾಯ ಮಾಡುವ ಮನಃಸ್ಥಿತಿ ಇರುವವರಿಗೆ ಬಂಡವಾಳ ಮಾರುಕಟ್ಟೆಗಳ ಬಗ್ಗೆ ಅರಿವು ಮೂಡಿಸಿ, ಅವರ ಉಳಿತಾಯದ ಹಣವು ಅಲ್ಲಿಗೆ ಬರುವಂತೆ ಮಾಡುವ ಅವಕಾಶ ಜಿಯೊ ಬ್ಲ್ಯಾಕ್‌ರಾಕ್‌ಗೆ ಇದೆ’ ಎಂದು ಅಂಬಾನಿ ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಜಿಯೊ ಫೈನಾನ್ಶಿಯಲ್ ಸರ್ವಿಸಸ್‌ನ ಅಧ್ಯಕ್ಷ ಕೆ.ವಿ. ಕಾಮತ್, ‘ಮ್ಯೂಚುವಲ್ ಫಂಡ್‌ಗಳ ಮೂಲಕ ಹೂಡಿಕೆ ಮಾಡಿರುವ ಮೊತ್ತವು ಈಗ ₹80 ಲಕ್ಷ ಕೋಟಿ ಇರುವುದು ಮುಂದಿನ ಐದು ವರ್ಷಗಳಲ್ಲಿ ದುಪ್ಪಟ್ಟಾಗಲಿದೆ’ ಎಂದರು.

**ಯುವಕರನ್ನು ಪೀಡಿಸುತ್ತಿರುವ ಆನ್‌ಲೈನ್ ಗೇಮ್‌ಗೆ ಮತ್ತಷ್ಟು ಕಡಿವಾಣ ಬೇಕೇ?**

● ಹೌದು ● ಬೇಡ ● ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

**ಅಡಿಕೆ ಧಾರಣೆ**

| ಕುಮಟಾ | |
|---|---|
| ಬೆಟ್ಟೆ | 39069-48199 |
| ಚಾಲಿ | 46899-50509 |
| ಚಿಪ್ಪು | 32029-37089 |
| ಕೋಕ | 15089-34039 |
| ಫ್ಯಾಕ್ಟರಿ | 10189-27129 |
| ಹೊಸಚಾಲಿ | 42099-47099 |
| **ಪುತ್ತೂರು** | |
| ಕೋಕ | 28000-36500 |
| ಹೊಸತು | 26000-46000 |
| ಹಳತು | 50000-53500 |
| **ಶಿವಮೊಗ್ಗ** | |
| ಬೆಟ್ಟೆ | 53099-66199 |
| ಗೊರಬಲು | 19000-41201 |
| ರಾಶಿ | 40009-56500 |
| ಸರಕು | 56500-91009 |
| **ಸಿದ್ದಾಪುರ** | |
| ಬಿಳಿಗೋಟು | 28689-39289 |
| ಚಾಲಿ | 43759-49599 |
| ಕೋಕ | 20699-30189 |
| ಹೊಸಚಾಲಿ | 39109-45699 |
| ಕೆಂಪುಗೋಟು | 30319-36789 |
| ರಾಶಿ | 46509-54299 |
| ತಟ್ಟಿಬೆಟ್ಟೆ | 39099-45699 |
| **ಶಿರಸಿ** | |
| ಬೆಟ್ಟೆ | 36699-51479 |
| ಬಿಳಿಗೋಟು | 26499-41681 |
| ಚಾಲಿ | 40699-47201 |
| ಕೆಂಪುಗೋಟು | 26799-37899 |
| ರಾಶಿ | 50119-56100 |
| **ಯಲ್ಲಾಪುರ** | |
| ಆಪಿ | 65179-70008 |
| ಬಿಳಿಗೋಟು | 16899-34100 |
| ಕೋಕ | 14099-31299 |
| ಹಳೆಚಾಲಿ | 38289-50605 |
| ಹೊಸಚಾಲಿ | 45899-45899 |
| ಕೆಂಪುಗೋಟು | 18099-38509 |
| ರಾಶಿ | 50869-62099 |
| ತಟ್ಟಿಬೆಟ್ಟೆ | 37000-51699 |

# ‘ರಷ್ಯಾ ತೈಲ ಖರೀದಿ ಇಲ್ಲ: ಭಾರತದಿಂದ ವಾಗ್ದಾನ’

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ‘ರಷ್ಯಾದಿಂದ ಇನ್ನು ಮುಂದೆ ತೈಲ ಖರೀದಿ ಮಾಡುವುದಿಲ್ಲ ಎಂಬುದಾಗಿ ಭಾರತ ಹೇಳಿದೆ. ಜೊತೆಗೆ, ಅಮೆರಿಕದ ವಿವಿಧ ಕ್ಷೇತ್ರಗಳಲ್ಲಿ ಅಂದಾಜು 500 ಶತಕೋಟಿ ಡಾಲರ್ (₹45 ಲಕ್ಷ ಕೋಟಿ) ಹೂಡಿಕೆ ಮಾಡುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಒಪ್ಪಿದ್ದಾರೆ’ ಎಂದು ಶ್ವೇತಭವನ ಹೇಳಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕೆರೋಲಿನ್ ಲೀವಿಟ್,‘ಭಾರತದೊಂದಿಗಿನ ವ್ಯಾಪಾರ ಒಪ್ಪಂದದಿಂದ ಅಮೆರಿಕ ಹಾಗೂ ಅಮೆರಿಕದ ಜನತೆಗೆ ಭಾರಿ ಪ್ರಯೋಜನವಾಗಲಿದೆ’ ಎಂದರು.

‘ಸಾರಿಗೆ, ಇಂಧನ, ಕೃಷಿ ಉತ್ಪನ್ನ ಸೇರಿ ಹಲವು ಕ್ಷೇತ್ರಗಳಲ್ಲಿ ಭಾರಿ ಹೂಡಿಕೆಗೆ ಪ್ರಧಾನಿ ನರೇಂದ್ರ ಮೋದಿ ಸಮ್ಮತಿಸಿದ್ದಾರೆ’ ಎಂದು ಹೇಳಿದರು.

‘ಅಮೆರಿಕವು ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳಿಗೆ ಶೇ18ರಷ್ಟು ಸುಂಕ ವಿಧಿಸಲಾಗುತ್ತದೆ. ಅಮೆರಿಕದಿಂದ ತಾನು ಆಮದು ಮಾಡಿಕೊಳ್ಳುವ ಸರಕುಗಳಿಗೆ ಭಾರತವು ಯಾವುದೇ ಸುಂಕ ವಿಧಿಸುವುದಿಲ್ಲ. ಹೀಗಾಗಿ, ಈ ವ್ಯಾಪಾರ ಒಪ್ಪಂದದಿಂದ ಅಮೆರಿಕದ ಉದ್ದಿಮೆಗಳು, ಕೆಲಸಗಾರರು ಹಾಗೂ ಗ್ರಾಹಕರಿಗೆ ದೊಡ್ಡಪ್ರಮಾಣದಲ್ಲಿ ಅನುಕೂಲವಾಗಲಿದೆ’ ಎಂದು ಲೀವಿಟ್ ಹೇಳಿದರು.

### ಭಾರತವು ಯಾರಿಂದ ಬೇಕಿದ್ದರೂ ತೈಲ ಖರೀದಿಸಬಹುದು: ರಷ್ಯಾ

ಮಾಸ್ಕೊ (ಪಿಟಿಐ): ‘ಭಾರತವು ಯಾವುದೇ ದೇಶದಿಂದ ಬೇಕಿದ್ದರೂ ತೈಲ ಖರೀದಿಸಬಹುದು. ಭಾರತಕ್ಕೆ ರಷ್ಯಾ ಮಾತ್ರ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುತ್ತಿಲ್ಲ. ದೇಶವೊಂದು ಯಾರಿಂದ ಬೇಕಿದ್ದರೂ ತೈಲ ಖರೀದಿಸಬಹುದು. ಇದರಲ್ಲಿ ಹೊಸತೇನಿಲ್ಲ’ ಎಂದು ರಷ್ಯಾ ಪ್ರತಿಕ್ರಿಯಿಸಿದೆ.

ರಷ್ಯಾದ ‘ರಾಷ್ಟ್ರೀಯ ಇಂಧನ ಭದ್ರತಾ ನಿಧಿ’ ಸಂಸ್ಥೆಯ ತಜ್ಞರು ಈ ಬಗ್ಗೆ ಪ್ರತಿಕ್ರಿಯಿಸಿ, ‘ರಷ್ಯಾದಿಂದ ತೈಲ ಖರೀದಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸಲು ಭಾರತಕ್ಕೆ ಸಾಧ್ಯವಿಲ್ಲ. ರಷ್ಯಾವು ಭಾರತಕ್ಕೆ ಪ್ರತಿ ದಿನ 15 ಲಕ್ಷ ಬ್ಯಾರಲ್‌ನಿಂದ 20 ಲಕ್ಷ ಬ್ಯಾರೆಲ್ ತೈಲ ರಫ್ತು ಮಾಡುತ್ತದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ತೈಲ ರಫ್ತು ಮಾಡಲು ಅಮೆರಿಕಕ್ಕೆ ಸಾಧ್ಯವೇ ಇಲ್ಲ. ಭಾರತದೊಂದಿಗೆ ವ್ಯಾಪಾರ ಒಪ್ಪಂದ ಕುದುರಿಸಿಕೊಂಡು ಗೆದ್ದು ಬಿಟ್ಟೆ ಎಂದು ಟ್ರಂಪ್ ಬೀಗುತ್ತಿದ್ದಾರೆ. ಅಮೆರಿಕದ ಆಗ್ರಹದ ಮೇರೆಗೇ ಈ ಒಪ್ಪಂದ ನಡೆದಿದೆ’ ಎಂದರು.

# ಮೆಟ್ರೊ: ದರ ಶೇ 5 ಹೆಚ್ಚಳ

ಒಂದನೇ ಪುಟದಿಂದ...

**ಶೇ 101.5ರಷ್ಟು ಹೆಚ್ಚಿಸಿದ್ದ ಬಿಎಂಆರ್‌ಸಿಎಲ್:** ಶೇ 51.55ರಷ್ಟು ಹೆಚ್ಚಳ ಮಾಡುವಂತೆ ದರ ನಿಗದಿ ಸಮಿತಿ ಕಳೆದ ವರ್ಷ ಶಿಫಾರಸು ಮಾಡಿತ್ತು. ಆದರೆ, ಬಿಂಆರ್‌ಸಿಎಲ್ ಶೇ 101.5ರಷ್ಟು ಹೆಚ್ಚಳ ಮಾಡಿ 2025ರ ಫೆ.9 ರಂದು ಜಾರಿ ಮಾಡಿತ್ತು. ಪ್ರಯಾಣಿಕರಿಂದ ವಿರೋಧ ಬಂದಿದ್ದರಿಂದ ಮತ್ತು ಮೆಟ್ರೊ ಪ್ರಯಾಣಿಕರ ಸಂಖ್ಯೆ ದಿಢೀರ್ ಕುಸಿತ ಆಗಿದ್ದರಿಂದ ನಾಲ್ಕು ದಿನಗಳ ಬಳಿಕ ಶೇ 30ರಷ್ಟು ದರ ಇಳಿಸಿದ್ದರಿಂದ ಹೆಚ್ಚಳವು ಶೇ 71.50ರಷ್ಟಾಗಿತ್ತು.

ಇಂಧನ ವೆಚ್ಚ, ಸಿಬ್ಬಂದಿ ವೆಚ್ಚ, ನಿರ್ವಹಣೆ ವೆಚ್ಚ, ಇತರ ವೆಚ್ಚಗಳನ್ನು ಹಿಂದಿನ ವರ್ಷಕ್ಕೆ ಹೋಲಿಸಿ ಎಷ್ಟು ಹೆಚ್ಚಾಗಿದೆ ಎಂಬುದನ್ನು ಲೆಕ್ಕಾಚಾರ ಮಾಡಿ ಅದರ ಸರಾಸರಿಯಂತೆ ಪ್ರಯಾಣ ದರ ಹೆಚ್ಚಿಸಬೇಕು. ಇಲ್ಲವೇ ವಾರ್ಷಿಕ ಶೇ 5ರಷ್ಟು ಹೆಚ್ಚಳ ಮಾಡಬೇಕು. ಈ ಎರಡರಲ್ಲಿ ಕಡಿಮೆ ಯಾವುದೋ ಅದನ್ನೇ ಪಾಲಿಸಬೇಕು ಎಂದು ದರ ನಿಗದಿ ಸಮಿತಿ ತನ್ನ ವರದಿಯಲ್ಲಿ ತಿಳಿಸಿತ್ತು. ಈ ಶಿಫಾರಸು ಅನ್ನು ಮಾತ್ರ ಪಾಲಿಸಲು ಬಿಎಂಆರ್‌ಸಿಎಲ್ ಮುಂದಾಗಿದೆ ಎಂದು ನಮ್ಮ ಮೆಟ್ರೊ ಮೂಲಗಳು ತಿಳಿಸಿವೆ.

### ‘ದುಂದುವೆಚ್ಚ ಕಡಿಮೆ ಮಾಡಿ’

‘ಬಿಎಂಆರ್‌ಸಿಎಲ್‌ನಲ್ಲಿ ದುಂದು ವೆಚ್ಚ ಕಡಿಮೆ ಮಾಡಿದರೆ ಸಾಕು ಪ್ರಯಾಣದರ ಹೆಚ್ಚಳ ಮಾಡಬೇಕಿಲ್ಲ. ಮಾತ್ರವಲ್ಲ. ಈಗಿರುವ ದರವನ್ನೂ ಕಡಿಮೆ ಮಾಡಬಹುದು’ ಎಂದು ಬಿಎಂಆರ್‌ಸಿಎಲ್ ನೌಕರರ ಯೂನಿಯನ್ ಉಪಾಧ್ಯಕ್ಷ ಸೂರ್ಯನಾರಾಯಣ ಮೂರ್ತಿ ತಿಳಿಸಿದರು.

‘₹3 ಲಕ್ಷ ವೇತನವಿದ್ದ ಒಬ್ಬ ಅಧಿಕಾರಿ ತನ್ನ ವೇತನವನ್ನು ₹1.50 ಲಕ್ಷಕ್ಕೂ ಹೆಚ್ಚು ಏರಿಕೆ ಮಾಡಿಸಿಕೊಂಡಿದ್ದಾರೆ. ಇದೇ ರೀತಿ ಕೆಲವು ಅಧಿಕಾರಿಗಳು ವೇತನ ವಿಪರೀತ ಹೆಚ್ಚಳ ಮಾಡಿಕೊಂಡಿದ್ದಾರೆ. ಲೋಕೊ ಪೈಲಟ್, ಎಂಜಿನಿಯರ್ ಸಹಿತ ದುಡಿಯುವ ವರ್ಗಕ್ಕೆ ಈ ರೀತಿ ಹೆಚ್ಚಳ ಮಾಡುತ್ತಿಲ್ಲ. ಬೇರೆ ಬೇರೆ ಇಲಾಖೆಗಳಲ್ಲಿ ನಿವೃತ್ತರಾದ ಸುಮಾರು 300 ಅಧಿಕಾರಿಗಳು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ರೀತಿ ₹10 ಕೋಟಿಯವಷ್ಟು ದುಂದುವೆಚ್ಚ ಮಾಡಲಾಗುತ್ತಿದೆ. ಇದನ್ನೆಲ್ಲ ನಿಯಂತ್ರಿಸುವುದು ಬಿಟ್ಟು ಪ್ರಯಾಣಿಕರ ಮೇಲೆ ಹೊರೆ ಹೊರಿಸಲಾಗುತ್ತಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

**ಪ್ರಜಾವಾಣಿ ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

**ಉದ್ಯೋಗಾವಕಾಶ**

**General**

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ,ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

**Hotel**

ಪುರುಷ ಸಹಾಯಕರು (45 ವರ್ಷದೊಳಗಿನವರು) ತಕ್ಷಣ ಬೇಕಾಗಿದ್ದಾರೆ. ರಾಮನಗರ ಬಳಿಯಿರುವ ರೆಸಾರ್ಟ್‌ಗೆ ಊಟ ವಸತಿಯೊಂದಿಗೆ. ಉತ್ತಮ ಸಂಬಳ. ಸಂಪರ್ಕಿಸಿ: 9945935638

**Part-Time Jobs**

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಆದ್ಯತೆ. 19,000 -25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9964311522, 9742133993

**ಸಮಾಜಸೇವೆ**

**Others**

SP ಸೆಲೆಬ್ರಿಟಿ ವೆಲ್ನೆಸ್ ಮಹಿಳೆಯರ ಉಚಿತ ಸಹಾಯಕ ಕೇಂದ್ರ ಹೆಣ್ಣುಮಕ್ಕಳಿಗೆ ಮನೆಯಲ್ಲಿ ಯಾವುದೇ ರೀತಿ ತೊಂದರೆ ನೀಡುತ್ತಿದ್ದರೆ DowriCase , ಗಂಡನ ಮನೆಯಲ್ಲಿ ಮಾನಸಿಕ ಹಿಂಸೆಗೆ ಒಳಗಾದವರು ಅದಕ್ಕೆ ಸೂಕ್ತ ಸಹಾಯ ಮಾಡಲಾಗುವುದು. ಬೆಂಗಳೂರು 9036316959.

**ಪ್ರವಾಸ**

**Travel**

26.02.2016 ರಿಂದ 15 ದಿನಗಳ ನೇಪಾಳ,ಕಾಶಿ ಮುಕ್ತಿನಾಥ. 20.02.2026 ರಿಂದ 15 ದಿನಗಳ ಭೀಮಾಶಂಕರ್ ಶಿರಡಿ ಓಂಕಾರೇಶ್ವರ ಮಹಾಕಾಳೇಶ್ವರ ದ್ವಾರಕಾ,ಸೋಮನಾಥ್. 13.02.2026 01.04.2026 ರಿಂದ 6 ದಿನಗಳು ಕಾಶಿ,ಗಯಾ,ಅಯೋಧ್ಯ ಪ್ರಯಾಗ್‌ರಾಜ್. 10.04.2026 ರಿಂದ 10 ದಿನಗಳ ಸಿಕ್ಕಿಂ ಡಾರ್ಜಲಿಂಗ್ ಗ್ಯಾಂಗ್‌ಟಾಕ್ ಅಸ್ಸಾಂ,ಗೊಹಾಟಿ ಕಾಮಾಕ್ಯ ಶಕ್ತಿಪೀಠ. 23.04.2026 ಚಾರ್ ಧಾಮ್ ಪ್ರವಾಸ. ಸಂಪರ್ಕಿಸಿ. ಏಷ್ಯಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು. 9342287551 9986624447 9986254573

23.3.2026 ದೆಹಲಿ, ಅಮೃತ್ ಸರ್. ವೈಷ್ಣೋದೇವಿ, ಹರಿದ್ವಾರ, ಅಯೋಧ್ಯೆ,ಕಾಶಿ, ಗಯಾ 13-4-2026 ಅಸ್ಸಾಂ, ಮೇಘಾಲಯ, ಅರುಣಾಚಲಪ್ರದೇಶ್ 26.4.2026 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

**ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ**
ಉಪ ಪ್ರಧಾನ ವ್ಯವಸ್ಥಾಪಕರು–3 ರವರ ಕಛೇರಿ, 1ನೇ ಮಹಡಿ,
ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು – 560052.

No. DGM-3/BSWML/Tend/21/2025-26 Date: 04-02-2025

**ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)**
(ಜಿಒಕೆ ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ಬಿ.ಎಸ್.ಡಬ್ಲ್ಯು.ಎಂ.ಎಲ್, ಬೆಂಗಳೂರು, ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ ಡೆಪ್ಯುಟಿ ಜನರಲ್ ಮ್ಯಾನೇಜರ್–3 ಇವರು ಅರ್ಹ ಟೆಂಡರುದಾರರಿಂದ ಈ ಕೆಳಗೆ ಹೆಸರಿಸುವ ಸೇವೆಗಳಿಗಾಗಿ ಟೆಂಡರುಗಳನ್ನು ಆಹ್ವಾನಿಸಿದ್ದಾರೆ. ಟೆಂಡರುದಾರರು ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ (https://kpss.karnataka.gov.in) ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು.

| ನಂ. | ಸೇವೆಗಳ ವಿವರ | ಸೇವಗಳ ಅಂದಾಜು ಮೊತ್ತ (ಲಕ್ಷಗಳಲಿ ರೂ.ಗಳಲ್ಲಿ) | ಅವಧಿ | ಇ.ಎಂ.ಡಿ. ಮೊತ್ತ ರೂ. ಗಳಲ್ಲಿ |
|---|---|---|---|---|
| 01 | ಸಾಮರ್ಥ್ಯವೃದ್ಧಿ ಕಾರ್ಯಕ್ರಮದ ಭಾಗವಾಗಿ ಪೌರಕಾರ್ಮಿಕರಿಗೆ ಅನುಭವಾತ್ಮಕ ಭೇಟಿ ಒದಗಿಸುವುದು. | 489.34 | 06 ತಿಂಗಳು | 7,34,010.00 |
| 02 | ಸಾಮರ್ಥ್ಯವೃದ್ಧಿ ಕಾರ್ಯಕ್ರಮದ ಭಾಗವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತಾಂತ್ರಿಕ ಅಧಿಕಾರಿಗಳಿಗೆ ಅನುಭವಾತ್ಮಕ ಭೇಟಿ ಒದಗಿಸುವುದು. | 140.17 | 06 ತಿಂಗಳು | 2,10,255.00 |

ವೇಳಾಪಟ್ಟಿ :
1). ಬಿಡ್ ಸಲ್ಲಿಕೆಗೆ ಮುನ್ನ ಕೆಪಿಪಿ ಪೋರ್ಟಲ್ ನಲ್ಲಿ ಪ್ರಶ್ನೆಗಳನ್ನು ಅಪ್ ಲೋಡ್ ಮಾಡಲು ಕೊನೆಯ ದಿನಾಂಕ: 10.02.2026ರ 15.00 ಗಂಟೆಯವರೆಗೆ, 2). ಬಿಡ್ ಪೂರ್ವಭಾವಿ ಸಭೆ: 11.02.2026ರ 15.00 ಗಂಟೆಗೆ, ಸಿಇ & ಸಿಜಿಎಂ (ತಾಂತ್ರಿಕ), ಬಿ ಎಸ್ ಡಬ್ಲ್ಯು ಎಂ ಎಲ್, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು, ಈ ವಿಳಾಸ ದಲ್ಲಿರುವ ಕಚೇರಿಯಲ್ಲಿ, 3). ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 16.02.2026ರ 16.00 ಗಂಟೆಯವರೆಗೆ
4). ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17.06.2026ರ 16.30 ಗಂಟೆಗೆ, 5). ಆರ್ಥಿಕ ಬಿಡ್ ಗಳನ್ನು ತೆರೆಯುವ ದಿನಾಂಕವನ್ನು ತಾಂತ್ರಿಕವಾಗಿ ಅರ್ಹರಾದ ಬಿಡ್ ದಾರರಿಗೆ ಮುಂದೆ ತಿಳಿಸಲಾಗುವುದು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–3
ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
DIPR/CP/5434/NR/2025-26

# ‘ಪಶ್ಚಿಮ ಬಂಗಾಳವೇ ಗುರಿ’

ಒಂದನೇ ಪುಟದಿಂದ...

ಮಮತಾ ಬ್ಯಾನರ್ಜಿ ಅವರ ಮೇಲ್ಮನವಿ ಪರಿಗಣಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠವು, ಫೆಬ್ರುವರಿ 9ರ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸುವಂತೆ ಚುನಾವಣಾ ಆಯೋಗ ಹಾಗೂ ಪಶ್ಚಿಮ ಬಂಗಾಳದ ಮುಖ್ಯ ಚುನಾವಣಾ ಅಧಿಕಾರಿಗೆ ನೋಟಿಸ್ ಜಾರಿ ಮಾಡಿತು.

ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಎಂ.ಪಂಚೋಲಿ ಕೂಡ ಈ ಪೀಠದಲ್ಲಿದ್ದಾರೆ. ಅಪರೂಪವೆಂಬಂತೆ ಹಾಗೂ ಇದೇ ಮೊದಲ ಬಾರಿಗೆ ಹಾಲಿ ಮುಖ್ಯಮಂತ್ರಿಯೊಬ್ಬರು ಖುದ್ದು ಹಾಜರಾಗಿ ವಾದ ಮಂಡನೆ ಮಾಡಿರುವುದಕ್ಕೆ ಸುಪ್ರೀಂ ಕೋರ್ಟ್ ಸಾಕ್ಷಿಯಾಯಿತು.

ಮಮತಾ ಬ್ಯಾನರ್ಜಿ ಪರ ಹಿರಿಯ ವಕೀಲ ಶ್ಯಾಮ್ ದಿವಾನ್ ವಾದ ಮಂಡಿಸಿದರೂ, ಪೂರಕ ನಿವೇದನೆಗಳನ್ನು ಅರುಹಲು ಅವರಿಗೆ ಪೀಠವು ಅನುಮತಿ ನೀಡಿತು. ಅವರು ಫೆ.9ರಂದು ನ್ಯಾಯಾಲಯಕ್ಕೆ ಪುನಃ ಹಾಜರಾಗಿ, ವಾದ ಮಂಡಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ವಿಚಾರಣೆ ವೇಳೆ, ‘ಎಸ್‌ಐಆರ್ ಕುರಿತು ಚುನಾವಣಾ ಆಯೋಗಕ್ಕೆ ನಾನು 6 ಪತ್ರಗಳನ್ನು ಬರೆದಿರುವೆ. ನಮಗೆ ಎಲ್ಲಿಯೂ ನ್ಯಾಯ ಸಿಗುತ್ತಿಲ್ಲ. ಈ ಕಾರಣಕ್ಕೆ ಈಗ ಸುಪ್ರೀಂ ಕೋರ್ಟ್ ಮೆಟ್ಟಿಲೇರಿರುವೆ’ ಎಂದು ಮಮತಾ ಬ್ಯಾನರ್ಜಿ ಹೇಳಿದರು.

‘ದೊಡ್ಡ ಸಂಖ್ಯೆಯ ಮತದಾರರ ಹೆಸರುಗಳ ಪರಿಷ್ಕರಣೆ ಹಾಗೂ ಹೊಂದಾಣಿಕೆ ಪ್ರಕ್ರಿಯೆ ಬಾಕಿ ಇದೆ. ಫೆಬ್ರುವರಿ 14ರ ಒಳಗಾಗಿ ಈ ಕಾರ್ಯ ಪೂರ್ಣಗೊಳ್ಳಬೇಕಿರುವ ಕಾರಣ, ನೈಜ ಮತದಾರರ ಹೆಸರು ಪಟ್ಟಿಯಿಂದ ಕೈಬಿಟ್ಟು ಹೋಗುವ ಅಪಾಯ ಇದೆ’ ಎಂದು ವಕೀಲ ದಿವಾನ್ ಹೇಳಿದರು.

‘ಚುನಾವಣಾ ಆಯೋಗವು 1.36 ಕೋಟಿ ಮತದಾರರಿಗೆ ನೋಟಿಸ್ ನೀಡಿದೆ. ಈ ಮತದಾರರಿಗೆ ಸಂಬಂಧಿಸಿ ‘ಹೆಸರು ಹೊಂದಾಣಿಕೆ ಸಮಸ್ಯೆ’ ಕಾರಣಗಳಿಂದಾಗಿ ನೋಟಿಸ್ ನೀಡಲಾಗಿದೆ ಎಂದು ಆಯೋಗ ತಿಳಿಸಿದೆ. ಹೆಸರಿನಲ್ಲಿನ ವ್ಯತ್ಯಾಸಗಳಿಗಾಗಿ ಹೆಚ್ಚು ಜನರಿಗೆ ನೋಟಿಸ್ ನೀಡಲಾಗಿದೆ. ಆದರೆ, ಈ ದೋಷಗಳನ್ನು ಸುಲಭವಾಗಿ ಸರಿಪಡಿಸಲು ಸಾಧ್ಯವಿದೆ’ ಎಂದು ದಿವಾನ್ ವಾದಿಸಿದರು.

ಬಂಗಾಳಿ ಹಾಗೂ ಅದರ ಉಪ ಭಾಷೆಯೊಂದನ್ನು ಉಲ್ಲೇಖಿಸಿದ ಸಿಜೆಐ ಸೂರ್ಯಕಾಂತ್, ಭಾಷೆಯಲ್ಲಿನ ಈ ವ್ಯತ್ಯಾಸದಿಂದಾಗಿ ಹೆಸರಿನಲ್ಲಿ ತಪ್ಪು ನುಸುಳಿರಬಹುದು ಎಂದರು.

‘ಈಗ ನಡೆಯುತ್ತಿರುವ ಎಸ್‌ಐಆರ್ ವೇಳೆ ವಲಸೆಯನ್ನೂ ಪರಿಗಣಿಸಲಾಗುತ್ತಿದೆ. ಆದಾಗ್ಯೂ, ಮತದಾರರ ಪಟ್ಟಿಯಿಂದ ನೈಜ ಮತದಾರರ ಹೆಸರು ಕೈಬಿಟ್ಟು ಹೋಗಬಾರದು’ ಎಂದು ಹೇಳಿದರು.

‘ಎಸ್‌ಐಆರ್ ಭಾಗವಾಗಿ ಆಧಾರ್ ಹಾಗೂ ಇತರ ದಾಖಲೆಗಳನ್ನು ಚುನಾವಣಾ ಆಯೋಗ ಪರಿಗಣಿಸುತ್ತಿಲ್ಲ. ಎಷ್ಟೋ ಜನರು ಜೀವಂತವಾಗಿದ್ದಾರೆ. ಆದರೆ, ಅವರು ಮೃತಪಟ್ಟಿದ್ದಾಗಿ ಘೋಷಿಸಲಾಗಿದೆ’ ಎಂದು ಮಮತಾ ಬ್ಯಾನರ್ಜಿ ಆರೋಪಿಸಿದರು.

ಇದಕ್ಕೆ ಚುನಾವಣಾ ಆಯೋಗದ ಪರ ಹಾಜರಿದ್ದ ಹಿರಿಯ ವಕೀಲ ರಾಕೇಶ್ ದ್ವಿವೇದಿ, ‘ರಾಜ್ಯ ಸರ್ಕಾರ ಗ್ರೇಡ್–2 ಶ್ರೇಣಿಯ 80 ಅಧಿಕಾರಿಗಳನ್ನು ಒದಗಿಸಿದೆ. ಅಂಗನವಾಡಿ ಕಾರ್ಯಕರ್ತರಂತಹ ಕೆಳ ಹಂತದ ನೌಕರರನ್ನು ಪರಿಷ್ಕರಣೆ ಕಾರ್ಯಕ್ಕೆ ಒದಗಿಸಿದೆ’ ಎಂದರು.

‘ಚುನಾವಣಾ ಆಯೋಗ ಕೇಳಿದಂತೆಯೇ, ಎಸ್‌ಐಆರ್ ಕಾರ್ಯಕ್ಕೆ ಸಿಬ್ಬಂದಿಯನ್ನು ಒದಗಿಸಲಾಗಿದೆ’ ಎಂದು ಮಮತಾ ಬ್ಯಾನರ್ಜಿ ಪ್ರತಿಕ್ರಿಯಿಸಿದರು.

### ಮಮತಾ ಬೇಡಿಕೆಗಳೇನು?

- ಎಸ್‌ಐಆರ್ ನಡೆಸುವ ಕುರಿತು ಚುನಾವಣಾ ಆಯೋಗ 2025ರ ಜೂನ್ 24 ಹಾಗೂ ಅಕ್ಟೋಬರ್ 27ರಂದು ಹೊರಡಿಸಿರುವ ಆದೇಶಗಳನ್ನು ರದ್ದುಗೊಳಿಸಬೇಕು
- ಅರ್ಜಿಗಳ ಪರಿಶೀಲನಾ ಜವಾಬ್ದಾರಿಯಿಂದ ಸೂಕ್ಷ್ಮ ವೀಕ್ಷಕರನ್ನು ಮುಕ್ತಗೊಳಿಸಬೇಕು
- ಅಂತರರಾಜ್ಯ ವಲಸೆ ಪ್ರಕರಣಗಳ ಇತ್ಯರ್ಥಕ್ಕಾಗಿ ಸ್ಥಳೀಯ ಚುನಾವಣಾ ನೋಂದಣಿ ಅಧಿಕಾರಿಗಳಿಗೆ (ಇಆರ್‌ಒ) ಅಧಿಕಾರ ನೀಡಬೇಕು
- ರಾಜ್ಯ ಸರ್ಕಾರ ನೀಡಿರುವ ದಾಖಲೆಗಳನ್ನು ಪರಿಗಣಿಸುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಬೇಕು

### ಮುಗಿಬಿದ್ದ ವಕೀಲರು, ದಾವೆದಾರರು...

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಖುದ್ದು ಹಾಜರಾಗಿ ವಾದ ಮಂಡಿಸುತ್ತಿದ್ದುದನ್ನು ನೋಡುವುದಕ್ಕಾಗಿ ಸಿಜೆಐ ಅವರ ನ್ಯಾಯಾಲಯ ಸಭಾಂಗಣದಲ್ಲಿ ಬಹಳ ಜನ ವಕೀಲರು ಹಾಗೂ ದಾವೆದಾರರು ಮುಗಿಬಿದ್ದಿದ್ದ ದೃಶ್ಯ ಕಂಡುಬಂತು.

# ಒಂದೇ ಭಾಗದಲ್ಲಿ ವಾರಾಣಸಿ

ಪ್ರಿಯಾಂಕ ಚೋಪ್ರಾ, ಮಹೇಶ್ ಬಾಬು

ಬೃಹತ್ ಬಜೆಟ್‌ನ ದೊಡ್ಡ ಸಿನಿಮಾಗಳು ಎರಡು, ಮೂರು ಭಾಗಗಳಲ್ಲಿ ಬರುವುದು ಇತ್ತೀಚಿನ ಟ್ರೆಂಡ್. ಒಂದು ಶೀರ್ಷಿಕೆ ಹಿಟ್ ಆದರೆ ಅದನ್ನು ಫ್ರಾಂಚೈಸಿಯಾಗಿಸಿಕೊಂಡು ಪ್ರೀಕ್ವೆಲ್, ಸೀಕ್ವೆಲ್‌ಗಳನ್ನು ಮಾಡುವುದು ಹಾಲಿವುಡ್‌ನಲ್ಲಿ ಸಾಮಾನ್ಯ ರೂಢಿ. ಅದು ಭಾರತೀಯ ಚಿತ್ರರಂಗಕ್ಕೂ ಕಾಲಿಟ್ಟು ಕೆಲ ವರ್ಷಗಳಾಗಿವೆ. ಆದರೆ, ಮಹೇಶ್ ಬಾಬು ನಟನೆಯ 'ವಾರಾಣಸಿ' ಒಂದೇ ಭಾಗದಲ್ಲಿ ಬರಲಿದ್ದು, 3 ಗಂಟೆ ಅವಧಿಯ ಚಿತ್ರ ಎಂದು ನಿರ್ದೇಶಕ ಎಸ್.ಎಸ್.ರಾಜಮೌಳಿ ಹೇಳಿದ್ದಾರೆ.

ಇತ್ತೀಚೆಗೆ ಖಾಸಗಿ ಸಂದರ್ಶನವೊಂದರಲ್ಲಿ ಮಾತನಾಡಿರುವ ಅವರು, ಚಿತ್ರದ ಕುರಿತು ಸಾಕಷ್ಟು ಮಾಹಿತಿಯನ್ನು ಹಂಚಿಕೊಂಡಿದ್ದಾರೆ. 'ಚಿತ್ರೀಕರಣ ಪ್ರಗತಿಯಲ್ಲಿದ್ದು, ಏ.7,2027ರಂದು ಚಿತ್ರ ತೆರೆಗೆ ಬರಲಿದೆ. ಮೊದಲು ಚಿತ್ರವನ್ನು ಎರಡು ಭಾಗಗಳಲ್ಲಿ ತೆರೆಗೆ ತರುವ ಆಲೋಚನೆ ಇತ್ತು. ಆದರೆ ಆ ಆಲೋಚನೆಗೆ ಈಗ ಸ್ಪಷ್ಟತೆ ಸಿಕ್ಕಿದ್ದು, ಒಂದೇ ಭಾಗದಲ್ಲಿ ಚಿತ್ರ ಮೂಡಿಬರಲಿದೆ. ಶೀಘ್ರದಲ್ಲಿಯೇ ಚಿತ್ರೀಕರಣ ಕೂಡ ಮುಕ್ತಾಯಗೊಳ್ಳಲಿದೆ' ಎಂದು ಅವರು ತಿಳಿಸಿದ್ದಾರೆ.

'ಆರ್‌ಆರ್‌ಆರ್' ಬಳಿಕ ನಿರ್ದೇಶಕ ಎಸ್.ಎಸ್.ರಾಜಮೌಳಿ ನಟ ಮಹೇಶ್ ಬಾಬು ಅವರಿಗೆ ಆ್ಯಕ್ಷನ್ ಕಟ್ ಹೇಳುತ್ತಿರುವ ಚಿತ್ರವಿದು. ಇದೊಂದು ಪೌರಾಣಿಕ ಹಿನ್ನೆಲೆಯ ಫ್ಯಾಂಟಸಿ ಚಿತ್ರವಾಗಿದ್ದು, ಶ್ರೀ ದುರ್ಗಾ ಆರ್ಟ್ಸ್ ಮತ್ತು ಶೋಯಿಂಗ್ ಬಿಝಿನೆಸ್ ಸಂಸ್ಥೆಗಳಡಿ ಕೆ.ಎಲ್.ನಾರಾಯಣ ಮತ್ತು ಎಸ್.ಎಸ್. ಕಾರ್ತಿಕೇಯ ಈ ಸಿನಿಮಾವನ್ನು ನಿರ್ಮಿಸುತ್ತಿದ್ದಾರೆ. ಸುಮಾರು ₹1300 ಕೋಟಿ ಬಜೆಟ್‌ನ ಚಿತ್ರ ಎಂದು ಅಂದಾಜಿಸಲಾಗಿದೆ. ಪ್ರಿಯಾಂಕ ಚೋಪ್ರಾ ಹಾಗೂ ಪೃಥ್ವಿರಾಜ್ ಸುಕುಮಾರನ್ ತಾರಾಬಳಗದಲ್ಲಿದ್ದಾರೆ.

ಚಿತ್ರಕ್ಕೆ ರಾಜಮೌಳಿ ತಂದೆ ವಿಜಯಪ್ರಸಾದ್ ಕಥೆ-ಚಿತ್ರಕಥೆ ರಚಿಸಿದ್ದು, ಎಂ.ಎಂ. ಕೀರವಾಣಿ ಸಂಗೀತ ಸಂಯೋಜಿಸಲಿದ್ದಾರೆ. ಮಹೇಶ್ ಬಾಬು 'ರುದ್ರ' ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಪ್ರಿಯಾಂಕ ಚೋಪ್ರಾ ಮತ್ತು ಪೃಥ್ವಿರಾಜ್ ಸುಕುಮಾರನ್ ಕ್ರಮವಾಗಿ 'ಮೋಹಿನಿ' ಮತ್ತು 'ಕುಂಭ' ಎಂಬ ಪಾತ್ರಗಳನ್ನು ನಿರ್ವಹಿಸಲಿದ್ದಾರೆ.

'ಹಲವು ವರ್ಷಗಳ ನಂತರ ಪ್ರಿಯಾಂಕ ಚೋಪ್ರಾ ಭಾರತೀಯ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಅವರಿಗೆ ಈ ಸಂಕೀರ್ಣ ಪಾತ್ರ ನೀಡುವ ಕುರಿತು ಮೊದಲು ಸ್ವಲ್ಪ ಗೊಂದಲವಿತ್ತು. ಆದರೆ ಈಗ ಅವರೇ ಈ ಪಾತ್ರಕ್ಕೆ ಸೂಕ್ತ ಎನ್ನಿಸಿದೆ' ಎಂಬುದಾಗಿಯೂ ರಾಜಮೌಳಿ ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ.

# ಜೀ5ನಲ್ಲಿ 'ಜೈ' ಸಿನಿಮಾ

'ಬಿಗ್‌ಬಾಸ್' ಖ್ಯಾತಿಯ ನಟ ರೂಪೇಶ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಜೈ' ಎಂಬ ತುಳು–ಕನ್ನಡ ಸಿನಿಮಾ ಫೆ.6ರಿಂದ ಜೀ5 ಒಟಿಟಿ ವೇದಿಕೆಯಲ್ಲಿ ಸ್ಟ್ರೀಮ್ ಆಗಲಿದೆ.

ಇದೊಂದು ಆ್ಯಕ್ಷನ್ ಡ್ರಾಮಾ ಚಿತ್ರವಾಗಿದೆ. 'ಸತ್ಯ' ಎಂಬ ಸಿಂಹಬೆಟ್ಟು ಹಳ್ಳಿಯ ವ್ಯಕ್ತಿಯ ಕಥೆ ಸಿನಿಮಾದಲ್ಲಿದ್ದು ತನ್ನ ಸಮುದಾಯದ ಸಮಸ್ಯೆಗಳನ್ನು ಎತ್ತಿ ಹಿಡಿಯವ ಆತ ಅವುಗಳನ್ನು ಬಗೆಹರಿಸಲು ಮಾಡುವ ಹೋರಾಟ, ಮುಂತಾದವುಗಳನ್ನು ಚಿತ್ರ ಬಿಚ್ಚಿಟ್ಟಿದೆ. ಚಿತ್ರದಲ್ಲಿ ರೂಪೇಶ್ ಶೆಟ್ಟಿ ಅವರಿಗೆ ಜೋಡಿಯಾಗಿ ಅದ್ವಿತಿ ಶೆಟ್ಟಿ ನಟಿಸಿದ್ದಾರೆ. ಕರಾವಳಿಯಿಂದಲೇ ಬಂದಿರುವ ಅದ್ವಿತಿಗೆ ಈ ಸಿನಿಮಾ ಮೊದಲ ತುಳು ಸಿನಿಮಾವಾಗಿದೆ. ಪತ್ರಕರ್ತೆಯಾಗಿ ಅದ್ವಿತಿ ಶೆಟ್ಟಿ ಬಣ್ಣಹಚ್ಚಿದ್ದಾರೆ. ರಾಜ್ ದೀಪಕ್ ಶೆಟ್ಟಿ, ಅರವಿಂದ್ ಬೋಳಾರ್, ದೇವದಾಸ್ ಕಾಪಿಕಾಡ್, ನವೀನ್ ಡಿ.ಪಡೀಲ್, ಭೋಜರಾಜ್ ವಾಮಂಜೂರ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರದಲ್ಲಿ ಖ್ಯಾತ ಬಾಲಿವುಡ್ ನಟ ಸುನಿಲ್ ಶೆಟ್ಟಿ ನಟಿಸಿರುವುದು ವಿಶೇಷ. ಇದು ಅವರ ಮೊದಲ ತುಳು ಸಿನಿಮಾ.

ಆರ್.ಎಸ್ ಸಿನಿಮಾಸ್, ಶೂಲಿನ್ ಫಿಲಂಸ್, ಮುಗ್ರೋಡಿ ಪ್ರೊಡಕ್ಷನ್ ಲಾಂಛನದಲ್ಲಿ ಅನಿಲ್ ಶೆಟ್ಟಿ, ಸುಧಾಕರ ಶೆಟ್ಟಿ ಮುಗ್ರೋಡಿ, ಮಂಜುನಾಥ ಅತ್ತಾವರ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಕಯಾದು

# ಟೊವಿನೋಗೆ ಕಯಾದು ಜೋಡಿ

**ಮಲಯಾಳ** ನಟ ಟೊವಿನೋ ಥಾಮಸ್ ನಟನೆಯ ಹೊಸ ಸಿನಿಮಾ 'ಪಳ್ಳಿಚಟ್ಟಂಬಿ' ಏ.9ರಂದು ಬಿಡುಗಡೆಯಾಗುತ್ತಿದ್ದು, ಸಿನಿಮಾದಲ್ಲಿ ಟೊವಿನೋಗೆ ಕಯಾದು ಲೋಹರ್ ಜೋಡಿಯಾಗಿದ್ದಾರೆ.

ಚಿತ್ರತಂಡ ಅವರ ಪಾತ್ರದ ಲುಕ್ ಬಿಡುಗಡೆ ಮಾಡಿದೆ. ವಿಂಟೇಜ್ ಲುಕ್‌ನಲ್ಲಿ ಅವರಿಲ್ಲಿ ಕಾಣಿಸಿಕೊಂಡಿದ್ದಾರೆ. ಡಿಜೋ ಜೋಸ್ ಆಂಟೋನಿ ನಿರ್ದೇಶನದ 'ಪಳ್ಳಿಚಟ್ಟಂಬಿ' ಸಿನಿಮಾ ಮಲಯಾಳ, ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ತೆರೆಕಾಣುತ್ತಿದೆ.

ವರ್ಲ್ಡ್ ವೈಡ್ ಫಿಲ್ಮ್ಸ್ ಮತ್ತು ಸಿ ಕ್ಯೂಬ್ ಬ್ರದರ್ಸ್ ಎಂಟರ್‌ಟೇನ್ಮೆಂಟ್ ಬ್ಯಾನರ್‌ನಡಿ ಈ ಸಿನಿಮಾವನ್ನು ನೌಫಲ್ ಮತ್ತು ಬ್ರಿಜೇಶ್ ನಿರ್ಮಿಸಿದ್ದಾರೆ. ವಿಜಯ ರಾಘವನ್, ಸುಧೀರ್ ಕರಮನ, ಬಾಬುರಾಜ್, ವಿನೋದ್ ಕೆದಮಂಗಲಂ, ಪ್ರಶಾಂತ್ ಅಲೆಕ್ಸಾಂಡರ್ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ. 1950-60ರ ದಶಕದ ಸುತ್ತ ಕಥೆಯನ್ನು ಹೆಣೆಯಲಾಗಿದೆ.

## ಚಟಕೆ ಸುದ್ದಿ

### ಒಡಿಶಾ: ಮತ್ತೊಂದು ಜಿಲ್ಲೆ 'ನಕ್ಸಲ್ ಮುಕ್ತ'

ಮಾಲ್ಕಾನಗಿರಿ (ಒಡಿಶಾ) (ಪಿಟಿಐ): ನಕ್ಸಲ್ ನಾಯಕ ಸುಕರಾಮ್ ಮಾರ್ಕಮ್ ಪೊಲೀಸರ ಮುಂದೆ ಶರಣಾಗುವುದರೊಂದಿಗೆ ನಕ್ಸಲರ ತಾಣವೆಂದು ಪರಿಗಣಿಸಲಾಗಿದ್ದ ಒಡಿಶಾದ ಮಾಲ್ಕಾನಗಿರಿಯನ್ನು ಬುಧವಾರ 'ನಕ್ಸಲ್‌ಮುಕ್ತ' ಜಿಲ್ಲೆ ಎಂದು ಘೋಷಿಸಲಾಯಿತು.

ನೆರೆಯ ಛತ್ತೀಸಗಢದಲ್ಲಿ ಒಂಬತ್ತು ನಕ್ಸಲರು ಇತ್ತೀಚೆಗೆ ಶರಣಾದ ನಂತರ ಒಡಿಶಾದ ನಬರಂಗಪುರ ಜಿಲ್ಲೆಯನ್ನು ನಕ್ಸಲ್‌ಮುಕ್ತ ಎಂದು ಘೋಷಿಸಲಾಗಿತ್ತು.

ನಿಷೇಧಿತ ಸಿಪಿಐ (ಮಾವೋವಾದಿ) ಸಂಘಟನೆಯ ಪ್ರದೇಶ ಸಮಿತಿ ಸದಸ್ಯರಾಗಿದ್ದ ಮಾರ್ಕಮ್ ಒಂದು ಎಸ್‌ಎಲ್‌ಆರ್ ರೈಫಲ್, ಮದ್ದುಗುಂಡುಗಳು ಮತ್ತು ಇತರ ಶಸ್ತ್ರಾಸ್ತ್ರದೊಂದಿಗೆ ಶರಣಾಗಿದ್ದಾರೆ ಎಂದು ಮಾಲ್ಕಾನಗಿರಿ ಎಸ್‌ಪಿ ಹೇಳಿದ್ದಾರೆ.

ರಾಜ್ಯ ಸರ್ಕಾರದ ಪುನರ್‌ವಸತಿ ನೀತಿಯಡಿಯಲ್ಲಿ ನೀಡಲಾಗುವ ಎಲ್ಲಾ ಪ್ರಯೋಜನಗಳನ್ನು ಮಾರ್ಕಮ್ ಪಡೆಯಲಿದ್ದಾರೆ ಎಂದು ಅವರು ತಿಳಿಸಿದ್ದಾರೆ. ಅವರ ಸುಳಿವು ನೀಡಿದವರಿಗೆ ₹21 ಲಕ್ಷ ಬಹುಮಾನ ಘೋಷಿಸಲಾಗಿತ್ತು.

### ವಾಂಗ್ಚುಕ್ ಆರೋಗ್ಯ ಹದಗೆಟ್ಟಿದೆ: 'ಸುಪ್ರೀಂ'

ನವದೆಹಲಿ (ಪಿಟಿಐ): 'ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರ ಆರೋಗ್ಯವು ತೀರಾ ಹದಗೆಟ್ಟಿದೆ. ಆದ್ದರಿಂದ, ಅವರ ಬಂಧನದ ಕುರಿತು ಇನ್ನೊಮ್ಮೆ ಯೋಚಿಸಿ' ಎಂದು ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಬುಧವಾರ ಆಗ್ರಹಿಸಿದೆ.

'ವಾಂಗ್ಚುಕ್ ಅವರ ಆರೋಗ್ಯ ಕುರಿತ ವರದಿ ನೋಡಿದ್ದೇವೆ. ಅವರ ಆರೋಗ್ಯವು ತೀರಾ ಹದಗೆಟ್ಟಿದೆ' ಎಂದು ನ್ಯಾಯಮೂರ್ತಿಗಳಾದ ಅರವಿಂದ ಕುಮಾರ್ ಮತ್ತು ಪಿ.ಬಿ. ವರಾಳೆ ಅವರ ಪೀಠವು ಅಭಿಪ್ರಾಯಪಟ್ಟಿತು.

'ಎಲ್ಲ ಸಾಕ್ಷ್ಯಗಳು, ವಾದ–ಪ್ರತಿವಾದಗಳು, ಕಾನೂನಿನ ವಿಚಾರಗಳು ಎಲ್ಲವೂ ಸರಿ. ಆದರೆ, ಆರೋಗ್ಯದ ಕುರಿತು ಒಮ್ಮೆ ಯೋಚಿಸಿ. ವಯೋಸಹಜ ಆರೋಗ್ಯ ಸಮಸ್ಯೆ ಇರಬಹುದು ಅಥವಾ ಬೇರೆ ಯದೇ ಇರಬಹುದು. ಇನ್ನೊಮ್ಮೆ ಈ ಬಗ್ಗೆ ಯೋಚಿಸಬಹುದೇ?' ಎಂದು ಪೀಠವು ಕೇಂದ್ರ ಸರ್ಕಾರವನ್ನು ಕೇಳಿತು.

ಕೇಂದ್ರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ಪ್ರತಿಕ್ರಿಯಿಸಿ, 'ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಲಾಗುವುದು' ಎಂದರು.

### ಎಂಜಿನ್ ವೈಫಲ್ಯ: ತುರ್ತು ಭೂ ಸ್ಪರ್ಶ

ಕೋಲ್ಕತ್ತ (ಪಿಟಿಐ): ವಿಮಾನದ ಬಲ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದರಿಂದ ಟರ್ಕಿ ಏರ್‌ಲೈನ್ಸ್‌ನ ವಿಮಾನವೊಂದು ಕೋಲ್ಕತ್ತದ ನೇತಾಜಿ ಸುಭಾಷ್‌ಚಂದ್ರ ಬೋಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬುಧವಾರ ತುರ್ತು ಭೂಸ್ಪರ್ಶ ಮಾಡಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ.



ಪ್ರಯಾಣಿಕರಿಗೆ ಗಾಯಗಳಾದ ಕುರಿತು ಯಾವುದೇ ವರದಿ ಬಂದಿಲ್ಲ. ವಿಮಾನವು ಕಠ್ಮಂಡುವಿನಿಂದ ಇಸ್ತಾಂಬುಲ್‌ಗೆ ಹೊರಟಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಖೇಮಚಂದ್ ಮಣಿಪುರ ಮುಖ್ಯಮಂತ್ರಿ

## ಉಪ ಮುಖ್ಯಮಂತ್ರಿಗಳಾಗಿ ನೆಮ್ಚಾ ಕಿಪ್ಗೆನ್, ಎಲ್. ದಿಖೊ ಪ್ರಮಾಣವಚನ ಸ್ವೀಕಾರ

ಇಂಫಾಲ್ (ಪಿಟಿಐ): ಬಿಜೆಪಿ ನಾಯಕ ವೈ.ಖೇಮಚಂದ್ ಸಿಂಗ್ (62) ಅವರು ಮಣಿಪುರದ ಮುಖ್ಯಮಂತ್ರಿಯಾಗಿ ಬುಧವಾರ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ, ಸಿಂಗ್ ಅವರಿಗೆ ಪ್ರಮಾಣವಚನ ಬೋಧಿಸಿದರು.

ಇದೇ ವೇಳೆ ಕುಕಿ ಸಮುದಾಯದ ಮಹಿಳಾ ನಾಯಕಿ, ಬಿಜೆಪಿ ಶಾಸಕಿ ನೆಮ್ಚಾ ಕಿಪ್ಗೆನ್ ಹಾಗೂ ನಾಗಾ ಪೀಪಲ್ಸ್ ಫ್ರಂಟ್‌ನ ಶಾಸಕರಾದ ಎಲ್. ದಿಖೊ ಅವರೂ ರಾಜ್ಯದ ಉಪ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಬಿಜೆಪಿಯ ಗೋವಿಂದಾಸ್ ಕೊಂಥೌಜಾಮ್ ಹಾಗೂ ಎನ್‌ಪಿಪಿಯ ಲೋಕೆನ್ ಸಿಂಗ್ ಅವರೂ ಸಚಿವರಾಗಿ ಪದಗ್ರಹಣಗೊಂಡಿದ್ದಾರೆ. ಕಿಪ್ಗೆನ್ ಅವರು ನವದೆಹಲಿಯಲ್ಲಿರುವ ಮಣಿಪುರ ಭವನದಿಂದಲೇ ವರ್ಚುವಲ್ ಆಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

ಇಲ್ಲಿನ ಲೋಕಭವನದಲ್ಲಿ ಪ್ರಮಾಣವಚನ ಸಮಾರಂಭ ನಡೆದಿದ್ದು, ಬಿಜೆಪಿಯ ಶಾಸಕರು, ಪದಾಧಿಕಾರಿಗಳು ಹಾಗೂ ರಾಜ್ಯದಲ್ಲಿರುವ ಎನ್‌ಡಿಎ ಮೈತ್ರಿಕೂಟದ ಹಿರಿಯ ನಾಯಕರು ಪಾಲ್ಗೊಂಡಿದ್ದರು. ಬಿಜೆಪಿ ಕೇಂದ್ರ ಕಚೇರಿಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಖೇಮಚಂದ್ ಅವರನ್ನು ಬಿಜೆಪಿ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲಾಗಿತ್ತು ಎಂಬುದು ಗಮನಾರ್ಹ.

ಪದಗ್ರಹಣ ಸಮಾರಂಭಕ್ಕೂ ಮುನ್ನ ಬಿಜೆಪಿ ವೀಕ್ಷಕ ತರುಣ್ ಚುಘ್ ಮತ್ತು ಈಶಾನ್ಯ ರಾಜ್ಯಗಳ ಉಸ್ತುವಾರಿ ಸಂಬಿತ್ ಪಾತ್ರಾ ಉಪಸ್ಥಿತಿಯಲ್ಲಿ ಖೇಮಚಂದ್ ನೇತೃತ್ವದ ಎನ್‌ಡಿಎ ನಿಯೋಗವು ಲೋಕಭವನಕ್ಕೆ ತೆರಳಿ, ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರನ್ನು ಭೇಟಿಯಾಗಿ, ಸರ್ಕಾರ ರಚನೆಗೆ ಹಕ್ಕು ಮಂಡಿಸಿತ್ತು.

ಈ ವೇಳೆ ಹೊಸ ಸರ್ಕಾರವನ್ನು ಶಾಂತಿ ಮತ್ತು ಅಭಿವೃದ್ಧಿಯ ಮಾರ್ಗದರ್ಶಿ ತತ್ವಗಳು ಮುನ್ನಡೆಸಲಿವೆ ಎಂದು ಖೇಮಚಂದ್ ವಿಶ್ವಾಸ ವ್ಯಕ್ತಪಡಿಸಿದ್ದರು.

ಮಣಿಪುರ ಮುಖ್ಯಮಂತ್ರಿಯಾಗಿ ಬುಧವಾರ ಪ್ರಮಾಣವಚನ ಸ್ವೀಕರಿಸಿದ ವೈ.ಖೇಮಚಂದ್ ಸಿಂಗ್ ಅವರನ್ನು ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರು ಅಭಿನಂದಿಸಿದರು –ಪಿಟಿಐ ಚಿತ್ರ

### ರಾಷ್ಟ್ರಪತಿ ಆಳ್ವಿಕೆ ರದ್ದು

ಸರ್ಕಾರ ರಚನೆಗೆ ಸಿದ್ಧತೆ ನಡೆಯುತ್ತಿರುವ ಬೆನ್ನಲ್ಲೆ ರಾಜ್ಯದಲ್ಲಿದ್ದ ರಾಷ್ಟ್ರಪತಿ ಆಳ್ವಿಕೆಯನ್ನೂ ಬುಧವಾರ ರದ್ದುಗೊಳಿಸಲಾಗಿದೆ. 2025ರ ಫೆಬ್ರುವರಿ 13ರಂದು ಮಣಿಪುರದಲ್ಲಿ ಜಾರಿಗೊಳಿಸಲಾಗಿದ್ದ ರಾಷ್ಟ್ರಪತಿ ಆಳ್ವಿಕೆಯನ್ನು ಸಂವಿಧಾನದ 356ನೇ ವಿಧಿಯ ಷರತ್ತು (2)ರ ಅನ್ವಯ ನೀಡಲಾದ ಹಕ್ಕುಗಳನ್ನು ಚಲಾಯಿಸಿ 2026ರ ಫೆಬ್ರುವರಿ 4ರಂದು ಹಿಂಪಡೆಯುತ್ತಿರುವುದಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಕಟಣೆ ಹೊರಡಿಸಿದ್ದಾರೆ.

# ಸುನೇತ್ರಾ ಭೇಟಿ ಮಾಡಿದ ಶರದ್ ಪವಾರ್

ಪುಣೆ (ಪಿಟಿಐ): ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಸುನೇತ್ರಾ ಪವಾರ್ ಅವರ ಬಾರಾಮತಿಯಲ್ಲಿರುವ ಮನೆಗೆ ಬುಧವಾರ ಭೇಟಿ ನೀಡಿದ ಎನ್‌ಸಿಪಿ(ಎಸ್‌ಪಿ) ಅಧ್ಯಕ್ಷ ಶರದ್ ಪವಾರ್, ಸಹೋದರನ ಪುತ್ರ, ಮಾಜಿ ಉಪಮುಖ್ಯಮಂತ್ರಿ ಮತ್ತು ಎನ್‌ಸಿಪಿ ನಾಯಕ ಅಜಿತ್ ಪವಾರ್‌ಗೆ ಗೌರವ ಸಲ್ಲಿಸಿದರು.

ಮಂಗಳವಾರ ತಡರಾತ್ರಿ ಬಾರಾಮತಿ ತಲುಪಿದ ಶರದ್ ಪ್ರವಾರ್ ಅವರು, ನಗರದ ಸಹಯೋಗ್ ಸೊಸೈಟಿಯಲ್ಲಿ ಆಯೋಜಿಸಿದ್ದ ಅಜಿತ್‌ಪವಾರ್ ಸಂತಾಪ ಸಭೆಯಲ್ಲಿ ಪಾಲ್ಗೊಂಡರು.

ಬುಧವಾರ ಬೆಳಿಗ್ಗೆ ಬಾರಾಮತಿಯಲ್ಲಿರುವ ವಿದ್ಯಾ ಪ್ರತಿಷ್ಠಾನ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಪಾರ್ಥ್ ಮತ್ತು ಜಯ್ ನಡುವೆ ಗೋಪ್ಯ ಸಭೆ ನಡೆಯಿತು ಎಂದು ಮೂಲಗಳು ತಿಳಿಸಿವೆ. ಈ ಸಭೆಯ ಕಾರ್ಯಸೂಚಿ ಏನು ಎಂಬುದರ ಕುರಿತು ತಕ್ಷಣಕ್ಕೆ ಯಾವುದೇ ಅಧಿಕೃತ ಮಾಹಿತಿ ಲಭ್ಯವಾಗಿಲ್ಲ. ಎನ್‌ಸಿಪಿ ಎರಡೂ ಬಣಗಳ ವಿಲೀನ ಮತ್ತು ಮುಂಬರುವ ಜಿಲ್ಲಾ ಪರಿಷತ್ ಚುನಾವಣೆಗಳ ಬಗ್ಗೆ ಚರ್ಚೆಗಳು ನಡೆದಿರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

**'ಮಾತುಕತೆಯಲ್ಲಿ ಫಡಣವೀಸ್ ಭಾಗಿಯಾಗಿರಲಿಲ್ಲ':** ಎನ್‌ಸಿಪಿ ಪಕ್ಷಗಳ ವಿಲೀನ ಕುರಿತು ಅಜಿತ್ ಪವಾರ್ ಬಿಜೆಪಿಗೆ ತಿಳಿಸಿರಲಿಲ್ಲ ಎಂಬ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿಕೆಯನ್ನು ತಳ್ಳಿಹಾಕಿರುವ ಶರದ್ ಪವಾರ್, 'ಎರಡೂ ಪಕ್ಷಗಳ ನಡುವಿನ ಮಾತುಕತೆಯಲ್ಲಿ ಅವರು ಭಾಗಿಯಾಗೇ ಇರಲಿಲ್ಲ' ಎಂದು ಹೇಳಿದ್ದಾರೆ.

# ಐಐಟಿ ಬಾಂಬೆ ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಮುಂಬೈ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ–ಬಾಂಬೆಯ (ಐಐಟಿ) ವಿದ್ಯಾರ್ಥಿಯೊಬ್ಬರು ಹಾಸ್ಟೆಲ್‌ನ ಮಹಡಿಯಿಂದ ಜಿಗಿದು ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಮೃತ ವಿದ್ಯಾರ್ಥಿಯನ್ನು ರಾಜಸ್ಥಾನದ ಪಿಲಾನಿ ನಿವಾಸಿ ನಮನ್ ಅಗರ್ವಾಲ್ (21) ಎಂದು ಗುರುತಿಸಲಾಗಿದೆ.

ಸಿವಿಲ್ ಎಂಜಿನಿಯರಿಂಗ್ ವಿಭಾಗದಲ್ಲಿ 2ನೇ ವರ್ಷದ ಬಿ.ಟೆಕ್ ವ್ಯಾಸಂಗ ಮಾಡುತ್ತಿದ್ದ ನಮನ್, ಪೊವೈ ಕ್ಯಾಂಪಸ್‌ನ ಹಾಸ್ಟೆಲ್ ಸಂಖ್ಯೆ 4ರಲ್ಲಿ ಉಳಿದುಕೊಂಡಿದ್ದರು. ಅದೇ ಹಾಸ್ಟೆಲ್ ಮಹಡಿಯಿಂದ ಜಿಗಿದು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಆಕಸ್ಮಿಕ ಸಾವು (ಎಡಿಆರ್) ಎಂದು ಪ್ರಕರಣ ದಾಖಲಿಸಿ, ತನಿಖೆ ಆರಂಭಿಸಲಾಗಿದೆ. ಮೃತದೇಹವನ್ನು ರಾಜವಾಡಿ ಆಸ್ಪತ್ರೆಗೆ ಕಳುಹಿಸಲಾಗಿದ್ದು, ಅಲ್ಲಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಗಿದೆ. ನಮನ್ ಈ ನಿರ್ಧಾರ ತೆಗೆದುಕೊಳ್ಳಲು ಕಾರಣವೇನು ಎಂಬುದು ಇನ್ನೂ ತಿಳಿದುಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಇತ್ತೀಚೆಗಿನ ವರ್ಷಗಳಲ್ಲಿ ಐಐಟಿ–ಬಾಂಬೆಯಲ್ಲಿ ನಡೆದಿರುವ ಮೂರನೇ ಆತ್ಮಹತ್ಯೆ ಪ್ರಕರಣ ಇದಾಗಿದೆ. 2022ರ ಆಗಸ್ಟ್ 2ರಂದು ರೋಹಿತ್ ಸಿನ್ಹಾ ಎಂಬ ವಿದ್ಯಾರ್ಥಿ ಆತ್ಮಹತ್ಯೆಗೆ ಶರಣಾಗಿದ್ದರು. 2023ರ ಫೆಬ್ರುವರಿ 12ರಂದು ದರ್ಶನ್ ಸೋಲಂಕಿ ಎಂಬ ವಿದ್ಯಾರ್ಥಿ ಜಾತಿ ತಾರತಮ್ಯದ ಕಾರಣ ನೀಡಿ, ಆತ್ಮಹತ್ಯೆ ಮಾಡಿಕೊಂಡಿದ್ದರು.

# 'ಬಿಹಾರ ಜೀವಂತ ಸತ್ತವರ ಭೂಮಿ'

ನವದೆಹಲಿ (ಪಿಟಿಐ): 'ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಿಂದ (ಎಸ್‌ಐಆರ್) ಬಿಹಾರವು ಅನೇಕ ಜೀವಂತ ಸತ್ತವರ ಭೂಮಿಯಾಯಿತು' ಎಂದು ಎಂಎನ್‌ಎಂ ಪಕ್ಷದ ಮುಖ್ಯಸ್ಥ, ನಟ ಕಮಲ್ ಹಾಸನ್ ಬುಧವಾರ ರಾಜ್ಯಸಭೆಯಲ್ಲಿ ಹೇಳಿದರು.

ರಾಷ್ಟ್ರಪತಿ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡಿದ ಅವರು, 'ಈ ರೋಗವು ದೇಶದಾದ್ಯಂತ ಹರಡುವುದನ್ನು ನಾವು ಬಯಸುವುದಿಲ್ಲ. ಆದರೆ, ಚುನಾವಣಾ ಆಯೋಗವು ಖಂಡಿತವಾಗಿ ಈ ರೋಗದ ಹರಡುವಿಕೆಯನ್ನು ಸುಗಮಗೊಳಿಸುತ್ತದೆ' ಎಂದರು.

'ತಮಿಳುನಾಡಿನಲ್ಲಿ ಶೀಘ್ರದಲ್ಲೇ ಸುಮಾರು 1 ಕೋಟಿ ಜೀವಂತ ಸತ್ತವರು ಕಾಗದದ ಮೇಲೆ ಇರಬಹುದೆಂಬ ಭಯ ನಮ್ಮನ್ನು ಕಾಡುತ್ತಿದೆ' ಎಂದು ಹೇಳಿದರು.

# ಲೋಕಸಭೆ: ಗದ್ದಲಕ್ಕಿಲ್ಲ ಕೊನೆ

ಒಂದನೇ ಪುಟದಿಂದ

ಆದರೆ ದುಬೆ ಅವರೂ ಪಟ್ಟು ಬಿಡಲಿಲ್ಲ. ಇದಕ್ಕೆ ಕಾಂಗ್ರೆಸ್ ಸದಸ್ಯರು ತೀವ್ರ ಪ್ರತಿಭಟನೆ ನಡೆಸಿದರು. ಇದರ ಪರಿಣಾಮ ಕಲಾಪವನ್ನು ಟೆನೇಟಿ ಅವರು ಸಂಜೆ 5ಕ್ಕೆ ಮುಂದೂಡಿದರು. ಇದಕ್ಕೂ ಮುನ್ನ ಮಧ್ಯಾಹ್ನ 12 ಗಂಟೆ ಮತ್ತು 2 ಗಂಟೆಗೆ ಸದನ ಸೇರಿದ್ದಾಗಲೂ ಗದ್ದಲ ಮುಂದುವರಿದಿದ್ದರಿಂದ, ಕಲಾಪವನ್ನು ಮುಂದೂಡಲಾಗಿತ್ತು.

ಬಳಿಕ, ಸ್ಪೀಕರ್ ಅನುಮತಿಯ ಮೇರೆಗೆ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಅವರು, ವಿರೋಧ ಪಕ್ಷಗಳ ಸದಸ್ಯರ ಗದ್ದಲದ ನಡುವೆಯೂ ಭಾರತ–ಅಮೆರಿಕ ವ್ಯಾಪಾರ ಒಪ್ಪಂದದ ಕುರಿತು ಹೇಳಿಕೆ ನೀಡಿದರು.

ಸದನದ ಘನತೆಯನ್ನು ಕಾಪಾಡಿಕೊಳ್ಳುವಂತೆ ಸ್ಪೀಕರ್ ಪದೇ ಪದೇ ಸದಸ್ಯರಿಗೆ ಸೂಚಿಸಿದರು. ಅಲ್ಲದೆ ಬ್ಯಾನರ್ ಮತ್ತು ಪೋಸ್ಟರ್‌ಗಳನ್ನು ಪ್ರದರ್ಶಿಸಿದ್ದಕ್ಕಾಗಿ ವಿರೋಧ ಪಕ್ಷದ ಸದಸ್ಯರನ್ನು ತರಾಟೆಗೆ ತೆಗೆದುಕೊಂಡರು.

**ಪ್ರಶ್ನೋತ್ತರ ಅವಧಿಯಲ್ಲೂ ಗದ್ದಲ:** ಪ್ರಶ್ನೋತ್ತರ ಅವಧಿಯಲ್ಲಿಯೂ ಸದನದಲ್ಲಿ ಪ್ರತಿಭಟನೆ ಮುಂದುವರಿಯಿತು. ಕೇವಲ ಐದು ನಿಮಿಷ ನಡೆದ ಪ್ರಶ್ನೋತ್ತರ ಅವಧಿಯಲ್ಲಿ ಒಂದು ಪ್ರಶ್ನೆ ಮತ್ತು ಅದರ ಪೂರಕ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳಲಾಯಿತು.

ರಾಹುಲ್ ಅವರಿಗೆ ಅವಕಾಶ ನಿರಾಕರಿಸಿದ ಬಳಿಕ, ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರಿಗೆ ಗಾಂಧಿ ಕುಟುಂಬದವರ ಉಲ್ಲೇಖಗಳಿರುವ ಪುಸ್ತಕಗಳನ್ನು ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ಕಾಂಗ್ರೆಸ್ ಸಂಸದರು ಸ್ಪೀಕರ್ ಓಂ ಬಿರ್ಲಾ ಅವರ ಕಚೇರಿಯಲ್ಲಿ ಪ್ರತಿಭಟನೆ ದಾಖಲಿಸಿದರು.

**ಲೋಕಸಭೆಯ ವಿಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ನರವಣೆ ಅವರ 'ಅಪ್ರಕಟಿತ ಪುಸ್ತಕ'ದ ಕುರಿತು ಉಲ್ಲೇಖಿಸಲು ಅವಕಾಶ ನೀಡಬೇಕಿತ್ತು**

**ಶರದ್ ಪವಾರ್,**
ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ

### ರಾಹುಲ್– ಬಿಟ್ಟೂ ವಾಕ್ಸಮರ

ಒಂದನೇ ಪುಟದಿಂದ...

ಬಳಿಕ ರಾಹುಲ್ ಅವರು ಸಚಿವರ ಕೈಕುಲುಕಲು ಮುಂದಾದರು. ಅದಕ್ಕೆ ಸಚಿವರು ನಿರಾಕರಿಸಿದರು. ಆಗ ನಮಸ್ಕರಿಸಿದ ರಾಹುಲ್, 'ನಮಸ್ಕಾರ ಸಹೋದರ, ನನ್ನ ಮಿತ್ರದ್ರೋಹಿ' ಎಂದು ಕೆಣಕಿದರು.

ಇದರಿಂದ ಕೆರಳಿದ ಸಚಿವ ಬಿಟ್ಟೂ ಅವರು, ರಾಹುಲ್ ಕಡೆ ಕೈ ತೋರಿಸುತ್ತಾ, 'ನೀವು ದೇಶದ ಶತ್ರು' ಎಂದರು.

ಆಗ, 'ಚಿಂತಿಸಬೇಡಿ, ನೀವು ನಮ್ಮಲ್ಲಿಗೇ (ಕಾಂಗ್ರೆಸ್‌ಗೆ) ಮರಳುವಿರಿ' ಎಂದು ರಾಹುಲ್ ಹೇಳಿದರು. ಇದೇ ವೇಳೆ, ಅಮಾನತುಗೊಂಡ ಸಂಸದರು ಒಟ್ಟಾಗಿ ಸಚಿವ ಬಿಟ್ಟೂ ಅವರನ್ನು ಅಪಹಾಸ್ಯ ಮಾಡಿದರು.

ಆಗ ರಾಹುಲ್ ಮತ್ತು ಆ ಸಂಸದರತ್ತ ಕೈ ತೋರಿದ ಸಚಿವರು, 'ನೀವು ದೇಶದ ಶತ್ರು' ಎಂದು ಪುನರುಚ್ಚರಿಸುತ್ತಾ ಮೆಟ್ಟಿಲುಗಳನ್ನು ಹತ್ತಿಕೊಂಡು ಸಾಗಿದರು. ಅಲ್ಲಿದ್ದ ಕಾಂಗ್ರೆಸ್ ಸಂಸದರು, 'ನೀವು ಶರಣಾಗಿದ್ದೀರಿ, ಶರಣಾಗಿದ್ದೀರಿ' ಎಂದು ಕೂಗಿದರು.

**ವಿಡಿಯೊ ಹಂಚಿಕೊಂಡ ಕಾಂಗ್ರೆಸ್:** ಈ ಮಾತಿನ ಚಕಮಕಿ ಕುರಿತ ವಿಡಿಯೊ ತುಣುಕನ್ನು ಕಾಂಗ್ರೆಸ್ ತನ್ನ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಹಂಚಿಕೊಂಡಿದೆ.

ಪಂಜಾಬ್‌ನ ದಿವಂಗತ ಮುಖ್ಯಮಂತ್ರಿ ಬಿಯಾಂತ್ ಸಿಂಗ್ ಅವರ ಮೊಮ್ಮಗ ಬಿಟ್ಟೂ ಅವರು ಮೊದಲು ಕಾಂಗ್ರೆಸ್ ಪಕ್ಷದಿಂದ ಸಂಸದರಾಗಿದ್ದರು. 2024ರಲ್ಲಿ ಅವರು ಬಿಜೆಪಿಗೆ ಸೇರಿದರು.

# ರಾಹುಲ್ ಧ್ವನಿ ಅಡಗಿಸುವ ಯತ್ನ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಸತ್ತಿನಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿ ಅವರ ಧ್ವನಿ ಅಡಗಿಸುವ ಪ್ರಯತ್ನ ನಿರಂತರವಾಗಿ ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆ. ಇದು ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಸಿದ್ದರಾಮಯ್ಯ

ಈ ಕುರಿತು 'ಎಕ್ಸ್' ಮಾಡಿರುವ ಅವರು, ರಾಹುಲ್‌ಗಾಂಧಿ ಅವರು ಮಾಜಿ ಸೇನಾ ಮುಖ್ಯಸ್ಥ ಎಂ.ಎಂ.ನರವಣೆ ಅವರ 'ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ' ಎಂಬ ಪುಸ್ತಕದಲ್ಲಿನ ವಿಷಯಗಳನ್ನು ಉಲ್ಲೇಖಿಸಿ ರಾಷ್ಟ್ರೀಯ ಭದ್ರತೆ ಕುರಿತು ಕೆಲವು ಪ್ರಶ್ನೆಗಳನ್ನು ಎತ್ತಿದ್ದರು. ಸಂಸತ್ತಿನಲ್ಲಿ ಅದರ ಚರ್ಚೆಗೆ ಅವಕಾಶ ನೀಡಿಲ್ಲ ಎಂದಿದ್ದಾರೆ.

2020 ರಲ್ಲಿ ಚೀನಾ ಗಡಿಯಲ್ಲಿ ನಡೆದ ಘರ್ಷಣೆಯ ಸಂದರ್ಭದಲ್ಲಿ ಪ್ರಧಾನಿ ಮೋದಿ ಸರ್ಕಾರ ದಿಟ್ಟ ಮತ್ತು ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಲು ವಿಫಲವಾಯಿತು ಎನ್ನುವ ಮಾಹಿತಿ ಈ ಪುಸ್ತಕದಲ್ಲಿದೆ. ಸರ್ಕಾರದ ಈ ದ್ವಂದ್ವ ನಿಲುವಿನಿಂದ ಸೇನಾ ಪಡೆಗಳು ಎರಡು ರಾಷ್ಟ್ರಗಳ ನಡುವಿನ ರಾಜಕೀಯ ಸಂದಿಗ್ಧತೆಯನ್ನು ನಿಭಾಯಿಸಬೇಕಾಯಿತು ಎಂದು ಹೇಳಿದ್ದಾರೆ.

ಪ್ರಧಾನಿ ಮೋದಿ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ರಾಜಕೀಯ ನಾಯಕತ್ವದ ವೈಫಲ್ಯ ಮತ್ತು ರಾಷ್ಟ್ರೀಯ ಭದ್ರತೆಯಂತಹ ಗಂಭೀರ ವಿಚಾರಗಳಲ್ಲಿ ಸ್ಪಷ್ಟ ನಿರ್ಧಾರ ಕೈಗೊಳ್ಳುವಲ್ಲಿ ಇರುವ ಅಸಾಮರ್ಥ್ಯ ತೋರಿಸುತ್ತದೆ ಎಂದು ಅವರು ಹೇಳಿದ್ದಾರೆ.

ಇಂತಹ ವಿಷಯಗಳು ಸಂಸತ್ತಿನಲ್ಲಿ ಚರ್ಚೆಗೆ ಒಳಪಡಬೇಕು. ಜನರ ಪರವಾಗಿ ಪ್ರಶ್ನೆಗಳನ್ನು ಕೇಳುವುದು ಜವಾಬ್ದಾರಿಯುತ ವಿರೋಧ ಪಕ್ಷದ ನಾಯಕನಾಗಿ ರಾಹುಲ್ ಗಾಂಧಿಯವರ ಕರ್ತವ್ಯ. ಅದನ್ನು ಅವರು ಮಾಡಿದ್ದಾರೆ. ರಾಹುಲ್‌ಗಾಂಧಿ ಭಾರತ ಅಥವಾ ನಮ್ಮ ಸೇನಾಪಡೆಗಳ ವಿರುದ್ಧ ಮಾತನಾಡಿಲ್ಲ ಎಂದೂ ಸಿದ್ದರಾಮಯ್ಯ ಹೇಳಿದ್ದಾರೆ.

# ಆಹಾರ, ಕೃಷಿ ಕ್ಷೇತ್ರ ರಕ್ಷಣೆ: ಪೀಯೂಷ್

ನವದೆಹಲಿ(ಪಿಟಿಐ): ಆಹಾರ ಮತ್ತು ಕೃಷಿ ದೇಶದ ಮುಖ್ಯ ವಿಚಾರಗಳು. ಅಮೆರಿಕ ಮತ್ತು ಭಾರತ ನಡುವಿನ ವ್ಯಾಪಾರ ಒಪ್ಪಂದದ ವೇಳೆ ಈ ಕ್ಷೇತ್ರಗಳ ಹಿತಾಸಕ್ತಿ ಕಾಪಾಡಲಾಗಿದೆ ಎಂದು ಕೇಂದ್ರ ಸರ್ಕಾರ ಸಂಸತ್‌ಗೆ ಬುಧವಾರ ಭರವಸೆ ನೀಡಿತು.

ಉಭಯ ದೇಶಗಳ ನಡುವಿನ ವ್ಯಾಪಾರ ಒಪ್ಪಂದದಿಂದಾಗಿ ಅಮೆರಿಕಕ್ಕೆ ರಫ್ತು ವಿಚಾರದಲ್ಲಿ ಸ್ಪರ್ಧೆ ಹೆಚ್ಚಲಿದೆ ಎಂದೂ ಹೇಳಿದೆ.

ಲೋಕಸಭೆ ಬಳಿಕ ರಾಜ್ಯಸಭೆಯಲ್ಲಿ ಮಾತನಾಡಿದ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪೀಯೂಷ್ ಗೋಯಲ್, ವಿರೋಧ ಪಕ್ಷಗಳ ಸಂಸದರ ಗದ್ದಲ ನಡುವೆಯೇ, ಈ ಕುರಿತು ಹೇಳಿಕೆ ನೀಡಿದರು.

'ಇಂಧನ, ವಿಮಾನಯಾನ, ಪರಮಾಣು ಶಕ್ತಿಯಂತಹ ಕೆಲ ಕ್ಷೇತ್ರಗಳಲ್ಲಿ ಅಮೆರಿಕ ಮುಂಚೂಣಿಯಲ್ಲಿದೆ. ಈ ಕ್ಷೇತ್ರಗಳನ್ನು ಕೇಂದ್ರೀಕರಿಸಿ ವ್ಯಾಪಾರ ಒಪ್ಪಂದಕ್ಕೆ ಮುಂದಾಗುವುದು ಸಹಜ. ಈ ಒಪ್ಪಂದಲ್ಲಿ ದೇಶದ ಜನರ ಹಿತಾಸಕ್ತಿಯು ಅಡಗಿದೆ' ಎಂದರು.

ಸಚಿವ ಗೋಯೆಲ್ ತಮ್ಮ ಹೇಳಿಕೆ ಪೂರ್ಣಗೊಳಿಸುತ್ತಿದ್ದಂತೆಯೇ, ವಿಷಯ ಪ್ರಸ್ತಾಪಿಸಿದ ವಿಪಕ್ಷಗಳ ಸಂಸದರು, ವ್ಯಾಪಾರ ಒಪ್ಪಂದ ಕುರಿತು ಸರ್ಕಾರದಿಂದ ಸ್ಪಷ್ಟೀಕರಣದ ಅಗತ್ಯವಿದೆ ಎಂದರು. ಆದರೆ, ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಅವರು ವಿಪಕ್ಷಗಳ ಸಂಸದರ ಬೇಡಿಕೆಗೆ ಅವಕಾಶ ನೀಡಲಿಲ್ಲ.

### ಶಿಷ್ಟಾಚಾರ ಉಲ್ಲಂಘನೆ: ಕಾಂಗ್ರೆಸ್

ಬಜೆಟ್ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿಯೇ, ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರು ಸಂಸತ್ ಭವನದ ಹೊರಗೆ ಸುದ್ದಿಗೋಷ್ಠಿ ನಡೆಸಿ, ಭಾರತ–ಅಮೆರಿಕ ವ್ಯಾಪಾರ ಒಪ್ಪಂದ ಕುರಿತು ಮಾಹಿತಿ ನೀಡಿದ್ದಾರೆ. ಇದು ಸದನದ ಶಿಷ್ಟಾಚಾರದ ಉಲ್ಲಂಘನೆ ಎಂದು ಕಾಂಗ್ರೆಸ್ ಅಸಮಾಧಾನ ವ್ಯಕ್ತಪಡಿಸಿತು. ಕ್ರಿಯಾಲೋಪವನ್ನು ತಿರಸ್ಕರಿಸಿದ ಸಭಾಪತಿ ಸಿ.ಪಿ.ರಾಧಾಕೃಷ್ಣನ್, 'ಸಚಿವ ಗೋಯೆಲ್ ಅವರು ಸದನದಲ್ಲಿ ಈ ಕುರಿತು ಬುಧವಾರ ಹೇಳಿಕೆ ನೀಡುವುದು ನಿಗದಿಯಾಗಿತ್ತು. ಸಚಿವರು ಹೇಳಿಕೆ ನೀಡಲಿರುವ ಕಾರಣ, ಯಾವುದೇ ಕ್ರಿಯಾಲೋಪವಾಗಿಲ್ಲ' ಎಂದು ರೂಲಿಂಗ್ ನೀಡಿದರು.

# ಜಾರ್ಜ್ ಶತಕ; ಫೈನಲ್‌ಗೆ ಭಾರತ

## 19 ವರ್ಷದೊಳಗಿನವರ ವಿಶ್ವಕಪ್: ವೈಭವ್ ಮಿಂಚು, ನಾಯಕ ಆಯುಷ್ ಆರ್ಭಟ




ಹರಾರೆ (ಪಿಟಿಐ): ಆ್ಯರನ್ ಜಾರ್ಜ್ ಶತಕ, ಆಯುಷ್ ಮ್ಹಾತ್ರೆ ಮತ್ತು ವೈಭವ್ ಸೂರ್ಯವಂಶಿ ಅವರ ಅರ್ಧಶತಕಗಳ ಮುಂದೆ ಅಫ್ಗಾನಿಸ್ತಾನವು ಒಡ್ಡಿದ್ದ ಬೆಟ್ಟದಂತಹ ಮೊತ್ತದ ಗುರಿ ಮಂಜಿನಂತೆ ಕರಗಿತು. 19 ವರ್ಷದೊಳಗಿನವರ ಭಾರತ ತಂಡವು ಯುವ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ಐದು ಬಾರಿಯ ಚಾಂಪಿಯನ್ ಭಾರತವು ಪ್ರವೇಶಿಸಿರುವ 10ನೇ ಫೈನಲ್ ಇದಾಗಿದೆ. ಬುಧವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ 311 ರನ್‌ಗಳ ಗುರಿ ಬೆನ್ನಟ್ಟಿದ ತಂಡವು 7 ವಿಕೆಟ್‌ಗಳಿಂದ ಜಯಿಸಿತು. ಕೇವಲ 41.1 ಓವರ್‌ಗಳಲ್ಲಿ ಗುರಿಯನ್ನು ಮುಟ್ಟುವಲ್ಲಿ ಭಾರತ ಯುವಪಡೆ ಯಶಸ್ವಿಯಾಯಿತು. ಆರಂಭ ಆಟಗಾರ ಜಾರ್ಜ್ (115; 104ಎ, 4x15, 6x2) ಶತಕ ದಾಖಲಿಸಿದರು.

ಟಾಸ್ ಗೆದ್ದ ಅಫ್ಗಾನಿಸ್ತಾನವು ಫೈಸಲ್ ಶಿನೊಝಾದಾ (110; 93ಎಸೆತ, 4x15) ಮತ್ತು ಉಝೈರುಲ್ಲಾ ನೀಯಾಝಿಲ್ (ಔಟಾಗದೇ 101, 86ಎ, 4x12, 6x2) ಅವರ ಶತಕಗಳ ಬಲದಿಂದ ದೊಡ್ಡ ಮೊತ್ತ ಪೇರಿಸಿತು. 117 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿದ್ದ ತಂಡಕ್ಕೆ ಫೈಸಲ್ ಮತ್ತು ನೀಯಾಝಿಲ್ ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 148 ರನ್ ಸೇರಿಸುವ ಮೂಲಕ ಶಕ್ತಿ ತುಂಬಿದರು. ಮೇಲ್ನೋಟಕ್ಕೆ ಗುರಿಯು ಕಠಿಣ ಸವಾಲು ಎನಿಸಿತ್ತು.

ಆದರೆ ಭಾರತದ ಆರಂಭಿಕ ಬ್ಯಾಟರ್ ವೈಭವ್ ಸೂರ್ಯವಂಶಿ ತಮ್ಮ ಎಂದಿನ ಬೀಸಾಟದ ಮೂಲಕ ಜಯಕ್ಕೆ 'ಮುನ್ನುಡಿ' ಬರೆದರು. ಕೇವಲ 33 ಎಸೆತಗಳಲ್ಲಿ ಅವರು 68 ರನ್ ಗಳಿಸಿದರು. 14 ವರ್ಷದ ವೈಭವ್ ನಾಲ್ಕು ಸಿಕ್ಸರ್ ಮತ್ತು 9 ಬೌಂಡರಿ ಸಿಡಿಸಿದರು. 206.06 ರ ಸ್ಟ್ರೈಕ್ ರೇಟ್‌ನಲ್ಲಿ ರನ್ ಸೂರೆ ಮಾಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ ಆ್ಯರನ್ ಜಾರ್ಜ್ ಜೊತೆಗೆ 90 ರನ್ ಸೇರಿಸಿದರು. ಹತ್ತನೇ ಓವರ್‌ನಲ್ಲಿ ವೈಭವ್ ವಿಕೆಟ್ ಗಳಿಸುವಲ್ಲಿ ನೂರಿಸ್ತಾನಿ ಒಮರ್‌ಝೈ ಯಶಸ್ವಿಯಾದರು.

ಕಳೆದ ಕೆಲವು ಪಂದ್ಯಗಳಲ್ಲಿ ಬ್ಯಾಟಿಂಗ್ ವೈಫಲ್ಯ ಎದುರಿಸಿದ್ದ ಜಾರ್ಜ್ ಇಲ್ಲಿ ಲಯಕ್ಕೆ ಮರಳಿದರು. ಆತ್ಮವಿಶ್ವಾಸದಿಂದ ಆಡಿದರು. ಅವರಿಗೆ ನಾಯಕ ಆಯುಷ್ ಜೊತೆ ನೀಡಿದರು. ಆಯುಷ್ ಕೂಡ ಟೂರ್ನಿ ಈ ಹಿಂದಿನ ಪಂದ್ಯಗಳಲ್ಲಿ ಬೌಲಿಂಗ್‌ನಲ್ಲಿ ಯಶಸ್ವಿಯಾಗಿದ್ದರು. ಆದರೆ ಬ್ಯಾಟಿಂಗ್ ಲಯ ತಪ್ಪಿದ್ದರು. ಇಲ್ಲಿ ಜಾರ್ಜ್ ಮತ್ತು ಆಯುಷ್ ಇಬ್ಬರ ಚೆಂದದ ಬ್ಯಾಟಿಂಗ್ ಮನಸೆಳೆಯಿತು.

ಆಯುಷ್ (62; 59ಎ, 4X5, 6X4) ಮತ್ತು ಜಾರ್ಜ್ ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 114 (101ಎ) ರನ್ ಸೇರಿಸಿದರು. ಐಪಿಎಲ್ ಆಟಗಾರ ಆಯುಷ್ ಅವರ ಲಾಫ್ಟ್‌ಗಳು, ಪುಲ್ ಮತ್ತು ಡ್ರೈವ್‌ಗಳ ಆಟ ಮನಮೋಹಕವಾಗಿತ್ತು. 27ನೇ ಓವರ್‌ನಲ್ಲಿ ಆಯುಷ್ ವಿಕೆಟ್ ಪಡೆದ ಒಮರ್‌ಝೈ ಅವರು ಜೊತೆಯಾಟವನ್ನೂ ಮುರಿದರು.

ವಹಿದುಲ್ಲಾ ಝುದ್ರಾನ್ ಅವರ ಬೌಲಿಂಗ್‌ನಲ್ಲಿ ಆಮಿರಿಗೆ ಕ್ಯಾಚ್ ಕೊಟ್ಟ ಜಾರ್ಜ್ ಇನಿಂಗ್ಸ್‌ಗೆ ತೆರೆಬಿತ್ತು. ವಿಹಾನ್ (38 ರನ್) ಮತ್ತು ವೇದಾಂತ್ (5 ರನ್) ಅವರು ತಂಡವನ್ನು ಜಯದ ದಡ ಮುಟ್ಟಿಸಿದರು. ಭಾರತ ಯುವ ತಂಡವು 2016ರಿಂದೀಚೆಗೆ ಸತತ ಆರನೇ ಬಾರಿ ಪ್ರಶಸ್ತಿ ಸುತ್ತು ಪ್ರವೇಶಿಸಿತು.

ಭಾರತ ತಂಡವು ಶುಕ್ರವಾರ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

### ಸ್ಕೋರ್ ಕಾರ್ಡ್

**ಅಫ್ಗಾನಿಸ್ತಾನ: 50 ಓವರುಗಳಲ್ಲಿ 4 ವಿಕೆಟ್‌ಗೆ 310**
ಒಸ್ಮಾನ್ ಸಿ ದೀಪೇಶ್ ಬಿ ಕನಿಷ್ಕ್ 39 (70ಎ, 4x3)
ಖಾಲಿದ್ ಸಿ ಅಭಿಗ್ಯಾನ್ ಬಿ ದೀಪೇಶ್ 31 (39ಎ, 4x4, 6x1)
ಫೈಸಲ್ ಬಿ ದೀಪೇಶ್ 110 (93ಎ, 4x15)
ಉಝೈರುಲ್ಲಾ ಔಟಾಗದೇ 101 (86ಎ, 4x12, 6x2)
ಅಜೀಜ್‌ಉಲ್ಲಾ ಸಿ ಖಿಲಾನ್ ಬಿ ಕನಿಷ್ಕ್ 12 (9ಎ, 4x1)
ಅಬ್ದುಲ್ ಔಟಾಗದೇ 7 (3ಎ, 4x1)
**ಇತರೆ:** 10 (ಲೆಗ್ ಬೈ 2, ವೈಡ್ 3, ಪೆನಾಲ್ಟಿ 5)
**ವಿಕೆಟ್ ಪತನ:** 1–53 (ಖಾಲಿದ್ ಅಹಮದ್‌ಝೈ, 12.2), 2–117 (ಒಸ್ಮಾನ್ ಸಾದತ್, 24.1), 3–265 (ಫೈಸಲ್ ಶಿನೊಝಾದಾ, 45.5), 4–293 (ಅಜೀಜ್‌ಉಲ್ಲಾ ಮಿಯಾಖಿಲ್, 48.3).
**ಬೌಲಿಂಗ್:** ಆರ್.ಎಸ್. ಅಂಬರೀಶ್ 9–0–65–0; ಹೆನಿಲ್ ಪಟೇಲ್ 10–0–56–0; ದೀಪೇಶ್ ದೇವೇಂದ್ರನ್ 10–0–64–2; ಖಿಲಾನ್ ಪಟೇಲ್ 10–0–49–0; ಕನಿಷ್ಕ್ ಚೌಹಾನ್ 9–0–55–2; ಆಯುಷ್ ಮ್ಹಾತ್ರೆ 2–0–14–0.

**ಭಾರತ: 41.1 ಓವರುಗಳಲ್ಲಿ 3 ವಿಕೆಟ್‌ಗೆ 311**
ಆ್ಯರನ್ ಸಿ ಆಮಿರಿ ಬಿ ಝುದ್ರಾನ್ 115 (104ಎ, 4x15, 6x2)
ಸೂರ್ಯವಂಶಿ ಸಿ ಒಸ್ಮಾನ್ ಬಿ ಒಮರ್‌ಝೈ 68 (33ಎ, 4x9 6x4)
ಆಯುಷ್ ಸಿ ಒಸ್ಮಾನ್ ಬಿ ಒಮರ್‌ಝೈ 62 (59ಎ, 4x5, 6x4)
ವಿಹಾನ್ ಔಟಾಗದೇ 38 (47ಎ, 4x3)
ವೇದಾಂತ್ ಔಟಾಗದೇ 5 (6ಎ)
**ಇತರೆ:** 23 (ಬೈ 4, ಲೆಗ್‌ಬೈ 11, ವೈಡ್ 6, ನೋಬಾಲ್ 2)
**ವಿಕೆಟ್ ಪತನ:** 1–90 (ವೈಭವ್ ಸೂರ್ಯವಂಶಿ, 9.3), 2–204 (ಆಯುಷ್ ಮ್ಹಾತ್ರೆ, 26.2), 3–300 (ಆ್ಯರನ್ ಜಾರ್ಜ್, 39.3).
**ಬೌಲಿಂಗ್:** ಅಬ್ದುಲ್ ಅಜೀಜ್ 10–0–70–2; ವಹಿದುಲ್ಲಾ ಝುದ್ರಾನ್ 7.1–0–67–1; ನೂರಿಸ್ತಾನಿ ಒಮರ್‌ಝೈ 10–0–64–2; ಖತೀರ್ 9–0–52–0; ರೂಹುಲ್ಲಾ ಅರಬ್ 4–0–35–0; ಉಝೈರುಲ್ಲಾ ನೀಯಾಝಿಲ್ 1–0–8–0.
**ಪಂದ್ಯದ ಆಟಗಾರ:** ಆ್ಯರನ್ ಜಾರ್ಜ್

## ಡಬ್ಲ್ಯುಪಿಎಲ್ ಫೈನಲ್ ಇಂದು: ಆರ್‌ಸಿಬಿಗೆ ಡೆಲ್ಲಿ ಕ್ಯಾಪಿಟಲ್ಸ್ ಸವಾಲು

# ಕಿರೀಟಕ್ಕಾಗಿ 'ಗೆಳತಿಯರ' ಪೈಪೋಟಿ

ವಡೋದರ (ಪಿಟಿಐ): ಭಾರತ ಮಹಿಳಾ ತಂಡದಲ್ಲಿ ಜೊತೆಗೂಡಿ ಆಡುವ ಇಬ್ಬರು ಗೆಳತಿಯರು ಗುರುವಾರ ಕೋತಂಬಿ ಕ್ರೀಡಾಂಗಣದಲ್ಲಿ ನಡೆಯುವ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಪ್ರತಿಸ್ಪರ್ಧಿಗಳಾಗಿ ಕಣಕ್ಕಿಳಿಯಲಿದ್ದಾರೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕಿ ಸ್ಮೃತಿ ಮಂದಾನ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಾಯಕಿ ಜೆಮಿಮಾ ರಾಡ್ರಿಗಸ್ ಅವರೇ 'ಗೆಳತಿಯರು'. ಮಂದಾನ ಬಳಗವು ಎರಡನೇ ಬಾರಿ ಡಬ್ಲ್ಯುಪಿಎಲ್ ಪ್ರಶಸ್ತಿ ಮೇಲೆ ಕಣ್ಣಿಟ್ಟಿದೆ. ಸತತ ನಾಲ್ಕನೇ ಬಾರಿ ಫೈನಲ್ ಪ್ರವೇಶಿಸಿರುವ ಡೆಲ್ಲಿ ತಂಡ ಮೊದಲ ಸಲ ಪ್ರಶಸ್ತಿ ಗೆಲ್ಲುವ ವಿಶ್ವಾಸದಲ್ಲಿದೆ.

ಮಹಿಳಾ ಪ್ರೀಮಿಯರ್ ಲೀಗ್

ಮಂದಾನ ನಾಯಕತ್ವದಲ್ಲಿಯೇ ಆರ್‌ಸಿಬಿ ತಂಡವು ಎರಡು ವರ್ಷಗಳ ಹಿಂದೆ ಚಾಂಪಿಯನ್ ಆಗಿತ್ತು. ಈ ಸಲ ಲೀಗ್ ಹಂತದ ಆರಂಭಿಕ ಐದು ಪಂದ್ಯಗಳಲ್ಲಿಯೂ ಸತತ ಜಯ ಸಾಧಿಸಿತು. ಡಬ್ಲ್ಯುಪಿಎಲ್‌ನಲ್ಲಿ ಈ ರೀತಿಯ ದಾಖಲೆ ಮಾಡಿದ ಮೊದಲ ತಂಡವಾಯಿತು. ತಂಡದ ಎಲ್ಲರೂ ತಮ್ಮ ಸಾಮರ್ಥ್ಯ ಮೆರೆದಿದ್ದಾರೆ. ಎರಡು ಪಂದ್ಯಗಳನ್ನು ಸೋತಾಗ ಮತ್ತೆ ಪುಟಿದೆದ್ದು ತಂಡವನ್ನು ನೇರ ಫೈನಲ್‌ಗೆ ಕೊಂಡೊಯ್ದ ರೀತಿಯೂ ಅಮೋಘವಾದದ್ದು.

ಸ್ಮೃತಿ (290 ರನ್), ಜಾರ್ಜಿಯಾ ವೋಲ್, ಗೌತಮಿ ನಾಯಕ್, ಗ್ರೇಸ್ ಹ್ಯಾರಿಸ್, ರಿಚಾ ಘೋಷ್ ಹಾಗೂ ಆಲ್‌ರೌಂಡರ್ ನದೀನ್ ಡಿ ಕ್ಲರ್ಕ್ (15 ವಿಕೆಟ್) ಅವರು ಅಮೋಘ ಫಾರ್ಮ್‌ನಲ್ಲಿದ್ದಾರೆ. ಕನ್ನಡದ ಹುಡುಗಿ ಶ್ರೇಯಾಂಕಾ ಪಾಟೀಲ (11 ವಿಕೆಟ್) ಅವರು ಈ ಟೂರ್ನಿಗೂ ಮುನ್ನ ಗಾಯದಿಂದಾಗಿ ಸುದೀರ್ಘ ಸಮಯದವರೆಗೆ ಕಣಕ್ಕಿಳಿದಿರಲಿಲ್ಲ. ಆದರೆ ಮರಳಿ ಬಂದ ನಂತರ ಅವರ ಆಟ ಪರಿಪಕ್ವಗೊಂಡಿದೆ. ಈ ಟೂರ್ನಿಯಲ್ಲಿ ಅವರು ಐದು ವಿಕೆಟ್ ಗೊಂಚಲು ಕೂಡ ಗಳಿಸಿದ್ದಾರೆ. ಅಲ್ಲದೇ ಮಹತ್ವದ ಜೊತೆಯಾಟಗಳನ್ನು ಮುರಿಯುವ ಕೌಶಲವನ್ನು ತೋರಿಸಿದ್ದಾರೆ. ದಕ್ಷಿಣ ಆಫ್ರಿಕಾದ ಲಾರೆನ್ ಬೆಲ್ ತಮ್ಮ ಬೌಲಿಂಗ್ ಮೂಲಕ ಉತ್ತಮ ಆರಂಭ ನೀಡುತ್ತಿದ್ದಾರೆ. ಇದರಿಂದಾಗಿ ತಂಡವು ಬಲಾಢ್ಯವಾಗಿ ಕಾಣುತ್ತಿದೆ.

ಇನ್ನೊಂದೆಡೆ ಎಲಿಮಿನೇಟರ್ ಪಂದ್ಯದಲ್ಲಿ ಜೆಮಿಮಾ ಅವರು ತಮ್ಮ ಅಮೋಘ ಬ್ಯಾಟಿಂಗ್ ಮೂಲಕ ಡೆಲ್ಲಿ ತಂಡದ ಜಯಕ್ಕೆ ಕಾರಣರಾಗಿದ್ದರು. ಲಿಝೆಲ್ ಲೀ, ಶಫಾಲಿ ವರ್ಮಾ, ಲಾರಾ ವೊಲ್ವಾರ್ಟ್ ಅವರು ತಂಡದ ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕಿ ಜೆಮಿಮಾ ರಾಡ್ರಿಗಸ್ ಮತ್ತು ಆರ್‌ಸಿಬಿ ತಂಡದ ನಾಯಕಿ ಸ್ಮೃತಿ ಮಂದಾನ ಅವರು ಡಬ್ಲ್ಯುಪಿಎಲ್ ಟ್ರೋಫಿಯೊಂದಿಗೆ ಬಿಸಿಸಿಐ ಚಿತ್ರ

**ಡಬ್ಲ್ಯುಪಿಎಲ್ ಚಾಂಪಿಯನ್ ತಂಡಗಳು**

| ವರ್ಷ | ವಿಜೇತ | ರನ್ನರ್ಸ್ ಅಪ್ |
|---|---|---|
| 2023 | ಮುಂಬೈ ಇಂಡಿಯನ್ಸ್ | ಡೆಲ್ಲಿ ಕ್ಯಾಪಿಟಲ್ಸ್ |
| 2024 | ಆರ್‌ಸಿಬಿ | ಡೆಲ್ಲಿ ಕ್ಯಾಪಿಟಲ್ಸ್ |
| 2025 | ಮುಂಬೈ ಇಂಡಿಯನ್ಸ್ | ಡೆಲ್ಲಿ ಕ್ಯಾಪಿಟಲ್ಸ್ |

ಶಿನೆಲ್ ಹೆನ್ರಿ, ನಂದನಿ ಶರ್ಮಾ, ಶ್ರೀಚರಣಿ ಮತ್ತು ಮಿನು ಮಣಿ ಅವರು ಎದುರಾಳಿ ಬ್ಯಾಟರ್‌ಗಳನ್ನು ಕಟ್ಟಿಹಾಕುವಲ್ಲಿ ಸಮರ್ಥರಾಗಿದ್ದಾರೆ. ಕಳೆದ ಮೂರು ವರ್ಷಗಳಲ್ಲಿಯೂ ರನ್ನರ್ಸ್ ಅಪ್ ಆಗಿದ್ದ ತಂಡವು ಈ ಬಾರಿ ಟ್ರೋಫಿಗೆ ಮುತ್ತಿಡುವ ಛಲದಲ್ಲಿದೆ.

**ಪಂದ್ಯ ಆರಂಭ:** ರಾತ್ರಿ 7.30
**ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್, ಜಿಯೊಸ್ಟಾರ್ ಆ್ಯಪ್.

**ನಾಯಕಿಯರ ಬಲಾಬಲ (ಡಬ್ಲ್ಯುಪಿಎಲ್ ಸಾಧನೆ)**

**ಸ್ಮೃತಿ ಮಂದಾನ**
34 ಪಂದ್ಯ
936 ರನ್
132.39 ಸ್ಟ್ರೈಕ್‌ರೇಟ್
96 ಶ್ರೇಷ್ಠ

**ಜೆಮಿಮಾ ರಾಡ್ರಿಗಸ್**
26 ಪಂದ್ಯ
714 ರನ್
139.45 ಸ್ಟ್ರೈಕ್‌ರೇಟ್
69* ಶ್ರೇಷ್ಠ

## 2031ರ ಏಷ್ಯಾಕಪ್ ಫುಟ್‌ಬಾಲ್: ಆತಿಥ್ಯಕ್ಕೆ ಭಾರತ ಪೈಪೋಟಿ

ಕ್ವಾಲಾಲಂಪುರ (ಪಿಟಿಐ): ಭಾರತವು 2031ರ ಏಷ್ಯಾ ಕಪ್ ಫುಟಬಾಲ್ ಟೂರ್ನಿಯ ಆತಿಥ್ಯಕ್ಕೆ ಬಿಡ್ ಸಲ್ಲಿಸಿರುವುದನ್ನು ಏಷ್ಯನ್ ಫುಟ್‌ಬಾಲ್ ಒಕ್ಕೂಟ ಬುಧವಾರ ದೃಢಪಡಿಸಿದೆ. ಭಾರತ ಸೇರಿ ಆರು ದೇಶಗಳು ಆತಿಥ್ಯಕ್ಕೆ ಬಿಡ್ ಸಲ್ಲಿಸಿವೆ.

ಬಿಡ್ ಪ್ರಕ್ರಿಯೆಯಿಂದ ಯುನೈಟೆಡ್ ಅರಬ್ ಎಮಿರೇಟ್ಸ್ ಹಿಂದೆಸರಿದಿದೆ. ಭಾರತದ ಜೊತೆಗೆ ಆಸ್ಟ್ರೇಲಿಯಾ, ಇಂಡೊನೇಷ್ಯಾ, ಕೊರಿಯಾ, ಕುವೈತ್ ಪಟ್ಟಿಯಲ್ಲಿವೆ. ಈ ದೇಶಗಳ ಜೊತೆ ಕಿರ್ಗಿಸ್ತಾನ, ತಜಿಕಿಸ್ತಾನ ಮತ್ತು ಉಜ್ಬೇಕಿಸ್ತಾನ ಸಂಯುಕ್ತವಾಗಿ ಆತಿಥ್ಯ ವಹಿಸಲು ಬಿಡ್ ಸಲ್ಲಿಸಿವೆ.

2025ರಲ್ಲಿ ಅಖಿಲ ಭಾರತ ಫುಟ್ ಬಾಲ್ ಫೆಡರೇಷನ್, ಈ ಟೂರ್ನಿ ನಡೆಸಲು ಆಸಕ್ತಿ ಪತ್ರ ಸಲ್ಲಿಸಿತ್ತು. ಈ ಪ್ರಯತ್ನಕ್ಕೆ ಸಂಪೂರ್ಣಬೆಂಬಲ ನೀಡುವುದಾಗಿ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ತಿಳಿಸಿದ್ದರು.

ಭಾರತ ಹಿಂದೆಂದೂ ಈ ಟೂರ್ನಿಯನ್ನು ಆಯೋಜಿಸಿರಲಿಲ್ಲ. ಈ ಹಿಂದೆ 2023 ಮತ್ತು 2027 ಕೂಟಕ್ಕೆ ಬಿಡ್ ಸಲ್ಲಿಸಿದ್ದರೂ, ನಂತರ ಹಿಂದೆಸರಿದಿತ್ತು.

# ಭಾರತಕ್ಕೆ ಮೊದಲ ದಿನ ಎರಡು ಸ್ವರ್ಣ

## ಏಷ್ಯನ್ ಶೂಟಿಂಗ್: ಏರ್ ಪಿಸ್ತೂಲ್ ಚಿನ್ನ ಗೆದ್ದ ಇಶಾ • ಸಾಮ್ರಾಟ್‌ಗೆ ಕಂಚು

ನವದೆಹಲಿ (ಪಿಟಿಐ): ಅಮೋಘ ಲಯ ಪ್ರದರ್ಶಿಸಿದ ಭಾರತದ ಒಲಿಂಪಿಯನ್ ಇಶಾ ಸಿಂಗ್ ಅವರು ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 10 ಮೀ. ಏರ್ ಪಿಸ್ತೂಲ್ ವೈಯಕ್ತಿಕ ವಿಭಾಗದಲ್ಲಿ ಬುಧವಾರ ಚಿನ್ನ ಗೆದ್ದರು. ಜೊತೆಗೆ ತಂಡ ವಿಭಾಗದಲ್ಲೂ ಭಾರತ ಚಿನ್ನ ಗೆಲ್ಲಲು ನೆರವಾದರು.

ಈ ಚಾಂಪಿಯನ್‌ಷಿಪ್‌ನ ಮೊದಲ ದಿನ, ವಿಶ್ವ ಚಾಂಪಿಯನ್ ಸಾಮ್ರಾಟ್ ರಾಣಾ ಪುರುಷರ ವಿಭಾಗದಲ್ಲಿ ಕಂಚಿನ ಪದಕ ಗೆದ್ದರು. ಪುರುಷರ ಟೀಮ್ ವಿಭಾಗದಲ್ಲಿ ಭಾರತ ಬೆಳ್ಳಿ ಜಯಿಸಿತು.

21 ವರ್ಷ ವಯಸ್ಸಿನ ಇಶಾ ಹಿನ್ನಡೆಯಿಂದ ಚೇತರಿಸಿಕೊಂಡು 239.8 ಸ್ಕೋರ್‌ನೊಡನೆ ಚಿನ್ನ ಗೆದ್ದರು. ತೈವಾನ್‌ನ ಚೆಂಗ್ ಯೆನ್–ಚಿಂಗ್ (235.4) ಮತ್ತು ಯು ಐ–ವೆನ್ (217.7) ಅವರು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡರು.

19 ವರ್ಷ ವಯಸ್ಸಿನ ಸುರುಚಿ ನಾಲ್ಕನೇ ಸ್ಥಾನ ಪಡೆದರು. ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಮನು ಭಾಕರ್ ಅವರು ಎಂಟು ಸ್ಪರ್ಧಿಗಳ ಫೈನಲ್‌ನಲ್ಲಿ ಏಳನೇ ಸ್ಥಾನ ಗಳಿಸಿದರು.

ತಂಡ ವಿಭಾಗದಲ್ಲಿ ಭಾರತ 1,726 ಅಂಕ ಕಲೆಹಾಕಿ ಚಿನ್ನ ಗೆದ್ದಿತು. ಸುರುಚಿ (576), ಮನು (575) ಮತ್ತು ಇಶಾ (575) ಅವರು ಇದಕ್ಕೆ ಕಾರಣರಾದರು. ವಿಯೆಟ್ನಾಂ (1,713) ಮತ್ತು ಚೀನಾ ತೈಪಿ (1,711) ತಂಡಗಳು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಪಡೆದವು.

ಸ್ವರ್ಣ ಗೆದ್ದ ಭಾರತದ ಇಶಾ ಸಿಂಗ್ (ಮಧ್ಯ), ಬೆಳ್ಳಿ ಜಯಿಸಿದ ತೈವಾನ್‌ನ ಚೆಂಗ್ ಯೆನ್–ಚಿಂಗ್ (ಎಡ) ಮತ್ತು ಕಂಚು ಗೆದ್ದ ಯು ಐ–ವೆನ್ ಎನ್‌ಆರ್‌ಎಐ ಚಿತ್ರ

**ಸಾಮ್ರಾಟ್‌ಗೆ ಕಂಚು:** ಹೋದ ವರ್ಷ ಕೈರೊ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದು ಗಮನ ಸೆಳೆದಿದ್ದ 21 ವರ್ಷ ವಯಸ್ಸಿನ ಸಾಮ್ರಾಟ್ ರಾಣಾ ಪುರುಷರ ವಿಭಾಗದಲ್ಲಿ 220.3 ಸ್ಕೋರ್‌ನೊಡನೆ ಕಂಚಿನ ಪದಕ ಗೆದ್ದರು. ಉಜ್ಬೇಕಿಸ್ತಾನದ ವ್ಲಾಡಿಮಿರ್ ಸ್ವೆಚ್ನಿಕೋವ್ (242) ಚಿನ್ನ ಗೆದ್ದರೆ, ಕಜಾಕಸ್ತಾನದ ವೆಲೆರಿ ರಾಖಿಮ್‌ಝಾನ್ (241) ಬೆಳ್ಳಿ ಪದಕ ಕೊರಳಿಗೇರಿಸಿಕೊಂಡರು.

ಎಂಟು ಮಂದಿಯ ಫೈನಲ್‌ನಲ್ಲಿ ಸ್ಥಾನ ಪಡೆದಿದ್ದ ಭಾರತದ ಇನ್ನೊಬ್ಬ ಸ್ಪರ್ಧಿ ಶ್ರವಣ್ ಕುಮಾರ್ ನಾಲ್ಕನೇ ಸ್ಥಾನ ಪಡೆದರು.

ಭಾರತ ತಂಡವು (ಸಾಮ್ರಾಟ್, ಶ್ರವಣ್, ವರುಣ್ ತೋಮಾರ್) ತಂಡ ವಿಭಾಗದಲ್ಲಿ 1732 ಪಾಯಿಂಟ್‌ಗಳೊಡನೆ ಬೆಳ್ಳಿ ಗೆದ್ದಿತು.

ಪಿಸ್ತೂಲ್ ಮತ್ತು ರೈಫಲ್ ಸ್ಪರ್ಧೆಗಳು ನಡೆಯಲಿರುವ ಈ ಕೂಟಕ್ಕೆ ಭಾರತ 118 ಮಂದಿಯ ದೊಡ್ಡ ತಂಡವನ್ನು ಕಣಕ್ಕಿಳಿಸಿದೆ. ಕಜಾಕಸ್ತಾನ ತಂಡ (35 ಸ್ಪರ್ಧಿಗಳು) ಎರಡನೇ ದೊಡ್ಡ ತಂಡವೆನಿಸಿದೆ.

ಜೂನಿಯರ್ ವಿಭಾಗದಲ್ಲಿ ಭಾರತದ ಮರೂಫ್ ಔಲಿಯಾ ಅವರು ಪುರುಷರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದರು. ತಂಡ ವಿಭಾಗದಲ್ಲಿ ಭಾರತ ಮೊದಲ ಸ್ಥಾನ ಪಡೆಯಿತು.

ಇರಾನ್ ಈ ಕೂಟದಲ್ಲಿ ಭಾಗವಹಿಸುತ್ತಿಲ್ಲ. ಆ ದೇಶದಲ್ಲಿ ಕೆಲದಿನಗಳ ಹಿಂದೆ ಕ್ಷೋಬೆಯ ವಾತಾವರಣ ನೆಲೆಸಿದ್ದು ಇದಕ್ಕೆ ಕಾರಣವಾಗಿದೆ.

## ಏಷ್ಯಾ ಟೀಮ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್

# ಎಂಟರ ಘಟ್ಟಕ್ಕೆ ಭಾರತ ತಂಡಗಳು

ಕಿಂಗ್ಡಾವೊ (ಚೀನಾ): ಭಾರತ ಮಹಿಳೆಯರ ಹಾಗೂ ಪುರುಷರ ತಂಡಗಳು ಇಲ್ಲಿ ನಡೆಯುತ್ತಿರುವ ಏಷ್ಯಾ ಟೀಮ್ ಬ್ಯಾಡ್ಮಿಂಟನ್ ಚಾಂಪಿಯನ್ ಷಿಪ್‌ನಲ್ಲಿ ಬುಧವಾರ ಕ್ವಾರ್ಟರ್‌ಫೈನಲ್ ಪ್ರವೇಶಿಸಿದವು.

ಹಾಲಿ ಚಾಂಪಿಯನ್ ಮಹಿಳೆಯರ ತಂಡವು ಗುಂಪು ಹಂತದ ಪಂದ್ಯದಲ್ಲಿ 5–0ಯಿಂದ ಮ್ಯಾನ್ಮಾರ್ ತಂಡವನ್ನು ಸುಲಭವಾಗಿ ಮಣಿಸಿತು. ಪುರುಷರ ತಂಡವು 3–2ರಿಂದ ಸಿಂಗಪುರ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು.

ವೈ ಗುಂಪಿನಲ್ಲಿರುವ ಭಾರತ ತಂಡದ ತನ್ವಿ ಶರ್ಮಾ ಸಿಂಗಲ್ಸ್‌ನಲ್ಲಿ 21–13, 21–16ರಿಂದ ಮ್ಯಾನ್ಮಾರ್‌ನ ಥೆಟ್ ತಾರ್ ತೂಝರ್ ವಿರುದ್ಧ ಗೆದ್ದರು. ಇನ್ನೊಂದು ಪಂದ್ಯದಲ್ಲಿ ರಕ್ಷಿತಾ ರಾಮರಾಜ್ ಅವರು 21–12, 21–6ರಿಂದ ಏಂಟ್ ಚಿಟ್ ಫೂ ಅವರನ್ನು ಮಣಿಸಿ, ಮುನ್ನಡೆಯನ್ನು 2–0ಗೆ ಹಿಗ್ಗಿಸಿದರು. ಸಿಂಗಲ್ಸ್‌ನ ಮೂರನೇ ಪಂದ್ಯದಲ್ಲಿ ಮಾಳವಿಕಾ ಬನ್ಸೋಡ್ ಅವರು 21–19, 21–12ರಿಂದ ಲಿನ್ ಟೆಟ್ ಅವರನ್ನು ಹಿಮ್ಮೆಟ್ಟಿಸಿದರು.

ಭಾರತ ತಂಡವು ಡಬಲ್ಸ್‌ನಲ್ಲಿಯೂ ಪಾರಮ್ಯ ಮುಂದುವರಿಸಿತು. ಪ್ರಿಯಾ ಕಾನ್‌ಜೆಂಗ್‌ಬಾಮ್ ಹಾಗೂ ಶ್ರುತಿ ಮಿಶ್ರಾ ಅವರು 21–15, 21–16ರಿಂದ ಸು ಲಾಟ್– ಥೆಟ್ ತಾರ್ ಜೋಡಿಯನ್ನು ಸೋಲಿಸಿದರು. ಇನ್ನೊಂದು ಪಂದ್ಯದಲ್ಲಿ ಟ್ರೀಸಾ ಜೋಳಿ– ಗಾಯತ್ರಿ ಗೋಪಿಚಂದ್ ಜೋಡಿ 21–8, 21–6ರಿಂದ ಲಿನ್ ಟೆಟ್ ಹಾಗೂ ಚಿಟ್ ಫೂ ಅವರ ವಿರುದ್ಧ ನಿರಾಯಾಸವಾಗಿ ಗೆಲುವು ಸಾಧಿಸಿತು.

ಭಾರತದ ಆಯುಷ್ ಶೆಟ್ಟಿ ಎಎಫ್‌ಪಿ ಸಂಗ್ರಹ ಚಿತ್ರ

ಭಾರತ ಮಹಿಳಾ ತಂಡವು ಅನುಭವಿ ಪಿ.ವಿ. ಸಿಂಧು ಅವರ ಅನುಪಸ್ಥಿತಿಯಲ್ಲಿ ಕಣಕ್ಕಿಳಿದಿದ್ದು, ಗುರುವಾರ ನಡೆಯಲಿರುವ ಗುಂಪು ಹಂತದ ಎರಡನೇ ಪಂದ್ಯದಲ್ಲಿ ಹಾಲಿ ರನ್ನರ್‌ಅಪ್ ಥಾಯ್ಲೆಂಡ್ ಎದುರು ಸೆಣಸಲಿದೆ.

**ಪುರುಷರ ತಂಡಕ್ಕೆ ರೋಚಕ ಜಯ:** ಅನುಭವಿ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್ ಅವರು ಸಿಂಗಪುರ ವಿರುದ್ಧದ ಗುಂಪು ಹಂತದ ಮೊದಲ ಪಂದ್ಯದಲ್ಲಿ 16–21, 21–19, 16–21ರಿಂದ ಕೀನ್ ಯೂ ವಿರುದ್ಧ ಪರಾಭವಗೊಂಡರು. ವಿಶ್ವದ ಮಾಜಿ ಅಗ್ರಮಾನ್ಯ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿಯು 21–10, 21–8ರಿಂದ ನೇರ ಆಟಗಳಲ್ಲಿ ಕೀಟ್ ವೆಸ್ಲೆ ಕೊ ಹಾಗೂ ಜುನ್ಸೂಕ್ ಕುಬೊ ಅವರನ್ನು ಮಣಿಸಿದರು.

ಸಿಂಗಲ್ಸ್‌ನ ಎರಡನೇ ಪಂದ್ಯದಲ್ಲಿ ಕನ್ನಡಿಗ ಆಯುಷ್ ಶೆಟ್ಟಿ 21–17, 21–15ರಿಂದ ಜಿಯಾ ಹೆಂಗ್ ಜೇಸನ್ ತೇ ಎದುರು ಗೆದ್ದು, ಭಾರತಕ್ಕೆ 2–1 ಮುನ್ನಡೆ ತಂದುಕೊಟ್ಟರು. ಡಬಲ್ಸ್‌ನ ಎರಡನೇ ಪಂದ್ಯದಲ್ಲಿ ಪೃಥ್ವಿ ಕೃಷ್ಣಮೂರ್ತಿ ರಾಯ್– ಸಾಯಿ ಪ್ರತೀಕ್ ಜೋಡಿ 21–8, 21–23, 20–22ರಲ್ಲಿ ಜೋ ಜೀ ಹಾಗೂ ಡೊನವಾನ್ ವಿಲ್ಲರ್ಡ್ ವೀ ಎದುರು ಮಣಿದರು.

ನಿರ್ಣಾಯಕವಾಗಿದ್ದ ಸಿಂಗಲ್ಸ್‌ನ ಮೂರನೇ ಪಂದ್ಯದಲ್ಲಿ ಕಿದಂಬಿ ಶ್ರೀಕಾಂತ್ 21–15, 21–16ರಿಂದ ಜಿಯಾ ವೀ ಜೋಯಲ್ ಕೊ ಅವರನ್ನು ಸೋಲಿಸಿದರು. ಸಿ ಗುಂಪಿನಲ್ಲಿರುವ ಭಾರತ ಪುರುಷರ ತಂಡವು ಗುರುವಾರ ಜಪಾನ್ ತಂಡವನ್ನು ಎದುರಿಸಲಿದೆ.

# ಆಯ್ಕೆ ಪ್ರಕ್ರಿಯೆ: ಸುಧಾರಣೆಗೆ ಮುಂದಾದ ಐಒಸಿ

ಕ್ರಿಸ್ಟಿ ಕೊವೆಂಟ್ರಿ

ಮಿಲಾನ್ (ಎಎಫ್‌ಪಿ): ಪಾರದರ್ಶಕತೆಯ ಮರುಸ್ಥಾಪನೆ ಮತ್ತು ಸ್ಪಷ್ಟವಾದ ವೇಳಾಪಟ್ಟಿ ರೂಪಿಸುವ ಮೂಲಕ ಭವಿಷ್ಯದಲ್ಲಿ ಒಲಿಂಪಿಕ್ ಕ್ರೀಡೆಗಳ ಆತಿಥ್ಯ ವಹಿಸುವ ಪ್ರಕ್ರಿಯೆಯಲ್ಲಿ ಸುಧಾರಣೆಗಳನ್ನು ತರಲು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಪರಿಶೀಲಿಸುತ್ತಿದೆ.

2036ರ ಒಲಿಂಪಿಕ್ಸ್ ಆತಿಥ್ಯಕ್ಕೆ ಪೈಪೋಟಿ ತೀವ್ರವಾಗಿರುವ ವೇಳೆಯೇ ಇಂಥ ಕ್ರಮಕ್ಕೆ ಮುಂದಾಗಿದೆ. ಈ ಒಲಿಂಪಿಕ್ ಕ್ರೀಡೆಗಳ ಆತಿಥ್ಯಕ್ಕೆ ಪೈಪೋಟಿ ಜೋರಾಗಿದ್ದು, ಭಾರತ ಮತ್ತು ಕತಾರ್ ದೇಶಗಳ ಜೊತೆ ಸೌದಿ ಅರೇಬಿಯಾ, ದಕ್ಷಿಣ ಕೊರಿಯಾ, ದಕ್ಷಿಣ ಆಫ್ರಿಕಾ, ಟರ್ಕಿ ಮತ್ತು ಚಿಲಿ ಕೂಡ ಆಸಕ್ತಿ ತಳೆದಿವೆ.

2019ಕ್ಕಿಂತ ಪೂರ್ವದ ದುಬಾರಿ ಪ್ರಕ್ರಿಯೆಗೆ ಮರಳುವ ಇರಾದೆಯಿಲ್ಲ. ಆದರೆ ಈಗಿನ ಆಯ್ಕೆ ಪ್ರಕ್ರಿಯೆಯಲ್ಲಂತೂ ಸುಧಾರಣೆಗಳ ಅಗತ್ಯವಿದೆ ಎಂದು ಕ್ರೊವೇಷ್ಯಾದ ಮಾಜಿ ಅಧ್ಯಕ್ಷೆ ಹಾಗೂ ಪ್ರಸ್ತುತ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಸದಸ್ಯೆ ಕೊಲಿಂದಾ ಗ್ರಬರ್–ಕಿಟರೋವಿಕ್ ಅವರು ತಿಳಿಸಿದ್ದಾರೆ.

ಮಿಲಾನ್‌ನಲ್ಲಿ 2026ರ ಚಳಿಗಾಲದ ಒಲಿಂಪಿಕ್ಸ್‌ಗೆ ಮುನ್ನ ಬುಧವಾರ ನಡೆದ ಐಒಸಿ ಅಧಿವೇಶನದಲ್ಲಿ ಅವರು ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು.

ಐಒಸಿ ಅಧ್ಯಕ್ಷೆ ಕ್ರಿಸ್ಟಿ ಕೊವೆಂಟ್ರಿ ಅವರು ಒಲಿಂಪಿಕ್ ಕ್ರೀಡೆಗಳ ಆತಿಥ್ಯಕ್ಕೆ ಸಂಬಂಧಿಸಿ ರಚಿಸಿರುವ ಕಾರ್ಯತಂಡಕ್ಕೆ (ವರ್ಕಿಂಗ್ ಗ್ರೂಪ್) ಗ್ರಬರ್ ಕಿಟರೋವಿಕ್ ಮುಖ್ಯಸ್ಥೆಯಾಗಿದ್ದಾರೆ.

2019ರ ನಂತರ ಥಾಮಸ್ ಬಾಕ್ (ಕೊವೆಂಟ್ರಿ ಅವರಿಗಿಂತ ಮೊದಲು ಐಒಸಿ ಅಧ್ಯಕ್ಷರಾಗಿದ್ದವರು) ಅವರು ಕ್ರೀಡೆಗಳ ಆಯೋಜನೆ ವಹಿಸುವ ದೇಶವನ್ನು ಪ್ರಕಟಿಸುವ ಪ್ರಕ್ರಿಯೆಯಲ್ಲಿ ಮಹತ್ವದ ಬದಲಾವಣೆಗಳನ್ನು ತಂದಿದ್ದರು. ಆತಿಥ್ಯಕ್ಕೆ ಬಿಡ್‌ದಾರರ ಸಂಖ್ಯೆ ಹೆಚ್ಚಿಸಲು, ವೆಚ್ಚಗಳನ್ನು ಕಡಿಮೆ ಮಾಡಲು ಮತ್ತು ಆತಿಥ್ಯದ ರೇಸ್‌ನಲ್ಲಿ ವಿಫಲವಾದ ದೇಶಗಳಿಗೆ ಸಾರ್ವಜನಿಕವಾಗಿ ಮುಖಭಂಗವಾಗುವುದನ್ನು ತಪ್ಪಿಸುವ ಉದ್ದೇಶ ಇದರ ಹಿಂದೆಯಿತ್ತು.

'ಆತಿಥ್ಯಕ್ಕೆ ನಿಯೋಜಿತವಾದ ದೇಶ ಘೋಷಣೆಯಾಗುವವರೆಗೆ ನಡೆಯುವ ಮಾತುಕತೆಗಳನ್ನು ಇನ್ನು ಮುಂದೆ ಗೋಪ್ಯವಾಗಿಡಲಾಗುತ್ತದೆ. ಆತಿಥ್ಯಕ್ಕೆ ಆಯ್ಕೆಯ ಸಭೆಯನ್ನೂ ಐಒಸಿ ಕಾರ್ಯಕಾರಿ ಮಂಡಳಿ ನಡೆಸಲಿದ್ದು, ಈ ಪ್ರಕ್ರಿಯೆಯೂ ಗೋಪ್ಯವಾಗಿರಲಿದೆ. ಈ ಪ್ರಕ್ರಿಯೆಯ ಬಳಿಕ ಐಒಸಿಯ ನೂರು ಸದಸ್ಯರು ಇದಕ್ಕೆ ಅಂಗೀಕಾರ ನೀಡಲಿದ್ದಾರೆ.

ಮೊದಲೇ ಪ್ರಕಟಿಸಲಾಗುವ ಪಾರದರ್ಶಕತೆಯ ಮಾನದಂಡದ ಆಧಾರದಲ್ಲಿ ಮೌಲ್ಯಮಾಪನ ನಡೆಯಲಿದೆ ಎಂದು ಗ್ರಬರ್–ಕಿಟರೋವಿಕ್ ಹೇಳಿದ್ದಾರೆ.

## ವೇಟ್‌ಲಿಫ್ಟಿಂಗ್: ಮೀರಾಬಾಯಿ ದಾಖಲೆ ಚಿನ್ನ

ಮೋದಿನಗರ (ಉತ್ತರ ಪ್ರದೇಶ) (ಪಿಟಿಐ): ಒಲಿಂಪಿಯನ್ ಮೀರಾಬಾಯಿ ಚಾನು ಅವರು ರಾಷ್ಟ್ರೀಯ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸಾಮರ್ಥ್ಯ ಮೆರೆದರು.

ಬುಧವಾರ ಇಲ್ಲಿ ನಡೆದ ಸ್ಪರ್ಧೆಯಲ್ಲಿ ಅವರು ಮಹಿಳೆಯರ 48 ಕೆ.ಜಿ ವಿಭಾಗದಲ್ಲಿ ಒಟ್ಟು 205 ಕೆ.ಜಿ ಭಾರ ಎತ್ತಿ ಪ್ರಶಸ್ತಿ ಜಯಿಸಿದರು. ಅವರು ಸ್ನ್ಯಾಚ್‌ನಲ್ಲಿ 89 ಕೆ.ಜಿ ಹಾಗೂ ಕ್ಲೀನ್–ಜರ್ಕ್‌ನಲ್ಲಿ 116 ಕೆ.ಜಿ ತೂಕ ಎತ್ತಿದರು. ಹೊಸ ರಾಷ್ಟ್ರೀಯ ದಾಖಲೆ ಕೂಡ ಬರೆದರು.

'ಮುಂದಿನ ಸ್ಪರ್ಧೆಯ ಹೊತ್ತಿಗೆ ಸಾಮರ್ಥ್ಯವನ್ನು ಮತ್ತಷ್ಟು ಉತ್ತಮಗೊಳಿಸಿಕೊಳ್ಳುವೆ. 90 ಕೆ.ಜಿ.ಗಿಂತ ಹೆಚ್ಚಿನ ಭಾರವನ್ನು ಎತ್ತುವೆ. ಇವತ್ತು (ಬುಧವಾರ) ನಾನು ಬಹಳಷ್ಟು ಪ್ರಯತ್ನಪಟ್ಟೆ. ಆದರೆ ಪೂರ್ವಸಿದ್ಧತೆ ಬಹಳಷ್ಟಿರಲಿಲ್ಲ. ಆದ್ದರಿಂದ 90 ಕೆ.ಜಿ. ಗಡಿ ದಾಟಲು ಸಾಧ್ಯವಾಗಲಿಲ್ಲ' ಎಂದು ಚಾನು ಹೇಳಿದರು.

31 ವರ್ಷದ ಚಾನು ಸ್ನ್ಯಾಚ್ ಸ್ಪರ್ಧೆಯಲ್ಲಿ ಸಲೀಸಾಗಿ ಒತ್ತಡ ನಿಭಾಯಿಸಿದರು. ಈ ಹಿಂದಿನ ವೈಯಕ್ತಿಕ ಶ್ರೇಷ್ಠ ದಾಖಲೆ (88 ಕೆಜಿ) ಯನ್ನು ಇಲ್ಲಿ ಉತ್ತಮಪಡಿಸಿಕೊಂಡರು.

## ನಿವೃತ್ತಿ ಪಡೆಯುವ ನಿರ್ಧಾರವನ್ನು ಆಟಗಾರರಿಗೇ ಬಿಟ್ಟುಬಿಡಲು ದಿಗ್ಗಜ ವಿಕೆಟ್‌ಕೀಪರ್ ಸಲಹೆ

# ರೋಹಿತ್, ವಿರಾಟ್ ಬೆನ್ನಿಗೆ ನಿಂತ ಧೋನಿ

ನವದೆಹಲಿ (ಪಿಟಿಐ): ಭಾರತ ತಂಡದ ಹಿರಿಯ ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರನ್ನು ಬೆಂಬಲಿಸಿರುವ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಅವರು 'ಮುಂದುವರಿಯಬೇಕೇ ಬೇಡವೇ ಎಂದು ಈ ಆಟಗಾರರಿಗೆ ಯಾರೂ ಹೇಳಬಾರದು' ಎಂದಿದ್ದಾರೆ.

ಇದೇ 7 ರಂದು ತವರಿನಲ್ಲಿ ಆರಂಭವಾಗುವ ಟಿ20 ವಿಶ್ವಕಪ್‌ನಲ್ಲಿ ಪ್ರಶಸ್ತಿ ಉಳಿಸಿಕೊಳ್ಳುವ ಯತ್ನದಲ್ಲಿರುವ ಭಾರತ 'ಅತಿ ಪ್ರಬಲ ತಂಡ' ಎಂದೂ ದಿಗ್ಗಜ ವಿಕೆಟ್ ಕೀಪರ್– ಬ್ಯಾಟರ್ ಹೇಳಿದ್ದಾರೆ.

ಟೈಲ್ಸ್ ಉದ್ಯಮವಾದ ಎಂವೈಕೆ ಲ್ಯಾಟಿಕ್ರೀಟ್‌ಗೆ ಪ್ರಚಾರ ರಾಯಭಾರಿಯಾಗಿರುವ ಅವರು ಕ್ರೀಡಾ ಬ್ರಾಡ್‌ಕಾಸ್ಟರ್ ಜತಿನ್ ಸಪ್ರು ಜೊತೆ ಬುಧವಾರ ಸಂದರ್ಶನದಲ್ಲಿ ಮಾತನಾಡಿದರು.

ಮಹೇಂದ್ರ ಸಿಂಗ್ ಧೋನಿ

ದಿಗ್ಗಜರಾದ ರೋಹಿತ್ ಮತ್ತು ಕೊಹ್ಲಿ ಅವರು 2027ರ ಏಕದಿನ ವಿಶ್ವಕಪ್ ಆಡುವ ಬಗ್ಗೆ ಕೇಳಿದ ಪ್ರಶ್ನೆಗೆ 'ಅವರು ಯಾಕೆ ವಿಶ್ವಕಪ್ ಆಡಬಾರದು' ಎಂದು ಮರುಪ್ರಶ್ನೆ ಹಾಕಿದರು. 'ನನ್ನ ಪ್ರಕಾರ ವಯಸ್ಸು ಮಾನದಂಡವಾಗಬಾರದು. ಅವರ ಆಟದ ಮಟ್ಟ, ಫಿಟ್ನೆಸ್ ಅಳತೆ ಗೋಲಾಗಬೇಕು' ಎಂದರು.

### 'ಭಾರತ ಅತಿ ಪ್ರಬಲ ತಂಡ'

ಚರ್ಚೆಯು ನಂತರ ಟಿ20 ವಿಶ್ವಕಪ್‌ನತ್ತ ಹೊರಳಿತು. 'ಭಾರತ ತಂಡ ಅತಿಪ್ರಬಲವಾಗಿದೆ. ಆದರೆ ವರ್ಷದ ಈ ಸಮಯದಲ್ಲಿ ಬೀಳುವ ಇಬ್ಬನಿಯ ಬಗ್ಗೆಯೂ ಗಮನಹೊಂದಿರಬೇಕು' ಎಂದು ಧೋನಿ ಸಲಹೆ ನೀಡಿದರು. ಭಾರತ 2007ರಲ್ಲಿ ಚೊಚ್ಚಲ ಟಿ20 ವಿಶ್ವಕಪ್ ಗೆದ್ದಾಗ ಧೋನಿ ನಾಯಕರಾಗಿದ್ದರು. 'ಇದು ಟೂರ್ನಿಯ ಪ್ರಬಲ ತಂಡಗಳಲ್ಲಿ ಒಂದು. ಉತ್ತಮ ತಂಡವೆನಿಸಲು ಏನು ಬೇಕೊ ಅವನ್ನೆಲ್ಲಾ ಈ ತಂಡ ಹೊಂದಿದೆ. ವಿಶೇಷವಾಗಿ ಈ ಮಾದರಿಯಲ್ಲಿ ಸಾಕಷ್ಟು ಅನುಭವ ಹೊಂದಿದೆ' ಎಂದರು.

'ನಾನು 24ನೇ ವಯಸ್ಸಿಗೆ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದಾಗ, ನನಗೆ ಯಾರೂ ಏನನ್ನೂ ಹೇಳಲಿಲ್ಲ. ಆದರೆ ದೇಶಕ್ಕೆ 10, 20 ವರ್ಷಗಳ ಕಾಲ ಆಡಿದ ನಂತರ ಯಾರೂ ಬಂದು ನನ್ನ ವಯಸ್ಸಿನ ಬಗ್ಗೆ ಹೇಳುವ ಅಗತ್ಯವಿರುವುದಿಲ್ಲ' ಎಂದು ಅವರು ಹೇಳಿದರು. 44 ವರ್ಷ ವಯಸ್ಸಿನ ಧೋನಿ ಈಗಲೂ ಐಪಿಎಲ್‌ನಲ್ಲಿ ಆಡುತ್ತಿದ್ದಾರೆ.

'ರೋಹಿತ್ ಆಗಲಿ, ವಿರಾಟ್ ಆಗಲಿ, ಅಥವಾ ಮುಂದಿನ ಐದು ವರ್ಷಗಳಲ್ಲಿ ವಿಶ್ವಕಪ್ ಆಡುವ ಇನ್ನಾರೂ ಹಿರಿಯ ಆಟಗಾರನಾಗಲಿ ಮುಂದಿನ ವಿಶ್ವಕಪ್‌ನಲ್ಲಿ ಆಡಬೇಕೇ ಬೇಡವೇ ಎಂಬುದನ್ನು ನಿರ್ಧರಿಸಬೇಕಾಗಿರುವುದು ನಾವಲ್ಲ. ಅವರೇ ನಿರ್ಧರಿಸಬೇಕು. ಚೆನ್ನಾಗಿ ಆಡುತ್ತಿದ್ದರೆ, ದೇಶಕ್ಕೆ ಇನ್ನೂ ಆಡಬೇಕೆಂಬ ತುಡಿತವಿದ್ದರೆ ಯಾಕೆ ಆಡಬಾರದು' ಎಂದು ಧೋನಿ ಪ್ರಶ್ನಿಸಿದರು.

'ಅನುಭವಿ ಆಟಗಾರರನ್ನು ಪಡೆಯಲು ಸಾಧ್ಯವಿಲ್ಲ. 20 ವರ್ಷದ ಅನುಭವಿ ಆಟಗಾರ ಸಿಗಲು ಸಾಧ್ಯವಿಲ್ಲ– ತೆಂಡೂಲ್ಕರ್ ಅಂಥವರನ್ನು ಹೊರತುಪಡಿಸಿ! 16–17ನೇ ವಯಸ್ಸಿನಲ್ಲಿ ಆಡತೊಡಗಿದರಷ್ಟೇ ವಯಸ್ಸಿನ ಜೊತೆಗೆ ಅನುಭವ ಪಡೆಯಲು ಸಾಧ್ಯ' ಎಂದರು.

'ದೀರ್ಘ ಕಾಲ ಆಡುವುದರ ಜೊತೆಗೆ ಒತ್ತಡ ನಿಭಾಯಿಸುವ ಛಾತಿ ಹೊಂದಿದಲ್ಲಿ ಮಾತ್ರ ಅಂಥ ಆಟಗಾರನ್ನು ಅನುಭವಿ ಎಂದು ಪರಿಗಣಿಸಬಹುದು' ಎಂದರು.

ರೋಹಿತ್ ಮತ್ತು ವಿರಾಟ್ ಅವರು 2027ರ ವಿಶ್ವಕಪ್‌ನಲ್ಲಿ ಆಡುತ್ತಾರೆಯೇ ಎಂಬ ಬಗ್ಗೆ ಭಾರತ ತಂಡದ ಹೆಡ್ ಕೋಚ್ ಗೌತಮ್ ಗಂಭೀರ್ ಖಚಿತಪಡಿಸಿಲ್ಲ. ಇವರಿಬ್ಬರು ಈಗ ಏಕದಿನ ಮಾದರಿಗೆ ಮಾತ್ರ ಸೀಮಿತಗೊಂಡಿದ್ದಾರೆ.

## ಸಂಕ್ಷಿಪ್ತ ಸುದ್ದಿ

### ಮುಂಬೈ ತಂಡಕ್ಕೆ ಸಚಿನ್ ಸಲಹೆ

ಮುಂಬೈ (ಪಿಟಿಐ): ರಣಜಿ ಟ್ರೋಫಿ ಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟಕ ತಂಡದ ಎದುರು ಆಡಲಿರುವ ಮುಂಬೈ ಕ್ರಿಕೆಟ್ ತಂಡದೊಂದಿಗೆ 'ಬ್ಯಾಟಿಂಗ್ ಚಾಂಪಿಯನ್' ಸಚಿನ್ ತೆಂಡೂಲ್ಕರ್ ಸಂವಾದ ನಡೆಸಿದರು. ಪಂದ್ಯದಲ್ಲಿ ಎದುರಾಗುವ ಒತ್ತಡವನ್ನು ನಿಭಾಯಿಸುವ ಬಗ್ಗೆ ಸಲಹೆ ನೀಡಿದರು.

ಇದೇ 6 ರಿಂದ 10ರವರೆಗೆ ಪಂದ್ಯ ನಡೆಯಲಿರುವ ಬಿಕೆಸಿ ಕ್ರೀಡಾಂಗಣದಲ್ಲಿ ಬುಧವಾರ ಮುಂಬೈ ಆಟಗಾರರೊಂದಿಗೆ ಸಚಿನ್ ಮಾತನಾಡಿದರು. ಆಟಗಾರರು ಮತ್ತು ನೆರವು ಸಿಬ್ಬಂದಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು.

'ಇವತ್ತು ನಮ್ಮ ಡ್ರೆಸಿಂಗ್ ಕೋಣೆಗೆ ಸಚಿನ್ ತೆಂಡೂಲ್ಕರ್ ಬಂದಿದ್ದರು. ಅವರೊಂದಿಗೆ ಸಂವಾದ ನಡೆಸುವ ಭಾಗ್ಯ ನಮಗೆ ಒಲಿದಿದ್ದು ಸಂತಸ ತಂದಿದೆ. ಅದು ಚುಟುಕು ಮಾತುಕತೆಗಿಂತ ಪ್ರಶ್ನೋತ್ತರ ರೂಪದಲ್ಲಿತ್ತು. ಆಟಗಾರರು ಮತ್ತು ಕೋಚ್‌ಗಳು ತರಹೇವಾರಿ ಪ್ರಶ್ನೆಗಳನ್ನು ಕೇಳಿದರು. ಸಿದ್ಧತೆ, ಗೆಲ್ಲುವ ಛಲದ ಮನೋಭಾವ, ಒತ್ತಡ ನಿರ್ವಹಣೆ ಮತ್ತು ದೃಷ್ಟಿಕೋನದ ಕುರಿತ ಪ್ರಶ್ನೆಗಳನ್ನು ಕೇಳಿದರು' ಎಂದು ಮುಂಬೈ ತಂಡದ ನಾಯಕ ಶಾರ್ದೂಲ್ ಠಾಕೂರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸಚಿನ್ ಸರ್ ಸಲಹೆಗಳು ಈ ಹಿಂದೆಯೂ ಮುಂಬೈ ತಂಡಕ್ಕೆ ಉತ್ತಮ ಫಲಿತಾಂಶ ತಂದುಕೊಟ್ಟಿವೆ. ಅವರೊಂದಿಗಿನ ಮಾತುಕತೆಯಿಂದ ಆಟಗಾರರ ವಿಶ್ವಾಸವೂ ಹೆಚ್ಚಿದೆ' ಎಂದು ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಹೇಳಿದರು.

### ಭಾರತಕ್ಕೆ ಮಣಿದ ದಕ್ಷಿಣ ಆಫ್ರಿಕಾ

ನವಿ ಮುಂಬೈ (ಪಿಟಿಐ): ಅಮೋಘ ಲಯದಲ್ಲಿರುವ ಇಶಾನ್ ಕಿಶನ್ ಅವರ ಅರ್ಧಶತಕದ ಬಲದಿಂದ ಭಾರತ ತಂಡವು ಐಸಿಸಿ ಟಿ20 ವಿಶ್ವಕಪ್ ಟೂರ್ನಿಯ ಅಭ್ಯಾಸ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು 30 ರನ್‌ಗಳಿಂದ ಮಣಿಸಿತು.

ಡಿ.ವೈ.ಪಾಟೀಲ ಕ್ರೀಡಾಂಗಣಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಬ್ಯಾಟಿಂಗ್ ಆಯ್ದುಕೊಂಡರು. ಆರಂಭಿಕ ಆಟಗಾರರಾದ ಇಶಾನ್ (53; 20ಎ, 4x2, 6x7) ಹಾಗೂ ಅಭಿಷೇಕ್ ಶರ್ಮಾ (24; 18ಎ, 4x3, 6x1) ಅವರು 5.4 ಓವರ್‌ಗಳಲ್ಲಿ 80 ರನ್ ಬಾರಿಸಿದರು.

ತಿಲಕ್ ವರ್ಮಾ 19 ಎಸೆತಗಳಲ್ಲಿ ತಲಾ 3 ಬೌಂಡರಿ ಹಾಗೂ ಸಿಕ್ಸರ್‌ಗಳಿದ್ದ 45 ರನ್ ಸಿಡಿಸಿದರು. ಕೊನೆಯಲ್ಲಿ ಹಾರ್ದಿಕ್ ಪಾಂಡ್ಯ ಕೇವಲ 10 ಎಸೆತಗಳಲ್ಲಿ 30 ರನ್ ಬಾರಿಸಿದರು. ಅವರ ಬ್ಯಾಟ್‌ನಿಂದ 2 ಬೌಂಡರಿ ಹಾಗೂ 3 ಸಿಕ್ಸರ್‌ಗಳು ಬಂದವು. ಭಾರತ ತಂಡ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 240 ರನ್ ಗಳಿಸಿತು.

ಕಠಿಣ ಗುರಿ ಬೆನ್ನಟ್ಟಿದ ಏಡನ್ ಮರ್ಕರಂ ಪಡೆಯು 7 ವಿಕೆಟ್‌ಗೆ 210 ರನ್ ಗಳಿಸಿ ಓವರ್ ಪೂರೈಸಿತು. ರೈಯಾನ್ ರಿಕಲ್ಟನ್ (44; 21ಎ, 4x4, 6x3) ಹಾಗೂ ಟ್ರಿಸ್ಟನ್ ಸ್ಟಬ್ಸ್ (ಔಟಾಗದೇ 45; 21ಎ, 4x1, 6x4) ಹೋರಾಟ ತೋರಿದರು.

**ಸಂಕ್ಷಿಪ್ತ ಸ್ಕೋರು:** ಭಾರತ: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 240 (ಇಶಾನ್ ಕಿಶನ್ 53, ತಿಲಕ್ ವರ್ಮಾ 45; ಮಾರ್ಕೊ ಯಾನ್ಸೆನ್ 18ಕ್ಕೆ1). ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 210 (ರೈಯಾನ್ ರಿಕಲ್ಟನ್ 44, ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 45; ಅಭಿಷೇಕ್ ಶರ್ಮಾ 32ಕ್ಕೆ2).